ಶುಕ್ರವಾರ, ಫೆಬ್ರುವರಿ 17, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 48 | ಪುಟ 20
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಯುಗಾದಿಗೂ ಮುನ್ನವೇ ಚಂದನವನದ ತೆರೆಗಳಲ್ಲಿ ಸಿನಿಹಬ್ಬ ಆರಂಭವಾಗಿದೆ



ಸಂಖ್ಯೆ-ಸುದ್ದಿ
ದಾರಿ ಸಾಗದು, ಮುಂದೆ ಹೋಗದು

ಲಂಚ: ಇಬ್ಬರು ಯೋಜನಾಭಿವೃದ್ಧಿ ಅಧಿಕಾರಿಗಳು ಲೋಕಾಯುಕ್ತ ಬಲೆಗೆ 5

ಕಾಗೇರಿ– ಖಂಡ್ರೆ ಮಧ್ಯೆ ವಾಕ್ಸಮರ 14

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
61,319 ▲	18,035 ▲	₹58,210 (ಬೆಂಗಳೂರು) ▼	₹67,700 (ಬೆಂಗಳೂರು) ▼	82.68 ▲

ಸಿದ್ದರಾಮಯ್ಯ ಅವರನ್ನು ಹೊಡೆದುಹಾಕಬೇಕು ಎಂಬ ಹೇಳಿಕೆಗೆ ಆಕ್ರೋಶ

ಅಶ್ವತ್ಥ್ ಹೇಳಿಕೆ: ಕೋಲಾಹಲ

'ಟಿಪ್ಪುವಿನಂತೆ ಸಿದ್ದರಾಮಯ್ಯ ಅವರನ್ನೂ ಹೊಡೆದುಹಾಕಬೇಕು' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ನೀಡಿರುವ ಹೇಳಿಕೆ ರಾಜ್ಯ ರಾಜಕೀಯದಲ್ಲಿ ಕೋಲಾಹಲ ಎಬ್ಬಿಸಿದೆ. ಸಚಿವರ ಹೇಳಿಕೆ ವಿರುದ್ಧ ಕಾಂಗ್ರೆಸ್ ನಾಯಕರು ಸಾಮೂಹಿಕ ವಾಗ್ದಾಳಿಗೆ ಇಳಿದಿದ್ದು, ವಿಧಾನಸಭೆಯಲ್ಲೂ ಗುರುವಾರ ಈ ವಿಷಯ ಪ್ರತಿಧ್ವನಿಸಿತು

ಮೋದಿ, ಶಾ ಉತ್ತರ ಹೇಳಲಿ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಸಿದ್ದರಾಮಯ್ಯ ಅವರನ್ನು ಮುಗಿಸಿ ಎಂದರೆ ಏನರ್ಥ? ಜನರನ್ನು ರಕ್ಷಿಸಬೇಕಾದ ಸಚಿವರೇ (ಅಶ್ವತ್ಥನಾರಾಯಣ) ಹೀಗೆ ಹೇಳಿದ್ದು ಸರೀನಾ? ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಉತ್ತರಿಸಲಿ' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಒತ್ತಾಯಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಬಿಜೆಪಿಯದ್ದು ಹೊಡಿ, ಬಡಿ, ಕಡಿ ಸಂಸ್ಕೃತಿ. ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರನ್ನು ಕೊಂದವರು ಇವರು. ಆರ್‌ಎಸ್‌ಎಸ್‌ನವರು ಈ ರೀತಿ ಹೇಳಿಕೆ ಕೊಡಿಸಿದ್ದಾರೆ' ಎಂದು ದೂರಿದರು.

5ನೇ ಪುಟ ನೋಡಿ

ವಿಷಾದ ವ್ಯಕ್ತಪಡಿಸಿದ ಸಚಿವ

ಬೆಂಗಳೂರು: 'ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಸೋಲಿಸಿ ಎಂಬ ಅರ್ಥದಲ್ಲಿ ನಾನು ಹೇಳಿದ್ದೇನೆ. ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಬಗ್ಗೆ ಗೌರವವಿದೆ. ಯಾವುದೇ ಅರ್ಥದಲ್ಲೂ ಅವರನ್ನು ಟೀಕಿಸಿಲ್ಲ. ನನ್ನ ಮಾತುಗಳಿಂದ ಅವರ ಮನಸ್ಸಿಗೆ ನೋವಾಗಿದ್ದರೆ ವಿಷಾದಿಸುತ್ತೇನೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಹೇಳಿದರು.

ವಿಧಾನಸಭೆಯಲ್ಲಿ ಯು.ಟಿ.ಖಾದರ್ ಅವರು ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿ ಮಾತನಾಡಿ, 'ರಾಜ್ಯದಲ್ಲಿ ಎಲ್ಲ ಕಡೆಗಳಲ್ಲೂ ದ್ವೇಷದ ಮಾತುಗಳು ಕೇಳಿ ಬರುತ್ತಿವೆ. ಸಚಿವ ಅಶ್ವತ್ಥನಾರಾಯಣ ಅವರೂ ಸಿದ್ದರಾಮಯ್ಯ ಅವರನ್ನು ಹೊಡೆದು ಹಾಕುವುದಾಗಿ ಹೇಳಿದ್ದಾರೆ. ಇದು ಅಕ್ಷಮ್ಯ' ಎಂದರು.

5ನೇ ಪುಟ ನೋಡಿ

'ಬೊಮ್ಮಾಯಿ, ಬಿಎಸ್‌ವೈ ಸ್ಪಷ್ಟನೆ ನೀಡಲಿ'

ಮೈಸೂರು: 'ಟಿಪ್ಪುವನ್ನು ಮೇಲಕ್ಕೆ ಕಳುಹಿಸಿದಂತೆ ಸಿದ್ದರಾಮಯ್ಯ ಅವರನ್ನೂ ಕಳುಹಿಸಬೇಕು ಎಂದು ಸಚಿವ ಅಶ್ವತ್ಥನಾರಾಯಣ ನೀಡಿರುವ ಹೇಳಿಕೆ ಕುರಿತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಸ್ಪಷ್ಟನೆ ಕೊಡಲಿ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಆಗ್ರಹಿಸಿದರು.

ಕಾಂಗ್ರೆಸ್ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ತೆಗೆಯೋಕೆ ಸಿದ್ದರಾಮಯ್ಯ ಅವರದ್ದು ಟಗರಿನ ತಲೆಯೇ? ಟಿಪ್ಪು ಸುಲ್ತಾನರ ತಲೆಯನ್ನು ಉರಿಗೌಡ– ನಂಜಗೌಡ ತೆಗೆದಿದ್ದಾರೆಂಬ ಇತಿಹಾಸ ನನಗಂತೂ ಗೊತ್ತಿಲ್ಲ. ಬರೀ ನಾಟಕ. ಟಿಪ್ಪು ಸಾಧನೆಯ ಬಗ್ಗೆ ರಾಷ್ಟ್ರಪತಿಗಳೇ ಸದನದಲ್ಲಿ ಮಾತನಾಡಿದ್ದಾರೆ. ಆಗ ಬೊಮ್ಮಾಯಿ, ಯಡಿಯೂರಪ್ಪ ಅಲ್ಲೇ ಇದ್ದರಲ್ಲವೇ' ಎಂದರು.



ರಥೋತ್ಸವ ವಿಜಯನಗರ ಜಿಲ್ಲೆಯ ಕೊಟ್ಟೂರು ಪಟ್ಟಣದಲ್ಲಿ ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿ ರಥೋತ್ಸವ ಸಡಗರ, ಸಂಭ್ರಮದಿಂದ ಗುರುವಾರ ಜರುಗಿತು. ಅಪಾರ ಸಂಖ್ಯೆಯ ಭಕ್ತರು ಪಾಲ್ಗೊಂಡಿದ್ದರು

ಪ್ರಜಾವಾಣಿ ಚಿತ್ರ: ಎ.ಎಂ. ಸೋಮಶೇಖರಯ್ಯ

ಕಲುಷಿತ ನೀರು: ಮೃತರ ಸಂಖ್ಯೆ 3ಕ್ಕೆ ಏರಿಕೆ

ಯಾದಗಿರಿ/ಗುರುಮಠಕಲ್: ಗುರುಮಠಕಲ್ ತಾಲ್ಲೂಕಿನ ಅನಪುರ ಗ್ರಾಮದಲ್ಲಿ ಕಲುಷಿತ ನೀರು ಕುಡಿದು ನರಸಮ್ಮ ಯಲ್ಲಪ್ಪ (75) ಎಂಬುವರು ಬುಧವಾರ ರಾತ್ರಿ ಯಾದಗಿರಿ ಜಿಲ್ಲಾ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದು, ಇದರೊಂದಿಗೆ ಮೃತರ ಸಂಖ್ಯೆ ಮೂರಕ್ಕೆ ಏರಿಕೆಯಾಗಿದೆ. 5

ಚಿನಕುರಳಿ

ಪ್ರಕಾಶ್ ಶೆಟ್ಟಿ



ಗುತ್ತಿಗೆ ನೇಮಕದಲ್ಲೂ ಮೀಸಲು?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರದ ವಿವಿಧ ಇಲಾಖೆಗಳಿಗೆ ಗುತ್ತಿಗೆ ಆಧಾರದ ನೇಮಕಾತಿಗೂ ಮೀಸಲಾತಿ ನೀತಿ ಅನ್ವಯಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ವಿಧಾನ ಪರಿಷತ್ತಿನಲ್ಲಿ ಗುರುವಾರ ಬಿಜೆಪಿಯ ಛಲವಾದಿ ನಾರಾಯಣಸ್ವಾಮಿ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ನಾಗರಿಕ ಸೇವಾ ನಿಯಮಗಳ ಅನ್ವಯ ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳಲಿದ್ದು, ನಿರ್ದಿಷ್ಟ ಅವಧಿಗೆ ಸೀಮಿತವಾಗಿರುತ್ತದೆ. ನೇಮಕಾತಿ ವೇಳೆ ಪ್ರಭಾವಿಗಳಿಗೆ ಮಣೆ ಹಾಕಲಾಗುತ್ತಿದೆ, ತಳ ಸಮುದಾಯ ಕಡೆಗಣಿಸಲಾಗುತ್ತಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿಲ್ಲ ಎಂದರು.

ಬ್ರಾಹ್ಮಣ, ಆರ್ಯವೈಶ್ಯ ನಿಗಮಗಳಿಗೆ ₹ 10 ಕೋಟಿ: ಇತರೆ ನಿಗಮಗಳಿಗೆ ಅನುದಾನ ನೀಡಲಾಗಿದೆ. ಆದರೆ, ಬ್ರಾಹ್ಮಣ, ಆರ್ಯವೈಶ್ಯ ಅಭಿವೃದ್ಧಿ ನಿಗಮಗಳನ್ನು ಕಡೆಗಣಿಸಲಾಗಿದೆ ಎಂದು ಜೆಡಿಎಸ್‌ನ ಟಿ.ಎ.ಶರವಣ ಅವರು ಅಸಮಾಧಾನ ವ್ಯಕ್ತಪಡಿಸಿದರು.

ಅವರ ಮಾತಿಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ಒಂದಷ್ಟು ಹಣ ನಿಗಮದಲ್ಲಿ ಖರ್ಚಾಗದೇ ಉಳಿದಿದೆ. ಹಾಗಾಗಿ, ಹೆಚ್ಚುವರಿ ಹಣ ಬಿಡುಗಡೆ ಮಾಡಿಲ್ಲ. ಎರಡೂ ನಿಗಮಗಳಿಗೆ ತಲಾ ₹ 10 ಕೋಟಿ ನೀಡಲಾಗುವುದು ಎಂದು ಭರವಸೆ ನೀಡಿದರು.

'1,250 ಸಹಾಯಕ ಪ್ರಾಧ್ಯಾಪಕ ಹುದ್ದೆ: ಶೀಘ್ರ ಭರ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶೀಘ್ರವೇ 1,250 ಸಹಾಯಕ ಪ್ರಾಧ್ಯಾಪಕ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ಇದಕ್ಕೆ ಸಂಬಂಧಿಸಿದ ಪ್ರಕ್ರಿಯೆಗಳನ್ನು ಆರಂಭಿಸಲಾಗಿದೆ ಎಂದು ಅವರು ಗುರುವಾರ ವಿಧಾನಸಭೆಯಲ್ಲಿ ಬಿಜೆಪಿಯ ಡಾ.ಅವಿನಾಶ್ ಜಾಧವ್ ಅವರ ಪ್ರಶ್ನೆಗೆ ಉತ್ತರಿಸಿದರು.

6,500 ಮಂಜೂರಾದ ಹುದ್ದೆಗಳಲ್ಲಿ 5,000 ಭರ್ತಿ ಆಗಿವೆ. 1,250 ಹುದ್ದೆಗಳ ಭರ್ತಿ ನಂತರವೂ 250 ಹುದ್ದೆಗಳು ಖಾಲಿ ಉಳಿಯುತ್ತವೆ. ಮುಂಬರುವ ದಿನಗಳಲ್ಲಿ ಅವುಗಳನ್ನು ಭರ್ತಿ ಮಾಡಲಾಗುವುದು. ಅಲ್ಲದೇ, 310 ಪ್ರಾಂಶುಪಾಲರ ಹುದ್ದೆಗಳನ್ನೂ ಭರ್ತಿ ಮಾಡಲಾಗುವುದು ಎಂದರು.

ಸದ್ಯ, ಅತಿಥಿ ಉಪನ್ಯಾಸಕರಿಗೆ ಹಲವು ಜವಾಬ್ದಾರಿಗಳನ್ನು ನಿಗದಿ ಮಾಡಿದ್ದು ಅವುಗಳನ್ನೂ ನಿರ್ವಹಣೆ ಮಾಡಬೇಕು ಎಂದರು.

ರೈತರಿಗೆ ಶೂನ್ಯ ಬಡ್ಡಿದರದ ಸಾಲದ ಮೊತ್ತ ₹5 ಲಕ್ಷಕ್ಕೆ?

ಭರವಸೆಯೇ ಬಜೆಟ್ ಹೂರಣ

ಪ್ರಜಾವಾಣಿ ವಾರ್ತೆ

ಇಂದು 10.15ಕ್ಕೆ ಬಜೆಟ್ ಮಂಡನೆ

ಹಣಕಾಸು ಖಾತೆಯನ್ನೂ ಹೊಂದಿರುವ ಬೊಮ್ಮಾಯಿ ಅವರು ಶುಕ್ರವಾರ ಬೆಳಿಗ್ಗೆ 10.15ಕ್ಕೆ ಬಜೆಟ್ ಮಂಡಿಸಲಿದ್ದಾರೆ.

ಬೆಂಗಳೂರು: ವಿಧಾನಸಭೆ ಚುನಾವಣೆಯಲ್ಲಿ ಗೆದ್ದು ಮತ್ತೆ ಅಧಿಕಾರ ಹಿಡಿಯಲೇಬೇಕು ಎಂಬ ಛಲತೊಟ್ಟಂತಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ತಾವು ಮಂಡಿಸಲಿರುವ ಎರಡನೇ ಬಜೆಟ್‌ನಲ್ಲಿ ಎಲ್ಲ ಸಮುದಾಯದ ಮತದಾರರನ್ನು ಸೆಳೆಯುವತ್ತ ಲಕ್ಷ್ಯ ನೆಟ್ಟಿದ್ದಾರೆ.

ಸರ್ಕಾರಿ ನೌಕರರು, ವಿವಿಧ ಜಾತಿ ಸಮುದಾಯಗಳು, ನಗರವಾಸಿಗಳು, ಮಹಿಳೆಯರು, ರೈತರನ್ನು ಕೇಂದ್ರೀಕರಿಸಿ ಬಜೆಟ್ ತಯಾರಿಗೆ ಆದ್ಯತೆ ನೀಡಲಾಗಿದೆ ಎಂದು ಮೂಲಗಳು ಹೇಳಿವೆ.

ಸರ್ಕಾರಿ ನೌಕರರ ವೇತನ ಪರಿಷ್ಕರಣೆಗೆ ರಚಿಸಲಾಗಿರುವ ಏಳನೇ ವೇತನ ಆಯೋಗದ ಅನುಷ್ಠಾನದತ್ತ ಇಡೀ ನೌಕರರ ವರ್ಗ ಕಾತರದಿಂದಿದೆ. ಆಯೋಗದ ವರದಿ ಸಲ್ಲಿಕೆಯಾದ ಬಳಿಕ ಅದರ ಜಾರಿಗೆ ₹10 ಸಾವಿರ ಕೋಟಿ ಅನುದಾನ ಮೀಸಲಿಡುವುದಾಗಿ ಘೋಷಣೆ ಮಾಡಲಿದ್ದಾರೆ ಎಂದು ಗೊತ್ತಾಗಿದೆ.

ಜಾತಿ ಆಧಾರದ ಮೇಲೆ ಚುನಾವಣೆ ನಡೆಸುವುದನ್ನು ರಾಜಕೀಯ ಪಕ್ಷಗಳು ರೂಢಿ ಮಾಡಿಕೊಂಡಿವೆ. ಬೊಮ್ಮಾಯಿ ಅವರದ್ದು ಚುನಾವಣೆ ಬಜೆಟ್ ಆಗಿರುವುದರಿಂದ ಈ ಬಾರಿ ಜಾತಿಗಳನ್ನು ಓಲೈಸುವ ಸಾಧ್ಯತೆ ಹೆಚ್ಚಿದೆ. ಪೂರಕವೆಂಬಂತೆ, ಗಾಣಿಗ, ಮಡಿವಾಳ, ಕುಂಬಾರ, ಮೇದಾರ, ಅಕ್ಕಸಾಲಿಗ ಮತ್ತಿತರ ಸಣ್ಣ ಸಮುದಾಯದವರಿಗೆ ಪ್ರತ್ಯೇಕ ನಿಗಮಗಳನ್ನು ರಚಿಸುವ ಘೋಷಣೆ ಹೊರಬೀಳಲಿದೆ. ಸಾಂಪ್ರದಾಯಿಕ ವೃತ್ತಿ ಆಧಾರಿತ ಸಮುದಾಯದವರಿಗೆ ಪ್ರೋತ್ಸಾಹ ನೀಡಲು ₹50 ಸಾವಿರ ಸಹಾಯಧನ ನೀಡುವ ಬಗ್ಗೆಯೂ ಬೊಮ್ಮಾಯಿ ಪ್ರಕಟಿಸಲಿದ್ದಾರೆ ಎಂದು ಗೊತ್ತಾಗಿದೆ.

ನಿರ್ಣಾಯಕ ಮತದಾರರಾದ ರೈತರನ್ನು ಒಲವು ಗಿಟ್ಟಿಸಲು ಈಗ ₹ 3 ಲಕ್ಷದವರೆಗೆ ನೀಡಲಾಗುತ್ತಿರುವ ಶೂನ್ಯ ಬಡ್ಡಿದರದ ಸಾಲದ ಮೊತ್ತವನ್ನು ₹ 5 ಲಕ್ಷಕ್ಕೆ ಹೆಚ್ಚಿಸುವ ಸಾಧ್ಯತೆ ಇದೆ. ಮಹಿಳಾ ಮತದಾರರ ವೋಟನ್ನು ಪಕ್ಷಕ್ಕೆ ಸೆಳೆಯಲು ಪ್ರತಿಕುಟುಂಬದ ಮಹಿಳೆಗೆ ₹1,500 ನೀಡುವ 'ಗೃಹಿಣಿ ಶಕ್ತಿ' ಯೋಜನೆ ಪ್ರಕಟಿಸುವ ಸಂಭವ ಇದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಈ ಯೋಜನೆಗಳನ್ನು (ಗೃಹ ಲಕ್ಷ್ಮೀ ಯೋಜನೆಯಡಿ ₹2 ಸಾವಿರ) ಜಾರಿ ಮಾಡುವುದಾಗಿ ಆ ಪಕ್ಷದ ನಾಯಕರು ಪ್ರಕಟಿಸಿದ್ದರು.

5ನೇ ಪುಟ ನೋಡಿ

ಬೆಂಗಳೂರಿಗೆ ನೀರು: ನಿತ್ಯ ₹ 2.11 ಕೋಟಿ ನಷ್ಟ

ಬೆಂಗಳೂರು: ಕಾವೇರಿ ನದಿಯಿಂದ ಬೆಂಗಳೂರು ನಗರಕ್ಕೆ ಸರಬರಾಜಾಗುತ್ತಿರುವ ನೀರು ಸೋರಿಕೆ ಹಾಗೂ ಅನಧಿಕೃತ ನಲ್ಲಿ ಸಂಪರ್ಕಗಳ ಪರಿಣಾಮ ಪ್ರತಿದಿನ ₹ 2.11 ಕೋಟಿ ನಷ್ಟವಾಗುತ್ತಿದ್ದು, ನೀರಿನ ಕಳವು ತಡೆಗೆ ಜಲ ಮಂಡಳಿ ಅಧಿಕಾರಿಗಳನ್ನು ಒಳಗೊಂಡ ಕಾರ್ಯಪಡೆ ರಚಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಿಧಾನಪರಿಷತ್ತಿನಲ್ಲಿ ಗುರುವಾರ ಬಿಜೆಪಿ ಸದಸ್ಯೆ ಭಾರತಿಶೆಟ್ಟಿ ಅವರ ಚುಕ್ಕಿ ಗುರುತಿನ ಪ್ರಶ್ನೆಗೆ ಉತ್ತರಿಸಿದ ಅವರು, ನಿತ್ಯ 145 ಕೋಟಿ ಲೀಟರ್ ನೀರು ಸರಬರಾಜು ಮಾಡಲಾಗುತ್ತಿದೆ. ನೀರಿನ ಸಂಗ್ರಹ, ಶುದ್ಧೀಕರಣ, ನೌಕರರ ವೇತನ ಸೇರಿದಂತೆ ಒಂದು ಸಾವಿರ ಲೀಟರ್‌ಗೆ ₹ 41 ವೆಚ್ಚವಾಗುತ್ತಿದೆ. 10.64 ಲಕ್ಷ ನಲ್ಲಿ ಸಂಪರ್ಕಗಳಿಂದ ₹ 3.83 ಕೋಟಿ ಸಂಗ್ರಹವಾಗುತ್ತಿದೆ. ನಿತ್ಯ ₹ 2.11 ಕೋಟಿ ನಷ್ಟವಾಗುತ್ತಿದೆ ಎಂದು ಮಾಹಿತಿ ನೀಡಿದರು.

'ನಾನು ಮುಖ್ಯಮಂತ್ರಿಯಾಗುವ ಮೊದಲು ಶೇ 37ರಷ್ಟು ನೀರು ವ್ಯರ್ಥವಾಗುತ್ತಿತ್ತು. ಕೆಲ ಕ್ರಮಗಳ ಬಳಿಕ ಶೇ 29ಕ್ಕೆ ಬಂದಿದೆ. 50 ವರ್ಷ ಹಳೆಯದಾದ ಪೈಪ್‌ಲೈನ್ ಮಾರ್ಗಗಳನ್ನು ಬದಲಾಯಿಸಲಾಗುತ್ತಿದೆ. ಈಗಾಗಲೇ 22 ಕಿ.ಮೀ. ಹೊಸ ಪೈಪ್‌ಲೈನ್ ಅಳವಡಿಸಲಾಗಿದೆ. ಸಂಪೂರ್ಣ ಬದಲಾಯಿಸಲು, ಜಲಸಂಗ್ರಹಾಗಾರಗಳನ್ನು ಪುನಶ್ಚೇತನಗೊಳಿಸಲು ಜಲಮಂಡಳಿಗೆ ₹ 8 ಸಾವಿರ ಕೋಟಿಯ ಅಗತ್ಯವಿದೆ. ನೀರು ಕಳವು ಸಂಬಂಧ 2020-21 ಇಲ್ಲಿಯವರೆಗೆ 1,759 ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ವಿವರ ನೀಡಿದರು.

'ಮಾತೃಭಾಷೆ ಶಿಕ್ಷಣ: ಮಸೂದೆಗೆ ಒಪ್ಪಿಗೆ ಪಡೆಯಿರಿ'

ಪ್ರಜಾವಾಣಿ ವಾರ್ತೆ



ದೊಡ್ಡರಂಗೇಗೌಡ

ಬೆಂಗಳೂರು: 'ಒಂದರಿಂದ ಐದನೇ ತರಗತಿಯವರೆಗೆ ಮಾತೃಭಾಷೆ ಶಿಕ್ಷಣವನ್ನು ಕಡ್ಡಾಯಗೊಳಿಸುವ ಸಂಬಂಧ 2015ರ ಶಿಕ್ಷಣ ಮಸೂದೆಗೆ ರಾಷ್ಟ್ರಪತಿಯ ಒಪ್ಪಿಗೆ ಪಡೆಯಬೇಕು' ಎಂದು ಸರ್ಕಾರಕ್ಕೆ ಸಾಹಿತಿ ದೊಡ್ಡರಂಗೇಗೌಡ ಆಗ್ರಹಿಸಿದ್ದಾರೆ.

ಈ ಸಂಬಂಧ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿದ್ದಾರೆ. 'ಕನ್ನಡ ಶಿಕ್ಷಣ ಮಾಧ್ಯಮಕ್ಕೆ ಇರುವ ಅಡಚಣೆಯ ನಿವಾರಣೆಗಾಗಿ ಈ ಪತ್ರ ಬರೆಯುತ್ತಿದ್ದೇನೆ. ಒಂದರಿಂದ ಐದನೇ ತರಗತಿವರೆಗೆ ಮಾತೃಭಾಷೆ ಶಿಕ್ಷಣ ನೀಡಲು ಮಸೂದೆ ರಚಿಸಿ, ರಾಷ್ಟ್ರಪತಿ ಅಂಗೀಕಾರಕ್ಕೆ ಕಳುಹಿಸಲಾಗಿತ್ತು. ಆ ಮಸೂದೆಯನ್ನು ಹಿಂಪಡೆಯುವಂತೆ ಕೇಂದ್ರ ಸರ್ಕಾರದ ಶಿಕ್ಷಣ ಸಚಿವಾಲಯ ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿದೆ. ರಾಜ್ಯ ಸರ್ಕಾರವು ಈ ಮಸೂದೆಯ ಮಹತ್ವವನ್ನು ಕೇಂದ್ರಕ್ಕೆ ಮನವರಿಕೆ ಮಾಡಿಸಿ, ರಾಷ್ಟ್ರಪತಿಯ ಅಂಗೀಕಾರ ಪಡೆಯಬೇಕು' ಎಂದು ಒತ್ತಾಯಿಸಿದ್ದಾರೆ.

'ಪ್ರಧಾನಿ ನರೇಂದ್ರ ಮೋದಿ ಅವರು ಮಾತೃಭಾಷೆ ಶಿಕ್ಷಣವನ್ನು ಪ್ರತಿಪಾದಿಸಿದ್ದಾರೆ. 'ರಾಷ್ಟ್ರೀಯ ಶಿಕ್ಷಣ ನೀತಿ-2020'ರಲ್ಲಿ ಮಾತೃಭಾಷೆ ಅಥವಾ ಸ್ಥಳೀಯ ಭಾಷಾ ಶಿಕ್ಷಣ ಮಾಧ್ಯಮವನ್ನು ಜಾರಿಗೆ ತರಬೇಕೆಂದು ಸ್ಪಷ್ಟವಾಗಿ ಹೇಳಲಾಗಿದೆ. ಆದ್ದರಿಂದ ಕೇಂದ್ರ ಸರ್ಕಾರದ ಶಿಕ್ಷಣ ಸಚಿವಾಲಯದ ಆಕ್ಷೇಪಣೆಗಳನ್ನು ಬದಿಗಿಟ್ಟು, ಮಸೂದೆಯ ಅಂಗೀಕಾರಕ್ಕೆ ಕಳುಹಿಸಬೇಕು. ಇಲ್ಲವಾದರೆ, ಅದು ಕೇಂದ್ರ ಸರ್ಕಾರವು ಅನುಷ್ಠಾನಗೊಳಿಸುತ್ತಿರುವ ರಾಷ್ಟ್ರೀಯ ಶಿಕ್ಷಣ ನೀತಿಯ ಆಶಯಗಳಿಗೆ ಧಕ್ಕೆ ತಂದಂತಾಗುತ್ತದೆ' ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

100 ಸ್ಥಳಗಳಲ್ಲಿ ನಿರ್ಮಾಣ: ಬೆಂಗಳೂರು ಮಹಾನಗರ ಪಾಲಿಕೆಯಿಂದ ಟೆಂಡರ್ ಆಹ್ವಾನ

ಮಹಿಳೆಯರ ಸ್ವಾಸ್ಥ್ಯಕ್ಕೆ 'ಶಿ' ಶೌಚಾಲಯ

• ಆರ್. ಮಂಜುನಾಥ್

ಬೆಂಗಳೂರು: ನಗರದಲ್ಲಿ 100 ಸ್ಥಳಗಳಲ್ಲಿ ಮಹಿಳೆಯರಿಗೆ ಸ್ವಾಸ್ಥ್ಯ ಸಂಬಂಧಿತ ವಿಷಯಗಳಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಬಿಬಿಎಂಪಿ 'ಶಿ' (she) ಶೌಚಾಲಯವನ್ನು ಶೀಘ್ರವೇ ಆರಂಭಿಸಲಿದೆ.

ಶೌಚಾಲಯವಷ್ಟೇ ಅಲ್ಲದೆ ಮಕ್ಕಳಿಗೆ ಹಾಲುಣಿಸಲು ಅಥವಾ ಬಟ್ಟೆ ಬದಲಾಯಿಸಲು ಕೊಠಡಿಯ ವ್ಯವಸ್ಥೆಯನ್ನು ಸಹ 'ಶಿ' ಒಳಗೊಳ್ಳಲಿದೆ. ಮಾರ್ಚ್ ತಿಂಗಳ ಅಂತ್ಯದ ವೇಳೆಗೆ ಎಲ್ಲವೂ ಕಾರ್ಯಾರಂಭವಾಗಬೇಕು ಎಂಬ ಗುರಿ ಬಿಬಿಎಂಪಿಯದ್ದಾಗಿದೆ.

ನಗರದ ಎಂಟೂ ವಲಯಗಳಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯು 100 ಸ್ಥಳಗಳನ್ನು ಗುರುತಿಸಿದ್ದು, ಕನಿಷ್ಠ 10 ಚದರ ಅಡಿ ಪ್ರದೇಶದಲ್ಲಿ 'ಶಿ ಶೌಚಾಲಯ' ಆರಂಭ ಆಗಲಿದೆ. ಮೈದಾನ, ಉದ್ಯಾನ, ಹೆಚ್ಚು ಪಾದಚಾರಿಗಳಿರುವ ಪ್ರದೇಶ, ಶಾಲೆ-ಕಾಲೇಜುಗಳು, ಪ್ರಮುಖ ಸಂಸ್ಥೆಗಳು ಇರುವ ಪ್ರದೇಶಗಳನ್ನು ಗುರುತಿಸಲಾಗಿದೆ.

'ಶಿ ಶೌಚಾಲಯ' ಆರಂಭಿಸಲು ಬಿಬಿಎಂಪಿ ನಾಲ್ಕು ಪ್ಯಾಕೇಜ್‌ಗಳಲ್ಲಿ ಟೆಂಡರ್ ಕರೆದಿದೆ. ಫೆ.27ರವರೆಗೆ ಟೆಂಡರ್ ಅನ್ನು ಸಲ್ಲಿಸಬಹುದು. ವಿನ್ಯಾಸ, ಹಣಕಾಸು, ನಿರ್ಮಾಣ, ಕಾರ್ಯಾಚರಣೆ ಮತ್ತು ವರ್ಗಾವಣೆ (ಡಿಎಫ್‌ಬಿಒಟಿ) ಆಧಾರದಲ್ಲಿ 12 ವರ್ಷಕ್ಕೆ ಗುತ್ತಿಗೆ ನೀಡಲಾಗುತ್ತಿದೆ. ಗುತ್ತಿಗೆದಾರರಿಗೆ ಸ್ಥಳವನ್ನು ಬಿಬಿಎಂಪಿ ಒದಗಿಸಲಿದ್ದು, ಅದಕ್ಕಾಗಿ ಬಾಡಿಗೆಯನ್ನು ಪಡೆಯಲಿದೆ.

ಜಾಹೀರಾತು ಪ್ರದರ್ಶನದ ತೆರಿಗೆಯನ್ನು ಗುತ್ತಿಗೆದಾರರು ಪಾವತಿಸಬೇಕು. ಎಲ್ಲ ನಿರ್ವಹಣೆಯೂ ಗುತ್ತಿಗೆದಾರರದ್ದೇ ಆಗಿದ್ದು, ಜಾಹೀರಾತು ಮೂಲಕ ಅವರು ಹಣಗಳಿಸಬಹುದಾಗಿದೆ.

ಸೌಲಭ್ಯಗಳೇನು?: ಪ್ರತಿ ಶೌಚಾಲಯದ ಪ್ರವೇಶ ರಸ್ತೆಯತ್ತ ಇರಬಾರದು. 'ಸ್ಮಾರ್ಟ್' ಶೌಚಾಲಯದ ಸೌಲಭ್ಯದೊಂದಿಗೆ, ಹಾಲುಣಿಸುವ ಅಥವಾ ಬಟ್ಟೆಯನ್ನು ಬದಲಿಸುವ ಕೊಠಡಿ ಇರಲಿದೆ.

ಸ್ಯಾನಿಟೈಸರ್, ಸ್ವಯಂಚಾಲಿತ ಸೆನ್ಸರ್ ಯಂತ್ರ, ಕೈತೊಳೆಯುವ ಪ್ರದೇಶ, ಕನ್ನಡಿ, ಗ್ರಾನೈಟ್, ವೆಟ್ರಿಫೈಡ್ ನೆಲಹಾಸು, ಒಳಗೆ-ಹೊರಗೆ ಎಲ್‌ಇಡಿ ದೀಪ, ಶೌಚಾಲಯದ ಹೊರಗಡೆ ಸಿ.ಸಿ ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಲಾಗುತ್ತದೆ.

ಪಾದಚಾರಿ ಮಾರ್ಗದ ಎಲ್ಲ ಪ್ರದೇಶಗಳನ್ನು ಈ ಶೌಚಾಲಯ ನಿರ್ಮಾಣಕ್ಕೆ ಬಳಸಿಕೊಳ್ಳಬಾರದು ಎಂಬ ಷರತ್ತು ವಿಧಿಸಲಾಗಿದೆ. ಪಾದಚಾರಿ ಮಾರ್ಗದ ಅಗಲವನ್ನು ಆಧರಿಸಿ ಕನಿಷ್ಠ ಸ್ಥಳ ಉಪಯೋಗಿಸಬೇಕು. 1.5 ಮೀಟರ್‌ಗೆ ಕಡಿಮೆ ಇರಬಾರದು ಎಂದು ಹೇಳಲಾಗಿದೆ.

'ಹೆಚ್ಚಿನ ಸ್ಥಳಾವಕಾಶವಿರುವ ಪ್ರದೇಶದಲ್ಲಿ 'ಶಿ ಶೌಚಾಲಯ'ದಲ್ಲಿ ಬಿಸಿ ಹಾಗೂ ತಣ್ಣೀರಿನ ಶವರ್ ಸೌಲಭ್ಯವನ್ನು ಒದಗಿಸಲಾಗುತ್ತದೆ. ಸ್ವಯಂಚಾಲಿತವಾಗಿ ನಿಲ್ಲುವ ವ್ಯವಸ್ಥೆಯನ್ನು ಒಳಗೊಂಡಿರುತ್ತದೆ. ಶೌಚಾಲಯದ ಹೊರಭಾಗದಲ್ಲಿ ಕುಳಿತುಕೊಳ್ಳುವ ವ್ಯವಸ್ಥೆಗಳನ್ನು ಕಲ್ಪಿಸಿ, ತೋಟಗಾರಿಕೆ ಸಸಿಗಳನ್ನು ನೆಟ್ಟು ಪೋಷಿಸಲಾಗುತ್ತದೆ' ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದರು.

'ಶಿ' ಶೌಚಾಲಯ

ಎಲ್ಲೆಲ್ಲಿ ಎಷ್ಟು?

ವಲಯ	ಸಂಖ್ಯೆ
ಆರ್.ಆರ್. ನಗರ	17
ಮಹದೇವಪುರ	17
ಪೂರ್ವ	16
ಪಶ್ಚಿಮ	16
ದಕ್ಷಿಣ	16
ಬೊಮ್ಮನಹಳ್ಳಿ	14
ದಾಸರಹಳ್ಳಿ	2
ಯಲಹಂಕ	2
ಒಟ್ಟು	100

ಉಚಿತ ಸೇವೆಯ ಉದ್ದೇಶ...

'ನಗರದಲ್ಲಿ ಮಹಿಳೆಯರ ಉಪಯೋಗಕ್ಕಾಗಿ ಆರಂಭಿಸಲಾಗುತ್ತಿರುವ 'ಶಿ' ಶೌಚಾಲಯಗಳನ್ನು ಉಚಿತವಾಗಿ ಒದಗಿಸುವ ಉದ್ದೇಶವಿದೆ. ಹೀಗಾಗಿಯೇ ಗುತ್ತಿಗೆದಾರರಿಗೆ ಜಾಹೀರಾತು ಪ್ರದರ್ಶಿಸುವ ಅವಕಾಶ ನೀಡಲಾಗಿದೆ.

ಮುಂದಿನ ದಿನಗಳಲ್ಲಿ ಅದರ ಸಾಧಕ-ಬಾಧಕಗಳನ್ನು ಅವಲೋಕಿಸಿ ನಿರ್ಧಾರವನ್ನು ತೆಗೆದುಕೊಳ್ಳಲಾಗುತ್ತದೆ' ಎಂದು ಬಿಬಿಎಂಪಿ ಘನತ್ಯಾಜ್ಯ ನಿರ್ವಹಣೆ ವಿಭಾಗದ ಜಂಟಿ ಆಯುಕ್ತ ಪರಶುರಾಮ ಅವರು ಮಾಹಿತಿ ನೀಡಿದರು.

ಕೆಎಸ್‌ಆರ್‌ಟಿಸಿಗೆ ರಾಷ್ಟ್ರೀಯ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್‌ಆರ್‌ಟಿಸಿ ಅಳವಡಿಸಿಕೊಂಡಿರುವ ಮಾನವ ಸಂಪನ್ಮೂಲ ಉಪಕ್ರಮಗಳಿಗೆ ಪ್ರತಿಷ್ಠಿತ ಗೌರ್ನನ್ಸ್ ನೌ 9ನೇ ಸಾರ್ವಜನಿಕ ಉದ್ದಮೆಗಳ ರಾಷ್ಟ್ರೀಯ ಪ್ರಶಸ್ತಿ ದೊರೆತಿದೆ. ದೇಶದ ಬೆಳವಣಿಗೆಗೆ ಪ್ರಮುಖ ಪಾತ್ರ ವಹಿಸಿರುವ ಸಾರ್ವಜನಿಕ ವಲಯದ ಉದ್ಯಮಗಳ(ಪಿಎಸ್‌ಯು) ಪ್ರಯತ್ನಗಳನ್ನು ಗೌರವಿಸುವುದು ಈ ಪ್ರಶಸ್ತಿಯ ಉದ್ದೇಶವಾಗಿದೆ. ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ದೀಪಕ್ ಮಿಶ್ರಾ ಅವರು ಪ್ರಶಸ್ತಿ ಪ್ರದಾನ ಮಾಡಿದರು ಎಂದು ಕೆಎಸ್‌ಆರ್‌ಟಿಸಿ ತಿಳಿಸಿದೆ.

ನಮ್ಮ ಪ್ರಶ್ನೆಗೆ ಬೊಮ್ಮಾಯಿ ಉತ್ತರಿಸಲಿ – ಸುರ್ಜೇವಾಲಾ

ಪ್ರಜಾವಾಣಿ ವಾರ್ತೆ



ರಣದೀಪ್ ಸಿಂಗ್ ಸುರ್ಜೇವಾಲಾ

ಬೆಂಗಳೂರು: 'ಬಸವರಾಜ ಬೊಮ್ಮಾಯಿ ನೇತೃತ್ವದ ರಾಜ್ಯ ಬಿಜೆಪಿ ಸರ್ಕಾರ ಕಳೆದ ಬಜೆಟ್‌ನಲ್ಲಿ ನೀಡಿದ ಭರವಸೆಗಳನ್ನೇ ಈಡೇರಿಸಿಲ್ಲ. ಈಗ ಹೊಸ ಬಜೆಟ್ ಮಂಡಿಸಲು ಹೊರಟಿದ್ದಾರೆ' ಎಂದು ಟೀಕಿಸಿದ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, 'ಹೊಸದಾಗಿ ಬಜೆಟ್ ಮಂಡಿಸುತ್ತಿರುವ ಬೊಮ್ಮಾಯಿ ನಮ್ಮ ಪ್ರಶ್ನೆಗಳಿಗೆ ಉತ್ತರಿಸಬೇಕು' ಎಂದು ಸವಾಲು ಹಾಕಿದರು.

ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ, ಪಕ್ಷದ ಮುಖಂಡ ಕೆ.ಎಚ್. ಮುನಿಯಪ್ಪ, ಶಾಸಕ ಪ್ರಿಯಾಂಕ್ ಖರ್ಗೆ ಜೊತೆ ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, 'ಕಲ್ಯಾಣ ಕರ್ನಾಟಕ ಭಾಗಕ್ಕೆ ಘೋಷಿಸಿದ್ದ ಹಣ ಯಾಕೆ ಬಳಸಿಕೊಂಡಿಲ್ಲ. ಒಕ್ಕಲಿಗ ಅಭಿವೃದ್ಧಿ ಹಾಗೂ ಬಿಲ್ಲವ ಕೋಶಕ್ಕೆ ಘೋಷಿಸಿದ್ದ ಅನುದಾನ ಬಿಡುಗಡೆ ಯಾಕೆ ಮಾಡಿಲ್ಲ? ಪಂಚಮಸಾಲಿ ಲಿಂಗಾಯತರಿಗೆ ನೀಡಿದ ಭರವಸೆ ಇನ್ನೂ ಈಡೇರಿಲ್ಲ ಯಾಕೆ? ಗೋವಾದಲ್ಲಿ ಕನ್ನಡ ಭವನ ಯಾಕೆ ನಿರ್ಮಾಣ ಆಗಿಲ್ಲ' ಎಂದು ಪ್ರಶ್ನಿಸಿದರು.

'2018ರಲ್ಲಿ ಕೊಟ್ಟ ಅನೇಕ ಭರವಸೆಗಳನ್ನು ಬಿಜೆಪಿ ಈಡೇರಿಸಲಿಲ್ಲ. ಶಿಕ್ಷಣಕ್ಕೆ ₹ 3 ಸಾವಿರ ಕೋಟಿ ನೀಡಿದರೂ ವೆಚ್ಚ ಮಾಡಿಲ್ಲ. ₹ 4,500 ಕೋಟಿ ಮೊತ್ತದ ಎಸ್‌ಸಿ, ಎಸ್‌ಟಿ, ಹಿಂದುಳಿದ ಸಮುದಾಯದ ಪ್ರತಿಭಾ ಪುರಸ್ಕಾರ ಈಡೇರಿಸಿಲ್ಲ' ಎಂದರು.

ಎಂ.ಬಿ. ಪಾಟೀಲ ಮಾತನಾಡಿ, 'ಬಸವರಾಜ ಸುಳ್ಳಿನ ಸರದಾರ. ಅವರು ನೀಡಿದ ಭರವಸೆ ಈಡೇರಿಸದಿದ್ದರೆ, ಬೆನ್ನಿಗೆ ಚೂರಿ ಹಾಕಿದಂತೆ ಆಗಲಿದೆ. ಸರ್ಕಾರ ಜನ ವಿರೋಧಿಯಾಗಿದೆ' ಎಂದರು.

ಕೆ.ಎಚ್. ಮುನಿಯಪ್ಪ ಮಾತನಾಡಿ, 'ಬಿಜೆಪಿ ಸರ್ಕಾರ ಬಂದ ಬಳಿಕ ಕಾರ್ಮಿಕರು ಬೀದಿಪಾಲಾಗಿದ್ದಾರೆ. ಕೋಮು ಗಲಭೆಯಲ್ಲಿ ಅಲ್ಪಸಂಖ್ಯಾತರು ನೆಮ್ಮದಿ ಕಳೆದುಕೊಂಡಿದ್ದಾರೆ. ಒಟ್ಟಾರೆ ರಾಜ್ಯದ ನೆಮ್ಮದಿ ಹಾಳಾಗಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡದ ಮೀಸಲಾತಿ ಗೊಂದಲಮಯವಾಗಿದೆ' ಎಂದು ಕಿಡಿಕಾರಿದರು.

ಕಾಡು ಮಲ್ಲೇಶ್ವರ ದೇವಸ್ಥಾನ: ಪುಷ್ಪಲಿಂಗ ಪ್ರತಿಷ್ಠಾಪನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದ ಪುರಾತನ ಕಾಡುಮಲ್ಲೇಶ್ವರ ದೇವಸ್ಥಾನದಲ್ಲಿ ಫೆ.18 ರಿಂದ 20ರವರೆಗೆ ಮೂರು ದಿನಗಳ ಕಾಲ ಮಹಾಶಿವರಾತ್ರಿ, ಬ್ರಹ್ಮ ರಥೋತ್ಸವ ನಡೆಯಲಿದ್ದು, ಒಂದು ಲಕ್ಷ ಪುಷ್ಪದಿಂದ ಪುಷ್ಪಲಿಂಗವನ್ನು ಪ್ರತಿಷ್ಠಾಪಿಸಲಾಗುತ್ತದೆ' ಎಂದು ಕಾಡು ಮಲ್ಲೇಶ್ವರ ಗೆಳೆಯರ ಬಳಗದ ಅಧ್ಯಕ್ಷ ಬಿ.ಕೆ. ಶಿವರಾಂ ತಿಳಿಸಿದರು.

ಇದೇ 18ರಂದು ಮಹಾಶಿವರಾತ್ರಿ ಹಬ್ಬ ನಡೆಯಲಿದ್ದು, ಬೆಳಿಗ್ಗೆ 3.30ಕ್ಕೆ ಪೂಜಾ ವಿಧಿವಿಧಾನಗಳು ಪ್ರಾರಂಭವಾಗಲಿವೆ. ಬಂಟ್ವಾಳದ ಯಕ್ಷರಂಗ ತಂಡದಿಂದ 'ಸಂಪೂರ್ಣ ದೇವಿ ಮಹಾತ್ಮೆ' ಯಕ್ಷಗಾನ ಪ್ರದರ್ಶನ ನಡೆಯಲಿದೆ. 19ರಂದು ಮಲ್ಲೇಶ್ವರದ ವಿವಿಧ ಭಾಗಗಳಲ್ಲಿ ಬ್ರಹ್ಮ ರಥೋತ್ಸವ ಸಂಚರಿಸಲಿದೆ. ಗಂಗಾನದಿಯ ಮಾದರಿಯಲ್ಲಿ 108 ಮಂದಿಯಿಂದ ರಥಾರತಿಯನ್ನು ಬೆಳಗಲು ವ್ಯವಸ್ಥೆ ಮಾಡಲಾಗಿದೆ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ಪುಷ್ಪಗಳಲ್ಲಿ 22 ಅಡಿ ಉದ್ದ, 22 ಅಡಿ ಅಗಲದ ವಿಶೇಷ ಪುಷ್ಪಲಿಂಗವನ್ನು ಪ್ರತಿಷ್ಠಾಪಿಸುತ್ತಿದ್ದು, ಇದಕ್ಕಾಗಿ ಒಂದು ಲಕ್ಷ ವಿಭಿನ್ನ ಪುಷ್ಪಗಳನ್ನು ಬಳಕೆ ಮಾಡಲಾಗುತ್ತಿದೆ. ಇದು ಮೂರು ದಿನಗಳ ಕಾಲ ಸಾರ್ವಜನಿಕರ ಪ್ರದರ್ಶನಕ್ಕೆ ಇರಲಿದೆ. ಭಕ್ತರಿಗೆ ನಿರಂತರ ಅನ್ನಸಂತರ್ಪಣೆಗೆ ವ್ಯವಸ್ಥೆ ಮಾಡಲಾಗಿದೆ. 250 ಮಂದಿಯ 12 ಜಾನಪದ ಮತ್ತು ಕಲಾ ತಂಡಗಳು ರಥೋತ್ಸವದ ಮೆರಗು ಹೆಚ್ಚಿಸಲಿವೆ' ಎಂದರು.

ಕಾಡು ಮಲ್ಲೇಶ್ವರ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಅರವಿಂದ್ ಬಾಬು, ದೇವಸ್ಥಾನದ ಅರ್ಚಕರು ಉಪಸ್ಥಿತರಿದ್ದರು.

ವಿವಿಧ ವಿಭಾಗಗಳಲ್ಲಿ 53 ಕೃತಿಗಳು ಆಯ್ಕೆ • ಮಾ.12ಕ್ಕೆ ಪ್ರಶಸ್ತಿ ಪ್ರದಾನ

ಕಸಾಪ: 49 ದತ್ತಿ ಪ್ರಶಸ್ತಿ ಘೋಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) 2021ನೇ ಸಾಲಿನ ವಿವಿಧ ದತ್ತಿ ಪ್ರಶಸ್ತಿಗಳನ್ನು ಘೋಷಿಸಿದ್ದು, 'ಪ್ರಜಾವಾಣಿ'ಯ ಹಿರಿಯ ಉಪಸಂಪಾದಕ ವಿಕ್ರಂ ಕಾಂತಿಕೆರೆ ಅವರ 'ಕಾವೇರಿ ತೀರದ ಪಯಣ' ಕೃತಿ ಸೇರಿ 49 ವಿಭಾಗಗಳಲ್ಲಿ 53 ಕೃತಿಗಳು ಆಯ್ಕೆಯಾಗಿವೆ.

2021ರ ಜನವರಿಯಿಂದ ಡಿಸೆಂಬರ್ ಅಂತ್ಯದೊಳಗೆ ಪ್ರಕಟಗೊಂಡ ಕೃತಿಗಳನ್ನು ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ರಾಜ್ಯದ ವಿವಿಧೆಡೆ ಹಾಗೂ ಹೊರರಾಜ್ಯದಿಂದ 2 ಸಾವಿರಕ್ಕೂ ಅಧಿಕ ಕೃತಿಗಳು ಬಂದಿದ್ದವು. ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿ ದತ್ತಿ ಪ್ರಶಸ್ತಿಗೆ ಕೃತಿಗಳನ್ನು ಆಯ್ಕೆ ಮಾಡಿದೆ.

ಈ ದತ್ತಿ ಪ್ರಶಸ್ತಿಗಳು ₹ 250ರಿಂದ ₹ 10 ಸಾವಿರದವರೆಗೆ ನಗದು ಬಹುಮಾನ ಹೊಂದಿವೆ. ಪ್ರಶಸ್ತಿ ಪ್ರದಾನ ಸಮಾರಂಭವನ್ನು ಮಾ.12ರಂದು ಪರಿಷತ್ತಿನ ಶ್ರೀ ಕೃಷ್ಣರಾಜ ಪರಿಷತ್ತಿನ ಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

ಪ್ರಮುಖ ದತ್ತಿ ಪ್ರಶಸ್ತಿಗಳು: 'ಬಿಸಲೇರಿ ಜಯಣ್ಣ ಮತ್ತು ಬಿಸಲೇರಿ ಬ್ರದರ್ಸ್ ದತ್ತಿ'ಗೆ ಮಂಗಳೂರಿನ ಮುರಳಿಮೋಹನ್ ಚೂಂತಾರು ಅವರ 'ಸಂಗಾತಿ' ಕೃತಿ, 'ವಿ. ಗೌರಮ್ಮ ಗಂಗಾಧರಯ್ಯ ಮತ್ತು ಮಕ್ಕಳ ಸಾಹಿತ್ಯ ಪ್ರಶಸ್ತಿ'ಗೆ ಕಾಸರಗೋಡಿನ ರಾಜಶ್ರೀ ಟಿ.ರೈ. ಪೆರ್ಲ ಅವರ 'ತುಳುನಾಡಿನ ಮೂರಿಗಳ ಆರಾಧನೆ' ಕೃತಿ, 'ಭಾರತಿ ಮೋಹನ ಕೋಟಿ ದತ್ತಿ'ಗೆ ಕಾಸರಗೋಡಿನ ವಿಕ್ರಂ ಕಾಂತಿಕೆರೆ ಅವರ 'ಕಾವೇರಿ ತೀರದ ಪಯಣ' ಕೃತಿ, 'ಹೊಳಲ್ಕೆರೆ ಪದ್ಮಾವತಮ್ಮ ಶ್ರೀಪಾಲಶೆಟ್ಟಿ ಡಾ. ಮದನಕೇಸರಿ ಜೈನ ದತ್ತಿ'ಗೆ ತುಮಕೂರಿನ ಸಂತೋಷ್ ಕುಮಾರ್ ಅವರ 'ಆಪ್ತಮೀಮಾಂಸಾ (ದೇವಾಗಮ ಸ್ತೋತ್ರ)' ಕೃತಿ ಹಾಗೂ 'ಪೂಜ್ಯ ಸ್ವಸ್ತಿಶ್ರೀ ದೇವೇಂದ್ರಕೀರ್ತಿ ದತ್ತಿ'ಗೆ ಹುಬ್ಬಳ್ಳಿಯ ಶಾಂತಿನಾಥ ಕೆ. ಹೋತಪೇಟಿ ಅವರ 'ಅನಾಸಕ್ತ ಮಹಾಯೋಗಿ' ಕೃತಿ ಆಯ್ಕೆಯಾಗಿವೆ. ಈ ಪ್ರಶಸ್ತಿಗಳು ತಲಾ ₹ 10 ಸಾವಿರ ನಗದು ಒಳಗೊಂಡಿವೆ.

'ವಸುದೇವ ಭೂಪಾಲಂ ದತ್ತಿ'ಗೆ ದಕ್ಷಿಣ ಕನ್ನಡದ ಶ್ರೀಧರ ಎಚ್.ಜಿ. ಅವರ 'ಚಪಡ' ಕಾದಂಬರಿ, ಬೆಳಗಾವಿಯ ಇಸ್ಮಾಯಿಲ್ ತಳಕಲ್ ಅವರ 'ಬೆತ್ತಲೆ ಸಂತ' ಸಣ್ಣ ಕಥಾ ಸಂಕಲನ, ಧಾರವಾಡದ ವೈ.ಜಿ. ಭಗವತಿ ಅವರ 'ಮಕ್ಕಳು ಓದಿದ ಟೀಚರ್ ಡೈರಿ' ಹಾಗೂ ಬೆಂಗಳೂರಿನ ಕೆ. ಶ್ರೀನಿವಾಸ ರೆಡ್ಡಿ ಅವರ 'ಅಂತರಂಗ' ಕೃತಿ ಭಾಜನವಾಗಿವೆ. ಈ ಪ್ರಶಸ್ತಿಯು ಕ್ರಮವಾಗಿ ₹ 5 ಸಾವಿರ, ₹ 3 ಸಾವಿರ ಹಾಗೂ ತಲಾ ₹ 2 ಸಾವಿರ ನಗದು ಹೊಂದಿದೆ.

'ದಿ.ಡಿ. ಮಾಣಿಕರಾವ ಸ್ಮರಣಾರ್ಥ ಹಾಸ್ಯ ಸಾಹಿತ್ಯ ದತ್ತಿ'ಗೆ ದಕ್ಷಿಣ ಕನ್ನಡದ ನಿರ್ಮಲಾ ಸುರತ್ಕಲ್ ಅವರ 'ನಿತ್ಯಪುಷ್ಪ ಮತ್ತು ! ಗೂಗಲ್ ಗುರು' ಕೃತಿ, 'ದಿ. ಡಾ.ಎ.ಎಸ್. ಧರಣೇಂದ್ರಯ್ಯ-ಮನೋ-ವಿಜ್ಞಾನ ದತ್ತಿ'ಗೆ ಚಂದ್ರಶೇಖರ ದಾಮ್ಲೆ ಅವರ 'ನನ್ನ ಮಗಳು ತುಂಟಿ ಅಲ್ಲ !?' ಕೃತಿ, 'ಭಾರತೀಸುತ ಸ್ಮಾರಕ ದತ್ತಿ ಪ್ರಶಸ್ತಿ'ಗೆ ಗದಗದ ಪುಂಡಲೀಕ ಕಲ್ಲಿಗನೂರ ಅವರ 'ಮನೋಜನನಿ' ಕೃತಿ, 'ಲಕ್ಷ್ಮೀದೇವಿ ಶಾಂತರಸ ಹೆಂಬೇರಾಳು ದತ್ತಿ ಪ್ರಶಸ್ತಿ'ಗೆ ಅಮೆರಿಕಾದ ಕಾವ್ಯಾ ಕಡಮೆ ಅವರ 'ಮಾಕೋನ ಏಕಾಂತ' ಕೃತಿ, 'ಪ್ರಕಾಶಕ ಆರ್.ಎನ್. ಹಬ್ಬು ದತ್ತಿ ಪ್ರಶಸ್ತಿ'ಗೆ ಆಸ್ಟ್ರೇಲಿಯಾದ ಶ್ರೀಹರ್ಷ ಸಾಲಿಮಠ ಅವರ 'ಉದಕ ಉರಿದು' ಕೃತಿ, 'ಅಮೃತ ಮಹೋತ್ಸವ ಸಾಹಿತ್ಯ ಸಮ್ಮೇಳನದ ಸವಿ ನೆನಪಿನ ದತ್ತಿ'ಗೆ ಬಾಗಲಕೋಟೆಯ ಸೋಮಲಿಂಗ ಗೆಣ್ಣೂರ ಅವರ 'ಅಂಬೇಡ್ಕರ್ ಮಾರ್ಗ' ಕೃತಿ, 'ನಿಡಸಾಲೆ ಪುಟ್ಟಸ್ವಾಮಯ್ಯ ಸಾಹಿತ್ಯ ಪ್ರಶಸ್ತಿ ದತ್ತಿ'ಗೆ ಬಳ್ಳಾರಿಯ ಸಿ.ಆರ್. ಗೋಪಾಲ್ ಅವರ 'ಸಾಮಾಜಿಕ ಕ್ರಿಯಾಚರಣೆ' ಕೃತಿ ಆಯ್ಕೆಯಾಗಿದೆ.

'ಗುಬ್ಬಿ ಸೋಲೂರು ಮುರುಗಾರಾಧ್ಯ ದತ್ತಿ ಪ್ರಶಸ್ತಿ'ಗೆ ತುಮಕೂರಿನ ಸಿದ್ದಗಂಗಯ್ಯ ಹೊಲತಾಳು ಅವರ 'ಸಿಂಗಾರಿ' ಕೃತಿ, 'ಗೌರುಭಟ್ ದತ್ತಿ ಪ್ರಶಸ್ತಿ'ಗೆ ಬೆಂಗಳೂರಿನ ಕ್ಷಮಾ ವಿ. ಭಾನುಪ್ರಕಾಶ್ ಅವರ 'ವಿಜ್ಞಾನ ಲೋಕದ ಜ್ಞಾನಕುಸುಮಗಳು' ಕೃತಿ, 'ಶ್ರೀಮತಿ ಗಂಗಮ್ಮ ಶ್ರೀ ಟಿ. ಶಿವಣ್ಣ ದತ್ತಿ ಪ್ರಶಸ್ತಿ'ಗೆ ವಿಜಯಪುರದ ಶಂಕರ ಬೈಚಬಾಳ ಅವರ 'ಕನ್ನಡದ ಮಠ, ಪುಸ್ತಕದ ಜಗದ್ಗುರು ಡಾ. ತೋಂಟದ ಸಿದ್ದಲಿಂಗ ಶ್ರೀಗಳು' ಕೃತಿ, 'ಡಾ. ಹಾ.ಮಾ. ನಾಯಕ ಸ್ಮಾರಕ ದತ್ತಿ ಪ್ರಶಸ್ತಿ'ಗೆ ಬಾಗಲಕೋಟೆಯ ಅಶೋಕ ನರೋಡೆ ಅವರ 'ಮಹಾಕಾವ್ಯಗಳ-ಲ್ಲಿ ಬುದ್ಧ' ಕೃತಿ ಹಾಗೂ 'ಡಾ. ವೀಣಾ ಶಾಂತೇಶ್ವರ ದತ್ತಿ'ಗೆ ದಕ್ಷಿಣ ಕನ್ನಡದ ದೀಪಾ ಫಡ್ಕೆ ಅವರ 'ಮುಂದಣ ಹೆಜ್ಜೆ' ಕೃತಿ ಆಯ್ಕೆಯಾಗಿದೆ. ಈ ಪ್ರಶಸ್ತಿಗಳು ತಲಾ ₹ 5 ಸಾವಿರ ನಗದು ಒಳಗೊಂಡಿವೆ.

ಪಿಂಚಣಿ, ಕನಿಷ್ಠ ಕೂಲಿ: ಸ್ಮಶಾನ ಕಾರ್ಮಿಕರ ಪ್ರತಿಭಟನೆ

ಬೆಂಗಳೂರು: '45 ವರ್ಷ ವಯಸ್ಸಾದ ಕಾರ್ಮಿಕರಿಗೆ ಪಿಂಚಣಿ ನೀಡಬೇಕು. ಪ್ರತಿಯೊಬ್ಬ ಕಾರ್ಮಿಕರಿಗೆ ಸ್ಥಳೀಯ ಸಂಸ್ಥೆಗಳ ಮೂಲಕ ಕನಿಷ್ಠ ₹ 3,000 ಕೂಲಿ ನಿಗದಿಪಡಿಸಬೇಕು' ಎಂದು ಆಗ್ರಹಿಸಿ ಸ್ಮಶಾನ ಕಾರ್ಮಿಕರು ನಗರದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ಸೇರಿದ್ದ ಕಾರ್ಮಿಕರು, ಬೇಡಿಕೆ ಈಡೇರಿಕೆಗಾಗಿ ಘೋಷಣಾ ಫಲಕಗಳನ್ನು ಪ್ರದರ್ಶಿಸಿದರು. ರಾಜ್ಯ ಮಸಣ ಕಾರ್ಮಿಕರ ಸಂಘದ ನೇತೃತ್ವದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

'ರಾಜ್ಯದಲ್ಲಿ 50 ಸಾವಿರಕ್ಕೂ ಹೆಚ್ಚು ಸ್ಮಶಾನಗಳಿವೆ. ಗುಂಡಿ ಅಗೆಯುವ, ಮುಚ್ಚುವ ಕೆಲಸವನ್ನು ಕಾರ್ಮಿಕರು ಮಾಡುತ್ತಿದ್ದಾರೆ. ಇವರೆಲ್ಲರೂ ಮೂಲ ಸೌಕರ್ಯ ಹಾಗೂ ಕನಿಷ್ಠ ಕೂಲಿಯಿಂದ ವಂಚಿತರಾಗಿದ್ದಾರೆ' ಎಂದು ಪ್ರತಿಭಟನಕಾರರು ಅಳಲು ತೋಡಿಕೊಂಡರು.

'ಸ್ಮಶಾನ ಕಾರ್ಮಿಕರನ್ನು ಸ್ಥಳೀಯ ಸಂಸ್ಥೆಗಳ 'ಮಸಣ ನಿರ್ವಾಹಕ' ನೌಕರರೆಂದು ನೇಮಿಸಿಕೊಂಡು, ಗುರುತಿನ ಚೀಟಿ ಒದಗಿಸಬೇಕು. ಗುಂಡಿ ಅಗೆಯುವ ಹಾಗೂ ಮುಚ್ಚುವ ಕೆಲಸವನ್ನು ಉದ್ಯೋಗ ಖಾತ್ರಿ ಯೋಜನೆಯಡಿ ಸೇರಿಸಿ, ಕನಿಷ್ಠ 3,000 ಕೂಲಿ ನಿಗದಿ-ಪಡಿಸಬೇಕು. ಕಾರ್ಮಿಕರಿಗೆ ತಲಾ ಐದು ಎಕರೆ ಜಮೀನು ಉಚಿತವಾಗಿ ನೀಡಬೇಕು. ಕಾರ್ಮಿಕರ ಮಕ್ಕಳಿಗೆ ವಸತಿ ಶಾಲೆ ಹಾಗೂ ಉದ್ಯೋಗದಲ್ಲಿ ಆದ್ಯತೆ ಕಲ್ಪಿಸಬೇಕು' ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

'ನಮ್ಮ ಬೇಡಿಕೆಗಳನ್ನು ತ್ವರಿತವಾಗಿ ಈಡೇರಿಸದಿ-ದ್ದರೆ, ತಾಲ್ಲೂಕು ಮಟ್ಟದಲ್ಲಿ ಫೆ. 20ರಿಂದ ಪ್ರತಿಭಟನೆ ಆರಂಭಿಸಲಾಗುವುದು' ಎಂದು ಎಚ್ಚರಿಸಿದರು.

23ರಂದು ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು ಹಾಗೂ ಪದವಿಪೂರ್ವ ಕಾಲೇಜುಗಳಲ್ಲಿ ನಿವೃತ್ತಿ, ರಾಜೀನಾಮೆ ಮತ್ತಿತರ ಕಾರಣಗಳಿಂದ ಖಾಲಿಯಾದ ಹುದ್ದೆಗಳನ್ನು ಭರ್ತಿಮಾಡಲು ಇರುವ ತೊಡಕುಗಳ ನಿವಾರಣೆಗೆ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅಧ್ಯಕ್ಷತೆಯ-ಲ್ಲಿ ಇದೇ 23ರಂದು ಸಭೆ ನಡೆಸಲು ನಿರ್ಧರಿಸಲಾಗಿದೆ.

ಫೆ.25ಕ್ಕೆ ಭೂಮಿಕಾ ಕ್ಲಬ್‌ನಿಂದ 'ವಿವಾಹ ಆವೃತ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್‌ನ ವತಿಯಿಂದ 'ಭೂಮಿಕಾ ಕ್ಲಬ್‌ನ ವಿವಾಹ ಆವೃತ್ತಿ' ಕಾರ್ಯಕ್ರಮವು ಫೆ.25ರಂದು ನಡೆಯಲಿದೆ.

ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಕಾರ್ಯಕ್ರಮವನ್ನು ಪ್ರಾ-ಯೋಜಿಸುತ್ತಿದೆ. ಸಮಾನಮನಸ್ಕರು, ಮದುವೆ ಕುರಿತ ಸಂಭ್ರಮಾಚರಣೆ ಕುರಿತ ಹೊಸ ವಿಷಯಗಳನ್ನು ಅರಿತು-ಕೊಳ್ಳಬಹುದಾಗಿದೆ. ಸೃಜನಶೀಲವೂ ಮೋಜು–ಮಸ್ತಿ ನೀಡುವಂತಹದ್ದೂ ಆದ ಕಾರ್ಯಕ್ರಮ ಇದಾಗಿದೆ.

ಅಶೋಕನಗರದ ಕ್ರೇಗ್ ಪಾರ್ಕ್ ಲೇಔಟ್‌ನ ಪ್ರಿಮ್‌ರೋಸ್ ರಸ್ತೆಯಲ್ಲಿ-ರುವ ಸೇಂಟ್ ಜೋಸೆಫ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ ಕಾರ್ಯ-ಕ್ರಮಶವು ಫೆ.25ರ ಶನಿವಾರ ಮಧ್ಯಾಹ್ನ 2.30ಕ್ಕೆ ಪ್ರಾರಂಭವಾಗಲಿದೆ.

ಭೂಮಿಕಾ ಕ್ಲಬ್
presented by
MALABAR GOLD & DIAMOND
CELEBRATE THE BEAUTY OF LI

ವಿವರಗಳಿಗೆ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ನಟಿ ಭೂಮಿ ಶೆಟ್ಟಿ ಕಾರ್ಯ-ಕ್ರಮವನ್ನು ಉದ್ಘಾಟಿಸಲಿದ್ದಾರೆ. ಗೀತಾ ನಾಯ್ಡು ಅವರು ವಿವಾಹ ಯೋಜನೆಗೋಷ್ಠಿ, ಶೈನಿ ಅಲೆಕ್ಸಾಂಡರ್ ಅವರು ವಿವಾಹ ಶೈಲಿ ಹಾಗೂ ಸುಷ್ಮಾ ನಾಣಯ್ಯ ಅವರು ಮೇಕ್‌ಅಪ್ ಬಗ್ಗೆ ಗೋಷ್ಠಿ ನಡೆಸಿಕೊಡಲಿದ್ದಾರೆ. 'ಸ್ಟಿಲೆ ಸ್ಟ್ರಾಡ' ತಂಡದವರಿಂದ ಫ್ಯಾಷನ್ ಶೋ ನಡೆಯಲಿದೆ. ಭವಾನಿ ಪ್ರಕಾಶ್ 'ಶೋ ಸ್ಟಾಪರ್' ಆಗಲಿದ್ದಾರೆ. ಬಕ್ಷ್ ಅಲಿ, ಕೆ. ಧನುಪ್ರಿಯ ವಿನ್ಯಾಸ ಮಾಡಿದ ಉಡುಗೆಗಳನ್ನು ರೂಪದರ್ಶಿಯರು ತೊಟ್ಟು ರಂಜಿಸಲಿದ್ದಾರೆ. ಆದರ್ಶ ಜೈನ್ ಕೊರಿಯಾಗ್ರಫಿಯಲ್ಲಿ ಫ್ಯಾಷನ್ ಶೋ ನಡೆಯಲಿದೆ.

ಕಾರ್ಯಕ್ರಮದಲ್ಲಿ ಭಾಗವಹಿ-ಸಿದವರಿಗೆ ಅಚ್ಚರಿಯ ಬಹುಮಾನ ದೊರೆಯಲಿದೆ. ಎಲ್ಲರಿಗೂ ಉಡುಗೊರೆ ಲಭಿಸಲಿದೆ.

ಸುಧಾ, ಮಯೂರ ಓದಿರಿ

ಕಥಾಯಜ್ಞ ಪುರಸ್ಕಾರಕ್ಕೆ ಪ್ರಸನ್ನ ಆಯ್ಕೆ

ಪ್ರಜಾವಾಣಿ ವಾರ್ತೆ


ಎ.ಎನ್‌.ಪ್ರಸನ್ನ


ರಘು ಇಡ್ಕಿದು

ಮಂಗಳೂರು: ಇಲ್ಲಿಯ ಸಾಧನಾ ರಾಷ್ಟ್ರೀಯ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ನೀಡುವ 2021-22ನೇ ಸಾಲಿನ ಕಥಾಯಜ್ಞ ರಾಷ್ಟ್ರೀಯ ಪುರಸ್ಕಾರಕ್ಕೆ ಬೆಂಗಳೂರಿನ ಎ.ಎನ್. ಪ್ರಸನ್ನ ಹಾಗೂ 2021ನೇ ಸಾಲಿನ ಹಂಸ ಕಾವ್ಯ ರಾಷ್ಟ್ರೀಯ ಕಾವ್ಯ ಪುರಸ್ಕಾರಕ್ಕೆ ದಕ್ಷಿಣ ಕನ್ನಡ ಜಿಲ್ಲೆಯ ಕವಿ ರಘು ಇಡ್ಕಿದು ಆಯ್ಕೆಯಾಗಿದ್ದಾರೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಕಾ.ವೀ. ಕೃಷ್ಣದಾಸ್ ತಿಳಿಸಿದರು.

'ಕಾವ್ಯ ಪುರಸ್ಕಾರವು ₹ 10 ಸಾವಿರ ನಗದು ಮತ್ತು ಚಿನ್ನದ ಪದಕ, ಕಥಾಯಜ್ಞ ಪುರಸ್ಕಾರವು ₹ 25 ಸಾವಿರ ನಗದು ಮತ್ತು ಚಿನ್ನದ ಪದಕ ಒಳಗೊಂಡಿದೆ.

ನಗರದ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಇದೇ 26ರಂದು ಏರ್ಪಡಿಸಿರುವ 'ಕಾವ್ಯ ದಶಾವತಾರ– ಕವಿ ಕಾವ್ಯ ಸಮ್ಮೇಳನ'ದಲ್ಲಿ ಸಂಜೆ 4ಕ್ಕೆ ಪ್ರಶಸ್ತಿ ಪ್ರದಾನ ಮಾಡಲಾಗುವುದು' ಎಂದು ಅವರು ಇಲ್ಲಿ ಸುದ್ದಿಗೋಷ್ಠಿಯಲ್ಲಿ ಗುರುವಾರ ತಿಳಿಸಿದರು.

ನಿಧನ ವಾರ್ತೆ

ರೆಹಾನಾ



ಬೆಂಗಳೂರು: 'ಪ್ರಜಾವಾಣಿ' ಪತ್ರಿಕೆಯ ಮಾಜಿ ಮುಖ್ಯ ಉಪಸಂಪಾದಕ ಐ.ಕೆ. ಜಾಗೀರದಾರ್ ಅವರ ಪತ್ನಿ ರೆಹಾನಾ ಐ. ಜಾಗೀರದಾರ್ (76) ಗುರುವಾರ ನಿಧನರಾದರು. ಇವರಿಗೆ ಮೂವರು ಪುತ್ರರಿದ್ದಾರೆ.

ಶುಕ್ರವಾರ ಮಧ್ಯಾಹ್ನ ಅಲ್ ಅಮೀನ್ ಕಾಲೇಜು ಪಕ್ಕದಲ್ಲಿರುವ ಬಡಾ ಮಕಾನ್ ಖಬರಸ್ತಾನದಲ್ಲಿ ಅಂತ್ಯಸಂಸ್ಕಾರ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಲಂಚ: ಹೆಡ್ ಕಾನ್‌ಸ್ಟೆಬಲ್, ಮಧ್ಯವರ್ತಿ ಬಂಧನ



ಮಂಜುನಾಥ್

ಬೆಂಗಳೂರು: ಪ್ರಕಣವೊಂದರಲ್ಲಿ ಆರೋಪಿಯಾಗಿದ್ದ ವ್ಯಕ್ತಿಯೊಬ್ಬರನ್ನು ರೌಡಿ ಪಟ್ಟಿಗೆ ಸೇರಿಸದೇ ಇರಲು ₹ 15,000 ಲಂಚ ಪಡೆದ ಹೊಸಕೋಟೆ ಪೊಲೀಸ್ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಮಂಜುನಾಥ್ ಕೆ.ಎನ್. ಮತ್ತು ಹಣ ಪಡೆದ ಖಾಸಗಿ ಮಧ್ಯವರ್ತಿ ಸುರೇಶ್ ಜಿ. ಎಂಬುವವರನ್ನು ಲೋಕಾಯುಕ್ತ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಹೊಸಕೋಟೆ ನಿವಾಸಿ ಜಯರಾಮ್ ಕಾರ್ತಿಕ್ ವಿರುದ್ಧ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಅದರ ಆಧಾರದಲ್ಲಿ ಜಯರಾಮ್ ಹೆಸರನ್ನು ರೌಡಿ ಪಟ್ಟಿಗೆ ಸೇರಿಸಲು ಪ್ರಕ್ರಿಯೆ ಆರಂಭಿಸಲಾಗಿತ್ತು. ಇದನ್ನು ತಡೆಯಲು ₹15,000 ಲಂಚ ನೀಡುವಂತೆ ಮಂಜುನಾಥ್ ಬೇಡಿಕೆ ಇಟ್ಟಿದ್ದರು. ಈ ಕುರಿತು ಜಯರಾಮ್ ದೂರು ನೀಡಿದ್ದರು. ಜಯರಾಮ್ ಗುರುವಾರ ಹೊಸಕೋಟೆ ಪೊಲೀಸ್ ಠಾಣೆಗೆ ಹೋಗಿದ್ದರು. ಮಂಜುನಾಥ್ ಸೂಚನೆಯಂತೆ ಸುರೇಶ್ ಠಾಣೆಯ ಹೊರಭಾಗದಲ್ಲಿ ಲಂಚದ ಹಣ ಪಡೆದುಕೊಂಡರು. ತಕ್ಷಣ ದಾಳಿಮಾಡಿದ ಲೋಕಾಯುಕ್ತ ಪೊಲೀಸರು ಮಂಜುನಾಥ್ ಮತ್ತು ಸುರೇಶ್ ಇಬ್ಬರನ್ನೂ ಬಂಧಿಸಿದರು ಎಂದು ಲೋಕಾಯುಕ್ತದ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ಲೋಕಾಯುಕ್ತದ ಬೆಂಗಳೂರು ಗ್ರಾಮಾಂತರ ಎಸ್ ಪಿ ಶ್ರೀನಾಥ್ ಜೋಶಿ ನೇತೃತ್ವದಲ್ಲಿ ಕಾರ್ಯಾಚರಣೆ ನಡೆದಿದೆ.

ಬಿಡಿಎ ಕಾರ್ಯದರ್ಶಿ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಡಿಎ ಕಾರ್ಯದರ್ಶಿ ವೈ.ಬಿ. ಶಾಂತರಾಜು ಅವರನ್ನು ಸರ್ಕಾರ ವರ್ಗಾವಣೆ ಮಾಡಿದೆ. ಪೌರಾಡಳಿತ ನಿರ್ದೇಶನಾಲಯದ ಜಂಟಿ ನಿರ್ದೇಶಕ ಬಿ. ಶಿವಸ್ವಾಮಿ ಅವರನ್ನು ಬಿಡಿಎ ಕಾರ್ಯದರ್ಶಿ ಹುದ್ದೆಗೆ ವರ್ಗಾಯಿಸಿ ಫೆ.14ರಂದು ಅಧಿಸೂಚನೆ ಹೊರಡಿಸಲಾಗಿದೆ. ವೈ.ಬಿ. ಶಾಂತರಾಜು ಅವರಿಗೆ ಹುದ್ದೆ ತೋರಿಸಿಲ್ಲ.

ಸ್ವಾತಂತ್ರ್ಯ ಉದ್ಯಾನದಲ್ಲಿ ಮುಂದುವರಿದ ಪ್ರತಿಭಟನೆಗಳು

ಶೂ ಪಾಲಿಶ್ ಮಾಡಿ ಆಕ್ರೋಶ

ಪ್ರಜಾವಾಣಿ ವಾರ್ತೆ



ರಾಜ್ಯವ್ಯಾಪಿ ಅಭಿಯಾನ ಆರಂಭಿಸಿದ ಕರ್ನಾಟಕ ವಿದ್ಯಾರ್ಥಿ ಸಂಘಟನೆ ಪದಾಧಿಕಾರಿಗಳಿಗೆ ಸಂಯುಕ್ತ ಕಿಸಾನ್ ಮೋರ್ಚಾದ ಮುಖಂಡ ದರ್ಶನ್ ಪಾಲ್ ಹಾಗೂ ಕ್ರಾಂತಿಕಾರಿ ಕಿಸಾನ್ ಯೂನಿಯನ್ ಮುಖಂಡ ಅವತಾರ್ ಸಿಂಗ್ ಬೆಂಬಲ ವ್ಯಕ್ತಪಡಿಸಿದರು

ಬೆಂಗಳೂರು: 'ಉದ್ಯೋಗ ನೇಮಕಾತಿ ವಿಚಾರದಲ್ಲಿ ಆಗುತ್ತಿರುವ ಅನ್ಯಾಯ ಸರಿಪಡಿಸಬೇಕು' ಎಂದು ಆಗ್ರಹಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದ ವಿದ್ಯಾರ್ಥಿಗಳು, ಶೂ ಪಾಲಿಶ್ ಮಾಡಿ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಅಖಿಲ ಕರ್ನಾಟಕ ವಿದ್ಯಾರ್ಥಿಗಳ ಸಂಘ ವತಿಯಿಂದ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ರಾಜ್ಯದ ಹಲವು ಜಿಲ್ಲೆಗಳ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

'ಸರ್ಕಾರಿ ಹುದ್ದೆಗಳ ನೇಮಕಾತಿಯಲ್ಲಿ 24 ಜಿಲ್ಲೆಗಳಿಗೆ ಆಗಿರುವ ಅನ್ಯಾಯ ಸರಿಪಡಿಸಬೇಕು. ಕೇಂದ್ರ ಸರ್ಕಾರದ ಎಲ್ಲ ನೇಮಕಾತಿ ಪರೀಕ್ಷೆಗಳು ಕನ್ನಡದಲ್ಲಿ ನಡೆಸುವಂತೆ ಕೇಂದ್ರಕ್ಕೆ ಮನವಿ ಮಾಡಬೇಕು. 545 ಪಿಎಸ್‌ಐ ನೇಮಕಾತಿ ಮರು ಪರೀಕ್ಷೆ ಹಾಗೂ 402 ಪಿಎಸ್‌ಐ ಪರೀಕ್ಷೆಗಳನ್ನು ವಿಧಾನಸಭಾ ಚುನಾವಣೆಗೂ ಮುನ್ನವೇ ನಡೆಸಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಅರಣ್ಯ ಇಲಾಖೆ ದಿನಗೂಲಿ ನೌಕರರು: 'ಹಲವು ವರ್ಷಗಳಿಂದ ಕೆಲಸ ಮಾಡುತ್ತಿರುವ ದಿನಗೂಲಿ ನೌಕರರನ್ನು ಖಾಸಗಿ ಏಜೆನ್ಸಿ ವ್ಯಾಪ್ತಿಗೆ ಸೇರಿಸುವುದನ್ನು ಕೈಬಿಟ್ಟು, ಯಥಾಪ್ರಕಾರ ಸೇವೆ ಮುಂದುವರಿಸಬೇಕು' ಎಂದು ಆಗ್ರಹಿಸಿ ದಿನಗೂಲಿ ನೌಕರರು ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ರಾಜ್ಯ ಅರಣ್ಯ ಇಲಾಖೆ ದಿನಗೂಲಿ ನೌಕರರ ಸಂಘದ ನೇತೃತ್ವದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

'ಪ್ರತಿ ತಿಂಗಳು 5ನೇ ತಾರೀಖಿನೊಳಗೆ ಸಂಬಳ ನೀಡಬೇಕು. 24 ಗಂಟೆ ನೌಕರರನ್ನು ದುಡಿಸಿಕೊಳ್ಳಲಾಗುತ್ತಿದ್ದು, 8 ಗಂಟೆ ಕೆಲಸ ನಿಗದಿಪಡಿಸಬೇಕು. ಹೆಚ್ಚುವರಿ ಕೆಲಸಕ್ಕೆ ಹೆಚ್ಚುವರಿ ವೇತನ ನೀಡಬೇಕು. ಇಎಸ್‌ಐ, ಪಿಎಫ್ ಸೌಲಭ್ಯ ಒದಗಿಸಬೇಕು. ಬಾಕಿ ಇರುವ ವೇತನವನ್ನು ಕೂಡಲೇ ಪಾವತಿಸಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಗ್ರಾಮ ಸಹಾಯಕರು: 'ರಾಜ್ಯದಲ್ಲಿರುವ 10,450 ಗ್ರಾಮ ಸಹಾಯಕರನ್ನು ಡಿ–ದರ್ಜೆ ನೌಕರರೆಂದು ಪರಿಗಣಿಸಿ ಸೇವಾ ಭದ್ರತೆ ಒಗಗಿಸಬೇಕು' ಎಂದು ಆಗ್ರಹಿಸಿ ಗ್ರಾಮ ಸಹಾಯಕರು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು.

ರಾಜ್ಯ ಸರ್ಕಾರಿ ಕಂದಾಯ ಇಲಾಖೆ ಗ್ರಾಮ ಸಹಾಯಕರ ಕೇಂದ್ರ ಸಂಘದಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

ಕರ್ನಾಟಕ ವಿದ್ಯಾರ್ಥಿ ಸಂಘಟನೆ: 'ಉಚಿತ ಶಿಕ್ಷಣ, ಸುಭದ್ರ ಉದ್ಯೋಗ ಹಾಗೂ ಸುಸ್ಥಿರ ಕೃಷಿ ಅಭಿವೃದ್ಧಿಗೆ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿ ಕರ್ನಾಟಕ ವಿದ್ಯಾರ್ಥಿ ಸಂಘಟನೆ ನೇತೃತ್ವದಲ್ಲಿ ವಿದ್ಯಾರ್ಥಿಗಳು ಅಭಿಯಾನ ಆರಂಭಿಸಿದರು.

'ಎಲ್ಲ ಮಕ್ಕಳಿಗೆ ಉಚಿತ ಹಾಗೂ ಸಮಾನ ಶಿಕ್ಷಣ ನೀಡಬೇಕೆಂಬುದು ಸಂವಿಧಾನದ ಆಶಯ. ಆದರೆ, ಇತ್ತೀಚಿನ ಸರ್ಕಾರಗಳು ಶಿಕ್ಷಣವನ್ನು ಖಾಸಗೀಕರಣಗೊಳಿಸಿವೆ. ಯುವಜನರನ್ನು ನಿರುದ್ಯೋಗಿಗಳನ್ನಾಗಿ ಮಾಡಿವೆ. ಚುನಾವಣೆ ಹತ್ತಿರವಾಗುತ್ತಿದ್ದು, ರಾಜಕಾರಣಿಗಳನ್ನು ನಾವೆಲ್ಲರೂ ಪ್ರಶ್ನಿಸಬೇಕು. ಇದಕ್ಕಾಗಿ ಸ್ವಾತಂತ್ರ್ಯ ಉದ್ಯಾನದಿಂದ ಅಭಿಯಾನ ಆರಂಭಿಸಲಾಗಿದೆ' ಎಂದು ವಿದ್ಯಾರ್ಥಿಗಳು ಹೇಳಿದರು.

ಮುಂದುವರಿದ ಪ್ರತಿಭಟನೆಗಳು: 'ನಿವೃತ್ತಿ ಹೊಂದಿದ ಹಾಗೂ ನಿವೃತ್ತಿ ಅಂಚಿನಲ್ಲಿರುವ ಬಿಸಿಯೂಟ ಸಿಬ್ಬಂದಿಗೆ ₹1 ಲಕ್ಷ ಇಡಿಗಂಟು ನೀಡಬೇಕು' ಎಂದು ಒತ್ತಾಯಿಸಿ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದ ನೇತೃತ್ವದಲ್ಲಿ ಬಿಸಿಯೂಟ ತಯಾರಿಕೆ ಮಹಿಳೆಯರು ನಡೆಸುತ್ತಿರುವ ಪ್ರತಿಭಟನೆ ಗುರುವಾರವೂ ಮುಂದುವರಿಯಿತು.

'ರಾಷ್ಟ್ರೀಯ ಆರೋಗ್ಯ ಅಭಿಯಾನದ (ಎನ್‌ಎಚ್‌ಎಂ) ಒಳ ಗುತ್ತಿಗೆ ನೌಕರರ ಸೇವೆಯನ್ನು ಕಾಯಂಗೊಳಿಸಬೇಕು' ಎಂದು ಒತ್ತಾಯಿಸಿ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಎನ್‌ಎಚ್‌ಎಂ ಸಿಬ್ಬಂದಿಯೂ ಪ್ರತಿಭಟನೆ ಮುಂದುವರಿಸಿದ್ದಾರೆ.



ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಸಂಘದ ಸದಸ್ಯರು ಬೂಟ್ ಪಾಲಿಷ್ ಮಾಡುವ ಮೂಲಕ ವಿನೂತನ ರೀತಿಯಲ್ಲಿ ಪ್ರತಿಭಟನೆ ನಡೆಸಿದರು. –ಪ್ರಜಾವಾಣಿ ಚಿತ್ರ

ಅಗಲಿದ ಕಲಾವಿದರ ಸ್ಮರಣೆಯಲ್ಲಿ ಕಲಾ ಪ್ರದರ್ಶನ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೋಟರಿ ಕ್ಲಬ್ ಬೆಂಗಳೂರು 'ಕಲಾ ಫಾರ್ ವಿದಾ' ಶೀರ್ಷಿಕೆಯಡಿ ಶುಕ್ರವಾರದಿಂದ ಭಾನುವಾರದವರೆಗೆ ತಾಜ್ ವೆಸ್ಟ್ ಎಂಡ್ ಹೋಟೆಲ್‌ನ 'ಆರ್ಟ್ ಕಾರಿಡಾರ್'ನಲ್ಲಿ ಕಲಾ ಪ್ರದರ್ಶನ ಹಮ್ಮಿಕೊಂಡಿದೆ.

ಮೊದಲ ದಿನ ಬೆಳಿಗ್ಗೆ 11ರಿಂದ ಸಂಜೆ 4 ಗಂಟೆಯವರೆಗೆ, ಎರಡು ಹಾಗೂ ಮೂರನೇ ದಿನ ಬೆಳಿಗ್ಗೆ 11ರಿಂದ ಸಂಜೆ 7 ಗಂಟೆಯವರೆಗೆ ಕಲಾಕೃತಿಗಳ ಪ್ರದರ್ಶನ ಮತ್ತು ಮಾರಾಟ ನಡೆಯಲಿದೆ. ಅಮಿತಾ ಶೆಣೈ ನೇತೃತ್ವದಲ್ಲಿ ಈ ಪ್ರದರ್ಶನ ಆಯೋಜಿಸಲಾಗಿದೆ.

ಕಲಾಕ್ಷೇತ್ರದ ಪ್ರಮುಖರಾದ ಬದ್ರಿ ನಾರಾಯಣ್, ಜಿ.ಎಸ್. ಶೆಣೈ, ಜೆ.ಎಂ.ಎಸ್. ಮಣಿ, ಎಂ.ಎಫ್. ಹುಸೇನ್, ಮಿಲಿಂದ್ ನಾಯಕ್, ಯುಸೂಫ್ ಅರಕ್ಕಲ್ ಅವರಿಗೆ ಕಲಾಗೌರವ ಸಲ್ಲಿಸಲಾಗುತ್ತದೆ. ದೇಶದ ವಿವಿಧ ಭಾಗಗಳ ಕಲಾವಿದರು ಪಾಲ್ಗೊಂಡು, ಪ್ರದರ್ಶನ ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ರಾಮಯ್ಯ ವಿ.ವಿ: 1,866 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಪ್ರಜಾವಾಣಿ ವಾರ್ತೆ



ರಾಮಯ್ಯ ಆನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯದ 7ನೇ ಘಟಿಕೋತ್ಸವ ಜ್ಞಾನಗಂಗೋತ್ರಿ ಆವರಣದಲ್ಲಿ ಗುರುವಾರ ನಡೆಯಿತು.

ಬೆಂಗಳೂರು: ರಾಮಯ್ಯ ಆನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯವು ನಗರದಲ್ಲಿ ಆಯೋಜಿಸಿದ್ದ 7ನೇ ಘಟಿಕೋತ್ಸವದಲ್ಲಿ 1,866 ವಿದ್ಯಾರ್ಥಿಗಳಿಗೆ ಪದವಿ ಹಾಗೂ 14 ಅಭ್ಯರ್ಥಿಗಳಿಗೆ ಪಿಎಚ್.ಡಿ ಪದವಿ, ಒಬ್ಬರಿಗೆ ಎಂ.ಫಿಲ್ ಮತ್ತು ಇನ್ನೊಬ್ಬರಿಗೆ ಎಂ.ಎಸ್ (ಸಂಶೋಧನೆ) ಪದವಿ ಪ್ರಮಾಣಪತ್ರಗಳನ್ನು ಪ್ರದಾನ ಮಾಡಲಾಯಿತು.

ಶೈಕ್ಷಣಿಕವಾಗಿ ಉತ್ತಮ ಸಾಧನೆ ಮಾಡಿದ 34 ವಿದ್ಯಾರ್ಥಿಗಳಿಗೆ 'ಡಾ.ಎಂ.ಎಸ್. ರಾಮಯ್ಯ ಚಿನ್ನದ ಪದಕ', 33 ವಿದ್ಯಾರ್ಥಿಗಳಿಗೆ 'ವೆಂಕಟಮ್ಮ ರಾಮಯ್ಯ ಬೆಳ್ಳಿ ಪದಕ' ಮತ್ತು ಅತ್ಯುತ್ತಮ ವಿದ್ಯಾರ್ಥಿ ಸಂಶೋಧನಾ ಪ್ರಬಂಧ ಮಂಡನೆಗಾಗಿ 9 ವಿದ್ಯಾರ್ಥಿಗಳಿಗೆ 'ಗೌರಮ್ಮ ರಾಮಯ್ಯ ರಜತ ಪದಕ' ಸಂದವು.

ಕೇಂದ್ರ ರಕ್ಷಣಾ ಸಚಿವರ ವೈಜ್ಞಾನಿಕ ಸಲಹೆಗಾರ ಡಾ.ಜಿ. ಸತೀಶ್ ರೆಡ್ಡಿ ಮಾತನಾಡಿ, 'ಘಟಿಕೋತ್ಸವ ಎನ್ನುವುದು ವಿದ್ಯಾರ್ಥಿ ಜೀವನದಲ್ಲಿ ಒಂದು ವಿಶಿಷ್ಟವಾದ ಘಟ್ಟವಾಗಿದೆ. ಇದು ಅಧ್ಯಾಪಕರು ಮತ್ತು ಕುಟುಂಬದ ಬೆಂಬಲದ ಫಲದ ಫಲಿತಾಂಶವಾಗಿದೆ. ಭಾರತದ ಸ್ವಾವಲಂಬನೆಯೂ ಪ್ರಪಂಚದ ಸಂತೋಷ, ಸಹಕಾರ ಮತ್ತು ಶಾಂತಿಯಲ್ಲಿ ಬೇರೂರಿದೆ ಎಂದು ಹೇಳಿದರು.

ವಿದ್ಯಾರ್ಥಿಗಳು ತಮ್ಮ ಜೀವನವನ್ನು ರಾಷ್ಟ್ರ ನಿರ್ಮಾಣಕ್ಕಾಗಿ ಮುಡಿಪಾಗಿಡಬೇಕು. ನಮ್ಮ ಪರಂಪರೆ ಬಗ್ಗೆ ಹೆಮ್ಮೆಪಡುವುದರ ಜೊತೆಗೆ ಜಾಗತಿಕ ಸಾಮರಸ್ಯವನ್ನು ಸಾಧಿಸಲು ತಮ್ಮ ಕರ್ತವ್ಯಗಳನ್ನು ಪೂರೈಸಬೇಕು ಎಂದು ಸಲಹೆ ನೀಡಿದರು.

ಘಟಿಕೋತ್ಸವ ಸಮಾರಂಭದ ಅಧ್ಯಕ್ಷತೆಯನ್ನು ವಿ.ವಿ.ಯ ಕುಲಪತಿ ಡಾ.ಎಂ.ಆರ್. ಜಯರಾಂ ವಹಿಸಿದ್ದರು. ಉಪಕುಲಪತಿ ಪ್ರೊ. ಕುಲದೀಪ್ ಕುಮಾರ್ ರೈನಾ ಇದ್ದರು.

ಮಾಡದ ಕೆಲಸಕ್ಕೆ ಬಿಲ್ ₹ 6.77 ಕೋಟಿ ವಂಚಿಸಲು ಯತ್ನ

ಬೆಂಗಳೂರು: ಯಾವುದೇ ಕೆಲಸ ಮಾಡದೇ ನಕಲಿ ಬಿಲ್ ಸೃಷ್ಟಿಸಿ ₹ 6.77 ಕೋಟಿ ಪಡೆಯಲು ಯತ್ನಿಸಿದ್ದ ಆರೋಪದಡಿ ಶ್ರೀ ಭೈರವೇಶ್ವರ ಕನ್‌ಸ್ಟ್ರಕ್ಷನ್ ಮಾಲೀಕ ಬೊಮ್ಮನಹಳ್ಳಿ ಜವರೇಗೌಡ ರಮೇಶ್ ವಿರುದ್ಧ ವಿಲ್ಸನ್ ಗಾರ್ಡನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಡಿ. ದೇವರಾಜ ಅರಸು ಟ್ರಕ್ ಟರ್ಮಿನಲ್ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವಪ್ರಕಾಶ್ ಅವರು ವಂಚನೆ ಯತ್ನದ ಬಗ್ಗೆ ದೂರು ನೀಡಿದ್ದಾರೆ. ಜವರೇಗೌಡ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿ ಜವರೇಗೌಡ ಅವರ ಕಂಪನಿಗೆ ಯಾವುದೇ ಗುತ್ತಿಗೆ ನೀಡಿರಲಿಲ್ಲ. ಟ್ರಕ್ ಟರ್ಮಿನಲ್‌ನಲ್ಲಿ ವಿವಿಧ ಸಿವಿಲ್ ಕೆಲಸ ಮಾಡಿರುವುದಾಗಿ 2022ರ ಸೆಪ್ಟೆಂಬರ್ 5ರಂದು ₹ 7.07 ಕೋಟಿ ಮೊತ್ತಕ್ಕೆ ಆರೋಪಿ ನಕಲಿ ಬಿಲ್ (ಕಾಮಗಾರಿ ವೆಚ್ಚ ಹಾಗೂ ಜಿಎಸ್‌ಟಿ) ಸೃಷ್ಟಿಸಿದ್ದ. ಬಿಲ್ ದೃಢೀಕರಣ ಮಾಡಿದ್ದ ಅಂದಿನ ವ್ಯವಸ್ಥಾಪಕ ನಿರ್ದೇಶಕ ಕೆ. ನರಸಿಂಹಮೂರ್ತಿ, ₹ 6.77 ಕೋಟಿ ಹಣ ಮಂಜೂರಿಗೆ ಆದೇಶ ಮಾಡಿದ್ದರು' ಎಂದು ಮೂಲಗಳು ತಿಳಿಸಿವೆ.

'ಡಿ. ದೇವರಾಜ ಅರಸ್ ಟ್ರಕ್ ಟರ್ಮಿನಲ್ ಹೆಸರಿನಲ್ಲಿ ನಿಶ್ಚಿತ ಠೇವಣಿ ಇರುವ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್‌ನ ಶ್ರೀನಗರ ಶಾಖೆಗೆ 2022ರ ಸೆ. 6ರಂದು ಪತ್ರ ಬರೆದಿದ್ದ ಕೆ. ನರಸಿಂಹಮೂರ್ತಿ, '₹ 25 ಕೋಟಿ ನಿಶ್ಚಿತ ಠೇವಣಿ ಮೊತ್ತದಲ್ಲಿ ₹ 10 ಕೋಟಿ ಹಿಂಪಡೆದು ಕೆನರಾ ಬ್ಯಾಂಕ್ ಚಾಲ್ತಿ ಖಾತೆಗೆ ವರ್ಗಾಯಿಸಿ' ಎಂದು ಕೋರಿದ್ದರು. ಅದರಂತೆ ಹಣ ವರ್ಗಾವಣೆ ಆಗಿತ್ತು' ಎಂದು ಮೂಲಗಳು ಹೇಳಿವೆ.

'₹ 6.77 ಕೋಟಿ ಹಣವನ್ನು ಕೆನರಾ ಬ್ಯಾಂಕ್ ಮೂಲಕ ತನ್ನ ಕಂಪನಿ ಖಾತೆಗೆ ವರ್ಗಾವಣೆ ಮಾಡಿಸಿಕೊಳ್ಳಲು ಆರೋಪಿ ಪ್ರಯತ್ನ ನಡೆಸಿದ್ದ. ಮಾಡದ ಕೆಲಸಕ್ಕೆ ನಕಲಿ ಬಿಲ್ ಸೃಷ್ಟಿಸಿದ್ದ ಸಂಗತಿ ಟ್ರಕ್ ಟರ್ಮಿನಲ್ ಅಧ್ಯಕ್ಷ ಡಿ.ಎಸ್. ವೀರಯ್ಯ ಅವರಿಗೆ ಗೊತ್ತಾಗಿತ್ತು. ಹಣ ವರ್ಗಾವಣೆ ತಡೆ ಹಿಡಿಯುವಂತೆ ಕೆನರಾ ಬ್ಯಾಂಕ್‌ಗೆ ನಿರ್ದೇಶನ ನೀಡಿದ್ದರು. ಇದರಿಂದಾಗಿ ಆರೋಪಿ ವಂಚನೆ ಕೃತ್ಯ ವಿಫಲವಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಂಬಳ ಹೆಚ್ಚಿಸದ್ದಕ್ಕೆ ಕಳ್ಳತನ

ಬೆಂಗಳೂರು: ಅಶೋಕನಗರ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ಜಾನ್ ಅಲಿಯಾಸ್ ಮಂಜುನಾಥ್ (28) ಎಂಬುವವರನ್ನು ಪೊಲೀಸರು ಬಂಧಿಸಿದ್ದಾರೆ.

'ಆರೋಪಿ ಜಾನ್, ಸಂಸ್ಥೆಯೊಂದರಲ್ಲಿ ಕೆಲಸ ಮಾಡುತ್ತಿದ್ದ. ವೇತನ ಹೆಚ್ಚಳ ಮಾಡಲಿಲ್ಲವೆಂಬ ಕಾರಣಕ್ಕೆ ಸಂಸ್ಥೆಯ ಮಾಲೀಕರ ಮನೆಯಲ್ಲಿ ಇತ್ತೀಚೆಗೆ ಕಳ್ಳತನ ಮಾಡಿದ್ದ' ಎಂದು ಪೊಲೀಸರು ಹೇಳಿದರು.

'₹ 2 ಲಕ್ಷ ಮೌಲ್ಯದ ಚಿನ್ನಾಭರಣವನ್ನು ಆರೋಪಿ ಕದ್ದಿದ್ದ. ಆಭರಣಗಳನ್ನು ಅಡವಿಟ್ಟು, ಹಣ ಪಡೆದುಕೊಂಡಿದ್ದ. ಸ್ವಲ್ಪ ಹಣವನ್ನು ಸ್ವಂತಕ್ಕೆ ಖರ್ಚು ಮಾಡಿದ್ದ. ಉಳಿದ ಹಣವನ್ನು ಚರ್ಚ್‌ನ ಹುಂಡಿಗೆ ಹಾಕಿದ್ದ. ಭಿಕ್ಷುಕರಿಗೂ ಸ್ವಲ್ಪ ಹಣ ಕೊಟ್ಟಿದ್ದ. ಈ ಬಗ್ಗೆ ಆರೋಪಿ ಹೇಳಿಕೆ ನೀಡಿದ್ದಾನೆ' ಎಂದು ಪೊಲೀಸರು ತಿಳಿಸಿದರು.

ನಗರದಲ್ಲಿ ಇಂದು

ಪ್ರವಾಸ ಮತ್ತು ಪ್ರವಾಸೋದ್ಯಮ ಮೇಳ: ಉದ್ಘಾಟನೆ: ಆನಂದ್ ಸಿಂಗ್, ಅತಿಥಿಗಳು: ಕಪಿಲ್ ಮೋಹನ್, ರಾಮ ಪ್ರಸಾತ್ ಮನೋಹರ್, ಆಯೋಜನೆ: ಟ್ರಾವೆಲ್ ಆ್ಯಂಡ್ ಟೂರಿಸಂ ಸ್ಥಳ: ತ್ರಿಪುರ ವಾಸಿನಿ, ಅರಮನೆ ಮೈದಾನ, ಬೆಳಿಗ್ಗೆ 11

ಒಳಮೀಸಲಾತಿ ಸಮಸ್ಯೆ-ಸವಾಲುಗಳು ದುಂಡು ಮೇಜಿನ ಸಭೆ, ಕಿರು ಪುಸ್ತಕ ಬಿಡುಗಡೆ: ಭಾಗವಹಿಸುವವರು: ಎಚ್. ಎನ್. ನಾಗಮೋಹನದಾಸ್, ಎಲ್. ಹನುಮಂತಯ್ಯ, ಮಾವಳ್ಳಿ ಶಂಕರ್, ನಿತ್ಯಾನಂದಸ್ವಾಮಿ, ಗೋಪಾಲಕೃಷ್ಣ ಹರಳಹಳ್ಳಿ, ಮೋಹನ್ ರಾಜ್, ಮಾಳಮ್ಮ, ಎಸ್. ವೈ. ಗುರುಶಾಂತ್, ಸೋಲಂಕಿ, ಚಂದ್ರಶೇಖರ್, ಡಿ. ಶಿವಶಂಕರ್, ಜಂಬಣ್ಣ ನಾಯಕ್, ಆಯೋಜನೆ: ದಲಿತ ಹಕ್ಕುಗಳ ಸಮಿತಿ ಕರ್ನಾಟಕ, ಸ್ಥಳ: ಗಾಂಧಿ ಭವನ, ಕುಮಾರ ಪಾರ್ಕ್, ಬೆಳಿಗ್ಗೆ 11

ಸಂಸ್ಕೃತ್ ರಾಷ್ಟ್ರೀಯ ವಿಚಾರಸಂಕಿರಣ: ಅತಿಥಿಗಳು: ತೇಜಸ್ವಿಸೂರ್ಯ, ಸುದರ್ಶನ್ ಎಸ್.ಡಿ., ಅಖಿಲೇಶ್ ಝಾ, ಶೈಲೇಶ್ ನಾಯಕ್, ಇ.ಎಸ್. ದ್ವಾರಕದಾಸ್, ಸ್ಥಳ: ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್, ಬೆಳಿಗ್ಗೆ 11.15

ಅಂಡರ್‌ಸ್ಟ್ಯಾಂಡಿಂಗ್ ತಿರುಮಲೇಶ್-ಎ ಟ್ರಿಬ್ಯೂಟ್ (ಕೆ.ವಿ. ತಿರುಮಲೇಶ್ ಸ್ಮರಣೆಯ ಆನ್‌ಲೈನ್ ಕಾರ್ಯಕ್ರಮ): ವಿಶೇಷ ಉಪನ್ಯಾಸ: ಎಸ್. ಆರ್. ವಿಜಯಶಂಕರ್, ಆಯೋಜನೆ: ಗಾಂಧಿಯನ್ ಸೆಂಟರ್ ಫಾರ್ ಫಿಲಸಾಫಿಕಲ್ ಆರ್ಟ್ಸ್ ಅಂಡ್ ಸೈನ್ಸಸ್, ಉಪನ್ಯಾಸ ನೋಡಬಹುದಾದ ಲಿಂಕ್: https://bit.ly/3YVgV8U, ಸಂಜೆ 4.15

ಸಂಸ್ಕೃತ ಸಮ್ಮೇಳನ (ಏಕ್ ಭಾರತ್ ಶ್ರೇಷ್ಠ ಭಾರತ್): ಅತಿಥಿಗಳು: ಹರಿಬಾಬು ಕಂಭಾಂಪತಿ, ಆರ್. ಅಶೋಕ, ಕೆ.ಸಿ. ರಾಮಮೂರ್ತಿ, ಜಗದೀಶ್ ಶೆಟ್ಟರ್, ಎಂ. ಲಕ್ಷ್ಮೀನಾರಾಯಣ, ಉಮಾ ಮಹಾದೇವನ್, ರಾಜೀವ್ ಗೌಡ, ಆಯೋಜನೆ ಮತ್ತು ಸ್ಥಳ: ಸಿ.ಎಂ.ಆರ್. ವಿಶ್ವವಿದ್ಯಾಲಯ, ಬಾಣಸವಾಡಿ, ಸಂಜೆ 5

ವೇಮನ ಜಯಂತಿ, ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಜಯಂತಿ: ಉದ್ಘಾಟನೆ: ಗೊ.ರು. ಚನ್ನಬಸಪ್ಪ, ಉಪನ್ಯಾಸ: ಕೆ.ವೈ. ನಾರಾಯಣಸ್ವಾಮಿ, ಅತಿಥಿಗಳು: ಸೌಮ್ಯ ರೆಡ್ಡಿ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಉಪಸ್ಥಿತಿ: ಗೀತಾ ಜಯಂತ್, ಸಿಂ. ರಾ. ಹೊನ್ನಲಿಂಗಯ್ಯ, ದಯಾನಂದ ಪಾಟೀಲ, ಪ್ರಮೀಳಾ ಗರಡಿ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಶಿವರಾತ್ರೀಶ್ವರ ಚಿಂತನ ಮಂಟಪ, ಜಯನಗರ, ಸಂಜೆ 5.30

ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ಅ. ದೇವೇಗೌಡ, ಅಧ್ಯಕ್ಷತೆ: ಜಯಲಕ್ಷ್ಮೀ ಆನಂದ್, ಅತಿಥಿಗಳು: ವಿ. ಮನೋಹರ್, ಸಮತಾ ಬಿ. ದೇಶಮಾನೆ, ಕಲಾಸೇವಾ ರತ್ನ ಪ್ರಶಸ್ತಿ ಪುರಸ್ಕೃತರು: ಎಂ. ಕುಪ್ಪುಸ್ವಾಮಿ, ಸಮಾಜ ಸೇವಾ ರತ್ನ ಪ್ರಶಸ್ತಿ ಪುರಸ್ಕೃತರು: ಎಂ. ಸತೀಶ್, ಕಲಾವತಿ, ಆಯೋಜನೆ: ಕಲಾ ಕುಟೀರ ಸಾಂಸ್ಕೃತಿಕ ವೇದಿಕೆ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5.30

ಪ್ರವಚನ ವಾಹಿನಿ ಕಾರ್ಯಕ್ರಮ: 'ವಿಷ್ಣು ಸಹಸ್ರನಾಮ ಸಾಮೂಹಿಕ ಪಾರಾಯಣ ಹಾಗೂ ಪ್ರವಚನ' ಕುರಿತು ಉಪನ್ಯಾಸ: ಅರಳು ಮಲ್ಲಿಗೆ ಪಾರ್ಥಸಾರಥಿ, ಆಯೋಜನೆ ಮತ್ತು ಸ್ಥಳ: ರಾಗಿ ಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿಯ ಸಾಂಸ್ಕೃತಿಕ ಮಂದಿರ, ಜಯನಗರ, ಸಂಜೆ 6.30

'ಶ್ರೀಮದ್ಭಾಗವತ' ಪ್ರವಚನ: ಖೇಡಾ ಪ್ರಮೋದಾಚಾರ್, ಆಯೋಜನೆ: ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, ಸುಧೀಂದ್ರನಗರ, ಸಂಜೆ 7

'ಕುರುಕ್ಷೇತ್ರ' ಪೌರಾಣಿಕ ನಾಟಕ ಪ್ರದರ್ಶನ: ಆಯೋಜನೆ: ವಿನಾಯಕ ಕಲಾ ಬಳಗ ಟ್ರಸ್ಟ್, ಸ್ಥಳ: ಬಂಡೇಪಾಳ್ಯ, ಗಾರೇವಾವಿಪಾಳ್ಯ, ರಾತ್ರಿ: 8.30

ಪ್ರೊ.ಎಲ್.ಎಸ್. ಶೇಷಗಿರಿರಾವ್ ಕುರಿತ ಎರಡು ಪುಸ್ತಕ ಬಿಡುಗಡೆ

‘ಹೊಗಳಿಕೆಯ ಸಹಕಾರ ಸಂಘವಾದ ವಿಮರ್ಶೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನ್ನಡ ವಿಮರ್ಶಾ ಕ್ಷೇತ್ರ ಕ್ಷಾಮವನ್ನು ಎದುರಿಸುತ್ತಿದ್ದು, ಈ ಹೊತ್ತು ವಿಮರ್ಶೆಯು ಪರಸ್ಪರ ಹೊಗಳಿಕೆಯ ಸಹಕಾರ ಸಂಘವಾಗಿದೆ’ ಎಂದು ಸಾಹಿತಿ ದೊಡ್ಡರಂಗೇಗೌಡ ಬೇಸರ ವ್ಯಕ್ತಪಡಿಸಿದರು.

ಪ್ರೊ.ಎಲ್.ಎಸ್. ಶೇಷಗಿರಿರಾವ್ ಅವರ ನೆನಪಿನಲ್ಲಿ ಸಪ್ನ ಬುಕ್ ಹೌಸ್, ಕನ್ನಡ ಗೆಳೆಯರ ಬಳಗ ಹಾಗೂ ಕರ್ನಾಟಕ ವಿಕಾಸ ರಂಗ ಜಂಟಿಯಾಗಿ ನಗರದಲ್ಲಿ ಗುರುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ‘ಸಂಚಯ’ ಹಾಗೂ ಶಿವಕುಮಾರ್ ಡಿ.ಬಿ. ಅವರ ‘ಎಲ್.ಎಸ್. ಶೇಷಗಿರಿ ರಾವ್ ಅವರ ಜೀವನ ಮತ್ತು ಸಾಹಿತ್ಯ’ ಕೃತಿ ಬಿಡುಗಡೆಯಾಯಿತು.

‘ಸಾಹಿತ್ಯ ಕ್ಷೇತ್ರದಲ್ಲಿ ಗುಂಪುಗಾರಿಕೆ, ಜಾತೀಯತೆ ಬೆಳೆದಿದೆ. ನವ್ಯ, ಬಂಡಾಯವೆಂದು ಸಾಹಿತ್ಯ ಕ್ಷೇತ್ರ ವಿಭಾಗವಾಗಿ, ನಿಜವಾದ ವಿಮರ್ಶೆ ನಾಪತ್ತೆಯಾಗಿದೆ. ವಿಮರ್ಶಕರು ವಸ್ತುನಿಷ್ಠವಾಗಿರುವ ಬದಲು, ವ್ಯಕ್ತಿ ನಿಷ್ಠರಾಗಿ ಬರೆಯುತ್ತಿದ್ದಾರೆ. ಪಾಶ್ಚಾತ್ಯ ಹಳದಿ ಕನ್ನಡಕವನ್ನು ಹಾಕಿಕೊಂಡು, ವಿಮರ್ಶೆ ಮಾಡಲಾಗುತ್ತಿದೆ. ಈ ವೇಳೆ ಭಾರತೀಯ ಪರಂಪರೆ ಅರಿತ, ಕನ್ನಡ ಸಂಸ್ಕೃತಿಯನ್ನು ಅರಗಿಸಿಕೊಂಡ ವಿಮರ್ಶಕರ ಅಗತ್ಯ ಇದೆ’ ಎಂದು ದೊಡ್ಡರಂಗೇಗೌಡ ಹೇಳಿದರು.

ಮುಖ್ಯಾಂಶಗಳು

- ಸಾಹಿತ್ಯ ಕ್ಷೇತ್ರದಲ್ಲಿ ಗುಂಪುಗಾರಿಕೆ, ಜಾತೀಯತೆ ಬೆಳೆದಿದೆ– ದೊಡ್ಡರಂಗೇಗೌಡ
- ’ಕನ್ನಡ ವಿಮರ್ಶಾ ಕ್ಷೇತ್ರ ಕ್ಷಾಮ ಎದುರಿಸುತ್ತಿದೆ’

ಪತ್ರಕರ್ತ ಬಾಬು ಕೃಷ್ಣಮೂರ್ತಿ, ‘ಶೇಷಗಿರಿ ರಾವ್ ಅವರು ಮನಸ್ಸಿಗೆ ಲಗ್ನ ಮಾಡಿಕೊಂಡು, ವಿಮರ್ಶೆ ಮಾಡುತ್ತಿದ್ದರು. ನನ್ನ ‘ಮಹಾಸಾಧಕ’ ಕಾದಂಬರಿಗೆ ಅವರು ಮುನ್ನುಡಿ ಬರೆದಿದ್ದರು. ಇದು ಅವರು ಬರೆದ ಕೊನೆಯ ಮುನ್ನುಡಿಯೂ ಆಗಿದೆ’ ಎಂದು ತಿಳಿಸಿದರು.

ಕನ್ನಡ ಗೆಳೆಯರ ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ, ‘ಶೇಷಗಿರಿ ರಾವ್ ಅವರ ಶತಮಾನೋತ್ಸವ ಸಮೀಪಿಸುತ್ತಿದೆ. ಆದ್ದರಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಶತಮಾನೋತ್ಸವ ಕಾರ್ಯಕ್ರಮಕ್ಕೆ ಸಮಿತಿ ರಚಿಸಬೇಕು’ ಎಂದು ಆಗ್ರಹಿಸಿದರು.



ಕಾರ್ಯಕ್ರಮದಲ್ಲಿ ‘ಸಂಚಯ’ ಹಾಗೂ ‘ಎಲ್.ಎಸ್. ಶೇಷಗಿರಿ ರಾವ್ ಅವರ ಜೀವನ ಮತ್ತು ಸಾಹಿತ್ಯ’ ಕೃತಿಯನ್ನು ಬಾಬು ಕೃಷ್ಣಮೂರ್ತಿ ಬಿಡುಗಡೆ ಮಾಡಿದರು. ರಾ.ನಂ. ಚಂದ್ರಶೇಖರ, ಪ್ರಾಧ್ಯಾಪಕ ಟಿ.ಎನ್. ವಾಸುದೇವಮೂರ್ತಿ, ದೊಡ್ಡರಂಗೇಗೌಡ, ಶೇಷಗಿರಿ ರಾವ್ ಅವರ ಪತ್ನಿ ಭಾರತಿ, ಲೇಖಕ ಶಿವಕುಮಾರ್ ಡಿ.ಬಿ. ಹಾಗೂ ಕರ್ನಾಟಕ ವಿಕಾಸ ರಂಗದ ಅಧ್ಯಕ್ಷ ವ.ಚ. ಚೆನ್ನೇಗೌಡ ಇದ್ದಾರೆ –ಪ್ರಜಾವಾಣಿ ಚಿತ್ರ.

ಯೂಟ್ಯೂಬ್ ಸಿಇಒ ಸೂಸನ್ ರಾಜೀನಾಮೆ

ವಾಷಿಂಗ್ಟನ್ (ರಾಯಿಟರ್ಸ್): ಆನ್‌ಲೈನ್ ವಿಡಿಯೊ ವೇದಿಕೆ, ‘ಯೂಟ್ಯೂಬ್’ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸೂಸನ್ ವೊಜಿಸ್ಕಿ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಗುರುವಾರ ಘೋಷಿಸಿದ್ದಾರೆ.

‘ಸಂಸ್ಥೆಯ ನೂತನ ಸಿಇಒ ಆಗಿ ಚೀಫ್ ಪ್ರಾಡಕ್ಟ್ ಆಫೀಸರ್ ನೀಲ್ ಮೋಹನ್ ಅವರು ಅಧಿಕಾರ ವಹಿಸಿಕೊಳ್ಳುವರು’ ಎಂದು ಸೂಸನ್ ಅವರು ತಮ್ಮ ಬ್ಲಾಗ್‌ನಲ್ಲಿ ಬರೆದುಕೊಂಡಿದ್ದಾರೆ.

ಭಾರತೀಯ–ಅಮೆರಿಕನ್ ಮೋಹನ್ ಅವರು 2008ರಲ್ಲಿ ಗೂಗಲ್ ಸೇರಿದ್ದಾರೆ.

‘ನನ್ನ ಕುಟುಂಬ, ಆರೋಗ್ಯ ಹಾಗೂ ವೈಯಕ್ತಿಕ ಯೋಜನೆಗಳತ್ತ ಗಮನ ಹರಿಸುವ ಸಂಬಂಧ ಈ ನಿರ್ಧಾರ ಕೈಗೊಂಡಿದ್ದೇನೆ’ ಎಂದು ಸೂಸನ್ ಹೇಳಿದ್ದಾರೆ.

54 ವರ್ಷದ ಸೂಸನ್ ಅವರು ಯೂಟ್ಯೂಬ್‌ನ ಸಿಇಒ ಆಗಿ ಕಳೆದ 9 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದರು. ಇದಕ್ಕೂ ಮುನ್ನ ಅವರು ಗೂಗಲ್‌ನಲ್ಲಿ ಜಾಹೀರಾತು ವಿಭಾಗದ ಉಪಾಧ್ಯಕ್ಷೆಯಾಗಿದ್ದರು.

ಗೂಗಲ್‌ನ ಮಾತೃಸಂಸ್ಥೆ ಅಲ್ಫಾಬೆಟ್‌ನಲ್ಲಿ 25 ವರ್ಷಗಳಷ್ಟು ದೀರ್ಘಕಾಲ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ ಕೆಲವೇ ಉದ್ಯೋಗಿಗಳಲ್ಲಿ ಒಬ್ಬರು ಎಂಬ ಹೆಗ್ಗಳಿಕೆ ಸೂಸನ್ ಅವರದು. ಇದಕ್ಕೂ ಮೊದಲು ಅವರು ಇಂಟೆಲ್ ಕಾರ್ಪೊರೇಷನ್, ಬೇನ್ ಅಂಡ್ ಕಂಪನಿಗಳಲ್ಲಿಯೂ ಕಾರ್ಯನಿರ್ವಹಿಸಿದ್ದಾರೆ.

ನಕಲಿ ದಾಖಲೆ: ಎಚ್‌ಎಎಲ್ ಜಾಗ ಬಾಡಿಗೆ ಕೊಟ್ಟ ವಂಚಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್‌ಗೆ (ಎಚ್‌ಎಎಲ್) ಸೇರಿದ್ದ 833 ಎಕರೆ ಜಾಗದ ಹೆಸರಿನಲ್ಲಿ ನಕಲಿ ದಾಖಲೆ ಸೃಷ್ಟಿಸಿ ಬಾಡಿಗೆ ಒಪ್ಪಂದ ಮಾಡಿಕೊಂಡು ವಂಚಿಸಿದ್ದ ಆರೋಪದಡಿ ಏಳು ಮಂದಿಯನ್ನು ಎಚ್‌ಎಎಲ್ ಪೊಲೀಸರು ಬಂಧಿಸಿದ್ದಾರೆ.

‘ಎಚ್‌ಎಎಲ್ ಪ್ರತಿನಿಧಿ ಸುರೇಶ್ ಎಂಬುವರು ವಂಚನೆ ಬಗ್ಗೆ ಇತ್ತೀಚೆಗೆ ದೂರು ನೀಡಿದ್ದರು. ಸ್ಥಳೀಯ ನಿವಾಸಿಗಳಾದ ಸೈಯದ್ ಮುನಾವರ್, ಸೈಯದ್ ಅಫ್ರೋಜ್, ಪ್ರತಾಪ್, ರಾಜ್‌ಕುಮಾರ್, ಶ್ರೀನಿವಾಸಮೂರ್ತಿ, ವೈಜಯಂತ್ ಸೇರಿದಂತೆ ಏಳು ಮಂದಿಯನ್ನು ಬಂಧಿಸಲಾಗಿದೆ. ಪ್ರಮುಖ ಆರೋಪಿ ತಲೆಮರೆಸಿಕೊಂಡಿದ್ದಾನೆ’ ಎಂದು ಪೊಲೀಸರು ಹೇಳಿದರು.

‘ಹಳೇ ವಿಮಾನ ನಿಲ್ದಾಣ ರಸ್ತೆಯಲ್ಲಿ ಎಚ್‌ಎಎಲ್‌ಗೆ ಸೇರಿದ್ದ 833 ಎಕರೆ ಜಾಗವಿದೆ. ಎಚ್‌ಎಎಲ್ ಅಧಿಕಾರಿಗಳ ಮೂಲಕ ಎಲ್ಲ ಜಾಗವನ್ನು 30 ವರ್ಷ ಗುತ್ತಿಗೆ ಪಡೆದಿರುವುದಾಗಿ ಆರೋಪಿಗಳು ನಕಲಿ ದಾಖಲೆ ಸೃಷ್ಟಿಸಿದ್ದರು. ಇದಕ್ಕಾಗಿ ಅಧಿಕಾರಿಗಳ ಹೆಸರಿನ ಲೆಟರ್‌ಹೆಡ್ ಹಾಗೂ ಸಹಿ ನಕಲು ಮಾಡಿದ್ದರು’ ಎಂದು ತಿಳಿಸಿದರು.

‘ನಕಲಿ ದಾಖಲೆಗಳನ್ನು ತೋರಿಸಿ ಕೆಲ ಸಂಸ್ಥೆಗಳ ಜೊತೆ ಒಪ್ಪಂದ ಮಾಡಿಕೊಂಡಿದ್ದ ಆರೋಪಿಗಳು, ಜಾಗವನ್ನು ಬಾಡಿಗೆ ನೀಡುವುದಾಗಿ ಹೇಳಿ ₹ 1.50 ಕೋಟಿ ಪಡೆದಿದ್ದರು. ಆರೋಪಿಗಳ ಕೃತ್ಯ ಇತ್ತೀಚೆಗೆ ಎಚ್‌ಎಎಲ್ ಅಧಿಕಾರಿಗಳ ಗಮನಕ್ಕೆ ಬಂದಿತ್ತು’ ಎಂದು ಪೊಲೀಸರು ಹೇಳಿದರು.

‘ಆರೋಪಿಗಳ ಜೊತೆ ಒಪ್ಪಂದ ಮಾಡಿಕೊಂಡಿದ್ದ ಸಂಸ್ಥೆಯ ಪ್ರತಿನಿಧಿಗಳಿಂದ ಮಾಹಿತಿ ಪಡೆಯಲಾಗುತ್ತಿದೆ. ಪ್ರಕರಣದಲ್ಲಿ ಮತ್ತಷ್ಟು ಮಂದಿ ಭಾಗಿಯಾಗಿರುವ ಅನುಮಾನವಿದ್ದು, ತನಿಖೆ ಮುಂದುವರಿಸಲಾಗಿದೆ’ ಎಂದು ತಿಳಿಸಿದರು.

ಲಂಚ: ಪಿಡಿಒ, ಬಿಲ್ ಕಲೆಕ್ಟರ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಕ್ರೀಟ್ ಚರಂಡಿ ಕಾಮಗಾರಿಯ ಬಿಲ್ ಪಾವತಿಸಲು ₹ 25,000 ಲಂಚ ಪಡೆಯುತ್ತಿದ್ದ ನೆಲಮಂಗಲ ತಾಲ್ಲೂಕಿನ ಟಿಬೇಗೂರು ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ಉಷಾ ಮತ್ತು ಬಿಲ್ ಕಲೆಕ್ಟರ್ ಪುಟ್ಟಸ್ವಾಮಿ ಅವರನ್ನು ಲೋಕಾಯುಕ್ತ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಗುತ್ತಿಗೆದಾರರಾದ ಗಿರೀಶ್ ಎಂಬುವವರು ಟಿ-ಬೇಗೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಾಂಕ್ರೀಟ್ ಚರಂಡಿ ಕಾಮಗಾರಿ ನಿರ್ವಹಿಸಿದ್ದರು. ಬಾಕಿ ಬಿಲ್ ಪಡೆಯಲು ಪಿಡಿಒ ಮತ್ತು ಬಿಲ್ ಕಲೆಕ್ಟರ್ ಭೇಟಿಮಾಡಿದ್ದರು. ಬಿಲ್ ಪಾವತಿಗೆ ₹ 25,000 ಲಂಚ ನೀಡುವಂತೆ ಅವರು ಬೇಡಿಕೆ ಇಟ್ಟಿದ್ದರು.

ಈ ಕುರಿತು ಗುತ್ತಿಗೆದಾರರು ಲೋಕಾಯುಕ್ತದ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ವಿಭಾಗಕ್ಕೆ ದೂರು ನೀಡಿದ್ದರು. ಉಷಾ ಅವರ ಸೂಚನೆಯಂತೆ ಪುಟ್ಟಸ್ವಾಮಿ ಗುರುವಾರ ಕಚೇರಿಯಿಂದ ಹೊರಬಂದು ಲಂಚದ ಹಣ ಪಡೆದುಕೊಂಡರು. ತಕ್ಷಣ ದಾಳಿ ಮಾಡಿದ ಲೋಕಾಯುಕ್ತ ಪೊಲೀಸರು, ಇಬ್ಬರೂ ಆರೋಪಿಗಳನ್ನು ಬಂಧಿಸಿದರು ಎಂದು ಲೋಕಾಯುಕ್ತದ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ಲೋಕಾಯುಕ್ತದ ಬೆಂಗಳೂರು ಗ್ರಾಮಾಂತರ ಎಸ್‌ಪಿ ಶ್ರೀನಾಥ್ ಜೋಶಿ ಅವರ ಮಾರ್ಗದರ್ಶನದಲ್ಲಿ ಇನ್‌ಸ್ಪೆಕ್ಟರ್ ಎಂ. ಶ್ರೀನಿವಾಸ್ ಮತ್ತು ತಂಡ ಈ ಕಾರ್ಯಾಚರಣೆ ನಡೆಸಿದೆ.

ಎಳೆಬಿಸಿಲು ಏರುವ ಮುನ್ನವೇ ಲಗುಬಗೆಯಿಂದ ಬಂದು ಸೇರಿದ್ದ ಮಂದಿ • ಬೆಳಿಗ್ಗೆ 9 ಗಂಟೆಗೆ ಮೊದಲ ಪ್ರದರ್ಶನ

ವೈಮಾನಿಕ ಪ್ರದರ್ಶನ ವೀಕ್ಷಣೆಗೆ ಕಿಕ್ಕಿರಿದ ಜನ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಯಲಹಂಕ ವಾಯುನೆಲೆಯಲ್ಲಿ ನಡೆಯುತ್ತಿರುವ ವೈಮಾನಿಕ ಪ್ರದರ್ಶನ ವೀಕ್ಷಣೆಗೆ ಗುರುವಾರ ಕಿಕ್ಕಿರಿದು ಸೇರಿದ್ದ ಜನ, ವಿಮಾನಗಳ ಹಾರಾಟವನ್ನು ಹತ್ತಿರದಿಂದ ಕಣ್ತುಂಬಿಕೊಂಡು ಸಂಭ್ರಮಿಸಿದರು.

ವೈಮಾನಿಕ ಪ್ರದರ್ಶನದ ಕೊನೆಯ ಎರಡು ದಿನ ಸಾರ್ವಜನಿಕರಿಗೆ ಅವಕಾಶ ಕಲ್ಪಿಸಲಾಗಿತ್ತು. ಎಳೆಬಿಸಿಲು ಏರುವ ಮುನ್ನವೇ ಲಗುಬಗೆಯಿಂದ ಬಂದು ಸೇರಿದ್ದ ಜನ, ಲೋಹದ ಹಕ್ಕಿಗಳ ಹಾರಾಟಕ್ಕೆ ಕಾತರದಿಂದ ಕಾದಿದ್ದರು. ಬೆಳಿಗ್ಗೆ 9 ಗಂಟೆಗೆ ಮೊದಲ ಪ್ರದರ್ಶನ ಆರಂಭವಾಯಿತು.

ಸುಖೋಯ್, ತೇಜಸ್ ಯುದ್ಧ ವಿಮಾನಗಳು ಘರ್ಜನೆ ನಡುವೆ ನೀಡಿದ ಪ್ರದರ್ಶನ ವೀಕ್ಷಕರನ್ನು ನಿಬ್ಬೆರಗಾಗಿಸಿತು. ಸಾರಂಗ್ ಮತ್ತು ಸೂರ್ಯಕಿರಣ ತಂಡ ನಡೆಸಿದ ಕಸರತ್ತು ನೆರೆದಿದ್ದವರನ್ನು ರೋಮಾಂಚನಗೊಳಿಸಿತು.

ಆಕಾಶದಲ್ಲಿ ಬಿಡಿಸಿದ ಚಿತ್ತಾರ, ಎದುರಿನಿಂದ ಬಂದು ಡಿಕ್ಕಿಯಾಗುತ್ತವೆ ಎನ್ನುಷ್ಟರಲ್ಲೇ ಕ್ಷಣಾರ್ಧದಲ್ಲೇ ತಪ್ಪಿಸಿಕೊಂಡು ಬಾಗಿ ಸಾಗುವ ದೃಶ್ಯಗಳು ಅಚ್ಚರಿ ಮೂಡಿಸಿದವು. ಈ ಸಂದರ್ಭದಲ್ಲಿ ಜನರ ಕೇಕೆ ಹಾಕಿ ಸಂಭ್ರಮಿಸಿದರು.

ಒಂದು ಸುತ್ತಿನ ಪ್ರದರ್ಶನ ಮುಗಿದಾಗ ನಂತರ ಜನ ವಸ್ತುಪ್ರದರ್ಶನ ಮಳಿಗೆಗಳಿಗೆ ಮುಗಿ ಬಿದ್ದರು.

ದೇಶಿ ಮತ್ತು ವಿದೇಶಿ ಯುದ್ಧ ವಿಮಾನಗಳು, ಅವುಗಳ ತಯಾರಿಕೆ ವಿಧಾನ, ಸಾಮರ್ಥ್ಯ ಎಲ್ಲದರ ಬಗ್ಗೆ ಮಾಹಿತಿ ಪಡೆದುಕೊಂಡರು. ಎಲ್ಲಾ ಮಾದರಿಯ ವಿಮಾನಗಳ ಬಳಿ ನಿಂತು ಮೊಬೈಲ್‌ನಲ್ಲಿ ಸೆಲ್ಫಿ ತೆಗೆದುಕೊಂಡು ಪುಳಕಿತರಾದರು.

ವಿದೇಶಿ ಯುದ್ಧ ವಿಮಾನದಲ್ಲಿ ಹತ್ತಿ ಕುಳಿತು ಫೋಟೊ ತೆಗೆಸಿಕೊಳ್ಳಲು ಆವರಣದಲ್ಲಿ ಅವಕಾಶ ಇತ್ತು. ಅದಕ್ಕೆ ಹತ್ತಲು ಜನ ಗಂಟೆಗಟ್ಟಲೆ ಸರತಿ ಸಾಲಿನಲ್ಲಿ ನಿಂತಿದ್ದು ಸಾಮಾನ್ಯವಾಗಿತ್ತು. ಮಧ್ಯಾಹ್ನವೂ ಎರಡನೇ ಸುತ್ತಿನ ವೈಮಾನಿಕ ಪ್ರದರ್ಶನ ನಡೆಯಿತು.


ಯಲಹಂಕ ವಾಯುನೆಲೆಯಲ್ಲಿ ವೈಮಾನಿಕ ಪ್ರದರ್ಶನ ವೀಕ್ಷಣೆಗೆ ಸೇರಿದ್ದ ಜನ –ಪ್ರಜಾವಾಣಿ ಚಿತ್ರ/ಎಂ.ಎಸ್.ಮಂಜುನಾಥ್

‘ಸುಖೋಯ್’, ‘ತೇಜಸ್’ ಖರೀದಿಗೆ ನೂಕುನುಗ್ಗಲು!

ಯಲಹಂಕ ವಾಯುನೆಲೆಯಲ್ಲಿ ಸುಖೋಯ್, ತೇಜಸ್, ಸಾರಂಗ್, ಸೂರ್ಯಕಿರಣ, ಮಿಗ್–29 ವಿಮಾನಗಳ ಖರೀದಿಗೆ ನೂಕುನುಗ್ಗಲೇ ಏರ್ಪಟ್ಟಿತ್ತು!

ಹೌದು, ಈ ವಿಮಾನಗಳ ಖರೀದಿಗೆ ಜನ ಮುಗಿಬಿದ್ದಿದ್ದರು. ಆದರೆ, ಅವು ನಿಜವಾದ ವಿಮಾನಗಳಲ್ಲ, ಅವುಗಳ ಮಾದರಿಯಲ್ಲೇ ಇದ್ದ ಆಟಿಕೆ ವಿಮಾನಗಳು. ಎಚ್‌ಎಎಲ್ ಫ್ಯಾಮಿಲಿ ವೆಲ್‌ಫೇರ್ ಅಸೋಸಿಯೇಷನ್ ತೆರೆದಿರುವ ಮಳಿಗೆಯಲ್ಲಿ ಹಲವು ಬಗೆಯ ಆಟಿಕೆ ವಿಮಾನಗಳನ್ನು ಮಾರಾಟಕ್ಕೆ ಇಡಲಾಗಿತ್ತು.

ಮನೆ ಮತ್ತು ಕಚೇರಿಗಳಲ್ಲಿ ಟೇಬಲ್ ಮೇಲೆ ಮತ್ತು ಶೋಕೇಸ್‌ಗಳಲ್ಲಿ ಇಡಲು ತಯಾರಿಸಿರುವ ವಿವಿಧ ಗಾತ್ರದ ಆಟಿಕೆ ವಿಮಾನಗಳು ಜನರನ್ನು ಆಕರ್ಷಿಸಿದ್ದವು. ₹400ರಿಂದ ₹2100 ಮೌಲ್ಯದ ಈ ಆಟಿಕೆ ವಿಮಾನಗಳಿದ್ದವು. ಅದಲ್ಲದೇ ಎಚ್‌ಎಎಲ್ ಲೋಗೊ ಇರುವ ಟಿ–ಶರ್ಟ್‌ಗಳು, ಕೀ ಚೈನ್‌ಗಳೂ ಜನರನ್ನು ಆಕರ್ಷಿಸಿದ್ದವು.

ಕೆರೆ ಏರಿ ಮೇಲೆ ಜನರ ದಂಡು

ವಾಯುನೆಲೆಗೆ ಪ್ರವೇಶ ಪಡೆಯಲು ಸಾಧ್ಯವಾಗದ ಜನ ಹೆದ್ದಾರಿ ಬದಿಯಲ್ಲಿರುವ ಹುಣಸಮಾರನಹಳ್ಳಿ ಕೆರೆಯ ಏರಿಯ ಮೇಲೆ ಕುಳಿತು ಲೋಹದ ಹಕ್ಕಿಗಳ ಕಸರತ್ತು ವೀಕ್ಷಿಸಿದರು.

ವಿಮಾನಗಳು ಆಗಸದಲ್ಲೇ ಕಸರತ್ತು ನಡೆಸುತ್ತಿದ್ದರಿಂದ ಹೊರಗಿದ್ದ ಜನರಿಗೂ ಹತ್ತಿರದಿಂದಲೇ ನೋಡಿದ ಅನುಭವ ಆಯಿತು. ರಸ್ತೆ ಬದಿಯಲ್ಲಿ ವಾಹನ ದಟ್ಟಣೆ ಉಂಟಾಗದಂತೆ ಸಂಚಾರ ಪೊಲೀಸರನ್ನೂ ನಿಯೋಜಿಸಲಾಗಿತ್ತು. ಕೆರೆಯ ಸುತ್ತಲೂ ಜನ ಜಾತ್ರೆಯೇ ಸೇರಿತ್ತು.

ಸಂಚಾರ ದಟ್ಟಣೆ

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯಲ್ಲಿ ಗುರುವಾರ ಬೆಳಿಗ್ಗೆಯಿಂದಲೇ ಸಂಚಾರ ದಟ್ಟಣೆ ಉಂಟಾಗಿತ್ತು.

ಮೇಖ್ರಿ ವೃತ್ತ, ಹೆಬ್ಬಾಳದಿಂದಲೇ ಸಂಚಾರ ಪೊಲೀಸರು ಬ್ಯಾರಿಕೇಡ್ ಅಳವಡಿಸಿ ಬಸ್, ಲಾರಿ ಸೇರಿ ಭಾರಿ ವಾಹನಗಳನ್ನು ತಡೆದು ಸರ್ವೀಸ್ ರಸ್ತೆಯಲ್ಲಿ ಕಳುಹಿಸಿದರು. ಸಂಜೆ ವಾಯುನೆಲೆಯಿಂದ ಹೊರಟವರೂ ದಟ್ಟಣೆಯಲ್ಲಿ ಸಿಲುಕಿದರು.

ಸುದ್ದಿ 2 ನಿಮಿಷ

ಬ್ಲ್ಯಾಕ್ ಬಾಕ್ಸ್: ಎಚ್‌ಎಎಲ್‌ಗೆ ಡಿಜಿಸಿಎ ಒಪ್ಪಿಗೆ

ಬೆಂಗಳೂರು: ಹಿಂದುಸ್ತಾನ್ ಏರೊನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ದೇಶೀಯವಾಗಿ ಅಭಿವೃದ್ಧಿಪಡಿಸಿರುವ ಕಾಕ್‌ಪಿಟ್ ವಾಯ್ಸ್ ರೆಕಾರ್ಡರ್ (ಸಿವಿಆರ್) ಹಾಗೂ ಫ್ಲೈಟ್ ಡೇಟಾ ರೆಕಾರ್ಡರ್‌ಗೆ (ಎಫ್‌ಡಿಆರ್) ನಾಗರಿಕ ವಿಮಾನಯಾನ ನಿರ್ದೇಶನಾಲಯ (ಡಿಜಿಸಿಎ) ಒಪ್ಪಿಗೆ ದೊರೆತಿದೆ.

ಸಿವಿಆರ್ ಮತ್ತು ಎಫ್‌ಡಿಆರ್ ಅನ್ನು ಬ್ಲ್ಯಾಕ್ ಬಾಕ್ಸ್ ಎಂದೇ ಸಾಮಾನ್ಯವಾಗಿ ಕರೆಯಲಾಗುತ್ತದೆ. ಡಿಜಿಸಿಎನ ಇಂಡಿಯನ್ ಟೆಕ್ನಿಕಲ್ ಸ್ಟ್ಯಾಂಡರ್ಡ್ ಆರ್ಡರ್ (ಐಟಿಎಸ್‌ಒ) ಈ ಉಪಕರಣಗಳಿಗೆ ದೃಢೀಕರಣವನ್ನು ನೀಡಿದೆ.

ಪ್ರಯಾಣಿಕ ವಿಮಾನದಲ್ಲಿ ಬಳಕೆ ಮಾಡಲಾಗುವ ವಸ್ತುಗಳು, ಭಾಗಗಳು, ಪ್ರಕ್ರಿಯೆಗಳು ಮತ್ತು ಉಪಕರಣಗಳಿಗೆ ಐಟಿಎಸ್‌ಒ ಮಾನದಂಡ ಪಡೆಯುವುದು ಅಗತ್ಯವಾಗಿದೆ.

ಅರ್ಜೆಂಟಿನಾ ಜತೆ ಒಪ್ಪಂದ: ಉಪಕರಣಗಳು ಮತ್ತು ಎಂಜಿನ್ ದುರಸ್ತಿ ಸೇವೆಗಳನ್ನು ಒದಗಿಸಲು ಅರ್ಜೆಂಟಿನಾ ವಾಯು ಪಡೆ ಜತೆಗೆ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ಒಪ್ಪಂದ ಮಾಡಿಕೊಂಡಿದೆ.

ಅರ್ಜೆಂಟಿನಾ ವಾಯುಪಡೆಯ ಮುಖ್ಯಸ್ಥ ಬ್ರಿಗೇಡಿಯರ್ ಜನರಲ್ ಕ್ಸೇವಿಯರ್ ಐಸಾಕ್ ಮತ್ತು ಎಚ್‌ಎಎಲ್ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಸಿ.ಬಿ. ಅನಂತ ಕೃಷ್ಣನ್ ಅವರು ಏರೋ ಇಂಡಿಯಾದಲ್ಲಿ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ.

ಈಗಾಗಲೇ ‘ತೇಜಸ್’ ಯುದ್ಧ ವಿಮಾನಗಳನ್ನು ಖರೀದಿಸಲು ಅರ್ಜೆಂಟಿನಾ ಆಸಕ್ತಿ ತೋರಿಸಿದೆ.

ಬಿಇಎಲ್, ಐಐಎಸ್ಸಿ ಒಪ್ಪಂದ



ಬೆಂಗಳೂರು: ಕೃತಕ ಬುದ್ಧಿಮತ್ತೆ ಮತ್ತು ಮಷಿನ್ ಲರ್ನಿಂಗ್ ಕ್ಷೇತ್ರಗಳಲ್ಲಿ ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಲು ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) ಮತ್ತು ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್ಸಿ) ಒಪ್ಪಂದ ಮಾಡಿಕೊಂಡಿವೆ.

ಏರೋ ಇಂಡಿಯಾದಲ್ಲಿ ಈ ಎರಡು ಪ್ರತಿಷ್ಠಿತ ಸಂಸ್ಥೆಗಳು ಒಪ್ಪಂದಕ್ಕೆ ಸಹಿ ಹಾಕಿವೆ. ವಿವಿಧ ಉಪಕರಣಗಳನ್ನು ತಯಾರಿಸುವಲ್ಲಿ ಈ ಎರಡು ಸಂಸ್ಥೆಗಳು ಸಹಭಾಗಿತ್ವ ಹೊಂದಲಿವೆ. ಐಐಎಸ್ಸಿ, ಕೃತಕ ಬುದ್ಧಿಮತ್ತೆ ಮತ್ತು ಮಷಿನ್ ಲರ್ನಿಂಗ್ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ವಿಶೇಷ ನೆರವನ್ನು ಬಿಇಎಲ್‌ಗೆ ಒದಗಿಸಲಿದೆ.

ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಮತ್ತು ಬಿಇಎಲ್ ಎಂಜಿನಿಯರ್‌ಗಳಿಗೆ ತರಬೇತಿ ನೀಡಲು ಈ ಒಪ್ಪಂದದಿಂದ ಅನುಕೂಲವಾಗಲಿದೆ.

ಏರೋ ಇಂಡಿಯಾ ಪ್ರದರ್ಶನಕ್ಕೆ ಬಂದವರ ಪ್ರತಿಕ್ರಿಯೆಗಳು



ತೇಜಸ್, ಫೆ–15, ಸುಖೊಯ್, ಸೂರ್ಯಕಿರಣ ಯುದ್ಧ ವಿಮಾನಗಳನ್ನು ನೋಡಿ ಬಹಳಷ್ಟು ಖುಷಿಯಾಗಿದೆ. ವಿಶ್ವದ ಮುಂದೆ ಭಾರತೀಯ ಸೇನೆಯ ಶಕ್ತಿಯನ್ನು ಪ್ರದರ್ಶನ ಮಾಡುತ್ತಿರುವುದು ಹೆಮ್ಮೆಯ ವಿಚಾರ.

ಜಾಹ್ನವಿ, ಮುಂಬೈ ನಿವಾಸಿ



ಈ ಬಾರಿ ಏರೋ ಇಂಡಿಯಾ ಪ್ರದರ್ಶನ ಬಹಳ ಶಿಸ್ತುಬದ್ಧವಾಗಿ ಆಯೋಜಿಸಲಾಗಿದೆ. ಎಚ್‌ಎಎಲ್ ನಿರ್ಮಿತ ಸಾರಂಗ್ ಹೆಲಿಕಾಪ್ಟರ್, ತೇಜಸ್, ಸೂರ್ಯಕಿರಣ ವಿಮಾನಗಳ ಪ್ರದರ್ಶನ ಮೈನವೇರಿಳಿಸಿತು.

ತೆನ್ಜಿನ್, ಅರುಣಾಚಲಪ್ರದೇಶ ನಿವಾಸಿ



ಸಾರಂಗ್ ಮತ್ತು ಸೂರ್ಯಕಿರಣ ವಿಮಾನಗಳು ನನಗೆ ತುಂಬಾ ಇಷ್ಟವಾಗಿದ್ದು, ಅವುಗಳನ್ನು ನೋಡಲೆಂದೇ ಪ್ರತಿ ವರ್ಷ ಏರೋ ಇಂಡಿಯಾ ಪ್ರದರ್ಶನಕ್ಕೆ ಬರುತ್ತಿದ್ದೇನೆ.

ಪಿಯೂಷಿಣಿ, ಯಲಹಂಕ ನಿವಾಸಿ



ಮೊದಲ ಬಾರಿಗೆ ಏರೋ ಇಂಡಿಯಾ ಪ್ರದರ್ಶನವನ್ನು ವೀಕ್ಷಿಸಲು ಹಾಸನದಿಂದ ಬಂದಿದ್ದೇನೆ. ಇದೊಂದು ಅದ್ಭುತ ಅನುಭವ ನೀಡಿದೆ. ಇದನ್ನೆಲ್ಲಾ ನೋಡಿದರೆ ಭಾರತ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರವಲ್ಲ, ಅಭಿವೃದ್ಧಿಯಾದ ರಾಷ್ಟ್ರ ಎಂದು ಹೇಳಬಹುದು.

ಸಹನಾ, ಎಂಜಿನಿಯರಿಂಗ್ ವಿದ್ಯಾರ್ಥಿನಿ, ಹಾಸನ



ಏರೋ ಇಂಡಿಯಾ ಪ್ರದರ್ಶನಕ್ಕೆ ಪ್ರಥಮ ಬಾರಿ ಬಂದಿದ್ದು, ಪ್ರಪಂಚದ ಮುಂದೆ ಭಾರತೀಯ ಸೇನೆಯ ಶಕ್ತಿ ಪ್ರದರ್ಶನ ಮಾಡಲಾಗುತ್ತಿದೆ. ಫೈಟರ್ ಜೆಟ್, ಹೆಲಿಕಾಪ್ಟರ್, ಬೇರೆ ಬೇರೆ ರೀತಿಯ ಹಲವಾರು ಯುದ್ಧ ವಿಮಾನಗಳನ್ನು ನೋಡಿದ್ದು ಬಹಳ ಖುಷಿ ನೀಡಿದೆ.

ಅನುಷಾ ಹಾಸನಸ್ವಾಮಿ, ಪ್ರೆಸ್ಟೀಜ್ ಫಾಲ್ಕನ್ ಸಿಟಿ ನಿವಾಸಿ



ಸೂರ್ಯಕಿರಣ, ತೇಜಸ್ ಯುದ್ಧ ವಿಮಾನಗಳ ಸಾಹಸ ಬಹಳ ಇಷ್ಟವಾಯಿತು. ಆದರೆ, ಯಾವ ವಿಮಾನ ಹಾರಾಡುತ್ತಿದೆ, ಅದರ ಸಾಮರ್ಥ್ಯವೇನು ಎಂಬ ಮಾಹಿತಿ ಫಲಕಗಳನ್ನು ಅಳವಡಿಸಬೇಕಿತ್ತು.

ಅಪೂರ್ವಾ, ಆರ್‌.ಟಿ. ನಗರ ನಿವಾಸಿ



ಇದೇ ಮೊದಲ ಬಾರಿ ವೈಮಾನಿಕ ಪ್ರದರ್ಶನ ವೀಕ್ಷಣೆಗೆ ಬಂದಿದ್ದೇನೆ. ವಿಮಾನಗಳ ಕಸರತ್ತು ಅಚ್ಚರಿ ಎನಿಸಿತು. ದೇಶದ ರಕ್ಷಣಾ ಕ್ಷೇತ್ರ ಇಷ್ಟೊಂದು ದೊಡ್ಡದಾಗಿ ಬೆಳೆದಿರುವುದನ್ನು ನೋಡಿದರೆ ಹೆಮ್ಮೆ ಎನಿಸುತ್ತದೆ.

ಬಸವಯೋಗಿ ಸ್ವಾಮೀಜಿ, ಬಸವ ಗಂಗೋತ್ರಿ ಆಶ್ರಮ, ಕುಂಬಳಗೋಡು

ಯುದ್ಧ ವಿಮಾನಗಳ ಹಾರಾಟದ ಹಿಂದಿನ ಕಥೆ ಬಿಚ್ಚಿಟ್ಟ ತಂಡ

‘ರೋಚಕ ಪ್ರದರ್ಶನ: ಕ್ಷಣ ಕ್ಷಣವೂ ಸವಾಲು’

• ಸಚ್ಚಿದಾನಂದ ಕುರಗುಂದ

ಬೆಂಗಳೂರು: ‘ಪ್ರತಿ ಕ್ಷಣ ನಮಗೆ ಸವಾಲು. ಮೈಯೆಲ್ಲಾ ಕಣ್ಣಾಗಿರಬೇಕು. ಎಚ್ಚರ ತಪ್ಪುತ್ತೇವೆ ಎನ್ನುವ ಮನಃಸ್ಥಿತಿಯಲ್ಲಿ ನಾವು ಇರಲೇಬಾರದು...’

’ಏರೋ ಇಂಡಿಯಾ–2023’ರಲ್ಲಿ ಏರೋ ಶೋ ಅನ್ನು ಪ್ರತಿ ದಿನವೂ ಕರಾರುವಾಕ್ಕಾಗಿ ಆಯೋಜಿಸಿ ಯಶಸ್ವಿಗೊಳಿಸುತ್ತಿರುವ ಹಾರಾಟ ಪ್ರದರ್ಶನ ತಂಡದ ಮನದಾಳದ ಮಾತುಗಳಿವು.

2019ರ ಫೆ.19ರಂದು ಯಲಹಂಕ ವಾಯುನೆಲೆಯಿಂದ ತಾಲೀಮು ಆರಂಭಿಸಿದ್ದ ‘ಸೂರ್ಯಕಿರಣ’ ತಂಡದ ಎರಡು ವಿಮಾನಗಳು ಪರಸ್ಪರ ಡಿಕ್ಕಿ ಹೊಡೆದು, ವಾಯುನೆಲೆಯಿಂದ 17 ಕಿ.ಮೀ. ದೂರದಲ್ಲಿರುವ ಇಸ್ರೋ ಲೇಔಟ್‌ನಲ್ಲಿ ಬಿದ್ದಿದ್ದವು. ಪೈಲಟ್ ಆಗಿದ್ದ ವಿಂಗ್ ಕಮಾಂಡರ್ ಸಾಹಿಲ್ ಗಾಂಧಿ ಮೃತಪಟ್ಟಿದ್ದರು.

ಈ ಘಟನೆ ಬಳಿಕ, ಅವಘಡಗಳು ಸಂಭವಿಸದಂತೆ ವಾಯುಪಡೆಯ ತಂಡ ಮತ್ತಷ್ಟು ಕ್ರಮಬದ್ಧ ಯೋಜನೆಗಳನ್ನು ರೂಪಿಸಿದೆ. ಇದರಿಂದಾಗಿಯೇ ವಿಮಾನಗಳು ಕಡಿಮೆ ಅಂತರದಲ್ಲಿ ಅತಿ ವೇಗದಲ್ಲಿ ಮತ್ತು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಸಾಗುವ ಸಾಹಸ ಮತ್ತು ರೋಮಾಂಚನಕಾರಿ ಪ್ರದರ್ಶನಗಳನ್ನು ಯಶಸ್ವಿಯಾಗಿ ಕೈಗೊಳ್ಳುತ್ತಿದೆ.

‘ವೈಮಾನಿಕ ಪ್ರದರ್ಶನದಲ್ಲಿ ಎಲ್ಲವೂ ಸವಾಲುಗಳಿಂದ ಕೂಡಿರುತ್ತವೆ. ಬಹಳ ಜಾಗರೂಕತೆ ವಹಿಸಬೇಕು. ಯಾವ ಸಂಗತಿಯನ್ನೂ ನಿರ್ಲಕ್ಷಿಸುವಂತಿಲ್ಲ. ಸಮಯ, ಸ್ಥಳ, ಗುರಿ ಮತ್ತು ವಿಮಾನಗಳ ನಡುವಣ ಅಂತರ, ಪೈಲಟ್‌ಗಳ ಜತೆ ಸಂಪರ್ಕ ಮುಂತಾದ ಅಂಶಗಳು ಮುಖ್ಯವಾಗುತ್ತವೆ. ಹಕ್ಕಿಗಳ ಬಗ್ಗೆಯೂ ನಿಗಾವಹಿಸುತ್ತೇವೆ’ ಎಂದು ಸ್ಕ್ವಾಡ್ರನ್ ಲೀಡರ್ ಸೂರಜ್ ಕುಲಕರ್ಣಿ ತಿಳಿಸಿದರು.

‘15 ದಿನಗಳ ಮುನ್ನವೇ ಬೆಂಗಳೂರಿನಲ್ಲಿ ತಾಲೀಮು ಆರಂಭವಾಗಿತ್ತು. ಇದಕ್ಕಿಂತ ಮೊದಲು ಆಯಾ ತಂಡಗಳು ತಮ್ಮ ವಾಯುನೆಲೆಗಳಲ್ಲಿ ಅಭ್ಯಾಸ ಕೈಗೊಂಡಿದ್ದವು. ಇದರಿಂದಾಗಿ, ಪೈಲಟ್‌ಗಳ ನಡುವೆ ಹೆಚ್ಚು ಸಮನ್ವಯ ಸಾಧಿಸಲು ಅನುಕೂಲವಾಗುತ್ತದೆ. ಎಲ್ಲರೂ ಅತ್ಯುತ್ತಮ ತರಬೇತಿ ಮತ್ತು ಪರಿಣತಿ ಪಡೆದಿದ್ದಾರೆ. ವಿದೇಶಿ ವಿಮಾನಗಳ ಹಾರಾಟದ ಬಗ್ಗೆ ಅಲ್ಲಿನ ತಂಡಗಳ ಮಾಹಿತಿ ಪಡೆದು ಪೈಲಟ್‌ಗಳ ನಡುವೆ ಸಮನ್ವಯ ಸಾಧಿಸುತ್ತೇವೆ’ ಎಂದು ವಿವರಿಸಿದರು.


ಸ್ಕ್ವಾಡ್ರನ್ ಲೀಡರ್ ಸೂರಜ್ ಕುಲಕರ್ಣಿ


ಕನ್ನಡದಲ್ಲಿ ವೀಕ್ಷಕ ವಿವರ ನೀಡುತ್ತಿರುವ ಐಶ್ವರ್ಯ ಮತ್ತು ಸಿ. ವಾಸು

ವೀಕ್ಷಕ ವಿವರಣೆಗೂ ಎರಡು ತಿಂಗಳ ಸಿದ್ಧತೆ

ವೈಮಾನಿಕ ಹಾರಾಟ ಪ್ರದರ್ಶನದಲ್ಲಿ ಯುದ್ಧ ವಿಮಾನಗಳ ಕುರಿತಾದ ವೀಕ್ಷಕ ವಿವರಣೆಯೂ ಆಕರ್ಷಕ. ಈ ಬಾರಿಯೂ ಇಂಗ್ಲಿಷ್, ಹಿಂದಿ, ಕನ್ನಡದಲ್ಲಿ ವಾಯು ಪಡೆಯ ಅಧಿಕಾರಿಗಳು ವೀಕ್ಷಕ ವಿವರಣೆ ನೀಡಿದರು.

ಭಾರತೀಯ ವಾಯುಪಡೆಯ ವಿವಿಧ ವಿಭಾಗಗಳ ಅಧಿಕಾರಿಗಳು ಮತ್ತು ಸಿಬ್ಬಂದಿ ವೀಕ್ಷಕ ವಿವರಣೆ ನೀಡುವ ತಂಡದಲ್ಲಿದ್ದಾರೆ. ಪೈಲಟ್‌ಗಳ ಜತೆ ಸಮಾಲೋಚನೆ ನಡೆಸಿ ವೀಕ್ಷಕ ವಿವರಣೆಯನ್ನು ಸಿದ್ಧಪಡಿಸಲಾಗುತ್ತದೆ.

‘ಎರಡು ತಿಂಗಳ ಮೊದಲು ಸಿದ್ಧತೆಗಳು ಆರಂಭವಾಗುತ್ತವೆ. ಈ ಪ್ರದರ್ಶನದಲ್ಲಿ ವೀಕ್ಷಕ ವಿವರಣೆಯೂ ಅತಿ ಮುಖ್ಯವಾಗುತ್ತದೆ. ಯುವಕರಿಗೆ ಉತ್ತೇಜನ ನೀಡುವಂತಿರಬೇಕು. ಯುವಕರು ಸೇನೆ, ವಾಯು ಪಡೆ ಅಥವಾ ನೌಕಾಪಡೆ ಸೇರಲು ಪ್ರೋತ್ಸಾಹ ನೀಡುವ ಆಶಯವೂ ಇದು ಹೊಂದಿದೆ’ ಎಂದು ಪೈಲಟ್ ಪ್ರಾಂಜಲ್ ಸಿಂಗ್ ವಿವರಿಸಿದರು.

ಕನ್ನಡದಲ್ಲೇ ವೀಕ್ಷಕ ವಿವರಣೆ ನೀಡಿದ ಬೆಂಗಳೂರಿನ ಸ್ಕ್ವಾಡ್ರನ್ ಲೀಡರ್ ಐಶ್ವರ್ಯ ಅವರು ತಮಗೆ ಈ ಅವಕಾಶ ದೊರೆತಿದ್ದಕ್ಕೆ ಸಂತಸ ವ್ಯಕ್ತಪಡಿಸಿದರು.

‘ಪ್ರೇಕ್ಷಕರ ಜತೆ ಸಂವಾದ ನಡೆಸುವುದು ಸಂತೋಷದ ಸಂಗತಿ. ನಾನು ಚಿಕ್ಕವಳಿದ್ದಾಗ ಇಲ್ಲಿಗೆ ಬಂದಿದ್ದೆ. ಈಗ ಯುದ್ಧ ವಿಮಾನಗಳ ಬಗ್ಗೆ ನಮ್ಮ ಭಾಷೆಯಲ್ಲೇ ವಿವರ ನೀಡುವ ಅವಕಾಶವೇ ದೊರೆತಿದೆ’ ಎಂದು ಹರ್ಷ ವ್ಯಕ್ತಪಡಿಸಿದರು.

ವೀಕ್ಷಕ ವಿವರಣೆಯ ತಂಡದ ಇನ್ನೊಬ್ಬ ಸದಸ್ಯ ಬೆಂಗಳೂರಿನ ಸಿ. ವಾಸು, ‘ಬೆಂಗಳೂರಿನಲ್ಲಿ ಏರೋ ಇಂಡಿಯಾ ನಡೆಯುತ್ತಿರುವುದು ಹೆಮ್ಮೆಯ ವಿಷಯ’ ಎಂದರು.

ಮಾನವರಹಿತ ಕಾಪ್ಟರ್ ಅಭಿವೃದ್ಧಿ

ಬೆಂಗಳೂರು: ವಿವಿಧ ಕಾರ್ಯಾಚರಣೆಗಳಿಗೆ ಮತ್ತು ಸರಕು ಸಾಗಣೆಕೆಗೆ ನೆರವಾಗುವ ಮಾನವರಹಿತ ಹೆಲಿಕಾಪ್ಟರ್‌ಗಳನ್ನು ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್(ಎಚ್‌ಎಎಲ್) ಅಭಿವೃದ್ಧಿಪಡಿಸುತ್ತಿದೆ.

ಈಗಾಗಲೇ ಈ ಹೆಲಿಕಾಪ್ಟರ್‌ನ ವಿನ್ಯಾಸವನ್ನು ರೂಪಿಸಲಾಗಿದೆ. 4.5 ಗಂಟೆಗಳ ಕಾಲ ಹಾರಾಟ ಮತ್ತು 80 ಕೆ.ಜಿ. ತೂಕ ಕೊಂಡೊಯ್ಯುವ ಸಾಮರ್ಥ್ಯವನ್ನು ಇದು ಹೊಂದಲಿದೆ. ಪ್ರತಿ ಗಂಟೆಗೆ 150 ಕಿ.ಮೀ ವೇಗದಲ್ಲಿ ಸಾಗುವ ರೀತಿಯಲ್ಲಿ ಈ ಹೆಲಿಕಾಪ್ಟರ್ ಅನ್ನು ತಯಾರಿಸಲಾಗುತ್ತಿದೆ. ಜತೆಗೆ, ಹಗಲು ಮತ್ತು ರಾತ್ರಿ ಸಂದರ್ಭದಲ್ಲಿ ಬಳಸುವ ಕ್ಯಾಮೆರಾ ಅವನ್ನು ಅಳವಡಿಸಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹೈದರಾಬಾದ್‌ನ ನವೋದ್ಯಮ ಕಂಪನಿ ಹಿಂದೂಸ್ತಾನ್ ಯುಎವಿ ಸಿಸ್ಟಮ್ಸ್ ಸಹ ಮಾನವರಹಿತ ಹೆಲಿಕಾಪ್ಟರ್ ಅಭಿವೃದ್ಧಿಪಡಿಸುತ್ತಿದೆ.

‘ಇದು ಎಲ್ಲ ಹವಾಮಾನ ಪರಿಸ್ಥಿತಿಯಲ್ಲಿ ಕಾರ್ಯಾಚರಣೆ ಮಾಡುವ ಸಾಮರ್ಥ್ಯ ಹೊಂದಿದೆ. ಕ್ಷಿಪಣಿಗಳನ್ನು ಉಡಾವಣೆಗೆ, ಡ್ರೋನ್‌ಗಳನ್ನು ಹೊಡೆದುರುಳಿಸಲು, ಗಡಿ ಪ್ರದೇಶಗಳಲ್ಲಿ ನಿಗಾವಹಿಸಲು ಈ ಹೆಲಿಕಾಪ್ಟರ್ ಅನ್ನು ಬಳಸಬಹುದು’ ಎಂದು ಕಂಪನಿಯ ನಿರ್ದೇಶಕ ರಾಮದಾಸ್ ವಿವರಿಸಿದರು.

‘ಸತತ ನಾಲ್ಕು ಗಂಟೆಗಳ ಕಾಲ ಹಾರಾಡುವ ಸಾಮರ್ಥ್ಯವನ್ನು ಇದು ಹೊಂದಿದೆ. 60 ಕೆ.ಜಿ. ತೂಕವನ್ನು ಆರು ಸಾವಿರ ಮೀಟರ್ ಎತ್ತರದವರೆಗೆ ಹಾರಾಡಲಿದೆ’ ಎಂದು ತಿಳಿಸಿದರು.


ರೋಮಾಂಚನಗೊಳಿಸಿದ ಭಾರತೀಯ ವಾಯುಪಡೆಯ ಸಾರಂಗ್ ಹೆಲಿಕಾಪ್ಟರ್‌ಗಳ ಪ್ರದರ್ಶನ –ಪ್ರಜಾವಾಣಿ ಚಿತ್ರ

ಅನಧಿಕೃತ ಡ್ರೋನ್‌ಗಳನ್ನು ನಿಸ್ತೇಜಗೊಳಿಸುವ ‘ಚಾಲೆಂಜರ್’

• ಖಲೀಲಅಹ್ಮದ ಶೇಖ

ಬೆಂಗಳೂರು: ರಕ್ಷಣಾ ಇಲಾಖೆಯ ಸುತ್ತಮುತ್ತಲಿನ 2 ಕಿ.ಮೀ. ಪರಿಧಿಯಲ್ಲಿ ಹಾರಾಡುವ ಅನಧಿಕೃತ ಡ್ರೋನ್ ಹೊಡೆದುರುಳಿಸುವ ಉದ್ದೇಶದಿಂದ ‘ಆ್ಯಂಟಿ ಡ್ರೋನ್ ಸಿಸ್ಟಮ್ ಚಾಲೆಂಜರ್–3 ಮತ್ತು ಚಾಲೆಂಜರ್–6’ ಎಂಬ ಹೊಸ ತಂತ್ರಜ್ಞಾನ ಅಭಿವೃದ್ಧಿಪಡಿಸಲಾಗಿದೆ.

‘ಚೆನ್ನೈನ ಹಿಲ್ಡ್ ಡಿಫೆನ್ಸ್ ಆ್ಯಂಡ್ ಏರೋಸ್ಪೇಸ್ ಎಂಬ ಖಾಸಗಿ ಸಂಸ್ಥೆ ಇದನ್ನು ಅಭಿವೃದ್ಧಿಪಡಿಸಿದೆ. ಯಲಹಂಕದ ವಾಯುನೆಲೆಯಲ್ಲಿ ನಡೆಯುತ್ತಿರುವ ‘ಏರೋ ಇಂಡಿಯಾ’ ಪ್ರದರ್ಶನದಲ್ಲಿ ಈ ಡ್ರೋನ್ ಜಾಮರ್ ನೋಡಬಹುದು.

‘ಭದ್ರತಾ ದೃಷ್ಟಿಯಿಂದ, ವಿಪತ್ತು ಪರಿಹಾರ, ಕಾನೂನು ಮತ್ತು ಸುವ್ಯವಸ್ಥೆಯ ಜಾರಿ, ವಿಮಾನ ನಿಲ್ದಾಣ ಮತ್ತು ವಿಐಪಿ ಭದ್ರತೆ ಸೇರಿದಂತೆ ಹಲವು ಉದ್ದೇಶಗಳಿಗೆ ಈ ಡ್ರೋನ್ ಜಾಮರ್ ವ್ಯವಸ್ಥೆ ಸಹಕಾರಿಯಾಗಲಿದೆ. ಇದನ್ನು ರಕ್ಷಣಾ ಇಲಾಖೆಗೆ ಹಸ್ತಾಂತರಿಸುವ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ’ ಎಂದು ಸಂಸ್ಥೆಯ ಮಾರಾಟ ವ್ಯವಸ್ಥಾಪಕ ಕಾರ್ತಿಕೇಯನ್ ತಿಳಿಸಿದರು.

5.8 ಕೆ.ಜಿ. ತೂಕದ ಆಂಟಿ ಡ್ರೋನ್ ಸಿಸ್ಟಮ್ ಚಾಲೆಂಜರ್–3 ಜಾಮರ್ 30 ನಿಮಿಷ ಚಾರ್ಜ್ ಮಾಡಿದರೆ 8 ಗಂಟೆವರೆಗೂ ಕೆಲಸ ಮಾಡುತ್ತದೆ. ರಕ್ಷಣಾ ಇಲಾಖೆಯ ಪರಧಿಯ 2 ಕಿ.ಮೀ. ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಹಾರಾಡುವ ಶತ್ರುಗಳ ಡ್ರೋನ್‌ಗಳನ್ನು ಪತ್ತೆಹಚ್ಚಿ ಮಾಹಿತಿ ನೀಡುತ್ತದೆ. 500 ಮೀಟರ್ ದೂರದಿಂದಲೇ ಅದನ್ನು ಹೊಡೆದುರುಳಿಸುವ ಸಾಮರ್ಥ್ಯ ಹೊಂದಿದೆ. ಇದರ ಬೆಲೆ ₹20 ಲಕ್ಷ.

6.2 ಕೆ.ಜಿ. ತೂಕದ ಆ್ಯಂಟಿ ಡ್ರೋನ್ ಸಿಸ್ಟಮ್ ಚಾಲೆಂಜರ್–6 ಜಾಮರ್ 11 ಬೇರೆ ಬೇರೆ ಬಗೆಯ ತರಂಗಾಂತರಗಳ ಡ್ರೋನ್‌ಗಳನ್ನು ನಿಸ್ತೇಜಗೊಳಿಸುತ್ತದೆ. ಅದರ ಕ್ಯಾಮೆರಾ ಕಾರ್ಯನಿರ್ವಹಿಸದಂತೆ ತಡೆಯುತ್ತದೆ. ಸಂದೇಶ ರವಾನಿಸದಂತೆ ಮಾಡಿ, ಜಿಪಿಎಸ್ ಸಂಪರ್ಕವನ್ನು ಕಡಿತಗೊಳಿಸುತ್ತದೆ. 4 ಗಂಟೆ ಜಾರ್ಜ್ ಮಾಡಿದರೆ 1.5 ಗಂಟೆ ಕಾರ್ಯನಿರ್ವಹಿಸುತ್ತದೆ. ಇದರ ಬೆಲೆ ₹25 ಲಕ್ಷ ಎಂದು ತಿಳಿಸಿದರು.



ಆಂಟಿ ಡ್ರೋನ್ ಸಿಸ್ಟಮ್ ಚಾಲೆಂಜರ್–6 ಡ್ರೋನ್ ಜಾಮರ್

ಸರಕು ಹೊತ್ತು 300 ಕಿ.ಮೀ ಸಾಗಬಲ್ಲ ಡ್ರೋನ್

ಏರೋ ಇಂಡಿಯಾದಲ್ಲಿ ಡ್ರೋನ್‌ಗಳ ಸಂತೆ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏರೋ ಇಂಡಿಯಾ ವೈಮಾನಿಕ ಪ್ರದರ್ಶನದಲ್ಲಿ ಡ್ರೋನ್‌ಗಳ ಸಂತೆಯೇ ಏರ್ಪಟ್ಟಿದೆ. ಸರಕು ಸಾಗಣೆ ಸೇರಿದಂತೆ ವಿವಿಧ ಕಾರ್ಯಗಳಿಗೆ ತರಹೇವಾರಿ ಡ್ರೋನ್‌ಗಳನ್ನು ಪ್ರದರ್ಶನಕ್ಕೆ ಇಡಲಾಗಿದ್ದು, 300 ಕಿಲೋ ಮೀಟರ್ ಸಾಗುವ ಸಾಮರ್ಥ್ಯದ ಡ್ರೋನ್‌ಗಳೂ ಇವೆ.

ರಕ್ಷಣಾ ಇಲಾಖೆಯ ವಿವಿಧ ಸಂಸ್ಥೆಗಳು ಮತ್ತು ಖಾಸಗಿ ಕಂಪನಿಗಳು ಈ ಅತ್ಯಾಧುನಿಕ ಡ್ರೋನ್‌ಗಳನ್ನು ತಯಾರಿಸಿವೆ.

ಆರ್ಟ್‌ಪಾರ್ಕ್ ಕಂಪನಿ ಸದ್ಯ 2.5 ಕೆ.ಜಿ ಹೊರುವ ಬ್ಯಾಟರಿ ಆಧಾರಿತ ಡ್ರೋನ್ ಸಿದ್ಧಪಡಿಸಿ ಏರೋ ಇಂಡಿಯಾ–2023ರಲ್ಲಿ ಪ್ರದರ್ಶನಕ್ಕೆ ಇಟ್ಟಿದೆ. ಗಂಟೆಗೆ ಗರಿಷ್ಠ 100 ಕಿಲೋ ಮೀಟರ್ ವೇಗದಲ್ಲಿ ಸಾಗಲಿದ್ದು, ಮೂರು ಗಂಟೆಗಳ ಕಾಲ ಹಾರಾಡುವ ಸಾಮರ್ಥ್ಯದ ಬ್ಯಾಟರಿ ಹೊಂದಿದೆ.

‘ನಮ್ಮ ಕಂಪನಿಯ ಎರಡನೇ ಅವತರಣಿಕೆಯ ಡ್ರೋನ್ ಕೂಡ ಸಿದ್ಧವಾಗಿದ್ದು, ಗರಿಷ್ಠ 25 ಕೆ.ಜಿ. ತೂಕದ ವಸ್ತುಗಳನ್ನು ಸಾಗಿಸುವ ಸಾಮರ್ಥ್ಯ ಇದಕ್ಕಿದೆ. ಗಂಟೆಗೆ ಗರಿಷ್ಠ 144 ಕಿಲೋ ಮೀಟರ್ ವೇಗದಲ್ಲಿ ಸಂಚರಿಸಲಿದ್ದು, ಸಂಪೂರ್ಣ ಎಲೆಕ್ಟ್ರಿಕ್ ಆಧಾರಿತವಾಗಿದೆ. ಸರಕು ಹೊತ್ತು 300 ಕಿಲೋ ಮೀಟರ್ ಸಾಗಬಲ್ಲ ಸಾಮರ್ಥ್ಯ ಹೊಂದಿದೆ’ ಎಂದು ಕಂಪನಿ ಸಹ ಎಂಜಿನಿಯರ್ ಶರತ್ ರವಿ ತಿಳಿಸಿದರು.

‘ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ತಾಂತ್ರಿಕ ಸಹಕಾರ ಪಡೆದು ಡ್ರೋನ್ ಅಭಿವೃದ್ಧಿಪಡಿಸಲಾಗಿದೆ. ಸ್ಯಾಟಲೈಟ್ ಆಧಾರಿತ ನಿಯಂತ್ರಣ ಕೊಠಡಿಯಲ್ಲೇ ಕುಳಿತು ಈ ಡ್ರೋನ್‌ಗಳನ್ನು ಚಾಲನೆ ಮಾಡಬಹುದಾಗಿದೆ’ ಎಂದರು.

ಈಗ ಎರಡೂ ಡ್ರೋನ್‌ಗಳು ಸಿದ್ಧವಾಗಿದ್ದು, ಖರೀದಿಸಲು ಬೇಡಿಕೆ ಕೂಡ ಬರುತ್ತಿದೆ. ಆದರೆ, ಇನ್ನೂ ಮಾರುಕಟ್ಟೆಗೆ ಲಭ್ಯವಾಗಿಲ್ಲ. ಕೆಲವೇ ತಿಂಗಳಲ್ಲಿ ಮಾರುಕಟ್ಟೆಗೆ ಬರಲಿವೆ ಎಂದು ಹೇಳಿದರು.

ಇದಲ್ಲದೇ, 225 ಕೆ.ಜಿ. ತೂಕದ ವಸ್ತುಗಳನ್ನು ಹೊತ್ತು ಸಾಗುವ ಡ್ರೋನ್ ಕೂಡ ಸಿದ್ಧವಾಗುತ್ತಿದೆ. ಇದನ್ನು ಏರ್ ಆಂಬುಲೆನ್ಸ್ ಮಾದರಿಯಲ್ಲಿ ಮಾರುಕಟ್ಟೆಗೆ ಬಿಡುಗಡೆ ಮಾಡಲು ತಯಾರಿ ನಡೆಸಲಾಗುತ್ತಿದೆ. ಒಬ್ಬ ರೋಗಿಯನ್ನು ಹೊತ್ತು ಆಸ್ಪತ್ರೆಗೆ ಸಾಗಿಸಬಲ್ಲ ಸಾಮರ್ಥ್ಯವನ್ನು ಈ ಡ್ರೋನ್ ಹೊಂದಿದೆ. ಎರಡು ಗಂಟೆಗಳಲ್ಲಿ 300ರಿಂದ 400 ಕಿಲೋ ಮೀಟರ್ ಕ್ರಮಿಸಲಿದ್ದು, ಈ ಡ್ರೋನ್ ಮಾರುಕಟ್ಟೆಗೆ ಬರಲು ಇನ್ನೂ ಕನಿಷ್ಠ ಮೂರು ವರ್ಷ ಬೇಕಾಗಲಿದೆ ಎಂದು ಅವರು ವಿವರಿಸಿದರು.


ಆರ್ಟ್‌ಪಾರ್ಕ್ ಕಂಪನಿಯ ಡ್ರೋನ್

ನ್ಯಾನೋ ತಂತ್ರಜ್ಞಾನ

ನ್ಯಾನೋ ತಂತ್ರಜ್ಞಾನದ ಮೂಲಕ ಅಭಿವೃದ್ಧಿಪಡಿಸಿರುವ ಡ್ರೋನ್ ಅನ್ನು ರಹಸ್ಯ ಕಾರ್ಯಾಚರಣೆಗೂ ಬಳಸಬಹುದಾಗಿದೆ. ಬೆಂಗಳೂರಿನ ‘ನೊಪ್ರೊ’ ಕಂಪನಿ ಇಂತಹ ಡ್ರೋನ್ ಅಭಿವೃದ್ಧಿಪಡಿಸಿದೆ. ನ್ಯಾನೊ ಲೇಪನದ ಡ್ರೋನ್, ಕಪ್ಪು ಬಣ್ಣದಲ್ಲಿದೆ.

ಡ್ರೋನ್‌ನಲ್ಲಿ ‘ಎ.ಕೆ.–47’

‘ಎ.ಕೆ.–47’ ಗನ್ ಅಳವಡಿಸಿ ನಿರ್ದಿಷ್ಟ ಮತ್ತು ನಿಖರವಾದ ಸ್ಥಳದ ಮೇಲೆ ಗುರಿ ಇರಿಸುವ ಡ್ರೋನ್ ಅನ್ನು ಕೇಂದ್ರ ಸರ್ಕಾರಿ ಸ್ವಾಮ್ಯದ ಮ್ಯೂನಿಷನ್ಸ್ ಇಂಡಿಯಾ ಲಿಮಿಟೆಡ್ ಕಂಪನಿ ಅಭಿವೃದ್ಧಿಪಡಿಸಿದೆ.

ಡ್ರೋನ್ ರಕ್ಷಿಸುವ ಪ್ಯಾರಾಚೂಟ್

ಡ್ರೋನ್ ರಕ್ಷಣೆಗೂ ಪ್ಯಾರಾಚೂಟ್ ವ್ಯವಸ್ಥೆಯನ್ನು ರಕ್ಷಣಾ ಇಲಾಖೆಯ ಗ್ಲೈಡರ್ಸ್ ಇಂಡಿಯಾ ಲಿಮಿಟೆಡ್ ತಯಾರಿಸಿದೆ.

ಯಾವುದೇ ಅಪಾಯ ಅಥವಾ ಅನಾಹುತಗಳನ್ನು ಎದುರಿಸಿದ ಸಂದರ್ಭದಲ್ಲಿ ಈ ಪ್ಯಾರಾಚೂಟ್ ರಕ್ಷಣಾ ವ್ಯವಸ್ಥೆಯನ್ನು ಕಲ್ಪಿಸುತ್ತದೆ. ಉತ್ತರ ಪ್ರದೇಶದ ಕಾನ್ಪುರದಲ್ಲಿರುವ ಈ ಕಂಪನಿ ತಯಾರಿಸುತ್ತಿರುವ ಪ್ಯಾರಾಚೂಟ್‌ಗಳು ಈಗಾಗಲೇ 15 ದೇಶಗಳಿಗೆ ರಫ್ತು ಮಾಡಲಾಗುತ್ತಿದೆ.

‘ಭಾರತದಲ್ಲಿ ಡ್ರೋನ್ ರಕ್ಷಣೆಗೆ ಪ್ಯಾರಾಚ್ಯೂಟ್ ತಯಾರಿಸಿರುವುದು ಮೊದಲ ಬಾರಿಯಾಗಿದೆ. ಡ್ರೋನ್‌ಗಳ ಗಾತ್ರ, ತೂಕ ಇತ್ಯಾದಿ ಅಗತ್ಯಗಳನ್ನು ತಯಾರಿ ಸಂದರ್ಭದಲ್ಲಿ ಪರಿಗಣಿಸಲಾಗುತ್ತದೆ. ಈ ಪ್ಯಾರಾಚೂಟ್ ಅನ್ನು ಡ್ರೋನ್‌ನಲ್ಲೇ ಅಳವಡಿಸಲಾಗುತ್ತದೆ’ ಎಂದು ಕಂಪನಿಯ ಮಾರುಕಟ್ಟೆ ಮುಖ್ಯಸ್ಥ ಡಾ. ವಶಿಷ್ಠ ಹೇಳುತ್ತಾರೆ.

‘ಪ್ಯಾರಾಚೂಟ್ ನೆರವಿನಿಂದ ನಿರ್ದಿಷ್ಟ ಸ್ಥಳಕ್ಕೆ ನಿಧಾನವಾಗಿ ಡ್ರೋನ್‌ಗಳನ್ನು ಕೆಳಗೆ ಇಳಿಸಬಹುದು. ಜತೆಗೆ, ಡ್ರೋನ್ ಮೂಲಕ ನಿಗದಿಪಡಿಸಿದ ಸ್ಥಳದಲ್ಲಿ ಬಾಂಬ್ ಸ್ಫೋಟಿಸಲು ಸಹ ಈ ಪ್ಯಾರಾಚ್ಯೂಟ್ ಅನುಕೂಲ ಕಲ್ಪಿಸಲಿದೆ’ ಎಂದು ವಿವರಿಸಿದರು.

ಆಲಮೇಲ: 'ಪ್ರಜಾವಾಣಿ ಅಮೃತ ಸಾಹಿತ್ಯೋತ್ಸವ'ದಲ್ಲಿ ಸಾಹಿತಿಗಳ ಅಭಿಮತ

ಹೊಸ ಚಿಗುರು ಹಳೆಬೇರು 'ಪ್ರಜಾವಾಣಿ'ಯ ಸೊಗಸು

ಪ್ರಜಾವಾಣಿ ವಾರ್ತೆ

ವಿಜಯಪುರ: ಬೆಳಗಿನಿಂದ ಶಾಲಾ ವಿದ್ಯಾರ್ಥಿನಿಯರ ದಣಿವರಿಯದ ಸಂಭ್ರಮ, ಶಾಲಾ ಆವರಣದಲ್ಲಿ ಬಣ್ಣಬಣ್ಣದ ರಂಗೋಲಿ, ಶಿಸ್ತಿನ ಸಾಲುಗಟ್ಟಿದ ಬಾಲೆಯರು ಒಂದೆಡೆ, ಹಿರಿಯ ಸಾಹಿತಿ ಕುಂ.ವೀರಭದ್ರಪ್ಪ, ಕಲಬುರ್ಗಿ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಪ್ರೊ. ಎಚ್‌.ಟಿ. ಪೋತೆ, ಪ್ರೇಮ ಕವಿ ಡಾ. ಸತ್ಯಾನಂದ ಪಾತ್ರೋಟ ಅವರು ಇನ್ನೊಂದೆಡೆ... ಕನ್ನಡ ಸಾಹಿತ್ಯ ಲೋಕ ಮತ್ತು ವಿದ್ಯಾರ್ಥಿಯರ ಜಗತ್ತಿನ ನಡುವೆ ಸಾಹಿತ್ಯ ಸೇತುವಾಗಿದ್ದು 'ಪ್ರಜಾವಾಣಿ' ಅಮೃತ ಸಾಹಿತ್ಯೋತ್ಸವ. ವಿಜಯಪುರ ಜಿಲ್ಲೆಯ ಆಲಮೇಲದ ಬೆರಗು ಪ್ರಕಾಶನದ ಆಶ್ರಯದಲ್ಲಿ ಗುರುವಾರ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

'ಕನ್ನಡಕ್ಕೆ ಒಬ್ಬರೇ ರಾಜಕುಮಾರ್ ಇದ್ದಂತೆ, ಕನ್ನಡ ಪತ್ರಿಕೋದ್ಯಮಕ್ಕೆ ಒಂದೇ 'ಪ್ರಜಾವಾಣಿ' ಎಂದು ಹೇಳುತ್ತಲೇ ಕರ್ನಾಟಕದ ಏಕೀಕರಣದೊಂದಿಗೆ ಕನ್ನಡ ಅಸ್ಮಿತೆಯಂತೆ ಪ್ರಜಾವಾಣಿ ಬೆಳೆದು ಬಂದ ಬಗೆ, ಬೆಳೆಸಿದ ಬಗೆಯನ್ನು ಪ್ರೊ. ಎಚ್‌.ಟಿ. ಪೋತೆ ಹೇಳಿದರು.



ವಿಜಯಪುರ ಜಿಲ್ಲೆಯ ಆಲಮೇಲದ 'ಬೆರಗು' ಪ್ರಕಾಶನದ ಆಶ್ರಯದಲ್ಲಿ ಗುರುವಾರ ಹಮ್ಮಿಕೊಳ್ಳಲಾಗಿದ್ದ 'ಪ್ರಜಾವಾಣಿ' ಅಮೃತ ಸಾಹಿತ್ಯೋತ್ಸವದಲ್ಲಿ ಸಾಹಿತಿ ಕುಂ. ವೀರಭದ್ರಪ್ಪ ಮಾತನಾಡಿದರು. ಸಾಹಿತಿ ಡಾ. ಸತ್ಯಾನಂದ ಪಾತ್ರೋಟ, ಕಲಬುರ್ಗಿಯ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ.ಎಚ್‌.ಟಿ.ಪೋತೆ, 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಚಂದ್ರಶೇಖರ ಶಿವಾಚಾರ್ಯರು, ಕಸಾಪ ವಿಜಯಪುರ ಜಿಲ್ಲಾ ಘಟಕದ ಅಧ್ಯಕ್ಷ ಹಾಸಿಂಪೀರ ವಾಲಿಕಾರ, 'ಬೆರಗು' ಪ್ರಕಾಶನ ಸಂಸ್ಥೆಯ ಅಧ್ಯಕ್ಷೆ ವಿಜಯಲಕ್ಷ್ಮಿ ಆರ್‌.ಕತ್ತಿ ಇದ್ದಾರೆ – ಪ್ರಜಾವಾಣಿ ಚಿತ್ರ

ಪತ್ರಿಕೆಯ ಪರಂಪರೆಯನ್ನು ನೆನೆಯುತ್ತಿರುವಾಗಲೇ, ಭವಿಷ್ಯದ ಓದುಗರಂತೆ 'ಪ್ರಜಾವಾಣಿ', 'ಡೆಕ್ಕನ್‌ಹೆರಾಲ್ಡ್' ಪತ್ರಿಕೆ ಓದಿ, ಪರೀಕ್ಷೆ ಬರೆದು ಬಹುಮಾನ ಪಡೆದ ಸಂಭ್ರಮದಲ್ಲಿದ್ದರು, ಎಳೆಯ ಓದುಗರು.

ಶೇಂಗಾ ಹೋಳಿಗೆಯ ಸವಿಯೊಂದಿಗೆ ಸಿಹಿ ಮೊಸರು, ಶೇಂಗಾಚಟ್ನಿ, ಸಜ್ಜೆರೊಟ್ಟಿಯ ಸವಿ ಸವಿಯುವಾಗಲೇ ಚಪಾತಿ ಬದನೆಕಾಯಿಯೂ ಹೊಟ್ಟೆ ತುಂಬಿಸಿತು. ಮಸಾಲೆಯನ್ನದ ಹಿತವಾದ ಘಮಕ್ಕೆ, ಕಾಳುಮೆಣಸಿನ ಸಾರು ಜೊತೆಗೂಡಿದಾಗ ಊಟ ಸಂಪನ್ನವಾಯಿತು. ಹೊಟ್ಟೆ ತುಂಬಿದರೂ ಹರಟುತ್ತಲೇ ಇದ್ದವರು, ಕವಿಗೋಷ್ಠಿಯ ರಸಗ್ರಹಣಕ್ಕೆ ಸಿದ್ಧರಾದರು.

> 'ದೇಶದ ಎಲ್ಲ ಪತ್ರಿಕೆಗಳು ದೆಹಲಿ ಆಡಳಿತಕ್ಕೆ ಮಾರಾಟವಾಗಿ ಒಂದೊಂದು ಪಕ್ಷದ ಮುಖವಾಣಿ ತಂಡಗಳಂತಾಗಿವೆ. 'ಪ್ರಜಾವಾಣಿ' ಮಾತ್ರ ಇದುವರೆಗೂ ಸ್ವತಂತ್ರವಾಗಿ ಉಳಿದುಕೊಂಡಿದೆ
> –ಕುಂ.ವೀರಭದ್ರಪ್ಪ, ಸಾಹಿತಿ

ವ್ಯವಸ್ಥೆಗೆ ವ್ಯಂಗ್ಯವಾಡುವ ಕವಿತೆ, ವಿಡಂಬನಾತ್ಮಕವಾದ ಚುಟುಕ, ಹೃದಯಸ್ಪರ್ಶಿ ಗಜಲ್, ವ್ಯವಸ್ಥೆಗೆ ಸವಾಲು ಹಾಕುವ ಬಂಡಾಯ ಹೀಗೆ ಬಹುತ್ವದ ಧ್ವನಿಯಾಯಿತು ಕವಿಗೋಷ್ಠಿ. ಸತ್ಯಾನಂದ ಪಾತ್ರೋಟರು 'ಪ್ರಜಾವಾಣಿ' ಬೆಳೆಸಿದ ಸಾಹಿತ್ಯ ಪರಂಪರೆ ಮೆಲುಕು ಹಾಕಿದರು.

'ಪ್ರಜಾವಾಣಿ' ಮತ್ತು ಕನ್ನಡ ಗೋಷ್ಠಿಯಲ್ಲಿ ಕರ್ನಾಟಕತ್ವ, ಕನ್ನಡ ಸಾಹಿತ್ಯ ಪರಂಪರೆ ವಿಷಯಗಳನ್ನಾಧರಿಸಿ, ಜನಪದ ವಿದ್ವಾಂಸರಾದ ಎಂ.ಎಂ.ಪಡಶೆಟ್ಟಿ, ಸೋಮಶೇಖರ ಜಮಶೆಟ್ಟಿ, ಶ್ರೀಶೈಲ ನಾಗರಾಳ, ಸಿ.ಎಂ. ಬಂಡಗಾರ ನಿದರ್ಶನಗಳೊಂದಿಗೆ ಮಾತನಾಡಿದರು.

'ಬೆರಗು' ಪ್ರಕಾಶನದಿಂದ ಹನ್ನೆರಡು ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು. ವೈದ್ಯಕೀಯ, ಸಂಘಟನೆ, ಶಿಕ್ಷಣ, ಕೃಷಿ, ಸಂಗೀತ, ರೈತ ಮಹಿಳೆ, ಸಾಹಿತ್ಯ, ಸಮಾಜಸೇವೆ ಮುಂತಾದ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರನ್ನು ಗೌರವಿಸಲಾಯಿತು. ಪ್ರಜಾವಾಣಿಯ ವಿತರಕರ ಸೇವೆಯನ್ನು ಶ್ಲಾಘಿಸಿ ಸನ್ಮಾನಿಸಲಾಯಿತು. 'ಸಾವಿರದ ಸಂತ ಶ್ರೀ ಸಿದ್ಧೇಶ್ವರರು' ಕಾವ್ಯಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಆಲಮೇಲದ ಹೊರವಲಯದಲ್ಲಿರುವ ವಿಭೂತಿಹಳ್ಳಿಯಲ್ಲಿ ಒಂದು ದಿನದ ಅಮೃತ ಸಾಹಿತ್ಯೋತ್ಸವ ವಿವಿಧ ಅನುಭವಗಳಿಗೆ ಸಾಕ್ಷಿಯಾಯಿತು.

'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಕಸಾಪ ವಿಜಯಪುರ ಜಿಲ್ಲಾ ಘಟಕದ ಅಧ್ಯಕ್ಷ ಹಾಸಿಂಪೀರ ವಾಲಿಕಾರ, ಕೆಪಿಆರ್ ಶುಗರ್ಸ್ ಸ್ಥಾನಿಕ ನಿರ್ದೇಶಕ ಮಲ್ಲಿಕಾರ್ಜುನ ಜೋಗೂರ, ಪಿಆರ್‌ಓ ಪಾರ್ಥಿಬನ್, ಬೆರಗು ಪ್ರಕಾಶನ ಸಂಸ್ಥೆಯ ಅಧ್ಯಕ್ಷೆ ವಿಜಯಲಕ್ಷ್ಮಿ ಅರ್. ಕತ್ತಿ, ಸಂಚಾಲಕ ಡಾ. ರಮೇಶ ಕತ್ತಿ ಉಪಸ್ಥಿತರಿದ್ದರು.



'ಮುಗಿಸಿಬಿಡಬೇಕು' ಎಂಬ ಸಚಿವ ಸಿ.ಎನ್.ಅಶ್ವತ್ಥನಾರಾಯಣ ಅವರ ಅತಿರೇಕದ ಹೇಳಿಕೆಗಾಗಿ ಬಿಜೆಪಿ ಬಾರಿ ಬೆಲೆ ತೆರಲಿದೆ ಎಂದು ನೀವು ಭಾವಿಸುವಿರಾ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಆರೋಪಿ ಸಾವು: ಲಾಕಪ್ ಡೆತ್ ಶಂಕೆ

ಹುಳಿಯಾರು (ತುಮಕೂರು): ಕೆಂಕೆರೆ ಗ್ರಾಮದ ಕಾಳಿಕಾಂಬ ದೇವಸ್ಥಾನದಲ್ಲಿ ಈಚೆಗೆ ನಡೆದಿದ್ದ ₹2.50 ಕೋಟಿ ಮೌಲ್ಯದ ಚಿನ್ನಾಭರಣ ಕಳ್ಳತನ ಪ್ರಕರಣದ ವಿಚಾರಣೆಗೆ ವಶಕ್ಕೆ ಪಡೆಯಲಾಗಿದ್ದ ಯಲ್ಲಪ್ಪ (38) ಎಂಬ ಆರೋಪಿ ಗುರುವಾರ ಹುಳಿಯಾರು ಪೊಲೀಸರ ವಶದಲ್ಲಿದ್ದಾಗ ಮೃತಪಟ್ಟಿದ್ದಾನೆ.

'ಕಳವು ನಡೆದಿದ್ದ ಸ್ಥಳದ ಮಹಜರು ಹಾಗೂ ಚಿನ್ನಾಭರಣ ಮಾರಾಟ ಮಾಡಿದ್ದ ಸ್ಥಳ ಪರಿಶೀಲನೆಗೆ ಕರೆದೊಯ್ಯುವ ವೇಳೆ ಬಾಣಾವರ ಠಾಣೆ ವ್ಯಾಪ್ತಿಯಲ್ಲಿ ಯಲ್ಲಪ್ಪನಿಗೆ ಎದೆನೋವು ಕಾಣಿಸಿಕೊಂಡಿತು. ತಕ್ಷಣ ಆತನನ್ನು ಸಮೀಪದ ಕಣಕಟ್ಟೆ ಆರೋಗ್ಯ ಕೇಂದ್ರಕ್ಕೆ ಕರೆದೊಯ್ಯಲಾಯಿತು. ಆ ವೇಳೆಗಾಗಲೇ ಆತ ಮೃತಪಟ್ಟಿದ್ದ' ಎಂದು ಹುಳಿಯಾರು ಪೊಲೀಸರು ಹೇಳಿದ್ದಾರೆ.

'ಪೊಲೀಸರು ವಿಚಾರಣೆಗೆ ಕರೆದೊಯ್ಯುವ ಸಮಯದಲ್ಲಿ ಆರೋಪಿ ಮೃತಪಟ್ಟಿದ್ದಾನೆ. ಹಾಗಾಗಿ ಪೊಲೀಸರ ವಶದಲ್ಲೇ ಸಾವು ಎಂದು ಈ ಪ್ರಕರಣವನ್ನು ಪರಿಗಣಿಸಲಾಗುವುದು. ಸಾವಿನ ತನಿಖೆಯನ್ನು ಸಿಐಡಿಗೆ ವಹಿಸಲಾಗುವುದು' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಹುಲ್‌ಕುಮಾರ್ ಶಹಾಪೂರವಾಡ್ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಫೆ.3ರಂದು ರಾತ್ರಿ ಕೆಂಕೆರೆ ಕಾಳಿಕಾಂಬ ದೇಗುಲದ ಬಾಗಿಲು ಮುರಿದ ಕಳ್ಳರು 4.5ಕೆ.ಜಿ ಚಿನ್ನಾಭರಣ, 12.25ಕೆ.ಜಿ ಬೆಳ್ಳಿ ಆಭರಣ, ನಗದು, ಬೆಲೆಬಾಳುವ ವಸ್ತು, ಹುಂಡಿಯನ್ನೂ ಹೊತ್ತೊಯ್ದಿದ್ದರು.

ಲಂಚ: ಇಬ್ಬರು ಯೋಜನಾಭಿವೃದ್ಧಿ ಅಧಿಕಾರಿಗಳು ಲೋಕಾಯುಕ್ತ ಬಲೆಗೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಕೃಷಿ ಜಮೀನನ್ನು ನಿವೇಶನವನ್ನಾಗಿ ಪರಿವರ್ತಿಸಲು ಅಗತ್ಯವಿರುವ ತಾಂತ್ರಿಕ ವಿನ್ಯಾಸ ಮತ್ತು ನಕ್ಷೆ ಸಿದ್ಧಪಡಿಸಲು ₹2 ಲಕ್ಷ ಲಂಚ ಪಡೆಯುತ್ತಿದ್ದ ಇಲ್ಲಿನ ನಗರಾಭಿವೃದ್ಧಿ ಯೋಜನೆಯ ಇಬ್ಬರು ಅಧಿಕಾರಿಗಳು ಗುರುವಾರ ಸಂಜೆ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ಇಲ್ಲಿನ ನಿಜಲಿಂಗಪ್ಪ ಬಡಾವಣೆಯಲ್ಲಿರುವ ನಗರ ಮತ್ತು ಗ್ರಾಮಾಂತರ ಯೋಜನೆ ಕಚೇರಿಯಲ್ಲಿರುವ ನಗರ ಯೋಜನಾಧಿಕಾರಿ ಭರತ್‌ಕುಮಾರ್ ಮತ್ತು ಸಹಾಯಕ ನಿರ್ದೇಶಕ ಮಂಜುನಾಥ್ ಅಲಿಯಾಸ್ ಮಂಜು ಕೆ.ಆರ್. ಅವರೇ ಸಿಕ್ಕಿಬಿದ್ದ ಅಧಿಕಾರಿಗಳು.


ಮಂಜು ಕೆ.ಆರ್.


ಭರತ್‌ಕುಮಾರ್

ಸ್ನೇಹಿತರಾದ ಶ್ರೀನಿವಾಸ ಮತ್ತು ಸಂತೋಷ ಅವರು ತಮ್ಮ ಜಮೀನನ್ನು ನಿವೇಶನವನ್ನಾಗಿ ಪರಿವರ್ತಿಸುವುದಕ್ಕೆ ತಾಂತ್ರಿಕ ವಿನ್ಯಾಸ ಮತ್ತು ನಕ್ಷೆ ರಚಿಸಲು ಅರ್ಜಿ ಸಲ್ಲಿಸಿದ್ದರು. ಆ ಕೆಲಸಕ್ಕೆ ಈ ಇಬ್ಬರೂ ಅಧಿಕಾರಿಗಳು ₹ 3 ಲಕ್ಷ ಲಂಚದ ಬೇಡಿಕೆ ಇರಿಸಿ, ಆ ಪೈಕಿ ಈಗಾಗಲೇ ₹ 1 ಲಕ್ಷ ಲಂಚ ಪಡೆದಿದ್ದರು. ಉಳಿದ ₹ 2 ಲಕ್ಷ ಲಂಚ ಪಡೆಯುವಾಗ ಲೋಕಾಯುಕ್ತ ಸಿಬ್ಬಂದಿ ಬಲೆಗೆ ಸಿಲುಕಿದ್ದಾರೆ.

ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಎಂ.ಎಸ್. ಕೌಲಾಪೂರೆ ಸೂಚನೆಯ ಮೇರೆಗೆ ಇನ್‌ಸ್ಪೆಕ್ಟರ್‌ಗಳಾದ ಎಚ್‌.ಎಸ್. ರಾಷ್ಟ್ರಪತಿ, ಆಂಜನೇಯ ಎನ್‌.ಎಚ್ ಅವರು ಕಾರ್ಯಾಚರಣೆ ನಡೆಸಿ, ಇಬ್ಬರನ್ನೂ ವಶಕ್ಕೆ ತೆಗೆದುಕೊಂಡಿದ್ದು, ಕಚೇರಿ ಮತ್ತು ಮನೆಗಳಲ್ಲೂ ಶೋಧ ನಡೆಸಿದ್ದಾರೆ.

ಕಲುಷಿತ ನೀರು: ಮೃತರ ಸಂಖ್ಯೆ 3ಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಯಾದಗಿರಿ/ಗುರುಮಠಕಲ್: ಗುರುಮಠಕಲ್ ತಾಲ್ಲೂಕಿನ ಅನಪುರ ಗ್ರಾಮದಲ್ಲಿ ಕಲುಷಿತ ನೀರು ಕುಡಿದು ನರಸಮ್ಮ ಯಲ್ಲಪ್ಪ (75) ಎಂಬುವರು ಬುಧವಾರ ರಾತ್ರಿ ಯಾದಗಿರಿ ಜಿಲ್ಲಾ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದು, ಇದರೊಂದಿಗೆ ಮೃತರ ಸಂಖ್ಯೆ ಮೂರಕ್ಕೆ ಏರಿಕೆಯಾಗಿದೆ. ಮೂರು ದಿನಗಳಲ್ಲಿ ಗ್ರಾಮದ ಒಟ್ಟು 66 ಮಂದಿ ವಾಂತಿ ಭೇದಿಯಿಂದ ಅಸ್ವಸ್ಥಗೊಂಡಿದ್ದಾರೆ.


ನರಸಮ್ಮ

ಅಸ್ವಸ್ಥ ಗ್ರಾಮಸ್ಥರಿಗೆ ಗ್ರಾಮದ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯದಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿ, ನಂತರ ಆಸ್ಪತ್ರೆಗೆ ದಾಖಲಿಸಲಾಗುತ್ತಿದೆ.

'ಜಿಲ್ಲಾ ಆಸ್ಪತ್ರೆ, ತೆಲಂಗಾಣದ ನಾರಾಯಣಪೇಟ ಮತ್ತು ರಾಯಚೂರಿನ ರಿಮ್ಸ್ ಆಸ್ಪತ್ರೆಯಲ್ಲಿ ಅಸ್ವಸ್ಥರಿಗೆ ಚಿಕಿತ್ಸೆ ಮುಂದುವರೆದಿದೆ. ಈ ಎಲ್ಲದ್ದಕ್ಕೂ ಕಲುಷಿತ ನೀರು ಅಥವಾ ಕಳಪೆ ಆಹಾರ ಕಾರಣವೇ ಎಂಬುದು ಸ್ಪಷ್ಟವಾಗುತ್ತಿಲ್ಲ. ಎಲ್ಲ ಜಲ ಮೂಲಗಳ ಪರಿಶೀಲನೆ ನಡೆಸಿದ್ದೇವೆ' ಎಂದು ಜಿಲ್ಲಾಧಿಕಾರಿ ಸ್ನೇಹಲ್ ಆರ್. 'ಪ್ರಜಾವಾಣಿ'ಗೆ ತಿಳಿಸಿದರು.

'ಅನಪುರಕ್ಕೆ ಪೂರೈಕೆಯಾಗುವನೀರು ಕುಡಿಯಲು ಯೋಗ್ಯವಲ್ಲ ಎಂದು ಯಾದಗಿರಿಯ ಪ್ರಯೋಗಾಲಯವು ವರದಿ ನೀಡಿದೆ. ನೀರಿನಲ್ಲಿ ಯಾವ ಬ್ಯಾಕ್ಟೀರಿಯ ಇದೆ ಎಂಬುದನ್ನು ತಿಳಿಯಲು, ನೀರನ್ನು ರಾಯಚೂರು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ' ಎಂದು ಯಾದಗಿರಿ ತಾಲ್ಲೂಕು ವೈದ್ಯಾಧಿಕಾರಿ ಡಾ.ಹಣಮಂತ ರೆಡ್ಡಿರವರು ಮಾಹಿತಿ ನೀಡಿದರು.

'ಗ್ರಾಮಕ್ಕೆ ಪೂರೈಕೆಯಾಗುವ ಐದೂ ಕೊಳವೆಬಾವಿಗಳ ನೀರಿನ ಶುದ್ಧತೆ ಪರೀಕ್ಷಿಸಲು ಮತ್ತೊಮ್ಮೆ ಪ್ರಯೋಗಾಲಯಕ್ಕೆ ಕಳುಹಿಸಿದ್ದೇವೆ' ಎಂದು ಗ್ರಾಮೀಣ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಸತೀಶ ಗುಡಿಗೆನವರ್ ತಿಳಿಸಿದರು.

ಮೃತರ ಕುಟುಂಬಕ್ಕೆ ಪರಿಹಾರ: ಭರವಸೆ

ಗುರುಮಠಕಲ್ ತಾಲ್ಲೂಕಿನ ಅನಪುರದಲ್ಲಿ ಕಲುಷಿತ ನೀರು ಕುಡಿದು ಮೃತಪಟ್ಟವರ ಕುಟುಂಬಕ್ಕೆ ಪರಿಹಾರ ನೀಡಲಾಗುವುದು ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ವಿಧಾನಸಭೆಯಲ್ಲಿ ಶೂನ್ಯವೇಳೆಯಲ್ಲಿ ಜೆಡಿಎಸ್‌ನ ನಾಗನಗೌಡ ಕಂದಕೂರು ಅವರ ಪ್ರಶ್ನೆಗೆ ಉತ್ತರಿಸಿ, ಎಷ್ಟು ಪರಿಹಾರ ನೀಡಬೇಕು ಎಂಬುದನ್ನು ಮುಖ್ಯಮಂತ್ರಿಯವರ ಜತೆ ಚರ್ಚಿಸಲಾಗುವುದು ಎಂದರು.

'ಈ ಪ್ರಕರಣದಲ್ಲಿ ಮೂವರು ಮೃತಪಟ್ಟಿದ್ದಾರೆ. 58 ಮಂದಿ ಅಸ್ವಸ್ಥಗೊಂಡಿದ್ದು, ಚಿಕಿತ್ಸೆ ಕೊಡಿಸಲಾಗುತ್ತಿದೆ. ಪರಿಸ್ಥಿತಿ ಗಂಭೀರವಾಗಿ ಇರುವವರಿಗೆ ಹೆಚ್ಚಿನ ಚಿಕಿತ್ಸೆ ಕೊಡಿಸಲು ವ್ಯವಸ್ಥೆ ಮಾಡಲಾಗುವುದು' ಎಂದೂ ಜ್ಞಾನೇಂದ್ರ ಭರವಸೆ ನೀಡಿದರು.

ಈ ಘಟನೆಯ ಬಗ್ಗೆ ಸಮಗ್ರ ತನಿಖೆ ನಡೆಸಬೇಕು ಎಂದು ಕಾಂಗ್ರೆಸ್‌ನ ಉಪನಾಯಕ ಯು.ಟಿ. ಖಾದರ್ ಮತ್ತು ಪ್ರಿಯಾಂಕ್ ಖರ್ಗೆ ಆಗ್ರಹಿಸಿದರು.

ವಿಷಯ ಪ್ರಸ್ತಾಪಿಸಿದ ನಾಗನಗೌಡ ಕಂದಕೂರ, 'ಅನಪುರ ಗ್ರಾಮದಲ್ಲಿ ನೀರು ಸೇವಿಸಿ ಮೂವರು ಮೃತಪಟ್ಟಿದ್ದು, ಸಾಕಷ್ಟು ಮಂದಿ ಅಸ್ವಸ್ಥರಾಗಿದ್ದಾರೆ. ತೆಲಂಗಾಣದ ಮೆಹಬೂಬ್ ನಗರ, ನಾರಾಯಣ ಪೇಟೆ ಮತ್ತು ಯಾದಗಿರಿ ಜಿಲ್ಲೆಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ನೀರಿನ ಪೈಪ್‌ನಲ್ಲಿ ಕಲುಷಿತ ನೀರು ಸೇರಿ ಈ ದುರಂತ ನಡೆದಿದೆ. ಸೂಕ್ತ ಪರಿಹಾರ ನೀಡಬೇಕು' ಎಂದರು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಮಾತನಾಡಿ, 'ಅಸ್ವಸ್ಥರಾದವರನ್ನು ತೆಲಂಗಾಣದ ಆಸ್ಪತ್ರೆಗೆ ಒಯ್ಯಲಾಗಿದೆ ಎಂದರೆ, ರಾಜ್ಯದಲ್ಲಿ ಆರೋಗ್ಯ ಕ್ಷೇತ್ರದ ಸ್ಥಿತಿಗತಿ ಹೇಗಿದೆ ಎಂಬುದನ್ನು ಊಹಿಸಬಹುದು' ಎಂದು ಲೇವಡಿ ಮಾಡಿದರು.

ಮರುಳಸಿದ್ದಪ್ಪಗೆ 'ಕಲಬುರ್ಗಿ ಪ್ರಗತಿಪರ ಚಿಂತಕ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಂಡನ್‌ನ ಬಸವ ಅಂತರಾಷ್ಟ್ರೀಯ ಪ್ರತಿಷ್ಠಾನ ನೀಡುವ 'ಡಾ.ಎಂ.ಎಂ. ಕಲಬುರ್ಗಿ ಪ್ರಗತಿಪರ ಚಿಂತಕ ಪ್ರಶಸ್ತಿ'ಗೆ ಸಾಹಿತಿ ಕೆ. ಮರುಳಸಿದ್ದಪ್ಪ ಆಯ್ಕೆಯಾಗಿದ್ದಾರೆ.


ಕೆ.ಮರುಳಸಿದ್ದಪ್ಪ

ಪ್ರಶಸ್ತಿ ₹25 ಸಾವಿರ ನಗದು ಒಳಗೊಂಡಿದೆ. ಇದೇ 23ರಂದು ಇಲ್ಲಿನ ಕರ್ನಾಟಕ ಚಿತ್ರಕಲಾ ಪರಿಷತ್ತಿನ ಆವರಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಹೈಕೋರ್ಟ್ ನಿವೃತ್ತ ನ್ಯಾ. ಎಚ್‌.ಎನ್. ನಾಗಮೋಹನ ದಾಸ್ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಎಸ್. ಮಹಾದೇವಯ್ಯ ತಿಳಿಸಿದ್ದಾರೆ.


ಸಾಣೇಹಳ್ಳಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅವರು ಸಾನ್ನಿಧ್ಯ ವಹಿಸಲಿದ್ದಾರೆ. ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್, ಸಾಹಿತಿ ಎಸ್‌.ಜಿ. ಸಿದ್ಧರಾಮಯ್ಯ, ವಿಮರ್ಶಕಿ ಎಂ.ಎಸ್. ಆಶಾದೇವಿ ಉಪಸ್ಥಿತರಿರಲಿದ್ದಾರೆ.

ಬಲಿಪ ನಾರಾಯಣ ಭಾಗವತ ಇನ್ನಿಲ್ಲ

ಪ್ರಜಾವಾಣಿ ವಾರ್ತೆ

ಮಂಗಳೂರು: ಯಕ್ಷಗಾನದ ತೆಂಕುತಿಟ್ಟಿನ ಹೆಸರಾಂತ ಭಾಗವತ ಹಾಗೂ ಕಂಚಿನ ಕಂಠದ 'ಬಲಿಪ ಶೈಲಿ'ಯ ಹಾಡುಗಾರಿಕೆಗೆ ಖ್ಯಾತರಾಗಿದ್ದ ಬಲಿಪ ನಾರಾಯಣ ಭಾಗವತ (85) ಅವರು ಗುರುವಾರ ನಿಧನರಾದರು.

ಕಾಸರಗೋಡು ಜಿಲ್ಲೆಯ ಪಡ್ರೆ ಗ್ರಾಮದಲ್ಲಿ 1938ರ ಮಾರ್ಚ್ 13ರಂದು ಜನಿಸಿದ್ದ ಬಲಿಪ ನಾರಾಯಣ ಭಾಗವತರು ಬಲಿಪ ಮಾಧವ ಭಟ್ ಮತ್ತು ತಾಯಿ ಸರಸ್ವತಿ ದಂಪತಿಯ ಪುತ್ರ. ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದಿರೆ ತಾಲ್ಲೂಕಿನ ಮಾರೂರು ನೂಯಿಯಲ್ಲಿ ವಾಸವಿದ್ದರು.



'ತೆಂಕುತಿಟ್ಟು ಯಕ್ಷ ರಂಗದ ಭೀಷ್ಮ' ಎಂದೇ ಖ್ಯಾತರಾಗಿದ್ದ ಬಲಿಪರು ಶ್ರೇಷ್ಠ 13ನೇ ವಯಸ್ಸಿಗೇ ಯಕ್ಷಗಾನ ರಂಗವನ್ನು ಪ್ರವೇಶಿಸಿದ್ದರು. ಕಟೀಲು ದುರ್ಗಾಪರಮೇಶ್ವರಿ ಯಕ್ಷಗಾನ ಮೇಳದಲ್ಲಿ ಭಾಗವತರಾಗಿ ಸೇವೆ ಸಲ್ಲಿಸಿದ್ದಾರೆ. 60 ವರ್ಷಗಳಿಗೂ ಹೆಚ್ಚು ಕಾಲ ಯಕ್ಷಗಾನ ಕಲಾ ಸೇವೆಯಲ್ಲಿ ತೊಡಗಿಸಿಕೊಂಡಿದ್ದರು. ಯಕ್ಷಗಾನದ ಪ್ರಸಂಗಗಳ ಪದ್ಯಗಳು ಅವರಿಗೆ ಕಂಠಪಾಠವಾಗಿದ್ದವು. ಅನಗತ್ಯ ರಾಗ ವಿಸ್ತಾರ ಮಾಡದೇ ಯಕ್ಷಗಾನ ಪ್ರಸಂಗದ ಛಂದಸ್ಸು ಹಾಗೂ ತಾಳಕ್ಕೆ ಪೂರಕವಾಗಿ ಶುದ್ಧ ಯಕ್ಷಗಾನೀಯ ಶೈಲಿಯಲ್ಲಿ ಹಾಡುತ್ತಿದ್ದರು. ಐದು ದಿನಗಳ ಕಾಲ ಪ್ರದರ್ಶಿಸುವ 'ದೇವೀ ಮಹಾತ್ಮೆ' ಮಹಾಪ್ರಸಂಗವನ್ನು ರಚಿಸಿದ್ದು, ಯಕ್ಷಗಾನದ ಮಹತ್ವದ ಕೃತಿ ಇದಾಗಿದೆ. 30 ಪ್ರಕಟಿತ ಮತ್ತು 15 ಅಪ್ರಕಟಿತ ಯಕ್ಷಗಾನ ಪ್ರಸಂಗಗಳನ್ನು ರಚಿಸಿದ್ದಾರೆ.

ಬಲಿಪ ಅವರ ಅಜ್ಜ ಬಲಿಪ ನಾರಾಯಣ ಭಾಗವತರೂ ಯಕ್ಷಗಾನದ ಹೆಸರಾಂತ ಭಾಗವತರಾಗಿದ್ದು, 'ಬಲಿಪ ಶೈಲಿ'ಯ ಹಾಡುಗಾರಿಕೆಯನ್ನು ಹುಟ್ಟು ಹಾಕಿದ್ದರು. ಆ ಪರಂಪರೆಯನ್ನು ಮೊಮ್ಮಗನೂ ಮುಂದುವರಿಸಿದ್ದರು.

ಬಲಿಪರಿಗೆ 75 ವರ್ಷ ತುಂಬಿದ ಸಂದರ್ಭದಲ್ಲಿ ಅಭಿಮಾನಿಗಳು ಸೇರಿ ಅವರ ಮನೆಯ ಸಮೀಪ 'ಬಲಿಪ ಅಮೃತ ಭವನ'ವನ್ನು ನಿರ್ಮಿಸುವ ಮೂಲಕ ಗೌರವ ಸಲ್ಲಿಸಿದ್ದರು. ಅವರಿಗೆ ಸಂದ ಪ್ರಶಸ್ತಿ, ಸ್ಮರಣಿಕೆ, ಅವರ ಕೃತಿಗಳ ಸಂಗ್ರಹ ಈ ಭವನದಲ್ಲಿದೆ.

ಅವರ ನಾಲ್ವರ ಪುತ್ರರಲ್ಲಿ ಪ್ರಸಾದ ಭಟ್ ಬಲಿಪ ಕಳೆದ ವರ್ಷ ಅನಾರೋಗ್ಯದಿಂದ ನಿಧನರಾಗಿದ್ದರು. ಬಲಿಪ ಅವರ ಪುತ್ರರಾದ ಮಾಧವ ಬಲಿಪ ಹಿಮ್ಮೇಳ ಕಲಾವಿದರಾಗಿದ್ದಾರೆ. ಶಿವಶಂಕರ ಬಲಿಪರು ಭಾಗವತರಾಗಿದ್ದಾರೆ. ಇನ್ನೊಬ್ಬ ಪುತ್ರ ಶಶಿಧರ್ ಬಲಿಪ ಕೃಷಿಕರಾಗಿದ್ದಾರೆ.

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, 71ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಗೌರವ ಸೇರಿ ಅನೇಕ ಪ್ರಶಸ್ತಿಗಳು ಬಲಿಪ ಅವರಿಗೆ ಸಂದಿವೆ.

ಭರವಸೆಯೇ ಬಜೆಟ್ ಹೂರಣ

ಒಂದನೇ ಪುಟದಿಂದ

ಸ್ವಸಹಾಯ ಸಂಘಗಳಿಗೆ ₹5 ಲಕ್ಷದವರೆಗೆ ಸಾಲ ಮತ್ತು ಅಂಗನವಾಡಿ, ಆಶಾ ಕಾರ್ಯಕರ್ತರ ಗೌರವಧನ ಹೆಚ್ಚಿಸುವ ಸಾಧ್ಯತೆ ಇದೆ.

ಶಾಲಾ ವಿದ್ಯಾರ್ಥಿಗಳಿಗೆ ಸೈಕಲ್ ವಿತರಿಸುವ ಯೋಜನೆ ಮೂರುವರ್ಷದಿಂದ ಸ್ಥಗಿತಗೊಂಡಿತ್ತು. ಅದನ್ನು ಪುನರಾರಂಭಿಸುವುದು ಹಾಗೂ 8 ಸಾವಿರ ಶಾಲಾ ಕಟ್ಟಡಗಳ ದುರಸ್ತಿಗೆ ಅನುದಾನ ನೀಡುವುದು ಬಜೆಟ್‌ನಲ್ಲಿ ಇರಲಿದೆ ಎಂದು ಗೊತ್ತಾಗಿದೆ.

ಮೋದಿ, ಶಾ ಉತ್ತರ ಹೇಳಲಿ: ಸಿದ್ದರಾಮಯ್ಯ

ಒಂದನೇ ಪುಟದಿಂದ...

ಸಂಪುಟದಿಂದ ವಜಾಗೊಳಿಸಿ: 'ಇಂತಹ ಹೇಳಿಕೆ ನೀಡಿದ ಅಶ್ವತ್ಥ ನಾರಾಯಣ ಅವರನ್ನು ತಕ್ಷಣ ಸಚಿವ ಸಂಪುಟದಿಂದ ವಜಾಗೊಳಿಸಬೇಕು' ಎಂದು ಅವರು ರಾಜ್ಯಪಾಲರನ್ನು ಒತ್ತಾಯಿಸಿದರು.

'ನಾನು ದೂರು ಕೊಡಲ್ಲ. ಪೊಲೀಸರೇ ಸ್ವಯಂಪ್ರೇರಿತರಾಗಿ ಸಚಿವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲು ಯೋಗ್ಯವಾದ ಪ್ರಕರಣವಿದು. ಪ್ರಕರಣ ದಾಖಲಿಸಿಕೊಂಡು ಕ್ರಮಕೈಗೊಳ್ಳಲಿ' ಎಂದರು.

'ಸೋಲಿನ ಭಯದಿಂದ ಹೇಳಿಕೆ': ಗದಗ ಜಿಲ್ಲೆಯಲ್ಲಿ ನಡೆದ 'ಪ್ರಜಾಧ್ವನಿ' ಸಮಾವೇಶದಲ್ಲಿ ಮಾತನಾಡಿದ ಅವರು, 'ಬಿಜೆಪಿ ಚುನಾವಣೆಯಲ್ಲಿ ಸೋಲಿನ ಭಯದಲ್ಲಿದೆ. ಹೀಗಾಗಿ, ಪ್ರಚೋದನಕಾರಿ ಹೇಳಿಕೆ ನೀಡುತ್ತಿದೆ' ಎಂದರು.

ಹುಬ್ಬಳ್ಳಿ, ಆಳಂದದಲ್ಲಿ ದೂರು: ಸಚಿವ ಸಿ.ಎನ್.ಅಶ್ವತ್ಥ ನಾರಾಯಣ ವಿರುದ್ಧಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಸಿದ್ದರಾಮಯ್ಯ ಅಭಿಮಾನಿ ಬಳಗದ ಅಧ್ಯಕ್ಷ ಗಿರೀಶ ಗದಿಗೆಪ್ಪಗೌಡರ ಇಲ್ಲಿನ ಗೋಕುಲ ರಸ್ತೆ ಪೊಲೀಸ್ ಠಾಣೆಗೆ ದೂರು ಕೊಟ್ಟಿದ್ದಾರೆ.

'ದೂರು ಕುರಿತು ಮಂಡ್ಯ ಪೊಲೀಸರ ಗಮನಕ್ಕೆ ತರಲಾಗಿದೆ. ಒಂದು ವೇಳೆ ಅಲ್ಲಿ ಪ್ರಕರಣ ದಾಖಲಾಗಿದ್ದರೆ, ಇದನ್ನು ಅಲ್ಲಿಗೆ ವರ್ಗಾಯಿಸಲಾಗುವುದು. ಇಲ್ಲದಿದ್ದರೆ, ಎಫ್‌ಐಆರ್ ಮಾಡಲಾಗುವುದು' ಎಂದು ಪೊಲೀಸರು ತಿಳಿಸಿದ್ದಾರೆ.

ಮಾಜಿ ಶಾಸಕರೂ ಆಗಿರುವ ಕಾಂಗ್ರೆಸ್ ಮುಖಂಡ ಬಿ.ಆರ್.ಪಾಟೀಲ ಅವರು ಕಲಬುರಗಿ ಜಿಲ್ಲೆಯ ಆಳಂದ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ದೂರಿನ ಪ್ರತಿಯನ್ನು ಕಲಬುರಗಿ ಎಸ್‌ಪಿಯವರಿಗೂ ರವಾನಿಸಿದ್ದಾರೆ.

ವಿಷಾದ ವ್ಯಕ್ತಪಡಿಸಿದ ಸಚಿವ

ಒಂದನೇ ಪುಟದಿಂದ...

ಇದಕ್ಕೆ ಪ್ರತಿಕ್ರಿಯಿಸಿದ ಅಶ್ವತ್ಥನಾರಾಯಣ, 'ಮಂಡ್ಯ ಜಿಲ್ಲೆಯಲ್ಲಿ ಸೋಮವಾರ ಕಾರ್ಯಕರ್ತರ ರ‍್ಯಾಲಿ ನಡೆದಿತ್ತು. ಆಗ ಸಿದ್ದರಾಮಯ್ಯ ಅವರನ್ನು ಟಿಪ್ಪು ಜತೆಗೆ ಹೋಲಿಸಿ ಮಾತನಾಡಿದೆ. ಟಿಪ್ಪು ಬಗ್ಗೆ ಸಿದ್ದರಾಮಯ್ಯ ಅವರಿಗೆ ಒಂದು ರೀತಿಯಲ್ಲಿ ಪ್ರೀತಿ ಇದೆ. ನರ ಹಂತಕ ಟಿಪ್ಪುವನ್ನು ವೈಭವೀಕರಿಸಿ ಮಾತನಾಡುತ್ತಾರೆ ಎಂದು ಹೇಳಿದ್ದು ನಿಜ. ಆದರೆ, ಸಿದ್ದರಾಮಯ್ಯ ಬಗ್ಗೆ ಅಗೌರವದಿಂದ ಮಾತನಾಡಿಲ್ಲ. ಮಂಡ್ಯ ಜಿಲ್ಲೆಯ ಆಡು ಭಾಷೆಯಲ್ಲಿ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಸೋಲಿಸಬೇಕು ಎಂದು ಹೇಳಿದ್ದೆ' ಎಂದು ಸಮಜಾಯಿಷಿ ನೀಡಿದರು.

ಯು.ಟಿ.ಖಾದರ್ ಮಾತನಾಡಿ, 'ಸಿದ್ದರಾಮಯ್ಯ ಬಗ್ಗೆ ಮಾತನಾಡುತ್ತಾ, ಟಿಪ್ಪುವನ್ನು ಹೊಡೆದಂತೆ ಹೊಡೆಯಬೇಕು ಎಂದು ಹೇಳಿದ್ದಾರೆ. ಸ್ವಯಂ ಪ್ರೇರಿತವಾಗಿ ದೂರು ದಾಖಲಿಸಿಕೊಂಡು ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

ಅಶ್ವತ್ಥನಾರಾಯಣ ವಿರುದ್ಧ ಕ್ರಮ ಜರುಗಿಸಬೇಕು ಎಂದು ಕಾಂಗ್ರೆಸ್ ಸದಸ್ಯರಾದ ತನ್ವೀರ್ ಸೇಠ್, ಈಶ್ವರ ಖಂಡ್ರೆ, ಪ್ರಿಯಾಂಕ್ ಖರ್ಗೆ, ಕೃಷ್ಣ ಬೈರೇಗೌಡ ಅವರೂ ಆಗ್ರಹಿಸಿದರು.

> ಸಿದ್ದರಾಮಯ್ಯ ನಮ್ಮ ರಾಜಕೀಯ ವಿರೋಧಿ ಮಾತ್ರ, ಶತ್ರು ಅಲ್ಲ. ಅಶ್ವತ್ಥನಾರಾಯಣ ಅವರ ಹೇಳಿಕೆಯನ್ನು ನಾವು ಒಪ್ಪುವುದಿಲ್ಲ.
> **ಸಿ.ಟಿ. ರವಿ,** ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ

> ಸಚಿವ ಅಶ್ವತ್ಥ ನಾರಾಯಣ ಜನರನ್ನು, ಪ್ರಚೋದಿಸುತ್ತಿದ್ದಾರೆ. ಸಿದ್ದರಾಮಯ್ಯ ಅವರ ಒಂದು ಕೂದಲನ್ನು ಕೊಂಕಿಸಲೂ ಸಾಧ್ಯವಿಲ್ಲ.
> **ಬಿ.ಕೆ. ಹರಿಪ್ರಸಾದ್,** ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ

17 ಸಾವಿರ ಮಕ್ಕಳು ಮರಳಿ ಶಾಲೆಗೆ: ಹೈಕೋರ್ಟ್‌ಗೆ ಮಾಹಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಶಾಲೆಯಿಂದ ಹೊರಗುಳಿದ 24 ಸಾವಿರಕ್ಕೂ ಅಧಿಕ ಮಕ್ಕಳಲ್ಲಿ 21,407 ಮಕ್ಕಳನ್ನು ಗುರುತಿಸಲಾಗಿದೆ ಹಾಗೂ 6 ರಿಂದ 14 ವರ್ಷದ 17,266 ಮಕ್ಕಳನ್ನು ಶಾಲೆಗೆ ಮರಳಿ ದಾಖಲಿಸಲಾಗಿದೆ' ಎಂದು ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ಹೊರಗುಳಿದ ಮಕ್ಕಳನ್ನು ಮರಳಿ ಶಾಲೆಗೆ ಕರೆತರುವ ಸಂಬಂಧ ಹೈಕೋರ್ಟ್ 2013ರಲ್ಲಿ ದಾಖಲಿಸಿದ್ದ ಸ್ವಯಂಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ವಕೀಲೆ ಪ್ರತಿಮಾ ಹೊನ್ನಾಪುರ ಈ ಸಂಬಂಧ ನ್ಯಾಯಪೀಠಕ್ಕೆ ಪ್ರಮಾಣ ಪತ್ರ ಸಲ್ಲಿಸಿದರು.

ಪ್ರಮಾಣ ಪತ್ರದಲ್ಲೇನಿದೆ?: 2022ರ ನವೆಂಬರ್ 8ರಂದು ಹೈಕೋರ್ಟ್ ನೀಡಿರುವ ನಿರ್ದೇಶನದಂತೆ ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಶಾಲೆಯಿಂದ ಹೊರಗುಳಿದಿರುವ ಮಕ್ಕಳನ್ನು ಗುರುತಿಸಲು ಸಮೀಕ್ಷೆ ನಡೆಸಲಾಗಿತ್ತು. ಅಲ್ಲಿ ದೊರೆತ ಮಾಹಿತಿ ಅನುಸಾರ ರಾಜ್ಯದಲ್ಲಿ ಒಟ್ಟು 24,308 ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ಅವರಲ್ಲಿ ಇನ್ನೂ 2,901 ಮಕ್ಕಳನ್ನು ಗುರುತಿಸಬೇಕಿದೆ. ವಿಳಾಸ ಮತ್ತು ಫೋನ್ ನಂಬರ್ ತಪ್ಪಾಗಿ ನೀಡಿರುವ ಕಾರಣ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿಯೇ 2,254 ಮಕ್ಕಳನ್ನು ಗುರುತಿಸಲು ಸಾಧ್ಯವಾಗಿಲ್ಲ' ಎಂದು ಪ್ರಮಾಣ ಪತ್ರದಲ್ಲಿ ತಿಳಿಸಲಾಗಿದೆ.

'6ರಿಂದ 14 ವರ್ಷದ 17,266 ಮಕ್ಕಳನ್ನು ಶಾಲೆಗೆ ದಾಖಲಿಸಲಾಗಿದೆ. 1,813 ಮಕ್ಕಳು ವಲಸೆ ಹೋಗಿದ್ದಾರೆ. 259 ಮಕ್ಕಳು ಅನಾರೋಗ್ಯ ಪೀಡಿತರು. ಮುಕ್ತ ಶಾಲೆಗೆ 29, ಮದರಸಾಕ್ಕೆ 120 ಮಕ್ಕಳನ್ನು ದಾಖಲಿಸಲಾಗಿದೆ. 127 ಮಕ್ಕಳು ಸಾವನ್ನಪ್ಪಿದ್ದು, 37 ಮಕ್ಕಳು 6 ವರ್ಷಕ್ಕಿಂತ ಕಡಿಮೆ ವಯೋಮಾನದವರು. 1,756 ಮಕ್ಕಳು 14 ವರ್ಷ ಮೀರಿದವರು' ಎಂದು ವಿವರಿಸಲಾಗಿದೆ.

'3ರಿಂದ 6 ವರ್ಷದ 5,19,369 ಮಕ್ಕಳು ಅಂಗನವಾಡಿ ಕೇಂದ್ರಗಳಿಗೆ ದಾಖಲಾಗಿದ್ದಾರೆ. 51,084 ಮಕ್ಕಳು ಶಾಲೆಗಳಿಗೆ ದಾಖಲಾಗಿದ್ದಾರೆ. 7,747 ಮಕ್ಕಳು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೋಗಿದ್ದಾರೆ. 11,174 ಮಕ್ಕಳು 6 ವರ್ಷ ಮೀರಿದ್ದು, ಅದರಲ್ಲಿ 211 ಮಕ್ಕಳನ್ನು ಎರಡು ಕೇಂದ್ರಗಳಲ್ಲಿ ನೋಂದಣಿ ಮಾಡಿಸಲಾಗಿದೆ. 149 ಮಕ್ಕಳು ಮೃತಪಟ್ಟಿದ್ದಾರೆ. 72 ಮಕ್ಕಳು ಪತ್ತೆಯಾಗಿಲ್ಲ' ಎಂದು ತಿಳಿಸಲಾಗಿದೆ. ನ್ಯಾಯಪೀಠ ವಿಚಾರಣೆಯನ್ನು ಮೂರು ವಾರಗಳ ಕಾಲ ಮುಂದೂಡಿದೆ.

‘ಬೋರೇಗೌಡ್ರ’ ಸಾರಥಿ

ಊರಲ್ಲಿ ಟಿ.ವಿ.ಯೂ ಇಲ್ಲದಿದ್ದ ಕಾಲದಲ್ಲಿ ನಿರ್ದೇಶನದ ಕನಸು ಕಂಡವರು ಕೆ.ಎಂ. ರಘು. ವಿದ್ಯಾರ್ಥಿ ಜೀವನದಲ್ಲೇ ಕಥೆ ಬರೆಯುವ, ದೃಶ್ಯ ಕಲ್ಪನೆ ಮಾಡಿಕೊಳ್ಳುವ ಹವ್ಯಾಸ ಅವರನ್ನು ಸಾಕ್ಷ್ಯಚಿತ್ರಕಾರನನ್ನಾಗಿಸಿ, ನಿರ್ದೇಶಕನವರೆಗೆ ತಂದು ನಿಲ್ಲಿಸಿದೆ. ಅವರ ನಿರ್ದೇಶನ ‘ದೊಡ್ಡಹಟ್ಟಿ ಬೋರೇಗೌಡ’ ಸಿನಿಮಾ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಅತ್ಯುತ್ತಮ ಚಿತ್ರ ಪ್ರಶಸ್ತಿಯನ್ನೂ ಪಡೆದಿತ್ತು. ಈಗ ‘...ಬೋರೇಗೌಡ’ ಚಿತ್ರಮಂದಿರಕ್ಕೆ ಬರುವ ಹೊತ್ತು. ಈ ಸಂದರ್ಭದಲ್ಲಿ ನಿರ್ದೇಶಕರ ಜೊತೆಗೊಂದಿಷ್ಟು ಮಾತು.

ಶರತ್ ಹೆಗ್ಡೆ



ಕೆ.ಎಂ.ರಘು

● ಸಿನಿಮಾ ಕ್ಷೇತ್ರಕ್ಕೆ ಬರಲು ಪ್ರೇರಣೆಯೇನು?

ನೆನೆಸಿಕೊಂಡರೇ ನಗು ಬರುತ್ತದೆ. ನಮ್ಮೂರು ಅರಕಲಗೂಡು ಸಮೀಪದ ಕೆಬ್ಬೆಕೊಪ್ಪಲಿಗೆ ಇನ್ನೂ ಟಿ.ವಿ.ಯೂ ಬಂದಿರಲಿಲ್ಲ. ಆ ಕಾಲದಲ್ಲಿ ನಾವು ಟಿ.ವಿ.ಯನ್ನು ಬಾಡಿಗೆಗೆ ತಂದು ಸಿನಿಮಾ ಹಾಕಿ ನೋಡುತ್ತಿದ್ದೆವು. ಎತ್ತಿನ ಗಾಡಿಯಲ್ಲಿ ಬಾಡಿಗೆ ಟಿ.ವಿ. ತರುತ್ತಿದ್ದ ನೆನಪು ಇನ್ನೂ ಹಸಿರಾಗಿದೆ. ಆ ಕಾಲದಲ್ಲೇ ನಿರ್ದೇಶಕನಾಗಬೇಕು ಎಂಬ ಕನಸು ಕಂಡವನು ನಾನು. ಶಾಲೆಯಲ್ಲಿಯೂ ನನ್ನ ಮನಸ್ಸು ಸಿನಿಮಾ, ತೆರೆಯ ಸುತ್ತಲೇ ಸುತ್ತುತ್ತಿತ್ತು. ಇದನ್ನೆಲ್ಲಾ ಗಮನಿಸಿದ ನನ್ನ ತಂದೆ ಮುಂದಿನ ವಿದ್ಯಾಭ್ಯಾಸಕ್ಕಾಗಿ ಸೋಮನಹಳ್ಳಿಯ ಹಾಸ್ಟೆಲ್‌ಗೆ ಸೇರಿಸಿದರು. ದ್ವಿತೀಯ ಪಿಯುವರೆಗೆ ಶಿಕ್ಷಣ ಆಯಿತು. ಆ ಹಾಸ್ಟೆಲ್ ಕಾಡಿನ ಮಧ್ಯೆ ಇತ್ತು. ಅಲ್ಲಿಯೂ ಮರದ ಅಡಿ ಕುಳಿತು ನೋಟ್ ಪುಸ್ತಕದಲ್ಲಿ ಕಥೆ ಬರೆಯುತ್ತಿದ್ದೆ. ಪಿಯು ಮುಗಿದ ಬಳಿಕ ಬೆಂಗಳೂರಿಗೆ ಬಂದು ಕೆಲಕಾಲ ಬಾರ್‌ಮನ್ ಆಗಿಯೂ ದುಡಿದಿದ್ದೆ. ಆಗಲೂ ಗಾಂಧಿನಗರದಲ್ಲಿ ಅಲೆಯುತ್ತಿದ್ದೆ. ಯಾರನ್ನು ಭೇಟಿ ಮಾಡಬೇಕು ಎಂದೂ ಗೊತ್ತಿರಲಿಲ್ಲ. ಇದನ್ನೆಲ್ಲಾ ಗಮನಿಸಿದ ತಂದೆಯವರು ಒಬ್ಬರು ಶಾಸಕರನ್ನು ಭೇಟಿ ಮಾಡಿಸಿದರು. ಸುಮಾರು 8 ತಿಂಗಳ ಕಾಲ ಅಲೆದಾಡಿಸಿದ ಆ ಶಾಸಕರು ಕೊನೆಗೂ ನಿರ್ದೇಶಕ ಕೋಟಗಾನಹಳ್ಳಿ ರಾಮಯ್ಯ ಅವರ ಬಳಿ ಕಳುಹಿಸಿದರು. ಅವರು ಮಹೇಶ್ ಸುಖಧರೆ ಅವರನ್ನು ಪರಿಚಯಿಸಿದರು. ಅವರ ಬಳಿ ಸಹಾಯಕ ನಿರ್ದೇಶಕನಾಗಿ ದುಡಿದೆ. ಈ ಕ್ಷೇತ್ರದಲ್ಲಿ ಸುಮಾರು 13 ವರ್ಷ ಸಂಭಾವನೆ ಇಲ್ಲದೆ ದುಡಿದದ್ದೇ ಹೆಚ್ಚು. ಕ್ರಮೇಣ ಕೇಂದ್ರ ಸರ್ಕಾರದ ಸಾಕ್ಷ್ಯಚಿತ್ರಗಳು ಬಂದವು. ಹಾಗೆ ದುಡಿಯುತ್ತಾ ‘ತರ್ಲೆ ವಿಲೇಜ್’, ‘ಪರಸಂಗ’, ಇದೀಗ ‘...ಬೋರೇಗೌಡ’ನವರೆಗೆ ಬಂದಿದ್ದೇನೆ.

● ನಿಮ್ಮ ಚಿತ್ರಗಳಲ್ಲಿ ಗ್ರಾಮ ಚಿತ್ರಣವೇ ಹೆಚ್ಚು ಇದೆಯಲ್ಲ?

ಹೌದು, ನಮ್ಮ ವ್ಯವಸ್ಥೆ ಹಾಗೆಯೇ ಇದೆ. ಒಬ್ಬ ಸಾಮಾನ್ಯ ವ್ಯಕ್ತಿ ಗ್ರಾಮ ಪಂಚಾಯಿತಿಗೆ ಹೋದಾಗ ಅವರು ಹೇಗೆ ನಡೆಸಿಕೊಳ್ಳುತ್ತಾರೆ, ಎಷ್ಟು ಸತಾಯಿಸುತ್ತಾರೆ ಎಂಬುದು ಎಲ್ಲರಿಗೂ ಗೊತ್ತು. ಇಲ್ಲಿ ಮನೆ ಅನ್ನುವುದು ಹಳ್ಳಿ ಅಥವಾ ಪಟ್ಟಣದ ಪ್ರತಿಯೊಬ್ಬರಿಗೂ ಹೆಚ್ಚು ಆಪ್ತವಾಗುವ ವಸ್ತು. ಈ ಚಿತ್ರದಲ್ಲಿ ಮನೆ ಕಟ್ಟಲು ಬಡವನೊಬ್ಬ ಮುಂದಾದಾಗ ಏನೇನನ್ನೆಲ್ಲಾ ಅನುಭವಿಸುತ್ತಾನೆ ಎಂಬುದನ್ನು ಹೇಳಿದ್ದೇನೆ. ಭಾರತದಾದ್ಯಂತ ಗ್ರಾಮಗಳಲ್ಲಿ ಇರುವ ಚಿತ್ರಣವೇ ಇದು. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ವಾಸ್ತವ ಪರಿಶೀಲಿಸುವುದೇ ಇಲ್ಲ. ಪಂಚಾಯಿತಿ ಸದಸ್ಯರಂತೂ ಕೊನೆವರೆಗೂ ಸ್ವಜನ ಪಕ್ಷಪಾತಿಗಳಾಗಿರುತ್ತಾರೆ. ಈ ಚಿತ್ರ ದೇಶದ ಅಷ್ಟೂ ಗ್ರಾಮ ಪಂಚಾಯಿತಿಗಳಿಗೆ, ಅಲ್ಲಿನ ಮುಖಂಡರಿಗೆ ತಲುಪಿ ಒಂದಿಷ್ಟು ಬದಲಾವಣೆ ಆದರೆ ಸಾಕು. ಅದು ಸಿನಿಮಾದ ಸಾರ್ಥಕತೆ. ಸಹಜ ವಸ್ತು, ಪಾತ್ರಗಳು ಇದ್ದಷ್ಟೂ ಸಿನಿಮಾ ಅಷ್ಟೇ ಸಹಜವಾಗಿ ಮೂಡಿಬರುತ್ತದೆ. ಆ ಪ್ರಯತ್ನ ಇಲ್ಲಿ ನಡೆದಿದೆ.

● ಸಿನಿಮಾಕ್ಕಾಗಿ ಮನೆ ಕಟ್ಟಿ ದಾನ ಮಾಡಿದಿರಿ...

ಚಿತ್ರೀಕರಣಕ್ಕೆ ಸೆಟ್ ಹಾಕುವುದಕ್ಕೂ ಅಥವಾ ಮನೆಯೊಂದನ್ನು ಕಟ್ಟುವುದಕ್ಕೂ ಆಗುವ ವೆಚ್ಚ ಒಂದೇ ಆಗಿತ್ತು. ಆದ್ದರಿಂದ ಮೈಸೂರಿನ ದಬ್ಬಿಗೆ ಎಂಬ ಊರಿನಲ್ಲಿ ಒಬ್ಬರ ನಿವೇಶನ ಇತ್ತು. ಅವರಿಗೂ ಮನೆಯ ಅವಶ್ಯಕತೆ ಇತ್ತು. ಹಾಗಾಗಿ ಮನೆ ಕಟ್ಟುವ ದೃಶ್ಯಗಳ ಚಿತ್ರೀಕರಣವೂ ಆಯಿತು. ಮನೆಯೂ ನಿರ್ಮಾಣವಾಯಿತು. ಚಿತ್ರೀಕರಣದ ಬಳಿಕ ನಿವೇಶನದ ಮಾಲೀಕರಿಗೆ ಮನೆಯನ್ನು ಬಿಟ್ಟುಕೊಟ್ಟೆವು. ಅವರೂ ಖುಷಿಯಾದರು.

● ಸರಳ ಬದುಕು, ಒಂದಿಷ್ಟು ಆದರ್ಶ... ಏನಿದರ ಗುಟ್ಟು?

ನಾವೇನೇ ಗಳಿಸಿದರೂ ಕೊನೆಗೆ ಎಲ್ಲವನ್ನೂ ಇಲ್ಲಿಯೇ ಬಿಟ್ಟು ಹೋಗಬೇಕಲ್ವಾ. ಅಷ್ಟು ತಿಳಿದಿದ್ದರೆ ಬದುಕು ತುಂಬಾ ಸರಳ. ಇದ್ದು ಹೋಗುವ ಬದುಕಿನ ಮಧ್ಯೆ ಏನು ಮಾಡುತ್ತೇವೆ ಅನ್ನುವುದು ಮುಖ್ಯ. ತುಂಬಾ ಪುಸ್ತಕಗಳನ್ನು ಓದುತ್ತೇನೆ. ಸಜ್ಜನರ ಒಡನಾಟವಿದೆ. ಹಾಗಾಗಿ ಇದ್ದಹಾಗೆ ಬದುಕುತ್ತಿದ್ದೇನೆ.

● ಪ್ರಶಸ್ತಿಯ ನಿರೀಕ್ಷೆ ಇತ್ತಾ?

ಚಿತ್ರೀಕರಣ ನಡೆಯುವಾಗಲೇ ಕೆಲವೊಂದು ದೃಶ್ಯಗಳು ಮೂಡಿಬಂದ ಬಗೆ ನೋಡಿ ಈ ಚಿತ್ರಕ್ಕೆ ಪ್ರಶಸ್ತಿ ಬರುತ್ತದೆ ಎಂದು ಒಳಮನಸ್ಸು ಹೇಳಿತ್ತು. ವಸ್ತು ಪ್ರೇಕ್ಷಕನಿಗೆ ಇಷ್ಟವಾಗುತ್ತದೋ ಇಲ್ಲವೋ ಎನ್ನುವುದು ನಿರ್ದೇಶಕನಿಗೆ ಗೊತ್ತಿರಬೇಕು. ಹಾಗೆ ಒಂದು ಬಗೆಯ ಅಂದಾಜು ಇತ್ತು.

● ಇಂಥ ಚಿತ್ರಗಳ ವಾಣಿಜ್ಯ ಯಶಸ್ಸು ಏನು?

ಯಾವ ಚಿತ್ರಕ್ಕೆ ಜನರು ಚಿತ್ರಮಂದಿರದೊಳಗೆ ಎರಡು ಗಂಟೆ ಕುಳಿತು ಮನರಂಜನೆ ಪಡೆಯುತ್ತಾರೋ ಅದೇ ಆ ಚಿತ್ರದ ವಾಣಿಜ್ಯ ಯಶಸ್ಸು. ಅವರಿಗೆ ಚಿತ್ರಕ್ಕೆ ಎಷ್ಟು ವೆಚ್ಚವಾಗಿದೆ, ಎಷ್ಟು ಹೊಡೆದಾಟಗಳಿವೆ ಎಂಬುದು ಮುಖ್ಯವಾಗುವುದಿಲ್ಲ. ನಾವು ಜನರ ಮನಸ್ಥಿತಿಯನ್ನು ಬದಲಾಯಿಸಿದ್ದೇವೆ. ಹಾಗಾಗಿ ಚಿತ್ರದ ವಸ್ತುವಿಗೆ (ಕಂಟೆಂಟ್) ಜನ ಆದ್ಯತೆ ಕೊಡುತ್ತಾರೆ. ಅದನ್ನು ನಮ್ಮ ಚಿತ್ರ ನೀಡಿದೆ.

● ಮುಂದಿನ ಯೋಜನೆಗಳು?

ನಗರದ ಯುವಜನರಿಗೆ ಇಷ್ಟವಾಗುವ ವಿಷಯವನ್ನು ಆಯ್ಕೆ ಮಾಡಿಕೊಂಡಿದ್ದೇನೆ. ‘ಜಸ್ಟ್‌ಪಾಸ್’ ಅನ್ನುವುದು ನನ್ನ ಹೊಸ ಚಿತ್ರದ ಹೆಸರು. ಒಂದಿಷ್ಟು ಶೂಟಿಂಗ್ ನಡೆದಿದೆ. ಜಸ್ಟ್‌ಪಾಸ್ ಆದವರಿಗೆ ಮಾತ್ರ ಪ್ರವೇಶ ನೀಡುವ ಕಾಲೇಜಿನ ಕಥೆ ಇದು. ಹೀಗೆ ಏನಾದರೊಂದು ಹೊಸದನ್ನು ಕೊಡುವ ಪ್ರಯತ್ನ ಸಾಗಿದೆ.



ದೊಡ್ಡಹಟ್ಟಿ ಬೋರೇಗೌಡ
ಶಿವಣ್ಣ ಬೀರಿಹುಂಡಿ

ಪ್ರಜಾವಾಣಿ ನೋಡಿಯೊ
ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ತೆರೆಯಲ್ಲಿ ಸಿನಿಹಬ್ಬ



ಮಿಲನ ನಾಗರಾಜ್

ಯುಗಾದಿ ಆಗಮನಕ್ಕೆ ಮುನ್ನವೇ ರಾಜ್ಯದ ಚಿತ್ರಮಂದಿರಗಳಲ್ಲಿ ಸಿನಿಹಬ್ಬ ಆರಂಭವಾಗಿದೆ. ಕಳೆದ ಶುಕ್ರವಾರ(ಫೆ.10) ಹತ್ತಕ್ಕೂ ಹೆಚ್ಚು ಸಿನಿಮಾಗಳು ಬಿಡುಗಡೆಯಾಗಿದ್ದವು. ಇಂದೂ (ಫೆ.17) ಸಾಲು ಸಾಲು ಸಿನಿಮಾಗಳು ತೆರೆಗೆ ಬಂದಿವೆ.

‘ಲವ್ ಬರ್ಡ್ಸ್’: ಪಿ.ಸಿ. ಶೇಖರ್ ಆ್ಯಕ್ಷನ್ ಕಟ್ ಹೇಳುತ್ತಿರುವ, ಕಡ್ಡಿಪುಡಿ ಚಂದ್ರು ಅವರ ನಿರ್ಮಾಣದ ‘ಲವ್ ಬರ್ಡ್ಸ್’ ಮೂಲಕ ಡಾರ್ಲಿಂಗ್ ಕೃಷ್ಣ ಹಾಗೂ ಮಿಲನ ನಾಗರಾಜ್ ಜೋಡಿ ಮತ್ತೆ ತೆರೆ ಮೇಲೆ ಬಂದಿದೆ. ‘ಲವ್ ಮಾಕ್ಟೇಲ್’ ಸಿನಿಮಾ ಸರಣಿ ಬಳಿಕ ಕೃಷ್ಣ ಹಾಗೂ ಮಿಲನ ಜೊತೆಯಾಗಿ ನಟಿಸುತ್ತಿರುವ ಸಿನಿಮಾ ಇದಾಗಿದೆ. ಸಿನಿಮಾದಲ್ಲಿ ಮಿಲನ ಫ್ಯಾಷನ್ ಡಿಸೈನರ್ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದು, ಕೃಷ್ಣ ಸಾಫ್ಟ್‌ವೇರ್ ಉದ್ಯೋಗಿಯಾಗಿ ಕಾಣಿಸಿಕೊಂಡಿದ್ದಾರೆ. ಮದುವೆಯ ನಂತರದ ಗಂಡ–ಹೆಂಡತಿಯ ಸಂಬಂಧದ ಕಥಾಹಂದರವನ್ನು ಈ ಚಿತ್ರವು ಹೊಂದಿದೆ.



ದಿಶಾ ರಮೇಶ್

‘ಎಸ್.ಎಲ್.ವಿ’: ಸೌರಭ್ ಕುಲಕರ್ಣಿ ನಿರ್ದೇಶನದ ‘ಎಸ್.ಎಲ್.ವಿ’ ಅಂದರೆ ‘ಸಿರಿ ಲಂಬೋದರ ವಿವಾಹ’ ತೆರೆಕಂಡಿದೆ. ಕಿರುಚಿತ್ರಗಳನ್ನು ನಿರ್ದೇಶಿಸಿದ್ದ ಸೌರಭ್ ಅವರ ಚೊಚ್ಚಲ ಸಿನಿಮಾ ಇದಾಗಿದೆ. ‘ಸಿರಿ–ಲಂಬೋದರ’ ಎನ್ನುವುದು ನಾಯಕ-ನಾಯಕಿಯ ಹೆಸರಲ್ಲ. ಅವರಿಬ್ಬರೂ ರಾಜಕಾರಣಿಗಳ ಮಕ್ಕಳು. ವೆಡ್ಡಿಂಗ್ ಪ್ಲಾನರ್ಸ್‌ಗಳಾದ ನಾಯಕ-ನಾಯಕಿ, ಇವರ ಮದುವೆ ಮಾಡಿಸುವುದಕ್ಕೆ ಮುಂದಾಗುತ್ತಾರೆ. ಈ ಪಯಣವೇ ಚಿತ್ರದ ಕಥಾಹಂದರ’ ಎಂದಿದ್ದಾರೆ ಸೌರಭ್. ಚಿತ್ರದಲ್ಲಿ ಅಂಜನ್ ಭಾರದ್ವಾಜ್ ಹಾಗೂ ದಿಶಾ ರಮೇಶ್ ನಾಯಕ–ನಾಯಕಿಯಾಗಿ ನಟಿಸಿದ್ದು, ರಾಜೇಶ್ ನಟರಂಗ, ಸುಂದರ್ ವೀಣಾ ಮುಂತಾದವರು ತಾರಾಗಣದಲ್ಲಿದ್ದಾರೆ.

‘ದೊಡ್ಡಹಟ್ಟಿ ಬೋರೇಗೌಡ’: ಚಂದನವನದಲ್ಲಿ ಸದ್ದು ಮಾಡಿದ್ದ ‘ತರ್ಲೆ ವಿಲೇಜ್’ ಸಿನಿಮಾದ ನಿರ್ದೇಶಕ ಕೆ.ಎಂ.ರಘು ಆ್ಯಕ್ಷನ್ ಕಟ್ ಹೇಳಿರುವ ಮತ್ತೊಂದು ಗ್ರಾಮೀಣ ಸೊಗಡಿನ ಸಿನಿಮಾ ‘ದೊಡ್ಡಹಟ್ಟಿ ಬೋರೇಗೌಡ’. ಬೆಂಗಳೂರು ಅಂತರರಾಷ್ಟ್ರೀಯ ಸಿನಿಮೋತ್ಸವದಲ್ಲಿ ಅತ್ಯುತ್ತಮ ಚಿತ್ರ ಪ್ರಶಸ್ತಿ ಪಡೆದ ಈ ಸಿನಿಮಾ, ಗ್ರಾಮವೊಂದರಲ್ಲಿ ನಡೆಯುವ ಕಥಾಹಂದರವನ್ನು ಹೊಂದಿದೆ. ಬಡವನೊಬ್ಬ ಮನೆ ಕಟ್ಟಿಕೊಳ್ಳಬೇಕಾದರೆ ಏನೆಲ್ಲಾ ಪಡಿಪಾಟಲು ಅನುಭವಿಸುತ್ತಾನೆ ಎನ್ನುವುದನ್ನು ಹೇಳಿದೆ ಈ ಚಿತ್ರ. ಭ್ರಷ್ಟಾಚಾರ, ಆಡಳಿತ ವ್ಯವಸ್ಥೆಯ ದುರವಸ್ಥೆಯ ನಡುವೆ ಬೋರೇಗೌಡ ಎಂಬಾತ ಮನೆ ಕಟ್ಟದನೇ ಇಲ್ಲವೇ ಎನ್ನುವುದೇ ಚಿತ್ರಕಥೆ. ಶಿವಣ್ಣ ಬೀರಿಹುಂಡಿ, ಗೀತಾ, ಸಂಪತ್ ಮುಂತಾದವರು ತಾರಾಗಣದಲ್ಲಿದ್ದಾರೆ.

‘ಖೆಯೊಸ್’: ಮನುಷ್ಯನ ಮನಸ್ಸಿನಲ್ಲಾಗುವ ಗೊಂದಲ, ಮನಸ್ಥಿತಿಯ ಬಗ್ಗೆ ಹೇಳುವ ಕಥಾಹಂದರ ಹೊಂದಿರುವ ಚಿತ್ರ ಖೆಯೊಸ್. ಅಕ್ಷಿತ್ ಶಶಿಕುಮಾರ್ ಈ ಚಿತ್ರದ ನಾಯಕನಾಗಿ ಅಭಿನಯಿಸಿದ್ದು, ನಾಯಕಿಯಾಗಿ ಅದಿತಿ ಪ್ರಭುದೇವ ಜೋಡಿಯಾಗಿದ್ದಾರೆ. ಶಶಿಕುಮಾರ್ ಕೂಡಾ ಈ ಚಿತ್ರದಲ್ಲಿ ನಟಿಸಿದ್ದಾರೆ. ಈ ಮೂಲಕ ಅಪ್ಪ, ಮಗ ಮೊದಲ ಬಾರಿಗೆ ತೆರೆ ಮೇಲೆ ಜೊತೆಯಾಗಿ ಕಾಣಿಸಿಕೊಳ್ಳಲಿದ್ದಾರೆ. ವೃತ್ತಿಯಲ್ಲಿ ವೈದ್ಯರಾಗಿರುವ ಜಿ.ವಿ.ಪ್ರಸಾದ್ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ವೈದ್ಯಕೀಯ ಕಾಲೇಜೊಂದರಲ್ಲಿ ನಡೆಯುವ ಕಥೆಯನ್ನೇ ಆಯ್ಕೆ ಮಾಡಿಕೊಂಡಿದ್ದು, ಅಕ್ಷಿತ್ ಹಾಗೂ ಅದಿತಿ ಇಬ್ಬರೂ ವೈದ್ಯಕೀಯ ವಿದ್ಯಾರ್ಥಿಗಳ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.



ಧನುಶ್ರೀ

‘ಒಂದೊಳ್ಳೆ ಲವ್ ಸ್ಟೋರಿ’: ಹೊಸ ಪ್ರತಿಭೆಗಳು ಸೇರಿಕೊಂಡು ಸಿದ್ಧಪಡಿಸಿರುವ ಚಿತ್ರ ‘ಒಂದೊಳ್ಳೆ ಲವ್ ಸ್ಟೋರಿ’. ಮೈಸೂರಿನ ನಿರಂಜನ್‌ಬಾಬು ಚಿತ್ರದ ನಿರ್ಮಾಪಕರು. ಜೊತೆಗೆ ನಾಯಕನ ತಂದೆ ಪಾತ್ರಕ್ಕೂ ಅವರು ಬಣ್ಣ ಹಚ್ಚಿದ್ದಾರೆ. ಕಥೆ,ಚಿತ್ರಕಥೆ ಬರೆದು ನಾಯಕನಾಗಿ ಅಶ್ವಿನ್ ಅಭಿನಯಿಸಿದ್ದಾರೆ. ‘ಬಿಗ್‌ಬಾಸ್’ ಖ್ಯಾತಿಯ ಧನುಶ್ರೀ, ನಿಶಾ ಹೆಗಡೆ ಚಿತ್ರದ ನಾಯಕಿಯರು.

‘ಸಕೂಚಿ’: ಮಾಟ-ಮಂತ್ರದ ಕುರಿತಾದ ಸಿನಿಮಾಗಳ ಪಟ್ಟಿಗೆ ಹೊಸ ಸೇರ್ಪಡೆ ‘ಸಕೂಚಿ’. ‘ಸಾವಿನ ಸೂಚಿ’ ಎಂಬ ಅಡಿಬರಹ ಹೊಂದಿರುವ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ ಅಶೋಕ ಚಕ್ರವರ್ತಿ. ಇದು ಅವರ ನಿರ್ದೇಶನದ ಚೊಚ್ಚಲ ಸಿನಿಮಾ. ‘ಸಕೂಚಿ’ ಎಂದರೆ ಘೋರವಾದ ವಾಮಾಚಾರ. ‘ಬ್ಲ್ಯಾಕ್ ಮ್ಯಾಜಿಕ್ ಕಥೆಯನ್ನು ತೆಗೆದುಕೊಂಡು ಕಮರ್ಷಿಯಲ್ ಸಿನಿಮಾ ಮಾಡಿದ್ದೇನೆ. ಇದರಲ್ಲಿ ನಾಯಕ ಹೇಗೆ ಸಕೂಚಿಗೆ ಒಳಗಾಗುತ್ತಾನೆ ಎಂಬುವುದು ಮುಖ್ಯವಾದ ಅಂಶ’ ಎಂದಿದ್ದಾರೆ ಅಶೋಕ. ‘ರಂಗನಾಯಕಿ’ ಚಿತ್ರದಲ್ಲಿ ನಟಿಸಿದ್ದ ತ್ರಿವಿಕ್ರಮ ಸಾಮ್ರಾಟ್ ನಾಯಕನಾಗಿ ಇಲ್ಲಿ ಬಣ್ಣ ಹಚ್ಚಿದ್ದಾರೆ. 30-40 ಮಂಗಳಮುಖಿಯರು ಚಿತ್ರದಲ್ಲಿ ಅಭಿನಯಿಸಿದ್ದಾರೆ.

ಶೆಟ್ರೇ ಏನಂತೀರಿ?



ರಿಷಬ್ ಶೆಟ್ಟಿ

‘ಕಾಂತಾರ’ದ ಯಶಸ್ಸಿನ ಬಳಿಕ ಕಾಲಿಗೆ ಚಕ್ರಕಟ್ಟಿಕೊಂಡವರಂತೆ ತಿರುಗಾಡುತ್ತಿರುವ ನಟ ರಿಷಬ್ ಶೆಟ್ಟಿ, ಇತ್ತೀಚೆಗೆ ಕರ್ನಾಟಕ ಚಲನಚಿತ್ರ ಪತ್ರಕರ್ತರ ಸಂಘ ಆಯೋಜಿಸಿದ್ದ ಮುಖಾಮುಖಿ ಕಾರ್ಯಕ್ರಮದಲ್ಲಿ ಕೆಲ ಮುಖ್ಯ ಪ್ರಶ್ನೆಗಳಿಗೆ ಉತ್ತರಿಸಿದ್ದಾರೆ.

● ‘ಕಾಂತಾರ’ ಮುಂದಿನ ಭಾಗದ ಕಥೆಯೇನು?

‘ಕಾಂತಾರ’ ಭಾಗ–2 ಬಂದಿದೆ, ಭಾಗ–1 ಬರಬೇಕಿದೆ ಎಂದಿದ್ದೆ. ಇದಾದ ಬಳಿಕ ಹಲವು ಕಲ್ಪನೆಗಳು, ಊಹೆಗಳ ಹರಿವು ಈಗಾಗಲೇ ಹರಿದಾಡತೊಡಗಿದೆ. ‘ಶಿವ’ನ ಅಪ್ಪನ ಪಾತ್ರವೇ ಇಲ್ಲಿ ಮುಖ್ಯವಾಗಿರಬಹುದೇ ಎಂಬ ಪ್ರಶ್ನೆ ಮುಖ್ಯವಾಗಿ ಎದ್ದಿದೆ. ಈ ಎಲ್ಲ ಊಹೆಗಳನ್ನು ಮೀರಿ ಬೇರೆಯದೊಂದು ವಿಚಾರವನ್ನು ಹೇಳುವ ಪ್ರಯತ್ನವನ್ನು ಮಾಡುತ್ತಿದ್ದೇನೆ. ಪ್ರೀಕ್ವೆಲ್‌ನಲ್ಲಿ(ಹಿಂದಿನ ಕಥೆ) ಕೆಲವು ಪ್ರಶ್ನೆಗಳಿಗೆ ಉತ್ತರ ಸಿಗಬಹುದು, ಮತ್ತಷ್ಟು ಪ್ರಶ್ನೆಗಳು ಉದ್ಭವಿಸಬಹುದು. ಇದಕ್ಕೆ ಉತ್ತರಗಳನ್ನು ವೀಕ್ಷಕರು ಅವರವರ ದೃಷ್ಟಿಕೋನದಲ್ಲಿ ಕಂಡುಕೊಳ್ಳಬೇಕು. ‘ಕಾಂತಾರ’ ಹೊಸ ಭಾಗ ಹೊಸ ಪ್ರಶ್ನೆಗಳನ್ನು ಹುಟ್ಟುಹಾಕಲಿ ಎನ್ನುವುದೇ ನನ್ನ ಅಭಿಲಾಷೆ.

‘ಕಾಂತಾರ’ ಸಿನಿಮಾದ ಯಶಸ್ಸಿನ ಕಾರಣಕ್ಕೆ ಎರಡನೇ ಭಾಗ ಮಾಡುತ್ತಿಲ್ಲ. ಕಥೆಯು ತಲೆಯಲ್ಲಿದ್ದ ಕಾರಣ ಸಿನಿಮಾ ಮಾಡುತ್ತಿದ್ದೇನೆ. ಈ ಸಿನಿಮಾದ ಚಿತ್ರೀಕರಣ ‘ಕೆರಾಡಿ ಫಿಲಂ ಸಿಟಿ’ಯಲ್ಲೇ ನಡೆಯಲಿದೆ.

● ‘ಬ್ಯಾಚುಲರ್ ಪಾರ್ಟಿ’ಯಿಂದ ಹೊರಬಂದಿದ್ದೇಕೆ?

‘ಕಾಂತಾರ’ದ ಇನ್ನೊಂದು ಭಾಗದ ಕಥೆಯನ್ನು ಹೇಳಬೇಕು ಎನ್ನುವ ಯೋಚನೆ ಬಂದಾಗ, ಇದನ್ನು ಸ್ನೇಹಿತರ ಜೊತೆ ಚರ್ಚಿಸಿದ್ದೆ. ಮುಖ್ಯವಾಗಿ ರಕ್ಷಿತ್ ಶೆಟ್ಟಿ ಜೊತೆ ಮಾತುಕತೆ ನಡೆಸಿದೆ. ‘ಈ ಕಥೆಯನ್ನು ಭವಿಷ್ಯದಲ್ಲಿ ಹೇಳುತ್ತೇನೆ ಎಂದು ಕಾದರೆ ಆಗುವುದಿಲ್ಲ. ಒಬ್ಬ ನಿರ್ದೇಶಕನಾಗಿ ಈಗಲೇ ಈ ಕಥೆಯನ್ನು ಹೇಳಬೇಕು ಎನಿಸುತ್ತಿದೆ. ಈ ಹಂತದಲ್ಲಿ ನನ್ನ ತಲೆಯಲ್ಲಿ ಅದೇ ವಿಷಯವಿದೆ. ಈ ಸಂದರ್ಭದಲ್ಲಿ ಕಮಿಟ್‌ಮೆಂಟ್ ಕಾರಣಕ್ಕೆ ಇನ್ನೊಂದು ಸಿನಿಮಾದಲ್ಲಿ ತೊಡಗಿಸಿಕೊಂಡರೆ, ಆ ಸಿನಿಮಾಗೆ ನಾನು ಅನ್ಯಾಯ ಮಾಡಿದಂತಾಗುತ್ತದೆ’ ಎಂಬ ವಿಷಯ ಹಂಚಿಕೊಂಡೆ. ನನ್ನ ಮಾತಿಗೆ ಅವರ ಸಹಮತವಿತ್ತು. ಈ ರೀತಿ ಸ್ನೇಹಿತರು ಇರುವ ಕಾರಣ ಗಟ್ಟಿಯಾದ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾಗಿದೆ.

● ರಿಷಬ್ ಎಲೆಕ್ಷನ್‌ಗೆ ನಿಲ್ತಿದ್ದಾರಾ?

(ನಗುತ್ತಾ) ಒಂದು ಮಾಧ್ಯಮದವರಂತೂ ನನಗೆ ಮೂರು ಕ್ಷೇತ್ರದ ಟಿಕೆಟ್ ಕೊಟ್ಟರು! ವ್ಯವಸ್ಥೆಯ ಬದಲಾವಣೆ ಎನ್ನುವುದು ರಾಜಕಾರಣಿಗಳಿಂದ, ಸರ್ಕಾರದಿಂದಲೇ ಆಗಬೇಕೆಂದಿಲ್ಲ. ಪ್ರಜೆಯಿಂದಲೂ ಇದು ಆಗಬೇಕು. ಎಲ್ಲರೂ ಸೇರಿ ಸಮಾಜವನ್ನು ಸರಿದಾರಿಯಲ್ಲಿ ತೆಗೆದುಕೊಂಡು ಹೋಗಬೇಕು. ಸರಿ–ತಪ್ಪು ಎಲ್ಲ ಹಂತದಲ್ಲೂ ಇದೆ. ಚುನಾವಣೆ ಸಂದರ್ಭದಲ್ಲಿ ನಾನು ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ಕಾಡು ಸೇರುತ್ತೇನೆ. ಬರಿಯಬೇಕು, ಸಂಶೋಧನೆ ನಡೆಸಬೇಕು. ಸಿನಿಮಾ ಮಾಡಬೇಕು, ಅದೇ ನಮ್ಮ ಕೆಲಸ. ಜನ ‘ಕಾಂತಾರ’ವನ್ನು ಇಷ್ಟು ಯಶಸ್ಸು ಮಾಡಿರುವುದು ‘ನೆಟ್ಟಗೆ ಇನ್ನೊಂದು ಸಿನಿಮಾ ಮಾಡು’ ಎಂಬುವುದಕ್ಕಲ್ಲವೇ. ಚುನಾವಣೆಯಲ್ಲಿ ಖಂಡಿತಾ ಭಾಗವಹಿಸುತ್ತೇನೆ! ಮತ ಹಾಕಬೇಕಲ್ಲವೇ? ಅದು ನನ್ನ ಹಕ್ಕು.

● ರಿಷಬ್ ಸಂಭಾವನೆ ಹೆಚ್ಚಿದೆಯಂತೆ?

ಹೌದಾ ಸರ್! ಸಿನಿಮಾ ಯಶಸ್ಸಿನ ಮೇಲೆ ನಿರ್ಮಾಪಕರು ಎಷ್ಟು ಕೊಡುತ್ತಾರೋ ಅಷ್ಟು. ಮತ್ತೆ ನೋ ಕಮೆಂಟ್ಸ್...

● ‘ಪೆದ್ರೊ’ ರಿಲೀಸ್ ಯಾವಾಗ?

ನಮ್ಮ ನಿರ್ಮಾಣ ಸಂಸ್ಥೆಯಿಂದ ತಯಾರಾದ ಈ ಸಿನಿಮಾವನ್ನು ನಟೇಶ ಹೆಗಡೆ ನಿರ್ದೇಶನ ಮಾಡಿದ್ದಾರೆ. ನಮ್ಮ ಸಂಸ್ಥೆಯ ಮುಂದಿನ ಬಿಡುಗಡೆಯೇ ಈ ಸಿನಿಮಾ. ಇದು ಕಮರ್ಷಿಯಲ್ ಸಿನಿಮಾವಲ್ಲ. ಹೀಗಾಗಿ ರಾಜ್ಯದ ಕೆಲವು ಚಿತ್ರಮಂದಿರಗಳಲ್ಲಷ್ಟೇ ಇದು ತೆರೆಕಾಣಲಿದೆ. ಒಟಿಟಿಯಲ್ಲೂ ರಿಲೀಸ್ ಮಾಡುತ್ತೇವೆ.

ಶಿಡ್ಲಘಟ್ಟದಲ್ಲಿ ‘ಕಬ್ಜ’ ಹವಾ



ಶ್ರಿಯಾ

ಉಪೇಂದ್ರ, ‘ಕಿಚ್ಚ’ ಸುದೀಪ್ ಮತ್ತು ಶ್ರಿಯಾ ಸರಣ್ ಅಭಿನಯದ ಪ್ಯಾನ್ ಇಂಡಿಯಾ ಚಿತ್ರ ‘ಕಬ್ಜ’ ರಿಲೀಸ್‌ಗೆ ಭರ್ಜರಿಯಾದ ಸಿದ್ಧತೆಯನ್ನು ನಿರ್ದೇಶಕ ಆರ್.ಚಂದ್ರು ನಡೆಸುತ್ತಿದ್ದಾರೆ. ಬಿಡುಗಡೆ ಪೂರ್ವಭಾವಿಯಾಗಿ ಈಗಾಗಲೇ ಎರಡು ಹಾಡುಗಳನ್ನು ಹೈದರಾಬಾದ್ ಮತ್ತು ಚೆನ್ನೈನಲ್ಲಿ ರಿಲೀಸ್ ಮಾಡಿರುವ ಚಿತ್ರತಂಡ, ಫೆ.26ರಂದು ರಾಜ್ಯದಲ್ಲಿ ಅದ್ಧೂರಿಯಾಗಿ ಆಡಿಯೊ ಲಾಂಚ್ ಕಾರ್ಯಕ್ರಮ ಆಯೋಜಿಸಲಿದೆ.

ಟ್ರೈಲರ್ ಬಿಡುಗಡೆ ಬಳಿಕ ಸಾಕಷ್ಟು ನಿರೀಕ್ಷೆಯನ್ನು ಭಾರತೀಯ ಚಿತ್ರರಂಗದಲ್ಲಿ ‘ಕಬ್ಜ’ ಹುಟ್ಟುಹಾಕಿದೆ. ಮಾ.17ರಂದು ವಿಶ್ವದಾದ್ಯಂತ ಸಾವಿರಕ್ಕೂ ಅಧಿಕ ಪರದೆಗಳಲ್ಲಿ ತೆರೆಗಪ್ಪಳಿಸಲು ಚಿತ್ರವು ಸಜ್ಜಾಗಿದೆ. ಸಂಗೀತ ನಿರ್ದೇಶಕ ರವಿ ಬಸ್ರೂರು ಅವರ ಕೈಚಳಕದ ಚಿತ್ರದ ಎರಡನೇ ಹಾಡು ‘ನಮಾಮಿ’ ಗುರುವಾರ ಬಿಡುಗಡೆಯಾಗಿದೆ. ‘ಚಿತ್ರದ ಆಡಿಯೊ ಬಿಡುಗಡೆ ಕಾರ್ಯಕ್ರಮ ಫೆ.26ರಂದು ಚಿಕ್ಕಬಳ್ಳಾಪುರದ ಶಿಡ್ಲಘಟ್ಟದ ಜೂನಿಯರ್ ಕಾಲೇಜು ಮೈದಾನದಲ್ಲಿ ಸಂಜೆ 7 ಗಂಟೆಗೆ ನಡೆಯಲಿದೆ. ಸ್ಯಾಂಡಲ್‌ವುಡ್‌ನ ಗಣ್ಯರು ಸೇರಿದಂತೆ ಭಾರತೀಯ ಚಿತ್ರರಂಗದ ದಿಗ್ಗಜ ಕಲಾವಿದರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ’ ಎಂದಿದ್ದಾರೆ ಚಂದ್ರು. ಒಂಬತ್ತು ಭಾಷೆಗಳಲ್ಲಿ ‘ಕಬ್ಜ’ ತೆರೆಕಾಣಲಿದ್ದು, ಅತಿ ಹೆಚ್ಚು ಭಾಷೆಗಳಲ್ಲಿ ರಿಲೀಸ್ ಆಗುತ್ತಿರುವ ಕನ್ನಡದ ಮೊದಲ ಪ್ಯಾನ್ ಇಂಡಿಯಾ ಸಿನಿಮಾ ಎಂಬ ಹೆಗ್ಗಳಿಕೆಯೂ ಚಿತ್ರಕ್ಕಿದೆ.

ಕಾಡ್ಗಿಚ್ಚು; ನಾಲ್ವರು ಅರಣ್ಯ ಸಿಬ್ಬಂದಿಗೆ ಗಾಯ

ಇಬ್ಬರ ಸ್ಥಿತಿ ಚಿಂತಾಜನಕ: ಬೆಂಗಳೂರಿನಲ್ಲಿ ಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಸಕಲೇಶಪುರ (ಹಾಸನ): ತಾಲ್ಲೂಕಿನ ಕಾಡುಮನೆ ಸಮೀಪದ ಮಣಿಬೆಟ್ಟ ರಕ್ಷಿತ ಅರಣ್ಯದಲ್ಲಿ ಗುರುವಾರ ಮಧ್ಯಾಹ್ನ ಹೊತ್ತಿಕೊಂಡಿದ್ದ ಕಾಡ್ಗಿಚ್ಚು ಆರಿಸಲು ಹೋಗಿದ್ದ ಅರಣ್ಯ ಇಲಾಖೆಯ ನಾಲ್ವರು ಬೆಂಕಿ ತಗುಲಿ ಗಂಭೀರವಾಗಿ ಗಾಯಗೊಂಡಿದ್ದು, ಇಬ್ಬರ ಸ್ಥಿತಿ ಚಿಂತಾಜನಕವಾಗಿದೆ.

ಕಾಡುಮನೆ ಸಮೀಪದ ಟೀ ಎಸ್ಟೇಟ್‌ನಿಂದ ಸುಮಾರು 10 ಕಿ.ಮೀ ದೂರದಲ್ಲಿ ಘಟನೆ ನಡೆದಿದೆ.

'ಫಾರೆಸ್ಟರ್' ಮಂಜುನಾಥ್ ಮತ್ತು 'ಗಾರ್ಡ್' ಸುಂದರೇಶ್ ಅವರನ್ನು ಚಿಕಿತ್ಸೆಗಾಗಿ ಬೆಂಗಳೂರಿಗೆ ರವಾನಿಸಲಾಗಿದೆ.

ಅವರೊಂದಿಗಿದ್ದ 'ವಾಚರ್'ಗಳಾದ ತುಂಗೇಶ್ ಹಾಗೂ ಮಹೇಶ್ ಅವರನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

ವಿವರ: ಮುಖ, ಕೈಗೆ ಬೆಂಕಿ ತಗುಲಿ ಗಾಯಗೊಂಡಿದ್ದ ತುಂಗೇಶ್ ನೋವಿನಲ್ಲಿಯೇ 10 ಕಿ.ಮೀ ನಡೆದು ಕಾಡು ಮನೆ ಆಸ್ಪತ್ರೆಗೆ ತೆರಳಿ, ಅಲ್ಲಿಂದಲೇ ಅಧಿಕಾರಿಗಳಿಗೆ ಮಾಹಿತಿಕೊಟ್ಟರು. ಅವಘಡ ನಡೆದ ಸ್ಥಳದಲ್ಲಿ ಮೊಬೈಲ್ ನೆಟ್‌ವರ್ಕ್ ಇರಲಿಲ್ಲ.

ವಿಷಯ ತಿಳಿಯುತ್ತಿದ್ದಂತೆಯೇ ಪೊಲೀಸ್ ಕಾನ್‌ಸ್ಟೆಬಲ್ ನಂದೀಶ್, ಹೆಬ್ಬಸಾಲೆ ಮುಖಂಡ ಮೇಘರಾಜ್ ಧಾವಿಸಿ, ಗಾಯಾಳುಗಳಾದ ಮಂಜುನಾಥ್, ಸುಂದರೇಶ್ ಹಾಗೂ ಮಹೇಶ್ ಅವರನ್ನು ಸ್ಟ್ರೆಚರ್‌ನಲ್ಲಿ ಮಲಗಿಸಿ ನಡೆದುಕೊಂಡೇ ಮುಖ್ಯರಸ್ತೆಗೆ ಬಂದು, ನಂತರ ಆಂಬುಲೆನ್ಸ್ ಮೂಲಕ ಪಟ್ಟಣದ ಕ್ರಾಫರ್ಡ್ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಡಾ. ಮಧುಸೂದನ್, ಡಾ. ಸಂಧ್ಯಾ ಅವರು ತುರ್ತು ಚಿಕಿತ್ಸೆ ನೀಡಿದ್ದಾರೆ.



ಸಕಲೇಶಪುರ ತಾಲ್ಲೂಕಿನ ಮಣಿಬೆಟ್ಟ ರಕ್ಷಿತಾರಣ್ಯದಲ್ಲಿ ಬೆಂಕಿ ತಗುಲಿ ಗಾಯಗೊಂಡ ಗಾಯಾಳುಗಳಿಗೆ ಸಕಲೇಶಪುರದ ಕ್ರಾಫರ್ಡ್ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಯಿತು.

ಅಂಗಾಂಗ: ಹೆಸರು ನೋಂದಾಯಿಸಲು 65 ವರ್ಷ ಮೇಲ್ಪಟ್ಟವರಿಗೂ ಅವಕಾಶ

ನವದೆಹಲಿ (ಪಿಟಿಐ): 'ಕೇಂದ್ರ ಸರ್ಕಾರವು ಕಾನೂನಿನಲ್ಲಿ ಕೆಲ ಮಾರ್ಪಾಡುಗಳನ್ನು ಮಾಡಿದ್ದು, ಇನ್ನು ಮುಂದೆ ಮೃತ ದಾನಿಗಳಿಂದ ಅಂಗಾಂಗ ಪಡೆಯುವುದಕ್ಕೆ 65 ವರ್ಷ ಮೇಲ್ಪಟ್ಟ ರೋಗಿಗಳೂ ಹೆಸರು ನೋಂದಾಯಿಸಬಹುದು' ಎಂದು ಅಧಿಕೃತ ಮೂಲಗಳು ಗುರುವಾರ ತಿಳಿಸಿವೆ.

'ಪ್ರಸ್ತುತ ಜಾರಿಯಲ್ಲಿರುವ ವಾಸಸ್ಥಳದ ಮಾನದಂಡ ನಿಯಮ ರದ್ದುಪಡಿಸುವಂತೆ ಕೇಂದ್ರ ಆರೋಗ್ಯ ಸಚಿವಾಲಯವು ಎಲ್ಲಾ ರಾಜ್ಯಗಳಿಗೆ ಸೂಚಿಸಿದೆ. ರೋಗಿಗಳು ಅಂಗಾಂಗ ಪಡೆಯುವುದಕ್ಕಾಗಿ ಇತರ ರಾಜ್ಯಗಳಲ್ಲೂ ಹೆಸರು ನೋಂದಾಯಿಸುವುದಕ್ಕೆ ಇದರಿಂದ ಅನುಕೂಲವಾಗುತ್ತದೆ. ಹೆಸರು ನೋಂದಣಿಗಾಗಿ ಶುಲ್ಕ ವಿಧಿಸುವುದು 2014ರ ಟ್ರಾನ್ಸ್‌ಪ್ಲಾಂಟೇಷನ್ ಆಫ್ ಹ್ಯೂಮನ್ ಆರ್ಗನ್ಸ್ ಆ್ಯಂಡ್ ಟಿಶ್ಯೂಸ್ ನಿಯಮಕ್ಕೆ ವಿರುದ್ಧವಾದುದು. ಹೀಗಾಗಿ ರಾಜ್ಯಗಳು ರೋಗಿಗಳಿಂದ ಯಾವುದೇ ರೀತಿಯ ಶುಲ್ಕ ಪಡೆಯದಂತೆ ಸಚಿವಾಲಯವು ರಾಜ್ಯಗಳಿಗೆ ತಾಕೀತು ಮಾಡಿದೆ' ಎಂದು ಹೇಳಿವೆ.

ತೆಲಂಗಾಣ, ಮಹಾರಾಷ್ಟ್ರ, ಗುಜರಾತ್ ಮತ್ತು ಕೇರಳ ರಾಜ್ಯಗಳು ಹೆಸರು ನೋಂದಾಯಿಸುವ ರೋಗಿಗಳಿಂದ ₹5 ಸಾವಿರದಿಂದ ₹10 ಸಾವಿರದವರೆಗೆ ಶುಲ್ಕ ವಸೂಲಿ ಮಾಡುತ್ತಿವೆ.

'ಈ ಮೊದಲು ಅಂಗಾಂಗ ಪಡೆಯುವುದಕ್ಕೆ ಗರಿಷ್ಠ 65 ವರ್ಷ ವಯಸ್ಸಿನ ಮಿತಿ ನಿಗದಿಪಡಿಸಲಾಗಿತ್ತು. ನಿಯಮ ಬದಲಾವಣೆಯಿಂದಾಗಿ ಇನ್ನು ಮುಂದೆ ಎಲ್ಲಾ ವಯೋಮಾನದವರೂ ಹೆಸರು ನೋಂದಾಯಿಸಬಹುದು. ಪರಿಷ್ಕೃತ ಮಾರ್ಗಸೂಚಿಯನ್ನು ರಾಷ್ಟ್ರೀಯ ಅಂಗಾಂಗ ಮತ್ತು ಅಂಗಾಂಶ ಕಸಿ ಸಂಘಟನೆಯ (ಎನ್‌ಒಟಿಟಿಒ) ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ' ಎಂದು ಮಾಹಿತಿ ನೀಡಿವೆ.

'ಈ ಮೊದಲು ಕೆಲ ರಾಜ್ಯಗಳು ಸ್ಥಳೀಯ ರೋಗಿಗಳಿಗೆ ಮಾತ್ರ ಹೆಸರು ನೋಂದಾಯಿಸಲು ಅವಕಾಶ ಕಲ್ಪಿಸಿದ್ದವು. ಅಂಗಾಂಗ ಪಡೆಯುವ ವಿಚಾರದಲ್ಲಿ ಅವರಿಗೆ ಮೊದಲ ಆದ್ಯತೆ ನೀಡಲಾಗುತ್ತಿತ್ತು. ಇದನ್ನು ತಪ್ಪಿಸುವುದಕ್ಕಾಗಿ ಆರೋಗ್ಯ ಸಚಿವಾಲಯವು ವಾಸಸ್ಥಳದ ಮಾನದಂಡ ನಿಯಮ ರದ್ದುಪಡಿಸುವಂತೆ ರಾಜ್ಯಗಳಿಗೆ ನಿರ್ದೇಶಿಸಿದೆ' ಎಂದೂ ಹೇಳಿವೆ.

'ರಕ್ತ ಹೆಪ್ಪುಗಟ್ಟುವಿಕೆ ಸಮಸ್ಯೆ ತಡೆಗೆ ಹೊಸ ಲಸಿಕೆ ಅಭಿವೃದ್ಧಿ'

ನವದೆಹಲಿ (ಪಿಟಿಐ): 'ಕೋವಿಡ್ ಲಸಿಕೆ ಪಡೆದ ಕೆಲವರು ರಕ್ತ ಹೆಪ್ಪುಗಟ್ಟುವಿಕೆ ಸಮಸ್ಯೆಯಿಂದ ಬಳಲುತ್ತಿರುವುದನ್ನು ಗಮನಿಸಿರುವ ದೆಹಲಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ (ಐಐಟಿ) ಸಂಶೋಧಕರು, ಈ ಸಮಸ್ಯೆಯ ಸಾಧ್ಯತೆ ಕಡಿಮೆ ಮಾಡುವ ಹೊಸ ಕೋವಿಡ್ ಲಸಿಕೆಯೊಂದನ್ನು ಅಭಿವೃದ್ಧಿಪಡಿಸುತ್ತಿದ್ದಾರೆ' ಎಂದು ಅಧಿಕಾರಿಯೊಬ್ಬರು ಗುರುವಾರ ತಿಳಿಸಿದ್ದಾರೆ.

'"ನೆಕ್ಸ್ಟ್ ಜನರೇಷನ್" ಹೆಸರಿನ ಲಸಿಕೆಯು ಸದ್ಯ ಪ್ರಾಣಿಗಳ ಮೇಲೆ ಪ್ರಯೋಗ ನಡೆಸುವ ಹಂತದಲ್ಲಿದೆ. ಸದ್ಯ ಚಾಲ್ತಿಯಲ್ಲಿರುವ ಲಸಿಕೆಯು ಬಳಸುವ ವಸ್ತುಗಳ ಸ್ಥಿರತೆ, ಕಡಿಮೆ ರೋಗ ನಿರೋಧಕ ಶಕ್ತಿ, ರಕ್ತ ಹೆಪ್ಪುಗಟ್ಟುವಿಕೆಯಂತಹ ನ್ಯೂನತೆಗಳನ್ನು ಒಳಗೊಂಡಿದೆ. ಇವುಗಳನ್ನು ನಿವಾರಿಸಲು ಮತ್ತು ದೀರ್ಘ ಕಾಲದವರೆಗೆ ದೇಹದೊಳಗೆ ಪ್ರತಿಕಾಯ ಸಕ್ರಿಯವಾಗಿರುವಂತಹ ಲಸಿಕೆಯನ್ನು ಈಗ ಅಭಿವೃದ್ಧಿಪಡಿಸಲಾಗುತ್ತಿದೆ' ಎಂದು ದೆಹಲಿ ಐಐಟಿಯ ಬಯೋಮೆಡಿಕಲ್ ಎಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕ ಜಯಂತ ಭಟ್ಟಾಚಾರ್ಯ ಹೇಳಿದ್ದಾರೆ.

'ಸದ್ಯ ಬಳಕೆಯಲ್ಲಿರುವ ಲಸಿಕೆಗಳಲ್ಲಿ ರೋಗ ನಿರೋಧಕ ಶಕ್ತಿ ವೃದ್ಧಿಗಾಗಿ ಸಿಂಥೆಟಿಕ್ ವಸ್ತುಗಳು ಅಥವಾ ಅಡೆನೊವೈರಾಣುಗಳನ್ನು (ಜೀವಕೋಶಗಳಲ್ಲಿನ ದೋಷಗಳನ್ನು ಸರಿಪಡಿಸುವ ವೈರಾಣುಗಳು) ಬಳಸಲಾಗುತ್ತಿದೆ. ಆದರೆ ನೈಸರ್ಗಿಕವಾಗಿ ನ್ಯಾನೊ-ಲಸಿಕೆ ಅಭಿವೃದ್ಧಿಪಡಿಸಲು ಮುಂದಾಗಿರುವ ಐಐಟಿಯ ಸಂಶೋಧಕರು ಇದಕ್ಕಾಗಿ ಮಾನವ ದೇಹದಲ್ಲಿನ ಪ್ರತಿಕಾಯ ಕೋಶಗಳನ್ನೇ ಉಪಯೋಗಿಸುತ್ತಿದ್ದಾರೆ' ಎಂದು ಅವರು ಮಾಹಿತಿ ನೀಡಿದ್ದಾರೆ.

'ಸದ್ಯ ಸಂಶೋಧಕರು ಅಭಿವೃದ್ಧಿಪಡಿಸುತ್ತಿರುವ ಲಸಿಕೆಯು ಪ್ರಸ್ತುತ ಬಳಕೆಯಲ್ಲಿರುವ ಲಸಿಕೆಗಳಿಗಿಂತಲೂ ಹೆಚ್ಚು ಪ್ರಯೋಜನಕಾರಿಯಾಗಿದೆ. ಸಾಮಾನ್ಯವಾಗಿ, ಲಸಿಕೆ ನೀಡಿದ ಬಳಿಕ ಅದರಲ್ಲಿನ ಪ್ರತಿಕಾಯಗಳು (ಪ್ರತಿಜನಕ/ಆ್ಯಂಟಿಜೆನ್) ಮಾನವ ದೇಹದ ಪ್ರತಿಕಾಯಗಳೊಂದಿಗೆ ಸಂಸ್ಕರಣೆಗೊಳಪಡುತ್ತವೆ. ಇವು ಅಂತಿಮವಾಗಿ ಪ್ರತಿಕಾಯಗಳನ್ನು ಉತ್ಪಾದಿಸಲು ಮತ್ತು ಪ್ರಮಾಣವನ್ನು ಹೆಚ್ಚಿಸುವ (ಬಿ ಮತ್ತು ಟಿ ಜೀವಕೋಶಗಳು) ಸಕ್ರಿಯಗೊಳಿಸುತ್ತವೆ' ಎಂದು ವಿವರಿಸಿದ್ದಾರೆ.

'ಆದರೆ, ಈಗ ಅಭಿವೃದ್ಧಿಪಡಿಸುತ್ತಿರುವ ಲಸಿಕೆಯು ಒಂದು ಹೆಜ್ಜೆ ಮುಂದಿದ್ದು, ಸಕ್ರಿಯ ಎಪಿಸಿಗಳಿಂದ ಉತ್ಪನ್ನವಾಗುವ ನ್ಯಾನೊವೆಸಿಕಲ್‌ಗಳನ್ನು ಬಳಸುತ್ತದೆ. ಇದು ಈಗಾಗಲೇ ಸಂಸ್ಕರಿಸಿದ ಆ್ಯಂಟಿಜೆನ್‌ಗಳನ್ನೂ ಹೊಂದಿರುತ್ತದೆ. ಅಲ್ಲದೇ ಈ ಲಸಿಕೆಯು ಬಿ ಮತ್ತು ಟಿ ಯಂತಹ ಪ್ರತಿರಕ್ಷಣಾ ಜೀವಕೋಶಗಳು ನೇರವಾಗಿ ಕಾರ್ಯನಿರ್ವಹಿಸಲು ಅನುಕೂಲವಾಗುವಂತಹ ಅಂಶಗಳಿಂದ ಕೂಡಿರಲಿದೆ' ಎಂದೂ ಅವರು ಹೇಳಿದ್ದಾರೆ.

ಕಪ್ಪತ್ತಗುಡ್ಡದಲ್ಲಿ ಬೆಂಕಿ: ಅಂದಾಜು 55 ಹೆಕ್ಟೇರ್ ಅರಣ್ಯ ಪ್ರದೇಶ ನಾಶ

ಪ್ರಜಾವಾಣಿ ವಾರ್ತೆ

ಡಂಬಳ: ಹೋಬಳಿ ವ್ಯಾಪ್ತಿಯ ಅತ್ತಿಕಟ್ಟಿ ಹಾಗೂ ದಿಂಡೂರ ಗ್ರಾಮದ ಕಪ್ಪತ್ತ-ಗುಡ್ಡದ ವ್ಯಾಪ್ತಿಯ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ಗುರುವಾರ ಬೆಂಕಿಹೊತ್ತಿ ಉರಿಯುತ್ತಿದ್ದು ನೂರಾರು ಔಷಧಿ ಸಸ್ಯಗಳು, ಸರೀಸೃಪಗಳನ್ನು ಒಳಗೊಂಡ ಸುಮಾರು 55 ಹೆಕ್ಟೇರ್‌ನಷ್ಟು ಅರಣ್ಯ ಪ್ರದೇಶ ನಾಶವಾಗಿದೆ.

ವೇಗವಾದ ಗಾಳಿಗೆ ಬೆಂಕಿ ಹೊತ್ತಿ ಉರಿಯುತ್ತಿದ್ದು ರಾತ್ರಿಯೂ ಮುಂದುವರೆದಿದೆ. ಪ್ರತಿ ವರ್ಷ ಬೇಸಿಗೆ ಪ್ರಾರಂಭವಾದರೆ ಕಪ್ಪತ್ತ ಗುಡ್ಡಕ್ಕೆ ಹಲವು ಕಾರಣಗಳಿಂದ ಬೆಂಕಿ ಹತ್ತುವುದು ಸರ್ವೆ ಸಾಮಾನ್ಯ ಎನ್ನುವಂತಾಗಿದೆ ಎಂದು ಪರಿಸರ ವಾದಿಗಳು ಅಸಮಾಧಾನ ವ್ಯಕ್ತಪಡಿಸಿ-ದ್ದಾರೆ.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ವಲಯ ಅರಣ್ಯಾಧಿಕಾರಿ ವೀರಣ್ಣ ಮರಿಬಸಣ್ಣವರ, 'ಬೆಂಕಿ ನಂದಿಸುವ ಕಾರ್ಯ ತ್ವರಿತವಾಗಿ ನಡೆಯುತ್ತಿದೆ. ಬೆಂಕಿ ನಂದಿಸಲು ಇಲಾಖೆ ಸಿಬ್ಬಂದಿ ಹರಸಾಹಸ ಪಡುತ್ತಿದ್ದೇವೆ. ಎಷ್ಟು ಹೆಕ್ಟೇರ್ ಅರಣ್ಯ ಪ್ರದೇಶ ನಾಶವಾಗಿದೆ ಎನ್ನುವುದನ್ನು ನಿಖರವಾಗಿ ಹೇಳಲಾಗದು' ಎಂದರು.

ಮಹಡಿಯಿಂದ ತಳ್ಳಿ ಬಾಲಕಿಯ ಹತ್ಯೆ

ಧನಬಾದ್ (ಪಿಟಿಐ): ನಾಲ್ಕು ಅಂತಸ್ತಿನ ವಸತಿ ಸಮುಚ್ಚಯದ ಮೇಲಿಂದ 16 ವರ್ಷದ ಬಾಲಕಿಯನ್ನು ನಾಲ್ವರು ಯುವಕರು ಬುಧವಾರ ಕೆಳಕ್ಕೆ ತಳ್ಳಿ ಹತ್ಯೆ ಮಾಡಿರುವ ಘಟನೆ ಜಾರ್ಖಂಡ್‌ನ ಧನಬಾದ್ ಜಿಲ್ಲೆಯಲ್ಲಿ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಬಾಲಕಿಯ ತಾಯಿ ನೀಡಿರುವ ದೂರಿನಡಿ ಪ್ರಕರಣ ದಾಖಲಿಸಲಾಗಿದೆ.

'ನಾಲ್ವರು ಆರೋಪಿಗಳ ಪೈಕಿ ಇಬ್ಬರು ಅದೇ ವಸತಿ ಸಮುಚ್ಚಯ-ದಲ್ಲಿ ವಾಸಿಸುತ್ತಿದ್ದರು. ಅವರಲ್ಲಿ ಒಬ್ಬ ಆಗಾಗ ಮಗಳೊಂದಿಗೆ ಮಾತನಾಡು-ತ್ತಿದ್ದ. ಆತನೊಂದಿಗೆ ಮಾತನಾಡದಂತೆ ಎಚ್ಚರಿಕೆ ನೀಡಿದ್ದೆ. ಘಟನೆ ದಿನ ಸಂಜೆ ಆ ಯುವಕ ತನ್ನ ಸ್ನೇಹಿತರೊಂದಿಗೆ ವಸತಿ ಸಮುಚ್ಚಯದ ಮೊದಲ ಮಹಡಿಯ ಮನೆಯಲ್ಲಿ ಇದ್ದಿದ್ದನ್ನು ಗಮನಿಸಿದ್ದೆ' ಎಂದು ಬಾಲಕಿಯ ತಾಯಿ ತಿಳಿಸಿದ್ದಾರೆ.

ಗುಜರಾತ್, ಗೋವಾದಲ್ಲಿ ಖಾತೆ ತೆರೆದಿದ್ದ ಎಎಪಿ

ಕರ್ನಾಟಕ ಸೇರಿ ಐದು ರಾಜ್ಯಗಳಲ್ಲಿ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿ, ಪಂಜಾಬ್‌ನಲ್ಲಿ ಆಡಳಿತದ ಚುಕ್ಕಾಣಿ ಹಿಡಿದಿರುವ ಆಮ್ ಆದ್ಮಿ ಪಾರ್ಟಿಯು (ಎಎಪಿ), ಗುಜರಾತ್ ಹಾಗೂ ಗೋವಾದಲ್ಲಿಯೂ ಖಾತೆ ತೆರೆಯುವ ಮೂಲಕ ತನ್ನ ವಿಶ್ವಾಸವನ್ನು ಹೆಚ್ಚಿಸಿಕೊಂಡಿದೆ.

ಗುಜರಾತ್ ವಿಧಾನಸಭಾ ಚುನಾವಣೆಯಲ್ಲಿ ಶೇ 13ರಷ್ಟು ಮತಗಳನ್ನು ಪಡೆದ ಎಎಪಿ, 5 ಸ್ಥಾನಗಳಲ್ಲಿ ಗೆದ್ದಿದೆ. ಗೋವಾದಲ್ಲಿ ಎರಡು ಸ್ಥಾನಗಳನ್ನು ಗೆಲ್ಲುವ ಮೂಲಕ ಕಳೆದ ವರ್ಷ ನಡೆದ ಚುನಾವಣೆಗಳಲ್ಲಿ ತನ್ನ ಸಾಧನೆಯನ್ನು ಹೆಚ್ಚಿಸಿಕೊಂಡಿದೆ.

ಈಗ, 2023ರಲ್ಲಿ ವಿವಿಧ ರಾಜ್ಯಗಳ ವಿಧಾನಸಭೆಗಳಿಗೆ ನಡೆಯುವ ಚುನಾವಣೆಯಲ್ಲಿ ಸ್ಪರ್ಧಿಸುವ ಮೂಲಕ ತನ್ನ ನೆಲೆಯನ್ನು ವಿಸ್ತರಿಸಿಕೊಳ್ಳುವ ಪ್ರಯತ್ನ ಮುಂದುವರಿಸಲಿದೆ ಎಂದು ಪಕ್ಷದ ರಾಷ್ಟ್ರೀಯ ಕಾರ್ಯದರ್ಶಿ ಪಂಕಜಕುಮಾರ್ ಗುಪ್ತ ಅವರು ತಿಳಿಸಿದ್ದಾರೆ.

ಕರ್ನಾಟಕ, ಛತ್ತೀಸಗಡ, ಮಧ್ಯಪ್ರದೇಶ, ರಾಜಸ್ಥಾನ ಹಾಗೂ ಜಮ್ಮು ಮತ್ತು ಕಾಶ್ಮೀರ ವಿಧಾನಸಭೆ-ಗಳಿಗೆ ಇದೇ ವರ್ಷ ನಡೆಯಲಿರುವ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗ-ಳನ್ನು ಕಣಕ್ಕಿಳಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಸಾಧನೆಗಳ ಪಟ್ಟಿ: ದೆಹಲಿ ಹಾಗೂ ಪಂಜಾಬ್‌ನಲ್ಲಿ ಅಧಿಕಾರಕ್ಕೆ ಬಂದ ನಂತರ ಪಕ್ಷ ಅನುಷ್ಠಾನಗೊಳಿಸಿದ ಕಾರ್ಯಕ್ರಮಗಳು ಹಾಗೂ ಭ್ರಷ್ಟಾಚಾರ ವಿರುದ್ಧ ಕೈಗೊಂಡ ಕಠಿಣ ಕ್ರಮಗಳನ್ನು ವಿವರಿಸಿದ್ದಾರೆ.

ಭ್ರಷ್ಟಾಚಾರ ವಿರುದ್ಧದ ಹೋರಾಟದ ಭಾಗವಾಗಿ ಈವರೆಗೆ 172 ಜನರನ್ನು ಬಂಧಿಸಲಾಗಿದ್ದು, 371 ಜನರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಭಯೋತ್ಪಾದನೆ-ಯನ್ನು ಮಟ್ಟ ಹಾಕುವ ನಿಟ್ಟಿನಲ್ಲಿ 119 ಉಗ್ರರನ್ನು ಬಂಧಿಸಲಾಗಿದೆ. 385 ಶಸ್ತ್ರಾ-ಸ್ತ್ರಗಳು ಹಾಗೂ 22 ಡ್ರೋನ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಗುಪ್ತ ವಿವರಿಸಿದ್ದಾರೆ.

ಸರ್ಕಾರ ಜಮೀನು ಒತ್ತುವರಿ ವಿರುದ್ಧವೂ ಪಂಜಾಬ್ ಸರ್ಕಾರ ಕ್ರಮ ಕೈಗೊಂಡಿದೆ. ₹ 2,700 ಕೋಟಿಗೂ ಅಧಿಕ ಮೌಲ್ಯದ 9,300 ಎಕರೆಯಷ್ಟು ಜಮೀನನ್ನು ವಶಪಡಿಸಿಕೊಳ್ಳಲಾಗಿ-ದೆ. 100 ಮೊಹಲ್ಲಾ ಕ್ಲಿನಿಕ್‌ಗಳನ್ನು ತೆರೆಯಲಾಗಿದ್ದು, 5 ಲಕ್ಷಕ್ಕೂ ಅಧಿಕ ಜನರಿಗೆ ಆರೋಗ್ಯ ಸೇವೆಗಳನ್ನು ನೀಡಲಾಗಿದೆ. 21 ಸಾವಿರ ಜನರಿಗೆ ಉದ್ಯೋಗ ಒದಗಿಸಲಾಗಿದೆ. ಒಟ್ಟು ಗ್ರಾಹಕರ ಪೈಕಿ ಶೇ 86ರಷ್ಟು ಜನರಿಗೆ ಉಚಿತ ವಿದ್ಯುತ್ ಪೂರೈಕೆಗೆ ಕ್ರಮ ತೆಗೆ-ದುಕೊಳ್ಳಲಾಗಿದೆ ಎಂದೂ ಅವರು ಪ್ರಕ-ಟಣೆಯಲ್ಲಿ ತಿಳಿಸಿದ್ದಾರೆ.

2 ಲಕ್ಷ ಕೃಷಿ ಪತ್ತಿನ ಸಹಕಾರ ಸಂಘ ಸ್ಥಾಪನೆಗೆ ಕೇಂದ್ರ ಸಂಪುಟ ಒಪ್ಪಿಗೆ

ನವದೆಹಲಿ (ಪಿಟಿಐ): ಮುಂದಿನ ಐದು ವರ್ಷಗಳಲ್ಲಿ ದೇಶದಲ್ಲಿ ಎರಡು ಲಕ್ಷ ಹೊಸ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು (ಪಿಎಸಿಎಸ್) ಮತ್ತು ಡೇರಿ–ಮೀನುಗಾರಿಕಾ ಸಹಕಾರ ಸಂಘಗಳನ್ನು ತೆರೆಯಲು ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ.

ಇಲ್ಲಿಯವರೆಗೆ ಸಹಕಾರ ಸಂಘಗಳು ತೆರೆಯದ ಗ್ರಾಮಗಳು ಮತ್ತು ಪಂಚಾ-ಯ್ತಿಗಳಲ್ಲಿ ಇವುಗಳನ್ನು ಆರಂಭಿಸಲು ಸರ್ಕಾರ ನಿರ್ಧರಿಸಿದೆ. ಈ ಮೂಲಕ ದೇಶದಲ್ಲಿ ಸಹಕಾರ ಚಳವಳಿಯನ್ನು ಬಲಿಷ್ಠಗೊಳಿಸುವ ಉದ್ದೇಶ ಕೇಂದ್ರ ಸರ್ಕಾರದ್ದಾಗಿದೆ.

ದೇಶದಲ್ಲಿ ಒಟ್ಟು 99,000 ಪಿಎಸಿ ಎಸ್‌ಗಳಿದ್ದು, ಅವುಗಳಲ್ಲಿ 63,000 ಕ್ರಿಯಾಶೀಲವಾಗಿವೆ. ಉಳಿದಂತೆ ದೇಶದ 1.6 ಲಕ್ಷ ಪಂಚಾಯ್ತಿಗಳಲ್ಲಿ ಪಿಎಸಿಎ-ಸ್‌ಗಳಿಲ್ಲ. ಹಾಗೆಯೇ ಸುಮಾರು 2 ಲಕ್ಷ ಪಂಚಾಯ್ತಿಗಳಲ್ಲಿ ಯಾವುದೇ ಡೇರಿ ಸಹಕಾರ ಸಂಘಗಳಿಲ್ಲ.

ದೇಶದಲ್ಲಿ ಸಹಕಾರಿ ಆಂದೋಲನ ವನ್ನು ತಳಮಟ್ಟದಿಂದ ಬಲಪಡಿಸುವ ಉದ್ದೇಶದಿಂದ ಸಂಪುಟ ಈ ಯೋಜನೆಗೆ ಅನುಮೋದನೆ ನೀಡಿದೆ.

'ಈ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ನಬಾರ್ಡ್, ರಾಷ್ಟ್ರೀಯ ಡೇರಿ ಅಭಿವೃದ್ಧಿ ಮಂಡಳಿ (ಎನ್‌ಡಿಡಿಬಿ) ಮತ್ತು ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ (ಎನ್‌ಎಫ್‌ಡಿಬಿ) ಕ್ರಿಯಾ ಯೋಜನೆ ಸಿದ್ಧ ಪಡಿಸಲಿದೆ' ಎಂದು ಪ್ರಕಟಣೆ ತಿಳಿಸಿದೆ.

ಉತ್ತರಾಖಂಡ: ಹಿಮಚಿರತೆ ಪತ್ತೆ

ಪಿಥೋರಗಢ (ಪಿಟಿಐ): ಇದೇ ಮೊದಲ ಬಾರಿಗೆ ಉತ್ತರಾಖಂಡದ ಪಿಥೋರಗಢ ಜಿಲ್ಲೆಯ ದರ್ಮಾ ಕಣಿವೆಯ 11,120 ಮೀಟರ್ ಎತ್ತರದ ಪರ್ವತ ಶ್ರೇಣಿಯಲ್ಲಿ ಹಿಮಚಿರತೆ ಪತ್ತೆಯಾಗಿದೆ' ಎಂದು ಜಿಲ್ಲೆಯ ವಿಭಾಗೀಯ ಅರಣ್ಯ ಅಧಿಕಾರಿ ಮೋಹನ್ ದಗಾರೆ ಗುರುವಾರ ತಿಳಿಸಿದ್ದಾರೆ. ಜಿಲ್ಲೆಯ ದಾರ್ ಗ್ರಾಮದ ಬಳಿಯ ಹಿಮಚ್ಛಾದಿತ ಪ್ರದೇಶದಲ್ಲಿ ಚಿರತೆ ಕಂಡುಬಂದಿದೆ ಎಂದಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಸಮಸ್ಯೆಗಳ ನಡುವೆಯೂ ಅವಕಾಶಗಳನ್ನು ಹುಡುಕಿಕೊಳ್ಳುವುದರಲ್ಲಿ ಜಯ ಅಡಗಿದೆ.

-ಸುನ್ ಝೂ

ಬಿಬಿಸಿಯಲ್ಲಿ ಐ.ಟಿ. ಪರಿಶೀಲನೆ ವಿಮರ್ಶೆಯನ್ನು ಹತ್ತಿಕ್ಕುವ ನಡೆ

ಬಿಬಿಸಿಯ ದೆಹಲಿ ಮತ್ತು ಮುಂಬೈ ಕಚೇರಿಗಳಲ್ಲಿ ಆದಾಯ ತೆರಿಗೆ ಇಲಾಖೆಯ (ಐ.ಟಿ) 'ಪರಿಶೀಲನೆ' ಮುಂದುವರಿದಿದೆ. ಹಣಕಾಸು ವಿಚಾರದಲ್ಲಿ ಎಸಗಿದ ತಪ್ಪು ಅಥವಾ ದುರ್ನಡತೆಯ ನ್ಯಾಯಯುತವಾದ ತಪಾಸಣೆಯಂತೂ ಇದು ಖಂಡಿತಾ ಅಲ್ಲ; ಮಾಧ್ಯಮ ಸಂಸ್ಥೆಯೊಂದಕ್ಕೆ ಸರ್ಕಾರದ ಕುಮ್ಮಕ್ಕಿನಿಂದಾಗಿ ನೀಡುತ್ತಿರುವ ಕಿರುಕುಳ ಇದು. 2002ರಲ್ಲಿ ಗುಜರಾತ್‌ನಲ್ಲಿ ನಡೆದ ಕೋಮು ಗಲಭೆ ಮತ್ತು ಆಗ ಅಲ್ಲಿನ ಮುಖ್ಯಮಂತ್ರಿಯಾಗಿದ್ದ ನರೇಂದ್ರ ಮೋದಿ ಅವರ ಪಾತ್ರದ ಕುರಿತ 'ಇಂಡಿಯಾ: ದಿ ಮೋದಿ ಕ್ವೆಶ್ಚನ್' ಎಂಬ ಎರಡು ಭಾಗಗಳ ಸಾಕ್ಷ್ಯಚಿತ್ರವನ್ನು ಬಿಬಿಸಿ ಪ್ರಸಾರ ಮಾಡಿದೆ; ಬಳಿಕ ಬಿಜೆಪಿ ಮತ್ತು ಸಮಾನ ಮನಸ್ಕ ಸಂಘಟನೆಗಳು ಈ ಮಾಧ್ಯಮ ಸಂಸ್ಥೆಯನ್ನು ಟೀಕಿಸುವ ಮತ್ತು ಸಂಸ್ಥೆಯು ಭಾರತ ವಿರೋಧಿ ಎಂದು ಬಿಂಬಿಸುವ ಕೆಲಸದಲ್ಲಿ ನಿರತವಾಗಿವೆ. ಸಾಕ್ಷ್ಯಚಿತ್ರ ಪ್ರಸಾರದ ಸಂದರ್ಭ ಮತ್ತು ಬಿಬಿಸಿಯ ಉದ್ದೇಶವನ್ನು ಪ್ರಶ್ನಿಸಲಾಗಿದೆ; ಸಾಕ್ಷ್ಯಚಿತ್ರದಲ್ಲಿ ಇರುವ ವಿಚಾರಗಳು ಸುಳ್ಳು ಎಂದು ಪ್ರತಿಪಾದಿಸಲಾಗಿದೆ; ಬಿಬಿಸಿಯ ವಿರುದ್ಧ ಅಭಿಯಾನವನ್ನೇ ನಡೆಸಲಾಗಿದೆ. ಈ ಸಾಕ್ಷ್ಯಚಿತ್ರಕ್ಕೆ ನಿರ್ಬಂಧ ಹೇರಲಾಗಿದೆ. ಇದು, ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಸಂವಿಧಾನವು ಖಾತರಿ ನೀಡಿರುವ ಪ್ರಜಾಸತ್ತಾತ್ಮಕವಾದ ಸಮಾಜಕ್ಕೆ ತಕ್ಕುದಾದ ನಡೆ ಅಲ್ಲ. ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಅತ್ಯಂತ ಮಹತ್ವದ ಭಾಗವೇ ವಿಚಾರಗಳನ್ನು ತಿಳಿದುಕೊಳ್ಳುವ ಹಕ್ಕು. ಸಾಕ್ಷ್ಯಚಿತ್ರವನ್ನು ತಡೆಹಿಡಿಯುವ ಮೂಲಕ ಪೌರರಿಗೆ ಈ ಹಕ್ಕನ್ನು ನಿರಾಕರಿಸಲಾಗಿದೆ.



ಅಭಿವ್ಯಕ್ತಿ ಮತ್ತು ಮಾಧ್ಯಮ ಸ್ವಾತಂತ್ರ್ಯವು ದೇಶದಲ್ಲಿ ಕುಗ್ಗುತ್ತಲೇ ಇರುವುದು ಅತ್ಯಂತ ಅಪಾಯಕಾರಿ

ಐ.ಟಿ. ಪರಿಶೀಲನೆ ಮೂಲಕ ಸರ್ಕಾರ ಮತ್ತೂ ಒಂದು ತಪ್ಪು ಎಸಗಿದೆ. ಅಂತರರಾಷ್ಟ್ರೀಯ ಪ್ರಸಾರ ಸಂಸ್ಥೆಯ ಮೇಲೆ ಒತ್ತಡ ಹೇರಲು ಪ್ರಯತ್ನಿಸಿದೆ. ಸಾಕ್ಷ್ಯಚಿತ್ರ ತಡೆಹಿಡಿದು ಸಂತೃಪ್ತಗೊಳ್ಳದ ಸರ್ಕಾರವು ಸಂದೇಶಕಾರನಿಗೆ ಶಿಕ್ಷೆ ವಿಧಿಸಲು ಮುಂದಾಗಿದೆ. 'ವರ್ಗಾವಣೆ ವೆಚ್ಚ' ನಿಯಮಗಳನ್ನು ಬಿಬಿಸಿ ಉಲ್ಲಂಘಿಸಿದೆ ಮತ್ತು ಲಾಭದ 'ಗಣನೀಯ ಮೊತ್ತವನ್ನು ವರ್ಗಾಯಿಸಲಾಗಿದೆ' ಎಂದು ಅಧಿಕಾರಿಗಳು ಆರೋಪಿಸಿದ್ದಾರೆ. ಐ.ಟಿ. ಇಲಾಖೆಯ ಈ ಎಲ್ಲ ಪ್ರಶ್ನೆಗಳಿಗೆ ಬಿಬಿಸಿ ಉತ್ತರಿಸಬೇಕು ಮತ್ತು ಹಣಕಾಸಿನ ವಿಚಾರದಲ್ಲಿ ಯಾವುದೇ ಅಕ್ರಮ ಆಗಿದ್ದರೆ ಅದರ ಹೊಣೆಯನ್ನೂ ಹೊತ್ತುಕೊಳ್ಳಬೇಕು ಎಂಬುದರಲ್ಲಿ ಅನುಮಾನವೇನೂ ಇಲ್ಲ. ಯಾವುದೇ ತಪ್ಪು ಮಾಡಿಲ್ಲ ಎಂದು ಬಿಬಿಸಿ ಹೇಳಿದೆ; ಐ.ಟಿ. ಇಲಾಖೆ ಅಧಿಕಾರಿಗಳ ತನಿಖೆಗೆ ಸಂಪೂರ್ಣ ಸಹಕಾರ ನೀಡುವುದಾಗಿಯೂ ಹೇಳಿದೆ. ದ್ವೇಷ ಸಾಧನೆಯೇ ಈ ಪರಿಶೀಲನೆಯ ಉದ್ದೇಶ ಎಂಬುದನ್ನು ಎತ್ತಿ ತೋರಿಸುವಂತಹ ಹಲವು ಅಂಶಗಳು ಇಲ್ಲಿ ಇವೆ. ಪರಿಶೀಲನೆಗಾಗಿ ಅಧಿಕಾರಿಗಳು ನೀಡಿರುವ ಕಾರಣದಲ್ಲಿ ಅಲ್ಪ ವಿಶ್ವಾಸಾರ್ಹತೆಯೂ ಕಾಣಿಸುತ್ತಿಲ್ಲ. 'ಪರಿಶೀಲನೆ' ಎಂಬ ಪದವನ್ನು ಬಳಸಲಾಗಿದ್ದರೂ ಬಿಬಿಸಿ ಕಚೇರಿಯಲ್ಲಿ ಶೋಧವನ್ನೇ ನಡೆಸಲಾಗಿದೆ. ಇದು ಮಾಧ್ಯಮ ಕ್ಷೇತ್ರಕ್ಕೆ ಸರ್ಕಾರದ ಕಡೆಯಿಂದ ನೀಡಲಾಗಿರುವ ಸಂದೇಶವಾಗಿದೆ.

ಸಾಕ್ಷ್ಯಚಿತ್ರವು ಪ್ರಸಾರವಾದ ಕೆಲವೇ ವಾರಗಳಲ್ಲಿ ಪರಿಶೀಲನಾ ಪ್ರಕ್ರಿಯೆ ಆರಂಭವಾಗಿದೆ. ಸರ್ಕಾರದ ಈ ನಡೆಯ ಸಂದರ್ಭವೇ ಅದರ ಉದ್ದೇಶವನ್ನೂ ಸ್ಪಷ್ಟಪಡಿಸುತ್ತದೆ. ಇನ್ನೂ ಒಂದು ಪ್ರಶ್ನೆ ಇದೆ– ಸಂಸ್ಥೆಯ ವಹಿವಾಟಿನಲ್ಲಿ ಏನಾದರೂ ಅಕ್ರಮ ಆಗಿದ್ದರೆ, ಪತ್ರಕರ್ತರನ್ನು ಅದಕ್ಕೆ ಹೊಣೆಗಾರರನ್ನಾಗಿ ಮಾಡಿರುವುದು ಏಕೆ? ಸರ್ಕಾರಕ್ಕೆ ಅಪಥ್ಯವಾಗುವ ರೀತಿಯಲ್ಲಿ ನಡೆದುಕೊಂಡ ಕೆಲವು ಸಂಸ್ಥೆಗಳ ಮೇಲೆ ಈ ಹಿಂದೆಯೂ ಕ್ರಮ ಕೈಗೊಂಡ ಹಲವು ಉದಾಹರಣೆಗಳು ನಮ್ಮ ಮುಂದೆ ಇವೆ. ಬಿಬಿಸಿಯಂತಹ ವಿಸ್ತಾರ ವ್ಯಾಪ್ತಿ ಮತ್ತು ವರ್ಚಸ್ಸಿನ ಅಂತರರಾಷ್ಟ್ರೀಯ ಮಾಧ್ಯಮ ಸಂಸ್ಥೆಯ ಮೇಲೆ ಇಂತಹ ಕ್ರಮ ಕೈಗೊಂಡಿರುವುದು ಇದೇ ಮೊದಲು. ಪ್ರಜಾಪ್ರಭುತ್ವದ ಕೇಂದ್ರವೇ ಆಗಿರುವ ಅಭಿವ್ಯಕ್ತಿ ಮತ್ತು ಮಾಧ್ಯಮ ಸ್ವಾತಂತ್ರ್ಯವು ಭಾರತದಲ್ಲಿ ಕುಗ್ಗುತ್ತಲೇ ಇದೆ ಎಂಬುದನ್ನು ಇದು ಮತ್ತೆ ದೃಢಪಡಿಸಿದೆ ಹಾಗೂ ಇದು ಅತ್ಯಂತ ಅಪಾಯಕಾರಿ ಸ್ಥಿತಿ. ಮಾಧ್ಯಮಕ್ಕೆ ಕಿರುಕುಳ ನೀಡುವುದು ಸರ್ಕಾರದ ನಡೆಯ ಉದ್ದೇಶ. ಇದರಿಂದ ಸರ್ಕಾರಕ್ಕೆ ಯಾವುದೇ ಪ್ರಯೋಜನ ಆಗುವುದಿಲ್ಲ ಮತ್ತು ಅದು ತಿರುಗುಬಾಣವೇ ಆಗಲಿದೆ.

ದಿನದ ಟ್ವೀಟ್

ಮಾದರಿ ನಡೆ



ಜಗದೀಶ ಶೆಟ್ಟರ್ ತಮ್ಮ ಪಕ್ಷದ ಸಚಿವರ ವಿರುದ್ಧವೇ ಕೆಲ ಅಸಮಾಧಾನ ಹೊರಹಾಕಿದ್ದಾರೆ, ಇದು ಒಳ್ಳೆಯ ಬೆಳವಣಿಗೆ. ಮೊನ್ನೆ ಮಾಜಿ ಸಚಿವರಾದ ಸುರೇಶ್ ಕುಮಾರ್ ಸಹ ಸರ್ಕಾರದ ಮದ್ಯ ನೀತಿಯ ವಿರುದ್ಧ ಧ್ವನಿ ಎತ್ತಿದ್ದರು. ಯಾರೇ ಆಗಲಿ ತಪ್ಪು ಎಸಗಿದಾಗ ಮುಲಾಜಿಲ್ಲದೆ ಖಂಡಿಸುವವರೇ ನೈತಿಕತೆ ಇರುವವರು. ಅದನ್ನು ಬಿಟ್ಟು, ಮಾಡಿದ್ದೆಲ್ಲಾ ಸರಿ ಎಂದರೆ ಹೇಗೆ?

ರೋಹಿತ್ ಸಿಂಹ, ಎಂಜಿನಿಯರ್

ಕಿಡಿನುಡಿ

2018ರ ಚುನಾವಣೆ ಪ್ರಣಾಳಿಕೆಯಲ್ಲಿ 600 ಭರವಸೆ ನೀಡಿದ್ದ ಬಿಜೆಪಿ, ಶೇಕಡ 91ರಷ್ಟು ಭರವಸೆಗಳನ್ನು ಈಡೇರಿಸಿಲ್ಲ. ರೈತರಿಗೆ ನೀಡಿದ್ದ 112 ಭರವಸೆಗಳ ಪೈಕಿ 97 ಭರವಸೆಗಳನ್ನು ಈಡೇರಿಸಿಲ್ಲ. ಮಹಿಳೆಯರಿಗೆ ನೀಡಿದ್ದ 24 ಭರವಸೆಗಳ ಪೈಕಿ 22 ಅನ್ನು ಈಡೇರಿಸಿಲ್ಲ. ಯುವಕರಿಗೆ ನೀಡಿದ್ದ 18 ಭರವಸೆಗಳಲ್ಲಿ 17 ಅನ್ನು ಈಡೇರಿಸಿಲ್ಲ.



ರಣದೀಪ್ ಸಿಂಗ್ ಸುರ್ಜೇವಾಲಾ
ಕಾಂಗ್ರೆಸ್ ಪಕ್ಷದ ಕರ್ನಾಟಕ ಉಸ್ತುವಾರಿ

25 ವರ್ಷಗಳ ಹಿಂದೆ

ಮಂಗಳವಾರ, 17-2-1998

- **ವ್ಯಾಪಕ ಗಲಭೆ, ಹಿಂಸೆಗಳ ನಡುವೆ ದೇಶದಾದ್ಯಂತ ಶೇ 55 ಮತದಾನ**

ನವದೆಹಲಿ, ಫೆ. 16 (ಪಿಟಿಐ, ಯುಎನ್ಐ)– ಹನ್ನೆರಡನೇ ಲೋಕಸಭೆಗೆ 222 ಕ್ಷೇತ್ರಗಳಲ್ಲಿ ಇಂದು ನಡೆದ ಮೊದಲ ಸುತ್ತಿನ ಚುನಾವಣೆಯಲ್ಲಿ ಶೇ 50ರಿಂದ 55ರಷ್ಟು ಮತದಾನವಾಗಿದೆ. ಬಿಹಾರ, ಅಸ್ಸಾಂ ಮತ್ತು ಆಂಧ್ರಪ್ರದೇಶದಲ್ಲಿ ಸಂಭವಿಸಿದ ಹಿಂಸಾಚಾರಕ್ಕೆ 27 ಮಂದಿ ಬಲಿಯಾಗಿದ್ದಾರೆ.

ಬಿಹಾರದಲ್ಲಿ 23 ಮಂದಿ, ಅಸ್ಸಾಂನಲ್ಲಿ ಒಬ್ಬ ಮತ್ತು ಆಂಧ್ರಪ್ರದೇಶದಲ್ಲಿ ಮೂರು ಮಂದಿ ಸತ್ತಿದ್ದಾರೆ. ಮತಗಟ್ಟೆ ವಶಪಡಿಸಿಕೊಂಡು ಮತಪತ್ರಗಳು ಹಾಗೂ ಇತರ ಚುನಾವಣಾ ಸಾಮಗ್ರಿಗಳನ್ನು ಸುಟ್ಟಿರುವ ಘಟನೆಗಳು ಬಿಹಾರ ಮತ್ತು ಅಸ್ಸಾಂನಿಂದ ವರದಿಯಾಗಿವೆ.

ಬಿಹಾರದಲ್ಲಿ ಚುನಾವಣಾ ಹಿಂಸೆ ಮತ್ತು ಅಕ್ರಮ ಸಂಭವಿಸಿದ ಮತಗಟ್ಟೆಗಳಲ್ಲಿ ಮರು ಮತದಾನಕ್ಕೆ ಈಗಾಗಲೇ ಆದೇಶ ನೀಡಲಾಗಿದೆ ಎಂದು ಕೇಂದ್ರ ಗೃಹ ಕಾರ್ಯದರ್ಶಿ ಬಿ.ಪಿ.ಸಿಂಗ್ ಅವರು ತಿಳಿಸಿದ್ದಾರೆ. ಆದರೆ ಈ ಬಗ್ಗೆ ಪರಿಶೀಲಿಸುವುದಾಗಿ ಮುಖ್ಯ ಚುನಾವಣಾ ಆಯುಕ್ತ ಎಂ.ಎಸ್.ಗಿಲ್ ಅವರು ಹೇಳಿದ್ದಾರೆ.

- **ರಾಜ್ಯದಲ್ಲಿ ಸರಾಸರಿ ಶೇ 60ರಷ್ಟು ಮತದಾನ**

ಬೆಂಗಳೂರು, ಫೆ. 16– ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಮಾಜಿ ಮುಖ್ಯಮಂತ್ರಿಗಳಾದ ಎಸ್.ಬಂಗಾರಪ್ಪ, ಎಂ.ವೀರಪ್ಪ ಮೊಯಿಲಿ, ಕೇಂದ್ರದ ಮಾಜಿ ಸಚಿವರಾದ ಸಿ.ಕೆ.ಜಾಫರ್ ಷರೀಫ್, ಬಿ.ಶಂಕರಾನಂದ, ಮಾರ್ಗರೆಟ್ ಆಳ್ವ, ಬಿ.ಜನಾರ್ದನ ಪೂಜಾರಿ ಸೇರಿ ಹಲವು ಘಟಾನುಘಟಿಗಳ ರಾಜಕೀಯ ಭವಿಷ್ಯವನ್ನು ನಿರ್ಧರಿಸುವ ಮತದಾನ ಕೆಲವು ಸಣ್ಣ ಪುಟ್ಟ ಘಟನೆ ಬಿಟ್ಟರೆ ರಾಜ್ಯದಾದ್ಯಂತ ಇಂದು ಶಾಂತಿಯುತವಾಗಿತ್ತು.

50 ವರ್ಷಗಳ ಹಿಂದೆ

ಶನಿವಾರ, 17-2-1973

- **ಅಭಾವ ಪ್ರದೇಶಗಳಲ್ಲಿ 6 ಲಕ್ಷ ಜನರಿಗೆ ಕೆಲಸಕ್ಕೆ ಸಮಗ್ರ ವ್ಯವಸ್ಥೆ**

ಬೆಂಗಳೂರು, ಫೆ. 16– ಮಾರ್ಚ್–ಏಪ್ರಿಲ್ ತಿಂಗಳ ಹೊತ್ತಿಗೆ ರಾಜ್ಯದ ಉತ್ತರದ ನಾಲ್ಕು ಅಭಾವಪೀಡಿತ ಜಿಲ್ಲೆಗಳಲ್ಲಿ ಪರಿಹಾರ ಕಾಮಗಾರಿಗಳಲ್ಲಿ ನಿರತರಾಗಿರುವವರ ಸಂಖ್ಯೆಯನ್ನು ಆರು ಲಕ್ಷಗಳಿಗೆ ಏರಿಸಲು ಸರ್ಕಾರ ಸಮಗ್ರ ವ್ಯವಸ್ಥೆ ಮಾಡಿದೆ.

ಕಲಬುರಗಿಯಲ್ಲಿ ಎರಡು ಲಕ್ಷ, ಬಿಜಾಪುರದಲ್ಲಿ ಎರಡು ಲಕ್ಷ ಹಾಗೂ ಬೀದರ್, ಬೆಳಗಾವಿ ಜಿಲ್ಲೆಗಳಲ್ಲಿ ತಲಾ ಒಂದು ಲಕ್ಷದಂತೆ, ಉದ್ಯೋಗ ನಿರ್ಮಾಣಕ್ಕೆ ಸಿದ್ಧತೆಯಾಗಿದೆ ಎಂದು ಅರ್ಥಮಂತ್ರಿ ಶ್ರೀ ಎಂ.ವೈ.ಘೋರ್ಪಡೆ ಅವರು ಇಂದು ವಿಧಾನಸಭೆಯಲ್ಲಿ ತಿಳಿಸಿದರು.

ರಾಜ್ಯಪಾಲರ ಭಾಷಣಕ್ಕೆ ವಂದನೆ ಅರ್ಪಿಸುವ ನಿರ್ಣಯದ ಮೇಲೆ ಚರ್ಚೆ ನಡೆಯುತ್ತಿದ್ದಾಗ, ಒಂದು ಘಟ್ಟದಲ್ಲಿ ಮಧ್ಯಪ್ರವೇಶಿಸಿದ ಅರ್ಥ ಸಚಿವರು ಟೀಕೆಗಳಿಗೆ ಉತ್ತರಿಸಿ, 'ನಿರ್ದಿಷ್ಟ ಕಾರ್ಯಕ್ರಮ ನಮ್ಮಲ್ಲಿದೆ; ಅದನ್ನು ನೀವು ಒಪ್ಪಬಹುದು, ಇಲ್ಲವೇ ಬಿಡಬಹುದು. ಆದರೆ ಸರ್ಕಾರ ಏನೂ ಮಾಡುತ್ತಿಲ್ಲ ಎಂದು ಕಡೆಗಣಿಸಲಾಗದು' ಎಂದು ವಿರೋಧ ಪಕ್ಷದ ನಾಯಕರಿಗೆ ಹೇಳಿದರು.

- **ತೆಲಂಗಾಣದ ಏಳು ಜನ ಕಾಂಗ್ರೆಸ್ ಎಂ.ಪಿ.ಗಳ ರಾಜೀನಾಮೆ ಪತ್ರ**

ಹೈದರಾಬಾದ್, ಫೆ. 16– ತೆಲಂಗಾಣ ಪ್ರದೇಶದ ಏಳು ಮಂದಿ ಸಂಸತ್ ಸದಸ್ಯರು ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ನೀಡಿರುವ ರಾಜೀನಾಮೆ ಪತ್ರಗಳನ್ನು ಕಾಂಗ್ರೆಸ್ ಅಧ್ಯಕ್ಷರಿಗೆ ಪ್ರತ್ಯೇಕ ತೆಲಂಗಾಣ ಕಾಂಗ್ರೆಸ್ ವೇದಿಕೆ ಅಧ್ಯಕ್ಷ ಡಾ.ಎಂ.ಚೆನ್ನಾರೆಡ್ಡಿ ಅವರು ಇಂದು ಕಳುಹಿಸಿದ್ದಾರೆ.

ಸಂಸತ್ ಸದಸ್ಯ ಡಾ.ಜಿ.ಎಸ್.ಮೇಲ್ಕೋಟೆ ಅವರ ಮೂಲಕ ಈ ರಾಜೀನಾಮೆ ಪತ್ರ ಕಳುಹಿಸಿಕೊಡಲಾಗಿದೆ. ಪ್ರತ್ಯೇಕ ತೆಲಂಗಾಣ ರಚನೆಗೆ ಒತ್ತಾಯಪಡಿಸುವುದಕ್ಕಾಗಿ ಕಾಂಗ್ರೆಸ್ ಫೋರಂನ ಕಾರ್ಯಕಾರಿ ಸಮಿತಿಯು ಫೆ.13ರಂದು ಕೈಗೊಂಡ ನಿರ್ಧಾರದ ಪ್ರಕಾರ ಈ ಕ್ರಮ ಜರುಗಿಸಲಾಗಿದೆ.

ನೂರು ದಿನಗಳ ಕೆಲಸಕ್ಕೆ ನೂರೆಂಟು ತಕರಾರು?

ಉದ್ಯೋಗ ಖಾತರಿ: ತಳಮಟ್ಟದ ವಾಸ್ತವ



ವಿಶ್ಲೇಷಣೆ

ಶಾರದಾ ಗೋಪಾಲ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು 2007ರಲ್ಲಿ ಆರಂಭವಾದಾಗಿನಿಂದಲೂ ಆ ಹಳ್ಳಿಯ ಹೆಣ್ಣುಮಕ್ಕಳು ಪಂಚಾಯಿತಿಯಲ್ಲಿ ಕೆಲಸ ದೊರಕಿಸಿಕೊಂಡು, ತಮ್ಮ ತಮ್ಮ ಗುಂಪುಗಳನ್ನು ಆತ್ಮವಿಶ್ವಾಸದಿಂದ ಮುನ್ನಡೆಸುತ್ತಾ ಬಂದಿದ್ದರು. ಆದರೆ ಇತ್ತೀಚೆಗೆ ಅವರನ್ನು ಭೇಟಿಯಾಗಿ ಕೇಳಿದಾಗ, 'ಕೆಲಸ ಮಾಡುತ್ತಿಲ್ಲರೀ, ದೊಡ್ಡ ಫೋನ್ ಬೇಕಂತೆ, ಎಂಟನೇ ಇಯತ್ತೆ ಪಾಸಾಗಿರಬೇಕಂತೆ. ಎಂಟನೇ ಇಯತ್ತೇನೂ ಪಾಸಾಗಿಲ್ಲ, ದೊಡ್ಡ ಫೋನ್ ಖರೀದಿ ಮಾಡೊ ತಾಕತ್ತೂ ನಮಗಿಲ್ಲ' ಎಂದ 'ಕಾಯಕಬಂಧು' ರುಕ್ಮಿಣಿಯ ನಿಟ್ಟುಸಿರಿನಲ್ಲಿ ಅವಳೊಬ್ಬಳಲ್ಲ, 75 ಹೆಣ್ಣುಮಕ್ಕಳು ಕೆಲಸ ಕಳೆದುಕೊಂಡ ದುಃಖ ತುಂಬಿತ್ತು.

ಖಾನಾಪುರ ತಾಲ್ಲೂಕಿನ ಹಿಂಡಲಗಿ ಎಂಬ ಆ ಹಳ್ಳಿಯಲ್ಲಿ ತಲಾ 25 ಜನರ ಮೂರು ಗುಂಪುಗಳು ಕೆಲಸದಲ್ಲಿ ತೊಡಗಿದ್ದವು. ಆಯಾ ಗುಂಪಿನ ಮುಂದಾಳುಗಳಾದ ಕಾಯಕಬಂಧುಗಳು ಸ್ವಂತ ದುಡ್ಡಿನಲ್ಲಿ ಖರೀದಿಸಿದ ಸ್ಮಾರ್ಟ್‌ಫೋನ್ ಹೊಂದಿರಬೇಕು ಮತ್ತು 8ನೇ ಇಯತ್ತೆ ಪಾಸಾಗಿರಲೇಬೇಕು ಎಂಬ ನಿಯಮದಿಂದಾಗಿ ಮೂರೂ ಗುಂಪಿನ ಕಾಯಕಬಂಧುಗಳು ಕೆಲಸ ಕಳೆದುಕೊಳ್ಳಬೇಕಾಯಿತು. ಎಂಟನೇ ಇಯತ್ತೆ ಪಾಸಾಗಿರುವ, ಸ್ಮಾರ್ಟ್‌ಫೋನ್ ಇರುವ, ಮುಂದಾಳತ್ವ ಇರುವ ಬೇರೆ ಮಹಿಳೆಯರು ಯಾರೂ ಇಲ್ಲದ ಕಾರಣ, ಉಳಿದ ಮಹಿಳೆಯರಿಗೂ ಇಂತಹ ಸ್ಥಿತಿ ಬಂದಿದೆ.

'ಸ್ಮಾರ್ಟ್‌ಫೋನಿನಲ್ಲಿ ಫೋಟೊಗಳನ್ನು ದಿನಕ್ಕೆ ಎರಡು ಬಾರಿ ಅಪ್‌ಲೋಡ್ ಮಾಡುವ ಕಾರ್ಯ ಸರಾಗವಾಗಿ ಆಗುತ್ತಿದೆ' ಎಂಬ ಸರ್ಕಾರದ ಹೇಳಿಕೆ ಸಖೇದಾಶ್ಚರ್ಯವನ್ನು ಉಂಟುಮಾಡುತ್ತದೆ. ಎಲ್ಲೆಲ್ಲಿ ಜನ ಕೆಲಸ ಮಾಡುತ್ತಿದ್ದಾರೋ ಅಲ್ಲೆಲ್ಲ ಗ್ರಾಮಗಳ ಸಮೀಪ ಕೆರೆ ಹೂಳೆತ್ತುವ ಕೆಲಸವೆಲ್ಲ ಮುಗಿದು, ಈಗ ದೂರದ ಅರಣ್ಯದಲ್ಲಿ ಟ್ರೆಂಚ್, ಪ್ರಾಣಿಗಳಿಗೆ ಕುಡಿಯುವ ನೀರಿನ ಹೊಂಡಗಳ ನಿರ್ಮಾಣ ಕಾರ್ಯ ನಡೆಯುತ್ತಿರುವಲ್ಲಿ, ತಲೆಕೆಳಗಾಗಿ ನಿಂತರೂ ನೆಟ್‌ವರ್ಕ್ ಸಿಗುವುದಿಲ್ಲ. ಬಿಹಾರ, ಛತ್ತೀಸಗಡ, ಕರ್ನಾಟಕ, ರಾಜಸ್ಥಾನ, ಉತ್ತರಪ್ರದೇಶ, ಪಶ್ಚಿಮ ಬಂಗಾಳದಲ್ಲಿ ಆ್ಯಪ್ ಅನ್ನು ಬಳಸಲೇಬೇಕೆಂಬ ಒತ್ತಾಯ ಬಂದುದರ ಫಲವಾಗಿ, ಮೇಲೆ ಹೇಳಿದಂತಹ ಬಹಳಷ್ಟು ಕಾಯಕಬಂಧುಗಳು ಕೆಲಸ ಬಿಡಲೇಬೇಕಾಗಿದೆ. ಮಹಿಳೆಯರಲ್ಲಿದ್ದ ಮುಂದಾಳತ್ವವನ್ನು ತಂತ್ರಜ್ಞಾನವು ಹೊಸಕಿ ಹಾಕಿದ ಪ್ರಸಂಗವಿದು.

ಇದನ್ನು ವಿರೋಧಿಸಿ ದೇಶದ ಎಲ್ಲೆಡೆ ಧರಣಿ, ಪ್ರದರ್ಶನಗಳು ನಡೆದದ್ದು ಬಹಳಷ್ಟು ಸಲ ವರದಿಯಾಗಿದ್ದರೂ 'ಫೋಟೊ ಅಪ್‌ಲೋಡ್ ಕಾರ್ಯ ಸರಾಗವಾಗಿ ನಡೆದಿದೆ' ಎನ್ನುವ ಸರ್ಕಾರದ ನಜರಿಗೆ ಅದು ಬೀಳದಿರುವುದು ಆಶ್ಚರ್ಯ. ಶಹರದ ಮನೆಗಳಲ್ಲಿಯೇ ಒಂದುಕಡೆ ಸಿಕ್ಕರೆ ಇನ್ನೊಂದು ಕಡೆ ನೆಟ್‌ವರ್ಕ್ ಸಿಗದ ಸ್ಥಿತಿಯಲ್ಲಿ, ಕಾಡುಮೇಡುಗಳಲ್ಲಿ ಕೆಲಸ ಮಾಡುವವರಿಗೆ ನೆಟ್‌ವರ್ಕ್ ಸಿಗುವುದೆಂಬುದು ಸುಳ್ಳಿನ ಗೋಪುರವಲ್ಲದೇ ಇನ್ನೇನು? ಫೋಟೊದಲ್ಲಿ ಕಾಣಿಸಿಕೊಂಡಿಲ್ಲ ಎಂಬ ಕಾರಣದಿಂದಾಗಿ ವಾರದಲ್ಲಿ ಮೂರು ಹಾಜರಿಗಳನ್ನು ಕಳೆದುಕೊಂಡಿರುವ ಅದೆಷ್ಟೋ ಉದಾಹರಣೆಗಳು ಇಂಡಿ ತಾಲ್ಲೂಕಿನ ಪಂಚಾಯಿತಿಗಳಲ್ಲಿ ಸಿಗುತ್ತವೆ.

ಕೆಲಸದ ಜಾಗದಲ್ಲಿ ಫೋಟೊ ಅಪ್‌ಲೋಡ್ ಮಾಡುವುದು ಕಷ್ಟವಾಗುತ್ತಿರುವುದನ್ನು ತಿಳಿದು ಸರ್ಕಾರವು ಆಫ್‌ಲೈನ್ ಫೋಟೊಗಳನ್ನು ಅಪ್‌ಲೋಡ್ ಮಾಡುವುದರ ಬಗ್ಗೆಯೂ ಮಾತಾಡಿತು. ಒಂದು ತಗ್ಗನ್ನು ಮುಚ್ಚಲು ಇನ್ನೊಂದು ಗುಂಡಿಯನ್ನು ತೋಡಿದ ಕತೆಯಿದು. ಕೂಲಿ ಪಾವತಿಯ ವಿಷಯದಲ್ಲಿ ಸರ್ಕಾರ ಈ ರೀತಿಯ ಪ್ರಯೋಗಗಳನ್ನು ಮಾಡುವುದು ಸಮಂಜಸವಲ್ಲ. ಕೆಲಸ ಮಾಡಿದವರಿಗೆ ಕೊಡಬೇಕಾದ ಕೂಲಿಯನ್ನು ತಕ್ಷಣವೇ ಪಾವತಿ ಮಾಡುವುದು ಸರ್ಕಾರದ ಜವಾಬ್ದಾರಿ. ಅದನ್ನವರು ಯಾವ ನೆವ ಹೇಳಿಯೂ ತಪ್ಪಿಸಿಕೊಳ್ಳಲಾಗದು.

2023–24ರ ಬಜೆಟ್‌ನಲ್ಲಿ ಕೇಂದ್ರ ಸರ್ಕಾರವು ಉದ್ಯೋಗ ಖಾತರಿಗೆ ಹಿಂದಿನ ವರ್ಷಕ್ಕಿಂತ ಕಡಿಮೆ ಹಣ ಇಟ್ಟಿರುವುದಲ್ಲದೆ ತನ್ನ ಈ ನಡೆಗೆ ಕೆಲವು ಅಂಶಗಳ ಸಮರ್ಥನೆ ಕೊಟ್ಟಿರುವುದನ್ನು ನೋಡಿದರೆ, ನಿಜ ಪರಿಸ್ಥಿತಿಯ ಕಲ್ಪನೆಯೇ ಅದಕ್ಕಿಲ್ಲವೋ ಅಥವಾ ಗ್ರಾಮೀಣ ಉದ್ಯೋಗದ ಬಗ್ಗೆ ಅಷ್ಟು ಉಪೇಕ್ಷೆಯೋ ಅರ್ಥವಾಗುವುದಿಲ್ಲ.

'2022- 23ರಲ್ಲಿ ಶೇ 99.81ರಷ್ಟು ಬೇಡಿಕೆಗೆ ತಕ್ಕಂತೆ ಕೆಲಸ ಸಿಕ್ಕಿದೆ. ಕೆಲಸ ಕೇಳಿಯೂ ಸಿಕ್ಕಿಲ್ಲದ ಉದಾಹರಣೆ ಇಲ್ಲವೇ ಇಲ್ಲ' ಎನ್ನುತ್ತದೆ ಸರ್ಕಾರ. ಆದರೆ ಎಂ.ಐ.ಎಸ್. ಅಂದರೆ 'ಮಾಹಿತಿ ನಿರ್ವಹಣಾ ವ್ಯವಸ್ಥೆ'ಯಡಿ ಕಂಪ್ಯೂಟರಿನಲ್ಲಿ ತೋರಿಸಿದ ಸಂಖ್ಯೆಯೇ ಕೆಲಸಕ್ಕೆ ಇರುವ ಬೇಡಿಕೆಯ ನಿಜವಾದ ಸಂಖ್ಯೆ ಅಲ್ಲ. ಜನರ ಬೇಡಿಕೆಗಳನ್ನು ಅಲ್ಲಲ್ಲಿಯೇ ತಿರಸ್ಕರಿಸಿ ಹಿಂದಕ್ಕೆ ಕಳುಹಿಸುವುದನ್ನು ನಾವು ತಳಮಟ್ಟದಲ್ಲಿ ನೋಡುತ್ತಿದ್ದೇವೆ.

ಅಜೀಮ್ ಪ್ರೇಮ್‌ಜಿ ವಿಶ್ವವಿದ್ಯಾಲಯದ ಒಂದು ಅಧ್ಯಯನವು ತೋರಿಸಿರುವಂತೆ, ಕೆಲಸ ಬೇಕಾಗಿದ್ದರೂ ತಮ್ಮ ಅರ್ಜಿ ಸ್ವೀಕೃತವಾಗಿಲ್ಲದ ಕಾರಣದಿಂದ ಮನೆಯಲ್ಲೇ ಕುಳಿತಿರುವ ಅದೆಷ್ಟೋ ಗುಂಪುಗಳಿವೆ. ಉದ್ಯೋಗ ಖಾತರಿಯಲ್ಲಿ ಯಾವ ರೀತಿಯಲ್ಲಿ ಉದ್ಯೋಗ ಚೀಟಿಗಳನ್ನು ಪಡೆಯಬಹುದು, ಯಾವ ರೀತಿಯಲ್ಲಿ ಅರ್ಜಿ ಹಾಕಬೇಕು ಎನ್ನುವುದರ ಬಗ್ಗೆಯೆಲ್ಲ ಇನ್ನೂ ಸ್ವಲ್ಪವೂ ಅರಿವಿಲ್ಲದ ಅನೇಕ ಪ್ರದೇಶಗಳು ದೇಶದ ಎಲ್ಲ ಭಾಗಗಳಲ್ಲೂ ಇವೆ. 'ಇದು ಸಿಗುವ ಕೆಲಸವಲ್ಲ ಬಿಡು' ಎಂದು ಕೈಚೆಲ್ಲಿ ಬೇರೆಡೆ ಕೆಲಸ ಹುಡುಕಿ ಹೋಗಿರುವಂಥ ಪ್ರಸಂಗಗಳು ಬೇಕಾದಷ್ಟು ಇವೆ. ಸರ್ಕಾರದಿಂದ ಹಣ ಬಿಡುಗಡೆಯೇ ಆಗದ ಕಾರಣ ಪಂಚಾಯಿತಿಗಳು ಕೆಲಸದ ಅರ್ಜಿಗಳನ್ನು ನಿರಾಕರಿಸುವುದು ಎಲ್ಲೆಡೆ ಕಾಣಸಿಗುತ್ತದೆ. ದೆಹಲಿಯಲ್ಲಿ ಕುಳಿತು ಕಂಪ್ಯೂಟರಿನಲ್ಲಿ ಬಂದ ಮಾಹಿತಿಯನ್ನು ಮಾತ್ರ ನೋಡುವ ಅಧಿಕಾರಿ ವರ್ಗಕ್ಕೆ ಹಳ್ಳಿಗಳಲ್ಲಿ ನಡೆದಿರುವುದು ತಿಳಿಯುವ ಬಗೆಯಾದರೂ ಹೇಗೆ?



'ಈ ಸಲದ ಬಜೆಟ್‌ನಲ್ಲಿ 60,000 ಕೋಟಿ ರೂಪಾಯಿ ತೆಗೆದಿರಿಸಲಾಗಿದೆ. ಅದು ಸಾಕು. ಅಕಸ್ಮಾತ್ ಇನ್ನೂ ಹೆಚ್ಚಿನ ಬೇಡಿಕೆ ಬಂದರೆ ಕೊಡೋಣ' ಎನ್ನುತ್ತಿದೆ ಸರ್ಕಾರ. ಆದರೆ ಪ್ರತಿವರ್ಷವೂ ಹಿಂದಿನ ವರ್ಷದ ಕೂಲಿ ಬಾಕಿ ಇರುವುದನ್ನು ನೋಡುತ್ತಲೇ ಇದ್ದೇವೆ. ಈ ವರ್ಷ ಫೆಬ್ರುವರಿಯಲ್ಲಿಯೇ 10,000 ಕೋಟಿ ರೂಪಾಯಿ ಪಾವತಿಯಾಗಬೇಕಿರುವುದು ಬಾಕಿಯಿದೆ. ಕೂಲಿ ಹಣ ಪಾವತಿ ತಡವಾಗುವುದು ಮತ್ತು ಆ ಕಾರಣಕ್ಕಾಗಿ ಕೆಲಸ ಕೊಡಲು ನಿರಾಕರಿಸುವ ವಿಷವೃತ್ತವನ್ನು ಭೇದಿಸುವುದಕ್ಕಾಗಿಯೇ ಉದ್ಯೋಗ ಖಾತರಿಗಾಗಿ ಹೆಚ್ಚಿನ ಹಣ ಮೀಸಲಿಡುವುದು ಅತಿ ಅವಶ್ಯ. ಸರ್ಕಾರದ ಮೂರನೆಯ ಸಮರ್ಥನೆ ಏನೆಂದರೆ, ಸಮಯಕ್ಕೆ ಸರಿಯಾಗಿ ಕೂಲಿಯು 'ಜನರೇಟ್' ಆಗುತ್ತಿದೆ. ಫೆಬ್ರುವರಿ 7ರ ವರದಿಯ ಪ್ರಕಾರ, ಶೇ 95.97ರಷ್ಟು ಮಂದಿಗೆ 15 ದಿನಗಳೊಳಗಾಗಿ ಕೂಲಿಯನ್ನು ಕೊಡಲಾಗಿದೆ ಎಂಬುದು. ಚೋದ್ಯವೆಂದರೆ ಕೂಲಿಪಾವತಿ ಆಗುತ್ತಿದೆ ಎಂದು ಹೇಳುವ ಬದಲಿಗೆ 'ಜನರೇಟ್ ಆಗುತ್ತಿದೆ' ಎನ್ನುತ್ತದೆ ಅದು. ಹಣ ಪಾವತಿಯ ಆದೇಶಗಳು ಜನರೇಟ್ ಆದ ನಂತರವೂ ಹಣಪಾವತಿ ಆಗುತ್ತಿಲ್ಲವೆಂಬುದು ಎಲ್ಲರಿಗೂ ಗೊತ್ತು.

ಯಾವಾಗಾದರೊಮ್ಮೆ ಆಗುವ ಅಪರೂಪದ ಪ್ರಸಂಗ ಇದಲ್ಲ. ಬದಲಿಗೆ, ಕೂಲಿ ಪಾವತಿ ಆದರೆ ಅದೇ ದೊಡ್ಡ ಸುದ್ದಿ. ನಾಲ್ಕು ಬೇರೆಬೇರೆ ರಾಜ್ಯಗಳಲ್ಲಿ ಮಾಡಿದ, ಎರಡು ಸಾವಿರ ಕೂಲಿಕಾರರನ್ನು ಒಳಗೊಂಡ ಸಮೀಕ್ಷೆಯು ಕೋವಿಡ್ ವೇಳೆ ಬರೀ ಶೇ 36ರಷ್ಟು ಕುಟುಂಬಗಳಿಗೆ ಕೂಲಿ ಹಣ ಪಾವತಿಯಾಗಿದ್ದನ್ನು ಎತ್ತಿ ತೋರಿಸುತ್ತದೆ.

ಫೆಬ್ರುವರಿಯಿಂದ 'ಆಧಾರ್'ಗೆ ಅನುಗುಣವಾಗಿ ಮಾತ್ರವೇ ಹಣ ಪಾವತಿಯಾಗುವುದೆಂಬ ಆದೇಶವು ಈಗಾಗಲೇ ಎಲ್ಲ ಪಂಚಾಯಿತಿಗಳಿಗೆ ತಲುಪಿದೆ. ಅಂದರೆ ಕೂಲಿಕಾರರ ಬ್ಯಾಂಕ್ ಖಾತೆ ಮತ್ತು ಅವರ ಜಾಬ್ ಕಾರ್ಡ್ ಎರಡೂ ಆಧಾರ್‌ನ ಜೊತೆ ಜೋಡಣೆಯಾಗಿದ್ದರೆ ಮಾತ್ರ ಕೂಲಿಪಾವತಿ! ಕೂಲಿಕಾರರು ಕೆಲಸ ಬಿಟ್ಟು ಪಂಚಾಯಿತಿ, ಬ್ಯಾಂಕ್ ಎಂದು ಅಲೆದಾಡಬೇಕೀಗ. ಬಜೆಟ್ ಮಂಡಿಸುವಾಗಿನ ಹಣಕಾಸು ಸಚಿವಾಲಯದ ಹೇಳಿಕೆ ಮತ್ತು ಅದರ ಮಾಹಿತಿ ಮೂಲಗಳನ್ನು ಸಚಿವಾಲಯವು ಪುನರ್‌ಪರೀಕ್ಷಿಸುವ ಅಗತ್ಯ ಎದ್ದು ಕಾಣಿಸುತ್ತಿದೆ. ಸುಳ್ಳಿನ ಗೋಪುರ ಬಹುಕಾಲ ನಿಲ್ಲದು. ಆ ಗೋಪುರದೊಂದಿಗೆ ಸರ್ಕಾರದ ಮೇಲಿಟ್ಟ ವಿಶ್ವಾಸ ಮತ್ತು ಕಾಯ್ದೆಯ ಆಶಯ ಸ್ತಂಭವೂ ಕೆಳಗುರುಳಿ ಬೀಳುವ ಸಾಧ್ಯತೆ ಬಹಳಷ್ಟಿರುತ್ತದೆ.

ಗ್ರಾಮೀಣ ಉದ್ಯೋಗ ಖಾತರಿಯ ಡಿಜಿಟಲೀಕರಣ, ಆ್ಯಪ್ ಆಧಾರಿತ ಹಾಜರಿ ಹಾಗೂ ಆಧಾರ್ ಆಧಾರಿತ ಹಣ ಪಾವತಿಯ ವಿರುದ್ಧ ಉದ್ಯೋಗ ಖಾತರಿಯ ರಾಷ್ಟ್ರ ಮಟ್ಟದ ಒಕ್ಕೂಟವು ಅನಿರ್ದಿಷ್ಟ ಅವಧಿಯ ಧರಣಿಯನ್ನು ದೆಹಲಿಯ ಜಂತರ್‌ಮಂತರ್‌ನಲ್ಲಿ ಆರಂಭಿಸಿದೆ. ನೂರು ದಿನಗಳ ಕೆಲಸಕ್ಕೆ ನೂರು ದಿನಗಳ ಸತ್ಯಾಗ್ರಹ.

ಚುರುಮುರಿ



ಏರೋ ಷೋ!

• ಬಿ.ಎನ್.ಮಲ್ಲೇಶ್

'ರೀ... ಟಿ.ವಿ ರಿಮೋಟ್ ಕೊಡಿ ಇಲ್ಲಿ, ನಾನು ಏರೋ ಇಂಡಿಯಾ ಷೋ ನೋಡಬೇಕು. ಆಕಾಶದಲ್ಲಿ ಎಂಥೆಂಥ ವಿಮಾನಗಳು ಹೆಂಗೆಂಗೆ ಚಮತ್ಕಾರ ಮಾಡ್ತವೆ ಗೊತ್ತಾ?' ಮಡದಿ ರಿಮೋಟ್ ಕೇಳಿದಾಗ ನ್ಯೂಸ್ ನೋಡ್ತಿದ್ದ ನಾನು 'ಇರು, ಮುಂದಿನ ಮುಖ್ಯಮಂತ್ರಿ ಯಾರು ಅನ್ನೋ ಸುದ್ದಿ ಬರ್ತಿದೆ, ನೋಡಿ ಕೊಡ್ತೀನಿ' ಎಂದೆ.

'ಆ ದರಿದ್ರ ರಾಜಕೀಯ ಏನ್ ನೋಡ್ತೀರಿ, ಅದರ ಬದ್ಲು ಏರೋ ಷೋ ನೋಡಿದ್ದಿದ್ರೆ ಸ್ವಲ್ಪ ರಿಲ್ಯಾಕ್ಸ್ ಆಗಬಹುದಿತ್ತು...' ಮಡದಿಗೆ ಕೋಪ.

'ಇದೂ ಏರೋ ಷೋನೇ ಕಣೆ, ಏರೋ ಕರ್ನಾಟಕ ಷೋ... ರಾಜಕಾರಣಿಗಳು ಗದ್ದುಗೆ ಏರೋ ಷೋ... ಇವರ ಚಮತ್ಕಾರದ ಮುಂದೆ ಆ ನಿನ್ನ ವಿಮಾನಗಳದ್ದು ಯಾವ ಲೆಕ್ಕ?' ನಕ್ಕೆ.

'ಹೌದೌದು, ಏರೋ ಇಂಡಿಯಾ ಷೋನಲ್ಲಿ ಹೆಲಿಕಾಪ್ಟರು, ಮಿಗ್ ವಿಮಾನ, ಜೆಟ್ ವಿಮಾನ, ಫೈಟರು ಗೀಟರು ಎಲ್ಲ ಹೆಂಗ್ ಹಾರ್ತವೆ, ಪಲ್ಟಿ ಹೊಡೀತವೆ, ಕಲ್ ಕಲರ್ ಹೊಗೆನಲ್ಲಿ ಹೆಂಗೆಂಗ್ ಚಿತ್ತಾರ ಬಿಡಿಸ್ತವೆ ನೋಡಿದೀರಾ?'

'ಮತ್ತೆ ನಮ್ಮ ರಾಜಕಾರಣಿಗಳೇನು ಕಮ್ಮಿನಾ? ಗದ್ದುಗೆ ಏರೋಕೆ ಏನೆಲ್ಲ ಷೋ ಮಾಡ್ತಾರೆ, ಜನರ ಮುಂದೆ ನಾಟಕ ಮಾಡ್ತಾರೆ, ಕಣ್ಣೀರು ಹಾಕ್ತಾರೆ, ಕಲ್ ಕಲರ್ ಕಾಗೆ ಹಾರಿಸ್ತಾರೆ... ಸ್ವಲ್ಪ ನೋಡಿ ಮಜಾ ತಗೋ ಬಾ...'

'ಹೇ ಹೋಗ್ರಿ, ನಿಮಗೆ ಎಲ್ಲ ತಮಾಷೆನೇ, ನಂಗೆ ಈ ರಾಜಕೀಯ ಎಲ್ಲ ಇಷ್ಟ ಆಗಲ್ಲ, ನೀವೇ ನೋಡ್ಕಳಿ'.

'ಸ್ವಲ್ಪ ತಡಿಯೇ, ಏರೋ ಇಂಡಿಯಾ ಷೋ ರಾತ್ರಿ ಡೀಟೇಲಾಗಿ ಬರುತ್ತೆ, ಈಗಲ್ಲ'.

'ಸರಿ, 'ಮನೆಯೊಂದು ಆರು ಬಾಗಿಲು' ಧಾರಾವಾಹಿನಾದ್ರೂ ನೋಡ್ತೀನಿ, ರಿಮೋಟ್ ಕೊಡಿ'.

'ಅದೂ ಏರೋ ಷೋನೇ ಕಣೆ'.

'ಅಂದ್ರೆ?'

'ಬಿ.ಪಿ. ಏರೋ ಷೋ!'

'ಥೂ ನಿಮ್ಮ...' ಮಡದಿಗೆ ನಗು ತಡೆಯಲಾಗಲಿಲ್ಲ.

ಸಂಗತ

ಆಲಿಸೋಣ ಅದುಮಿಟ್ಟ ವ್ಯಥೆಯ

ಮದ್ಯವ್ಯಸನಿಗಳ ಮಕ್ಕಳಿಗೆ ವಿಶೇಷವಾದ ಕಾಳಜಿಯ ಅಗತ್ಯವಿದೆ

• ಡಾ. ಕೆ.ಎಸ್.ಶುಭ್ರತಾ

ಮದ್ಯವ್ಯಸನಿಗಳ ಮಕ್ಕಳಿಗಾಗಿಯೇ ಮೀಸಲಾದ ರಾಷ್ಟ್ರೀಯ ಸಂಸ್ಥೆ 'ನ್ಯಾಷನಲ್ ಅಸೋಸಿಯೇಷನ್ ಫಾರ್ ಚಿಲ್ಡ್ರನ್ ಆಫ್ ಆಲ್ಕೊಹಾಲಿಕ್ಸ್' ಫೆಬ್ರುವರಿ 12ರಿಂದ 18ರವರೆಗಿನ ದಿನಗಳನ್ನು 'ಮದ್ಯವ್ಯಸನಿಗಳ ಮಕ್ಕಳ ದಿನ' (ಚಿಲ್ಡ್ರನ್ ಆಫ್ ಆಲ್ಕೊಹಾಲಿಕ್ಸ್ ವೀಕ್) ಎಂದು ಆಚರಿಸುತ್ತದೆ. ವಾರ್ಷಿಕವಾಗಿ ನಡೆಸುವ ಈ ಆಚರಣೆಯಲ್ಲಿ ಈ ಮಕ್ಕಳ ಅದುಮಿಟ್ಟ ವ್ಯಥೆಯ ಬಗ್ಗೆ, ದೈನಂದಿನ ಜೀವನದ ಕಷ್ಟಗಳ ಬಗ್ಗೆ ಹೆಚ್ಚು ಹೆಚ್ಚು ಅರಿವನ್ನು ಮೂಡಿಸುವ ಮತ್ತು ಸಹಾಯ ನೀಡುವ ಕೆಲಸಗಳು ನಡೆಯುತ್ತವೆ.

ರಾಷ್ಟ್ರೀಯ ಮಾನಸಿಕ ಆರೋಗ್ಯ ವರದಿ–2015ರ ಪ್ರಕಾರ, ಭಾರತದಲ್ಲಿ ಶೇ 29ರಷ್ಟು ವ್ಯಕ್ತಿಗಳು ಮದ್ಯ ಸೇವನೆಯ ಸಮಸ್ಯೆಗಳಿಂದ ಬಳಲುತ್ತಾರೆ. ವರ್ಷದಲ್ಲಿ ಆಗುವ ಎಲ್ಲಾ ಬಗೆಯ ರಸ್ತೆ ಅಪಘಾತಗಳ ಕಾರಣ ನೋಡಿದರೆ, ಇದರಲ್ಲಿ ಸುಮಾರು ಶೇ 33ರಷ್ಟು ಮದ್ಯದ ಅಮಲಿನಲ್ಲಿ ಆಗಿರುತ್ತವೆ. ಯಕೃತ್ತಿನ ಸಮಸ್ಯೆಗಳಿಗೆ ಶೇ 54ರಷ್ಟು ಕಾರಣ ಮದ್ಯವೇ ಆಗಿದೆ. ಈ ಎಲ್ಲಾ ಸಮಸ್ಯೆಗಳು ವರದಿಗಳಲ್ಲಿ, ಅಧ್ಯಯನಗಳಲ್ಲಿ ಲೆಕ್ಕಕ್ಕೆ ಸಿಗುವ, ಕಣ್ಣಿಗೆ ಕಾಣುವಂಥವು. ಆದರೆ ಮದ್ಯವ್ಯಸನಿಗಳ ಮನೆಯಲ್ಲಿರುವ ಮಕ್ಕಳಿರುತ್ತಾರಲ್ಲಾ, ಅವರ ಮಾನಸಿಕ, ಭಾವನಾತ್ಮಕ ತೊಂದರೆಗಳು ಬೆಳಕಿಗೆ ಬರುವುದೇ ಇಲ್ಲ.

ಪುಟ್ಟ ಮಕ್ಕಳ ಬೆಳವಣಿಗೆಯ ಮೇಲೆ ಪೋಷಕರ ಮದ್ಯವ್ಯಸನವು ಅಪಾರವಾದ ದುಷ್ಪರಿಣಾಮ ಬೀರಬಲ್ಲದು. ದುಡಿಯುವ ತಂದೆ ಮದ್ಯವ್ಯಸನದಲ್ಲಿ ಮುಳುಗಿದರೆ, ದೈನಂದಿನ ಜೀವನದ ಅಗತ್ಯಗಳನ್ನು ಪೂರೈಸುವುದೇ ಕಷ್ಟವಾಗುತ್ತದೆ. ಇನ್ನು ಅಮಲಿನಲ್ಲಿರುವ ತಂದೆಯು ಮಕ್ಕಳ ಭಾವನಾತ್ಮಕ ಬೇಡಿಕೆಗಳಾದ ಪ್ರೀತಿ, ಕಾಳಜಿ, ಬೆಂಬಲವನ್ನು ನೀಡಬಲ್ಲನೇ?

ಪ್ರತಿದಿನ ಕುಡಿದು ಬರುವ ತಂದೆ, ತಾಯಿ-ತಂದೆಯ ಜಗಳ, ತಮಗೆ ಆಗಾಗ ಬೀಳುವ ಪೆಟ್ಟುಗಳ ಜೊತೆಗೆ ಮನೆಯ ಹದಗೆಟ್ಟ ವಾತಾವರಣವನ್ನು ನೋಡಿ ಮಕ್ಕಳಿಗೆ ಸಾಕಾಗಿರುತ್ತದೆ. ಇವರ ಮೇಲೆ ನಡೆಸಿದ ಮನಃಶಾಸ್ತ್ರೀಯ ಅಧ್ಯಯನದ ಪ್ರಕಾರ, ಸುಮಾರು ಶೇ 10-20ರಷ್ಟು ಮಕ್ಕಳಲ್ಲಿ ಆತಂಕ, ಖಿನ್ನತೆಯ ಲಕ್ಷಣಗಳಿರುತ್ತವೆ. ಹಾಗೆಯೇ ವರ್ತನಾ ಸಮಸ್ಯೆಗಳು, ಶಾಲೆಗೆ ಹೋಗದಿರುವುದೂ ಇದರಲ್ಲಿ ಸೇರಿರಬಹುದು. ಹೆಣ್ಣುಮಕ್ಕಳಲ್ಲಿ ಆತಂಕ, ಖಿನ್ನತೆ ಕಾಣಿಸಿಕೊಂಡರೆ, ಗಂಡುಮಕ್ಕಳಲ್ಲಿ ಸಿಟ್ಟು, ಹಟ, ಕಳ್ಳತನದಂತಹ ಬಾಹ್ಯ ಸ್ವರೂಪದ ಸಮಸ್ಯೆಗಳನ್ನು ಕಾಣಬಹುದು. ಈ ಮಕ್ಕಳು ಅತ್ಯಂತ ಚಿಕ್ಕ ವಯಸ್ಸಿನಲ್ಲೇ ಮದ್ಯ, ಮಾದಕವಸ್ತು ಸೇವನೆ ಪ್ರಾರಂಭಿಸಬಹುದು.

ಮದ್ಯ ಸಂಬಂಧಿ ಸಮಸ್ಯೆಗಳು ಬರೀ ಒಬ್ಬ ವ್ಯಕ್ತಿಗೆ ಸೀಮಿತವಲ್ಲ. ಆ ವ್ಯಕ್ತಿಯ ಇಡೀ ಕುಟುಂಬವೇ ನರಳುತ್ತದೆ. ಅದರಲ್ಲೂ ಇನ್ನೂ ಮೊಗ್ಗಾಗಿದ್ದು ಮುಂದೆ ಅರಳಬೇಕಿರುವ ಮಕ್ಕಳಂತೂ ಈ ಆಘಾತಕ್ಕೆ ನಲುಗಿ, ಬಾಡಿಹೋಗಬಹುದು. ಕೆಲವೊಮ್ಮೆ ಇಬ್ಬರು ಪೋಷಕರೂ ಮದ್ಯವ್ಯಸನಿಗಳಾಗಿರಬಹುದು. ಆಗಂತೂ ಮಕ್ಕಳ ಆರೈಕೆ ಸಂಪೂರ್ಣ ಹಿಂಬದಿಗೆ ಸರಿಯುತ್ತದೆ. ಮಕ್ಕಳ ಮೇಲಿನ ದೌರ್ಜನ್ಯದ ಒಂದು ವಿಧ ಇದು.

ಭಾರತದಲ್ಲಿ ಮದ್ಯ ಸೇವಿಸುವುದನ್ನು ಹೇಳಿಕೊಳ್ಳುವುದು ಹಲವರಿಗೆ ನಾಚಿಕೆಯ ಸಂಗತಿ. ಹಾಗಾಗಿ, ಇಡೀ ಕುಟುಂಬ ತುಂಬಾ ದಿನಗಳತನಕ, ಈ ಚಟದ ಗುಟ್ಟು ಬಿಟ್ಟುಕೊಡುವುದಿಲ್ಲ. 'ಅಪ್ಪ ಕುಡಿಯುತ್ತಾನೆ, ಅಮ್ಮನಿಗೆ ಹೊಡೆಯುತ್ತಾನೆ, ಆಗಾಗ ನನಗೂ ಹೊಡೆತ ಬೀಳುತ್ತದೆ' ಎಂಬುದೆಲ್ಲವೂ ಗೊತ್ತಿದ್ದರೂ ತನಗೆ ಕಷ್ಟ ಆಗುತ್ತಿದ್ದರೂ ಮಗು ಯಾರಿಗೂ ಹೇಳುವುದಿಲ್ಲ. ಕೆಲವೊಮ್ಮೆ ಎಳೆಯ ಮಕ್ಕಳು ಮನೆಯಲ್ಲಿ ನಡೆಯುವ ಈ ಎಲ್ಲಾ ರಾದ್ಧಾಂತಗಳಿಗೆ ತಾವೇ ಕಾರಣ ಎಂದು ಬೇಸರಪಟ್ಟುಕೊಳ್ಳಲು ಪ್ರಾರಂಭಿಸುತ್ತಾರೆ. ಅದರಿಂದ ಅವರು ಖಿನ್ನತೆಗೆ ಒಳಗಾಗಬಹುದು. ಮನೆಯಲ್ಲಿ ಈ ಗಲಾಟೆಗಳನ್ನು ನೋಡಿ ರೋಸಿಹೋದ ಮಕ್ಕಳು, ಅದರಲ್ಲೂ ಹದಿಹರೆಯದವರು, ಯಾವಾಗಲೂ ಕೋಪದಲ್ಲಿ ಇರುವುದೂ ಇದೆ. 'ಕೋಪ ಯಾರ ಮೇಲೆ' ಎಂಬುದು ಅವರಿಗೇ ಅರ್ಥವಾಗುವುದಿಲ್ಲ. ತನ್ನನ್ನು ಈ ಪರಿಸ್ಥಿತಿಗೆ ತಳ್ಳಿದ ಪೋಷಕರ ಮೇಲಷ್ಟೇ ಅಲ್ಲದೆ, ಇಡೀ ಜಗತ್ತಿನ ಮೇಲೇ ಸಿಟ್ಟು ಇದ್ದಂತಿರುತ್ತದೆ.



ಹಾಗಾದರೆ ಇದಕ್ಕೆ ಪರಿಹಾರವೇನು? ಮದ್ಯವ್ಯಸನಿಗಳ ಮಕ್ಕಳಿಗೆ ಪ್ರೀತಿ, ಕಾಳಜಿ, ಸಹಾಯದ ಅಗತ್ಯವಿದೆ. ಅನುಕಂಪ ತೋರಿಸಿದರೆ ಬೇಸರವಾಗುತ್ತದೆ. ಅವರ ಮುಂದೆ ಪೋಷಕರನ್ನು ಹೀಯಾಳಿಸುವ ಕೆಲಸವನ್ನು ಖಂಡಿತ ಮಾಡಬಾರದು. ಈ ಮಕ್ಕಳಿಗೆ ಮನೆಯಲ್ಲಿ ಎಲ್ಲರೂ ಇದ್ದೂ, ಭಾವನಾತ್ಮಕವಾಗಿ ಯಾರೂ ಲಭ್ಯವಿರುವುದಿಲ್ಲ. ಅವರ ಮಾತುಗಳನ್ನು, ಸಮಸ್ಯೆಗಳನ್ನು ಸಮಾಧಾನದಿಂದ ಆಲಿಸಬೇಕು. ಶಾಲೆಯ ಶಿಕ್ಷಕರು ಅಥವಾ ಶಾಲೆಯಲ್ಲಿರುವ ಕೌನ್ಸಿಲರ್ ಅಥವಾ ಸ್ನೇಹಿತರಾದಿಯಾಗಿ ಯಾರು ಬೇಕಾದರೂ ಈ ಕೆಲಸ ನಿರ್ವಹಿಸಬಹುದು. ಸರ್ಕಾರದಿಂದ ಈ ಮಕ್ಕಳಿಗಾಗಿಯೇ ವಿಶೇಷವಾದ ಸಹಾಯವಾಣಿಗಳೇನೂ ಇದ್ದ ಹಾಗಿಲ್ಲ. ಆದರೆ ಮಕ್ಕಳ ಸಹಾಯವಾಣಿಯಾದ 1098ನ್ನೇ ಉಪಯೋಗಿಸಬಹುದು. ಸರ್ಕಾರ ತನ್ನ ಆರೋಗ್ಯ ಕಾರ್ಯಕ್ರಮಗಳಲ್ಲಿ ಈ ಮಕ್ಕಳಿಗಾಗಿ ವಿಶೇಷ ಯೋಜನೆಗಳನ್ನು ರೂಪಿಸಬೇಕು. ಬಹಳಷ್ಟು ಸ್ವಯಂ ಸೇವಾ ಸಂಸ್ಥೆಗಳು ಈ ದಿಸೆಯಲ್ಲಿ ಕಾರ್ಯಕ್ರಮಗಳನ್ನು ಮಾಡುತ್ತಿವೆ.

ಪುಟ್ಟ ಮಕ್ಕಳೇನೂ ಪೋಷಕರ ಮದ್ಯ ವ್ಯಸನಕ್ಕೆ ಕಾರಣರಲ್ಲ. ಅದು, ಅವರ ನಿಯಂತ್ರಣದಲ್ಲೂ ಇಲ್ಲ. ಹಾಗಿದ್ದ ಮೇಲೆ ಈ ಮಕ್ಕಳದೇನು ತಪ್ಪು? ಅವರೂ ಎಲ್ಲರಂತೆ ಸಂತಸದಿಂದ ಇರುವಂತೆ ನೋಡಿಕೊಳ್ಳುವುದು ನಮ್ಮ, ಅಂದರೆ ಸಮಾಜದ ಕರ್ತವ್ಯವಲ್ಲವೇ?

ಲೇಖಕಿ: ಮನೋವೈದ್ಯೆ

ವಾಚಕರ ವಾಣಿ

50 ವರ್ಷಗಳಷ್ಟು ಹಿಂದಿನ ಮುನ್ನೋಟ!

'ರಾಜ್ಯದ ಮುಂಚೂಣಿ ಸಮಾಜಮುಖಿ ರಾಜಕೀಯ ಪಕ್ಷಗಳಿಗೆ ಆರ್‌ಎಸ್‌ಎಸ್ ಶೈಲಿಯ ಸಾಂಸ್ಥಿಕ ರಚನೆಯ ತಳಪಾಯ ಅಗತ್ಯ' ಎಂದು ದೇವನೂರ ಮಹಾದೇವ ಹೇಳಿದ್ದಾರೆ (ಪ್ರ.ವಾ., ಫೆ. 15). ಈ ಚಿಂತನೆ 50 ವರ್ಷಗಳಷ್ಟು ಹಿಂದೆಯೇ ಅವರ ತಲೆಯಲ್ಲಿ ಸುಳಿದುಹೋಗಿತ್ತು. ಎಪ್ಪತ್ತರ ದಶಕದ ಎಲ್ಲ ರೀತಿಯ ತಲ್ಲಣ ಹಾಗೂ ರಾಜಕೀಯ ಅನಿಶ್ಚಯದ ನಡುವೆ ಯಾವುದಾದರೂ ಗಟ್ಟಿ ತಳ ಸಿಕ್ಕೀತೇನೋ ಎಂಬ ತಳಮಳದಲ್ಲಿ ಅವರಿಗೆ ಥಟ್ಟನೆ ಹೊಳೆದ ಉಪಾಯ ಇದಾಗಿತ್ತು. ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ನಾವಿಬ್ಬರೂ ವ್ಯಾಸಂಗ ಮಾಡುತ್ತಿದ್ದ ಆ ಕಾಲದಲ್ಲಿ ನನ್ನ ಕಿವಿಯಲ್ಲಿ ಮಹಾದೇವ ಹೇಳಿದ್ದ ಇದೇ ಮಾತು ಈಗ ಕೇಳಿಸಿದಂತೆ ನನ್ನ ಎದೆಯಲ್ಲಿ ಸ್ಥಿರವಾಗಿದೆ.

ಅಂದಿನ ಅವರ ಈ ಚಿಂತನೆಯು ಪ್ರಗತಿಪರ ಸಂಘಟನೆಗಳ, ನಿಷ್ಕ್ರಿಯ ರಾಜಕೀಯ ಪಕ್ಷಗಳ ಕಳಪೆ ನಿರ್ವಹಣೆಗೆ ಮದ್ದನ್ನು ಕಂಡುಕೊಳ್ಳುವ ವಿಧಿಯಂತೆ ನನಗೆ ಕಂಡಿತ್ತು. ದಿನಗಳೆದಂತೆ ಪ್ರಗತಿಪರ ಸಂಘಟನೆ, ರಾಜಕಾರಣ ಮತ್ತಷ್ಟು ಶಿಥಿಲಾವಸ್ಥೆ ತಲುಪುತ್ತಿರುವ ಈ ಹೊತ್ತಿನಲ್ಲಿ ಅವರ ಮಾತಿಗೆ ಎಲ್ಲಿಲ್ಲದ ಬೆಲೆಯಿದೆ. ಅವರ ಈ ಮುನ್ನೋಟದ ಮಾತನ್ನು ಸೆಕ್ಯುಲರ್ ರಾಜಕೀಯ ಪಕ್ಷ, ಸಂಘಟನೆಗಳು ತಮ್ಮ ಪಂಚೇಂದ್ರಿಯಗಳ ಎಚ್ಚರದಲ್ಲಿ ಸ್ವೀಕರಿಸಿ ಕ್ರಿಯಾಶೀಲವಾಗಬಲ್ಲವೆ? ದೇವನೂರ ಅವರ ಸಾಕ್ಷಿಪ್ರಜ್ಞೆಯ ಈ ನುಡಿ ಪಾಲನೆಯಾದಲ್ಲಿ ದೇಶದ ರಾಜಕೀಯ, ಸಾಂಸ್ಕೃತಿಕ ವಾತಾವರಣದಲ್ಲಿ ಹೊಸ ಭರವಸೆಯ ಗಾಳಿ ಹಿತವಾಗಿ ಬೀಸಬಹುದಲ್ಲವೆ?

ಚಂದ್ರಶೇಖರ ತಾಳ್ಯ, ಹೊಳಲ್ಕೆರೆ

ಅವನೊಬ್ಬ ಒಂಟಿ!

ಈ ಬಾರಿಯ ಚುನಾವಣೆಗೆ
ರಾಜಕೀಯ ಪಕ್ಷಗಳಿಂದ ಮತದಾರರಿಗೆ
ಭಾರಿ ಭಾರಿ ಕೊಡುಗೆ?!
ಒಬ್ಬರು, ಮಹಿಳೆಯರಿಗೆಲ್ಲಾ ತಲಾ
ತಿಂಗಳಿಗೆರಡು ಸಾವಿರವೆಂದರೆ,
ಮತ್ತೊಬ್ಬರು, ವೃದ್ಧರಿಗೆಲ್ಲಾ
ತಲಾ ಐದು ಸಾವಿರವೆಂದಿದ್ದಾರೆ!
ಹಾಗಾಗಿ, ಸರಾಸರಿಯಂತೆ
ಮನೆಯಲ್ಲಿರುವ ಅತ್ತೆ, ಮಾವ
ಸೊಸೆಯಂದಿರಿಗೆ ಹಣದ ಶೂರಿಟಿ
ಉಳಿದ ಪುರುಷನೊಬ್ಬನಾದನಲ್ಲ ಒಂಟಿ!

ಜೆ.ಬಿ.ಮಂಜುನಾಥ, ಪಾಂಡವಪುರ

ಜನಪರವಾಗಿರಲಿ ಚಿತ್ರರಂಗ

ಕನ್ನಡ ಚಿತ್ರರಂಗದ ಯಶ್, ರಿಷಬ್ ಶೆಟ್ಟಿ ಅವರು ಪ್ರಧಾನಿಯವರನ್ನು ಭೇಟಿಯಾಗಿ ಚಿತ್ರನಗರಿಯ ನಿರ್ಮಾಣಕ್ಕೆ ಮನವಿ ಮಾಡಿದ್ದಾರೆ ಮತ್ತು ಏಕಪರದೆಯ ಚಿತ್ರಮಂದಿರಗಳ ಅವನತಿಯ ಬಗ್ಗೆ ಮಾತನಾಡಿದ್ದಾರೆ. ಆದರೆ ಚಿತ್ರರಂಗವೇ ಜನಪರವಾಗಿ ಉಳಿದಿಲ್ಲ, ಕಾರಣ ಹಣ ಮಾಡುವ ಭರದಲ್ಲಿ, ಬಿಡುಗಡೆಯಾದ ಮೊದಲ ವಾರ ಟಿಕೆಟ್‌ಗಳ ದರ ದುಬಾರಿ ಆಗಿರುತ್ತದೆ. 'ಕೋಟಿ ಕ್ಲಬ್' ಸೇರುವ ಲೆಕ್ಕಾಚಾರದಲ್ಲಿ ಟಿಕೆಟ್ ದರ ನಿಗದಿ ಮಾಡುವುದು, ಅದಕ್ಕೆ ತಕ್ಕಂತೆ ಗಿಮಿಕ್ ಪ್ರಚಾರ ಮಾಡುವುದು ಪ್ರೇಕ್ಷಕರನ್ನು ಶೋಷಣೆ ಮಾಡಿದಂತೆ ಅಲ್ಲವೇ? ನಿರ್ಮಾಪಕರೇ ಟಿಕೆಟ್ ದರ ನಿಗದಿಪಡಿಸುವುದಾದರೆ ಸರ್ಕಾರದ ಜವಾಬ್ದಾರಿ ಏನು? ಸಿನಿಮಾ ಟಿಕೆಟ್‌ಗಳ ದರವನ್ನು ಜನಸಾಮಾನ್ಯರಿಗೆ ಎಟಕುವ ಮಟ್ಟಕ್ಕೆ ಸರ್ಕಾರವೇ ನಿಗದಿ ಮಾಡಲಿ.

ಸಿನಿಮಾ ಮಂದಿರಗಳಲ್ಲಿ ಮಾರಾಟ ಮಾಡುವ ತಿಂಡಿ ತಿನಿಸು, ಪಾನೀಯಗಳೂ ದುಬಾರಿಯೆ. ಇದರ ಬಗ್ಗೆ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಗಮನಹರಿಸಲಿ. ಒಳ್ಳೆಯ ಸಿನಿಮಾಗಳನ್ನು ಹೆಚ್ಚು ಜನ ನೋಡಿಯೇ ನೋಡುತ್ತಾರೆ. ಅಲ್ಲಿಗೆ ನಿರ್ಮಾಪಕರಿಗೆ ಲಾಭ ಆಗುತ್ತದೆ. ನಟರು ಜನಮಾನಸವನ್ನು ತಲುಪಬೇಕೆ ವಿನಾ ಕೋಟಿ ಕ್ಲಬ್ ತಲುಪುವುದಲ್ಲ. ಚೈತನ್ಯ ಇರುವ ನಟರು ಚಿತ್ರರಂಗದ ಬಗೆಗಿನ ಕಾಳಜಿಗಾದರೂ ಒಂದು ಚಿತ್ರಮಂದಿರ ನಿರ್ಮಿಸಿ ನಡೆಸಲಿ.

ಮಲ್ಲಿಕಾರ್ಜುನ, ಸುರಧೇನುಪುರ

ಚುನಾವಣೆ: ಬೇಕು ಹಲವು ಬದಲಾವಣೆ

'ಚುನಾವಣೆ: ಸಾತ್ವಿಕ ಮಾರ್ಗಕ್ಕೆ ಸೂತ್ರ' ಎಂಬ ಲೇಖನದಲ್ಲಿ (ಪ್ರ.ವಾ., ಫೆ. 15) ಡಾ. ಜ್ಯೋತಿ ಅವರು 'ನೋಟಾ' ಕುರಿತ ವಿಷಯದ ಬಗ್ಗೆಯೇ ಹೆಚ್ಚು ಹೇಳಿದ್ದಾರೆ. ಅಭ್ಯರ್ಥಿ ಆಯ್ಕೆಯಲ್ಲಿ ರಾಜಕೀಯ ಪಕ್ಷಗಳಿಗೆ ಇದೊಂದು ಉತ್ತಮ ಪಾಠ ಎಂದಿದ್ದಾರೆ. ಆದರೆ, ಸದ್ಯ ಚುನಾವಣಾ ವಿಷಯದಲ್ಲಿ ಇನ್ನೂ ಹಲವು ಬದಲಾವಣೆಗಳು ಅವಶ್ಯ. ಒಬ್ಬ ವ್ಯಕ್ತಿ ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಿಂದ ಸ್ಪರ್ಧಿಸುವುದು ಕೂಡ ಇದರಲ್ಲಿ ಸೇರಿದೆ. ಇಲ್ಲಿ ಆ ಅಭ್ಯರ್ಥಿ ಎರಡೂ ಕಡೆ ಗೆದ್ದರೆ ಒಂದು ಸ್ಥಾನಕ್ಕೆ ರಾಜೀನಾಮೆ, ಅಲ್ಲಿ ಮರುಚುನಾವಣೆ. ಇದರ ವೆಚ್ಚ ಭರಿಸುವವರಾರು? ಅದೇ ರೀತಿ, ಅವರು ಆಗಲೇ ಒಂದು ಸ್ಥಾನ ಹೊಂದಿದ್ದರೆ ಅದು ಸಹ ಇದೇ ರೀತಿಯಾಗುತ್ತದೆ.

ಇನ್ನು ಗೆದ್ದ ಮೇಲೆ ನಮ್ಮಲ್ಲಿ ನಡೆಯುವ ಪಕ್ಷಾಂತರಗಳು. ಇದಕ್ಕೆ ಕಳೆದ ಬಾರಿ ರಾಜ್ಯದಲ್ಲಿ ನಡೆದ ಸಾಮೂಹಿಕ ಪಕ್ಷಾಂತರವೇ ನಿದರ್ಶನ. ಇದಕ್ಕೆಲ್ಲ ಏನು ಪರಿಹಾರ? ಈ ರೀತಿ ಪಕ್ಷ ಬದಲಾಯಿಸುವವರು ಕನಿಷ್ಠ ಐದು ವರ್ಷ ಯಾವುದೇ ಚುನಾವಣೆಗೆ ಸ್ಪರ್ಧಿಸಲು ಅವಕಾಶ ಇರಬಾರದು ಮತ್ತು ಮರು ಚುನಾವಣಾ ವೆಚ್ಚಕ್ಕೆ ಅವರೇ ಜವಾಬ್ದಾರಿ ಆಗಬೇಕು.

ಕೆ.ಎಸ್.ಸೋಮೇಶ್ವರ, ಬೆಂಗಳೂರು

ತಕ್ಷಣವೇ ನಡೆಯಲಿ ಕಾರ್ಯಾಚರಣೆ

ಕೊಡಗು ಜಿಲ್ಲೆಯ ಕಾಫಿ ತೋಟದಲ್ಲಿ ತಾತ ಹಾಗೂ ಮೊಮ್ಮಗನ ಜೊತೆಗೆ ಐದಾರು ಜಾನುವಾರುಗಳನ್ನೂ ಬಲಿ ಪಡೆದ ಹುಲಿರಾಯನನ್ನು ಅರಣ್ಯ ಇಲಾಖೆ ಕೊನೆಗೂ ಸೆರೆಹಿಡಿದು ಅಲ್ಲಿಯ ಜನರನ್ನು ಸ್ವಲ್ಪಮಟ್ಟಿಗೆ ನಿರಾಳರನ್ನಾಗಿ ಮಾಡಿದೆ. ಹುಲಿಯು ಸ್ಥಳೀಯರಿಗೆ ಹಲವಾರು ದಿನಗಳ ಹಿಂದೆಯೇ ಕಾಣಿಸಿತ್ತಾದರೂ ಕಾರ್ಯಾಚರಣೆ ಮಾತ್ರ ಹಲವಾರು ಮುಗ್ಧ ಜೀವಗಳ ಬಲಿ ಪಡೆದ ನಂತರ ನಡೆಯಿತು. ಏಕೆ ಹೀಗೆ? ಹುಲಿಯನ್ನು ಸೆರೆಹಿಡಿಯುವ ಕಾರ್ಯಾಚರಣೆ ಮುಂದೂಡಿದ್ದರಿಂದ ಅದಕ್ಕೆ ತಗಲುವ ವೆಚ್ಚವೇನಾದರೂ ಕಡಿಮೆಯಾಯಿತೆ ಅಥವಾ ಹುಲಿ ಕಾಡಿಗೆ ಮರಳಬಹುದು ಎಂಬ ಕಾರಣದಿಂದ ಹೀಗೆ ವಿಳಂಬ ಮಾಡಲಾಯಿತೋ ತಿಳಿಯುತ್ತಿಲ್ಲ. ಕಾಡುಪ್ರಾಣಿಗಳು ನಾಡನ್ನು ಪ್ರವೇಶಿಸಿರುವುದು ತಿಳಿದ ಕೂಡಲೇ ಇಲಾಖೆ ಕಾರ್ಯಪ್ರವೃತ್ತವಾಗಿ ಬಡಪಾಯಿಗಳ ಪ್ರಾಣ ಉಳಿಸಲಿ.

ಮಂಜುನಾಥ್ ಜೈನ್ ಎಂ.ಪಿ., ಮಂಡ್ಯ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ದಾರಿ ಸಾಗದು, ಮುಂದೆ ಹೋಗದು

ನಗರಗಳಲ್ಲಿ ಸಂಚಾರ: ಚಲಿಸಿದ್ದು ಕಡಿಮೆ, ನಿಂತಿದ್ದೇ ಹೆಚ್ಚು

ಪ್ರಜಾವಾಣಿ ವಾರ್ತೆ




ಬೆಂಗಳೂರು ನಗರದಲ್ಲಿ ಬೆಳಿಗ್ಗಿನ ಹೊತ್ತು 10 ಕಿ.ಮೀ. ಕ್ರಮಿಸಲು ಸರಾಸರಿ 29 ನಿಮಿಷ, 10 ಸೆಕೆಂಡ್ ಬೇಕಾಗುತ್ತದೆ. ಜಗತ್ತಿನಲ್ಲಿ ಅತ್ಯಂತ ನಿಧಾನಗತಿಯ ಸಂಚಾರ ಸಾಧ್ಯತೆಯ ನಗರಗಳಲ್ಲಿ ಬೆಂಗಳೂರು ಎರಡನೇ ಸ್ಥಾನದಲ್ಲಿದ್ದರೆ, ಲಂಡನ್ ಮೊದಲ ಸ್ಥಾನದಲ್ಲಿದೆ. ಬೆಂಗಳೂರಿನ ಜನ ತಾವು ಹೊರಟಲ್ಲಿಂದ, ತಲುಪುವ ಸ್ಥಳದ ನಡುವಣ ಪ್ರಯಾಣದಲ್ಲಿ ಅರ್ಧಕ್ಕೂ ಹೆಚ್ಚು ಸಮಯವನ್ನು ಸಂಚಾರ ಸಿಗ್ನಲ್‌ಗಳಲ್ಲಿ ಮತ್ತು ಸಂಚಾರ ದಟ್ಟಣೆಯಲ್ಲಿ ಕಳೆಯುತ್ತಾರೆ ಎನ್ನುತ್ತದೆ ಸಂಚಾರ ಮೇಲ್ವಿಚಾರಣಾ ಮತ್ತು ಜಿಪಿಎಸ್ ಟ್ರ್ಯಾಕಿಂಗ್ ಸೇವಾ ಸಂಸ್ಥೆ ಟಾಮ್‌ಟಾಮ್. ಈ ಸಂಸ್ಥೆ ಈಚೆಗೆ ಬಿಡುಗಡೆ ಮಾಡಿರುವ 'ಜಾಗತಿಕ ಸಂಚಾರ ಸೂಚ್ಯಂಕ'ದಲ್ಲಿ ಈ ಮಾಹಿತಿ ಇದೆ.

ಉಬರ್ ಸೇರಿ ಜಗತ್ತಿನ ಅತ್ಯಂತ ದೊಡ್ಡ ಹಲವು ಟ್ಯಾಕ್ಸಿ ಸೇವಾ ಸಂಸ್ಥೆಗಳಿಗೆ, ಟ್ರಕ್ ಸೇವಾ ಸಂಸ್ಥೆಗಳಿಗೆ ವಾಹನ ಪಥನಿರ್ದೇಶಕ ಮತ್ತು ನಿರ್ವಹಣಾ ಸೇವೆ ಒದಗಿಸುವ ಟಾಮ್ ಟಾಮ್ ಒಂದು ವರ್ಷದ ಸಂಚಾರ ದತ್ತಾಂಶಗಳನ್ನು ವಿಶ್ಲೇಷಿಸಿ ಈ ಸೂಚ್ಯಂಕ ಸಿದ್ಧಪಡಿಸಿದೆ. ಬೆಂಗಳೂರಿನ ಸಂಚಾರ ಸ್ಥಿತಿಗತಿಯನ್ನು ವಿಶ್ಲೇಷಿಸಲು 2022ರ ಜನವರಿ 1ರಿಂದ, ಡಿಸೆಂಬರ್ 31ರವರೆಗಿನ ದತ್ತಾಂಶವನ್ನು ಪರಿಶೀಲಿಸಲಾಗಿದೆ. ಈ ಅವಧಿಯಲ್ಲಿ ಬೆಂಗಳೂರಿನ ಜನರು ನಗರ ಕೇಂದ್ರ ಭಾಗದ ಐದು ಕಿ.ಮೀ. ಪರಿಧಿಯಲ್ಲಿ ಒಟ್ಟು 59,200 ಕೋಟಿ ಕಿ.ಮೀ.ಗಳಷ್ಟು ಪ್ರಯಾಣಿಸಿದ್ದಾರೆ. ಈ ದತ್ತಾಂಶದ ಆಧಾರದಲ್ಲಿ ಸೂಚ್ಯಂಕ ಸಿದ್ಧಪಡಿಸಲಾಗಿದೆ ಎಂದು ಟಾಮ್‌ಟಾಮ್ ತನ್ನ ವರದಿಯಲ್ಲಿ ಮಾಹಿತಿ ನೀಡಿದೆ.

ಬೆಂಗಳೂರಿನ ಜನರು ನಗರದ ಕೇಂದ್ರ ಭಾಗದಲ್ಲಿ ಸಂಚರಿಸಲು ಹೆಚ್ಚು ಪೆಟ್ರೋಲ್/ಡೀಸೆಲ್ ವ್ಯಯಿಸಬೇಕಾಗುತ್ತದೆ ಮತ್ತು ಅವರ ವಾಹನಗಳಿಂದ ಹೊರಬರುವ ಇಂಗಾಲದ ಡೈಆಕ್ಸೈಡ್‌ನ ಪ್ರಮಾಣವೂ ಹೆಚ್ಚು ಎಂಬುದನ್ನು ವರದಿಯಲ್ಲಿ ವಿವರಿಸಲಾಗಿದೆ. ನಗರದ ಕೇಂದ್ರ ಭಾಗಕ್ಕೆ ಹೋಲಿಸಿದರೆ, ನಗರದ ಹೊರಭಾಗದಲ್ಲಿ ದಟ್ಟಣೆ ಕಡಿಮೆ. ಹೀಗಾಗಿ ನಗರ ಕೇಂದ್ರಭಾಗದಲ್ಲಿ ವಾಹನಗಳಿಂದಾಗುವ ವಾಯುಮಾಲಿನ್ಯ ಹೆಚ್ಚು. ಜತೆಗೆ ಡೀಸೆಲ್ ಎಂಜಿನ್ ವಾಹನಗಳಿಗಿಂತ, ಪೆಟ್ರೋಲ್ ಎಂಜಿನ್ ವಾಹನಗಳು ಉಗುಳುವ ಇಂಗಾಲದ ಡೈಆಕ್ಸೈಡ್‌ನ ಪ್ರಮಾಣ ಹೆಚ್ಚು ಎಂದು ಈ ದತ್ತಾಂಶಗಳು ಹೇಳುತ್ತವೆ.

ದಿನದ ಸಂಚಾರ ಸಮಯ

ಬೆಂಗಳೂರಿನ ಕೇಂದ್ರ ಭಾಗದಲ್ಲಿ ಇದೇ ಬುಧವಾರ (ಫೆ.15ರಂದು) ಬೆಳಿಗ್ಗೆ 6ರಿಂದ ರಾತ್ರಿ 10ರವರೆಗೆ 10 ಕಿ.ಮೀ. ಕ್ರಮಿಸಲು ತಗುಲಿದ ಸರಾಸರಿ ಸಮಯ. ವಾರದ ಆರಂಭದಲ್ಲಿ ಈ ಸಮಯ ಸ್ವಲ್ಪ ಹೆಚ್ಚುತ್ತದೆ. ಆದರೆ, ವಾರಾಂತ್ಯದ ಸಂದರ್ಭದಲ್ಲಿ ಈ ಸಮಯ ಭಾರಿ ಪ್ರಮಾಣದಲ್ಲಿ ಏರುತ್ತದೆ.



ಸಂಚಾರ: ವಿಶ್ವದ ನಿಧಾನಗತಿ ನಗರಗಳು

ರ್‍ಯಾಂಕ್‌ಗಳು | 10 ಕಿ.ಮೀ. ಕ್ರಮಿಸಲು ಬೇಕಾಗುವ ಅವಧಿ

ಲಂಡನ್‌ನಲ್ಲಿ ಹತ್ತು ಕಿಲೋಮೀಟರ್ ಸಂಚರಿಸಲು 36 ನಿಮಿಷ 20 ಸೆಕೆಂಡ್ ಬೇಕು. ಬೆಂಗಳೂರಿನಲ್ಲಿ ಇಷ್ಟು ದೂರ ಕ್ರಮಿಸಲು 29 ನಿಮಿಷ 10 ಸೆಕೆಂಡ್ ಹಿಡಿಯುತ್ತದೆ ಎಂದು ವರದಿ ಹೇಳಿದೆ. ಈ ಪಟ್ಟಿಯಲ್ಲಿ 6ನೇ ರ್‍ಯಾಂಕ್ ಪಡೆದಿರುವ ಪುಣೆಯಲ್ಲಿ, 27 ನಿಮಿಷ 20 ಸೆಕೆಂಡ್‌ನಲ್ಲಿ 10 ಕಿಲೋಮೀಟರ್ ಸಂಚರಿಲಷ್ಟೇ ಸಾಧ್ಯ. ದೆಹಲಿ ಹಾಗೂ ಮುಂಬೈ ನಗರಗಳು ಈ ಪಟ್ಟಿಯಲ್ಲಿ ಕ್ರಮವಾಗಿ 34 ಹಾಗೂ 47ನೇ ಸ್ಥಾನದಲ್ಲಿವೆ. ಈ ನಗರಗಳಲ್ಲಿ ವಾಹನ ಸವಾರರು ಮುಂದೆ ಹೋಗುವುದು ಕಷ್ಟ, ಅವರ ದಾರಿ ಸಾಗುವುದೂ ಕಷ್ಟ.



ವಿಶ್ವ ರ್‍ಯಾಂಕಿಂಗ್

ರ್‍ಯಾಂಕ್	10 ಕಿ.ಮೀ. ಕ್ರಮಿಸಲು ಬೇಕಾಗುವ ಅವಧಿ	ನಗರ
1	36 ನಿಮಿಷ, 20 ಸೆಕೆಂಡ್	ಲಂಡನ್ (ಬ್ರಿಟನ್)
2	29.10	ಬೆಂಗಳೂರು
3	28.30	ಡಬ್ಲಿನ್ (ಐರ್ಲೆಂಡ್)
4	27.40	ಸಪ್ಪೊರೊ (ಜಪಾನ್)
5	27.30	ಮಿಲಾನ್ (ಇಟಲಿ)
6	27.20	ಪುಣೆ
7	27.20	ಬುಕಾರೆಸ್ಟ್ (ರೊಮಾನಿಯಾ)
8	27.10	ಲಿಮಾ (ಪೆರು)
9	27	ಮನಿಲಾ (ಫಿಲಿಪ್ಪೀನ್ಸ್)
10	26.20	ಬೊಗೊಟಾ (ಕೊಲಂಬಿಯಾ)
11	26.10	ಪ್ಯಾರಿಸ್ (ಫ್ರಾನ್ಸ್)
12	25.40	ರೋಮ್ (ಇಟಲಿ)

25 ನಿ. 30 ನಿ. 35 ನಿ. 40 ನಿ.

ಏಷ್ಯಾ: ಭಾರತದ ನಗರಗಳಲ್ಲಿಯೇ ದಟ್ಟಣೆ ಹೆಚ್ಚು

ವಾಹನದಟ್ಟಣೆಯ ಏಷ್ಯಾದ ನಗರಗಳ ಪಟ್ಟಿಯಲ್ಲಿ ಭಾರತದ ನಾಲ್ಕು ಮಹಾನಗರಗಳು ಇವೆ. ಜಾಗತಿಕವಾಗಿ ಎರಡನೇ ರ್‍ಯಾಂಕ್‌ನಲ್ಲಿ ರುವ ಬೆಂಗಳೂರು ನಗರವು ಏಷ್ಯಾ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದೆ. ಪುಣೆ ಮೂರನೇ ರ್‍ಯಾಂಕ್‌ನಲ್ಲಿದೆ. ದೆಹಲಿಯಲ್ಲಿ ವಾಹನ ದಟ್ಟಣೆಯ ಸಮಯದಲ್ಲಿ 10 ಕಿಲೋಮೀಟರ್ ಸಂಚರಿಸಲು 22 ನಿಮಿಷ 10 ಸೆಕೆಂಡ್ ಸಮಯ ಬೇಕಾಗುತ್ತದೆ. ಮುಂಬೈ ನಗರದಲ್ಲಿ ಇಷ್ಟೇ ದೂರ ಕ್ರಮಿಸಲು 21 ನಿಮಿಷ 10 ಸೆಕೆಂಡ್ ಸಮಯ ಹಿಡಿಯುತ್ತದೆ ಎಂದು ವರದಿ ತಿಳಿಸಿದೆ. ಮೊದಲ 12 ರ್‍ಯಾಂಕ್‌ಗಳಲ್ಲಿ ಜಪಾನ್ ಹಾಗೂ ತೈವಾನ್‌ನ ತಲಾ ಮೂರು ನಗರಗಳಿವೆ.

ಏಷ್ಯಾ ರ್‍ಯಾಂಕಿಂಗ್

ರ್‍ಯಾಂಕ್	10 ಕಿ.ಮೀ. ಕ್ರಮಿಸಲು ಬೇಕಾಗುವ ಅವಧಿ	ನಗರ
1	29 ನಿಮಿಷ, 10 ಸೆಕೆಂಡ್	ಬೆಂಗಳೂರು
2	27.40	ಸಪ್ಪೊರೊ (ಜಪಾನ್)
3	27.20	ಪುಣೆ
4	27	ಮನಿಲಾ (ಫಿಲಿಪ್ಪೀನ್ಸ್)
5	24.40	ಟೈಚುಂಗ್ (ತೈವಾನ್)
6	24.20	ನಗೋಯಾ (ಜಪಾನ್)
7	23.50	ಕಾಹ್ಸಿಯುಂಗ್ (ತೈವಾನ್)
8	23.50	ಟೋಕಿಯೊ (ಜಪಾನ್)
9	22.40	ಜಕಾರ್ತ (ಇಂಡೊನೇಷ್ಯಾ)
10	22.10	ನವದೆಹಲಿ
11	21.10	ತೈಪೆ (ತೈವಾನ್)
12	21.10	ಮುಂಬೈ

20 ನಿ. 25 ನಿ. 30 ನಿ.

ಪ್ರಯಾಣದ ಸರಾಸರಿ ಅವಧಿ

ಬೆಂಗಳೂರು ನಗರದ ಕೇಂದ್ರ ಭಾಗದಲ್ಲಿ 10 ಕಿ.ಮೀ. ದೂರವನ್ನು ಕ್ರಮಿಸಲು ಸಾಮಾನ್ಯವಾಗಿ ತಗಲುವ ಸಮಯಕ್ಕಿಂತ, ದಟ್ಟಣೆ ಅವಧಿಯಲ್ಲಿ ಒಂದು ಪಟ್ಟು ಹೆಚ್ಚು ಸಮಯ ಬೇಕಾಗುತ್ತದೆ. ಬೆಳಿಗ್ಗೆಯ ದಟ್ಟಣೆ ಅವಧಿಯಲ್ಲಿ ತಗಲುವ ಸಮಯಕ್ಕಿಂತ, ಸಂಜೆಯ ದಟ್ಟನೆ ಅವಧಿಯಲ್ಲಿ ಹೆಚ್ಚು ಸಮಯ ಬೇಕಾಗುತ್ತದೆ. ನಗರದ ಈ ಭಾಗದಲ್ಲಿ ಪ್ರತಿದಿನ 10 ಕಿ.ಮೀ. ಕ್ರಮಿಸುವವರು, ವರ್ಷವೊಂದರಲ್ಲಿ ರಸ್ತೆ ಮೇಲೆಯೇ 260 ಗಂಟೆಗಳನ್ನು ಕಳೆಯಬೇಕಾಗುತ್ತದೆ ಎನ್ನುತ್ತದೆ ದತ್ತಾಂಶಗಳು. ದಟ್ಟಣೆ ಇಲ್ಲದೇ ಇದ್ದರೆ ಸಾಮಾನ್ಯವಾಗಿ ಪ್ರತಿದಿನ 10 ಕಿ.ಮೀ.ನಂತೆ ಒಂದು ವರ್ಷದಲ್ಲಿ 126 ಗಂಟೆಗಳನ್ನು ರಸ್ತೆಯಲ್ಲಿ ಕಳೆಯಬೇಕಾಗುತ್ತದೆ. ಆದರೆ, ಅಷ್ಟೇ ದೂರವನ್ನು ಕ್ರಮಿಸಲು ವರ್ಷವೊಂದರಲ್ಲಿ 134 ಗಂಟೆಗಳನ್ನು ಸಂಚಾರ ದಟ್ಟಣೆಯಲ್ಲಿ ಕಳೆಯಬೇಕಾಗುತ್ತದೆ.

ಬೆಳಿಗ್ಗೆ 8ರಿಂದ 11ರವರೆಗೆ
- 10 ಕಿ.ಮೀ. ಕ್ರಮಿಸಲು ಸಂಚಾರಕ್ಕೆ ಮಾತ್ರ ತಗಲುವ ಸಮಯ: 15 ನಿಮಿಷ
- 10 ಕಿ.ಮೀ. ಕ್ರಮಿಸಲು ಸಂಚಾರ ದಟ್ಟಣೆಯಲ್ಲಿ ನಿಲ್ಲಬೇಕಾದ ಸಮಯ: 16 ನಿಮಿಷ
- 31 ನಿಮಿಷ 10 ಕಿ.ಮೀ. ಕ್ರಮಿಸಲು ತಗಲುವ ಒಟ್ಟು ಸಮಯ

ಸಂಜೆ 5ರಿಂದ 9ರವರೆಗೆ
- 10 ಕಿ.ಮೀ. ಕ್ರಮಿಸಲು ಸಂಚಾರಕ್ಕೆ ಮಾತ್ರ ತಗಲುವ ಸಮಯ: 16 ನಿಮಿಷ
- 10 ಕಿ.ಮೀ. ಕ್ರಮಿಸಲು ಸಂಚಾರ ದಟ್ಟಣೆಯಲ್ಲಿ ನಿಲ್ಲಬೇಕಾದ ಸಮಯ: 20 ನಿಮಿಷ
- 36 ನಿಮಿಷ 10 ಕಿ.ಮೀ. ಕ್ರಮಿಸಲು ತಗಲುವ ಒಟ್ಟು ಸಮಯ

ಇಂಗಾಲದ ಹೊರೆ

ಸಾಮಾನ್ಯ ಕಾರುಗಳು ಬೆಂಗಳೂರು ನಗರದ ಕೇಂದ್ರಭಾಗದಲ್ಲಿ ಪ್ರತಿದಿನ 10 ಕಿ.ಮೀ.ನಂತೆ ಒಂದು ವರ್ಷ ಸಂಚರಿಸಿದಾಗ ಎಷ್ಟು ಇಂಗಾಲದ ಡೈಆಕ್ಸೈಡ್ ಅನ್ನು ಉಗುಳುತ್ತದೆ ಎಂಬುದನ್ನು ಟಾಮ್‌ಟಾಮ್ ಲೆಕ್ಕಾಚಾರ ಮಾಡಿದೆ. ಅಷ್ಟು ಇಂಗಾಲದ ಡೈಆಕ್ಸೈಡ್ ಅನ್ನು ಹೀರಿಕೊಳ್ಳಲು ಎಷ್ಟು ಮರಗಳ ಅಗತ್ಯವಿದೆ ಎಂಬುದನ್ನೂ ಅಂದಾಜಿಸಲಾಗಿದೆ.

ಪೆಟ್ರೋಲ್ ಕಾರು
- 1,009 ಕೆ.ಜಿ. ಒಂದು ವರ್ಷದ ಅವಧಿಯಲ್ಲಿ ಪೆಟ್ರೋಲ್ ಕಾರು ಉಗುಳುವ ಇಂಗಾಲದ ಡೈಆಕ್ಸೈಡ್
- 101 ಈ ಇಂಗಾಲದ ಡೈಆಕ್ಸೈಡ್‌ಅನ್ನು ಹೀರಿಕೊಳ್ಳಲು ಬೇಕಿರುವ ಮರಗಳ ಸಂಖ್ಯೆ

ಡೀಸೆಲ್ ಕಾರು
- 954 ಕೆ.ಜಿ. ಒಂದು ವರ್ಷದ ಅವಧಿಯಲ್ಲಿ ಡೀಸೆಲ್ ಕಾರು ಉಗುಳುವ ಇಂಗಾಲದ ಡೈಆಕ್ಸೈಡ್
- 95 ಈ ಇಂಗಾಲದ ಡೈಆಕ್ಸೈಡ್‌ಅನ್ನು ಹೀರಿಕೊಳ್ಳಲು ಬೇಕಿರುವ ಮರಗಳ ಸಂಖ್ಯೆ

● ಒಂದೇ ಅಂತರವನ್ನು ಕ್ರಮಿಸುವಲ್ಲಿ ಪೆಟ್ರೋಲ್ ಎಂಜಿನ್ ಕಾರುಗಳು, ಡೀಸೆಲ್ ಎಂಜಿನ್ ಕಾರುಗಳಿಗಿಂತ ಶೇ 5.7ರಷ್ಟು ಹೆಚ್ಚು ಇಂಗಾಲದ ಡೈಆಕ್ಸೈಡ್ ಅನ್ನು ಉಗುಳುತ್ತವೆ

ಒಟ್ಟು 108 ಕಿ.ಮೀ. ದಟ್ಟಣೆ

ಬೆಂಗಳೂರಿನಲ್ಲಿ ಸಂಜೆ 7ರಿಂದ ರಾತ್ರಿ 9ರ ಮಧ್ಯೆ ಸಂಚಾರ ದಟ್ಟಣೆ ತೀವ್ರವಾಗಿರುತ್ತದೆ ಎಂದು ಟಾಮ್‌ಟಾಮ್‌ನ ದತ್ತಾಂಶಗಳು ಹೇಳುತ್ತವೆ. ಬೆಂಗಳೂರು ನಗರ ಕೇಂದ್ರದ 5 ಕಿ.ಮೀ. ಪರಿಧಿಯಲ್ಲಿ ಗುರುವಾರ ರಾತ್ರಿ 9 ಗಂಟೆಯಲ್ಲಿ, ಒಟ್ಟು 186 ಕಡೆ ವಾಹನಗಳು ಸುಮ್ಮನೆ ನಿಂತಿದ್ದವು. ಸಂಚಾರ ಸಿಗ್ನಲ್‌ಗಳಲ್ಲಿ ನಿಂತಿರುವ ಮತ್ತು ಸಂಚಾರ ದಟ್ಟಣೆಯಲ್ಲಿ ಸಿಲುಕಿ, ಚಲಿಸಲಾಗದೇ ನಿಂತಿರುವ ಸ್ಥಳಗಳನ್ನು ಇಲ್ಲಿ ಪರಿಗಣಿಸಲಾಗಿದೆ.

ಹೀಗೆ ಕೇವಲ 5 ಕಿ.ಮೀ.ನಷ್ಟು ಪರಿಧಿಯಲ್ಲಿ 186 ಕಡೆ ನಿಂತಿರುವ ವಾಹನಗಳ ಒಟ್ಟು ಉದ್ದ 108 ಕಿ.ಮೀ.ನಷ್ಟಿತ್ತು ಎಂದು ಟಾಮ್‌ಟಾಮ್‌ನ ದತ್ತಾಂಶಗಳು ಹೇಳುತ್ತವೆ. ಆ ಸಮಯದಲ್ಲಿ ವಾಹನಗಳು 10 ಕಿ.ಮೀ.ನಷ್ಟು ದೂರವನ್ನು ಕ್ರಮಿಸಲು ಸರಾಸರಿ 32 ನಿಮಿಷ, 41 ಸೆಕೆಂಡ್‌ಗಳು ಬೇಕಾಗಿತ್ತು ಎಂದು ಟಾಮ್‌ಟಾಮ್ ಡ್ಯಾಶ್‌ಬೋರ್ಡ್ ಹೇಳುತ್ತದೆ.

ಆಧಾರ: ಟಾಮ್‌ಟಾಮ್ ಜಾಗತಿಕ ಸಂಚಾರ ಸೂಚ್ಯಂಕ ವರದಿ

ಮದುರೈನ ಕಾಮರಾಜ್ ವಿಶ್ವವಿದ್ಯಾಲಯದಲ್ಲಿ ಅಧ್ಯಯನ

ಪುರಾತನ ಡಿಎನ್‌ಎ ವಿಶ್ಲೇಷಣೆ ಪ್ರಯತ್ನ

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನ ಮದುರೈನ ಕಾಮರಾಜ್ ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಲಾಗಿರುವ ಪ್ರಯೋಗಾಲಯದಲ್ಲಿ ಪುರಾತನ ಕಾಲದ ಡಿಎನ್‌ಎ ವಿಶ್ಲೇಷಣೆ ನಡೆಸಲು ಅಮೆರಿಕದ ಪ್ರತಿಷ್ಠಿತ ಡೇವಿಡ್ ರೀಚ್ ಪ್ರಯೋಗಾಲಯದ ವಿಜ್ಞಾನಿಗಳು ಕೈಜೋಡಿಸಿದ್ದಾರೆ. ಉತ್ಖನನದ ವೇಳೆ ಹೊರತೆಗೆಯಲಾಗಿರುವ ಪುರಾತನ ಕಾಲದ ಮನುಷ್ಯನ 30ಕ್ಕೂ ಹೆಚ್ಚಿನ ಮಾದರಿಗಳ ಡಿಎನ್‌ಎಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಈ ಮಾದರಿಗಳಿಗೆ ವೈಜ್ಞಾನಿಕ ಪುರಾವೆಗಳನ್ನು ಒದಗಿಸಲು ಈ ಅಧ್ಯಯನ ನೆರವಾಗಲಿದೆ.

ಹಾರ್ವರ್ಡ್ ಮೆಡಿಕಲ್ ಸ್ಕೂಲ್‌ನ ಡೇವಿಡ್ ರೀಚ್ ಪ್ರಯೋಗಾಲಯದ ಹಿರಿಯ ವಿಜ್ಞಾನಿ ಕೆಂಡರ್ ಸಿರಕ್ ಅವರ ನೇತೃತ್ವದ ತಂಡ ಸೋಮವಾರ ಮದುರೈಗೆ ಬಂದಿದೆ. ಕೊಂತಾವೈ, ಸಿವಗಾಲೈ, ಆದಿಚನ್ನಲ್ಲೂರು, ಮಯಿಲಾದಂಆರೈ, ಕೊದುಮನಾಲ್‌ನಲ್ಲಿ ಸಂಗ್ರಹಿಸಲಾಗಿರುವ ಮಾದರಿಗಳ ವಿಶ್ಲೇಷಣೆಗೆ ಈ ತಂಡ ನೆರವು ನೀಡಲಿದೆ.

ಕ್ರಿ.ಪೂ. 800ರಿಂದ ಕ್ರಿ.ಶ. 300ರ ಅವಧಿಯಲ್ಲಿ ಇತ್ತು ಎಂದು ನಂಬಲಾದ, ಜನವಸತಿ ನಗರ ಕೀಲಾದಿಯ ಕೊಂತಾವೈ ಎಂಬಲ್ಲಿ ಕಂಡುಬಂದಿದ್ದ ಸಮಾಧಿ ಸ್ಥಳದಲ್ಲಿ 2014–16ರ ಅವಧಿಯಲ್ಲಿ ಉತ್ಖನನ ನಡೆಸಲಾಗಿತ್ತು. ಈ ಕುರಿತು ಭಾರತೀಯ ಪುರಾತತ್ವ ಇಲಾಖೆ (ಎಎಸ್‌ಐ) ವರದಿ ಸಲ್ಲಿಸಿತ್ತು. ಪುರಾತತ್ವ ಇಲಾಖೆಯ ಪ್ರಕಾರ, ಸಂಗಂ ವಂಶದ ಇತಿಹಾಸವು ಅಂದುಕೊಂಡಿದ್ದಕ್ಕಿಂತ 500 ವರ್ಷಗಳಷ್ಟು ಹಿಂದಕ್ಕೆ ಹೋಗಿದೆ.

2022ರ ನವೆಂಬರ್‌ನಲ್ಲಿ ಪ್ರಯೋಗಾಲಯವನ್ನು ಉದ್ಘಾಟಿಸಲಾಗಿತ್ತು. ತಮಿಳುನಾಡಿನ ಪುರಾತತ್ವ ಇಲಾಖೆ ಹಾಗೂ ಭಾರತೀಯ ಪುರಾತತ್ವ ಇಲಾಖೆಗಳು ಈ ಸ್ಥಳಗಳಲ್ಲಿ ಉತ್ಖನನ ನಡೆಸಿ ಸಂಗ್ರಹಿಸಿದ್ದ ಮಾನವ, ಪ್ರಾಣಿಗಳು ಹಾಗೂ ಸಸ್ಯಗಳ ಮಾದರಿಗಳ ಡಿಎನ್‌ಎ ವಿಶ್ಲೇಷಣೆಯ ಪ್ರಾಥಮಿಕ ಕೆಲಸಗಳು ಅಂದಿನಿಂದಲೇ ಆರಂಭವಾಗಿದ್ದವು.

'ನಾವು ಈಗಾಗಲೇ ಕೆಲಸ ಆರಂಭಿಸಿದ್ದೇವೆ. ಶತಮಾನಗಳಷ್ಟು ಹಿಂದೆಯೇ ಭೂಮಿಯಲ್ಲಿ ಹೂತುಹೋಗಿದ್ದರಿಂದ ಈ ಮಾದರಿಗಳು ಸಾಕಷ್ಟು ಹಾನಿಗೊಂಡಿವೆ. ಹಾರ್ವರ್ಡ್ ತಂಡದ ನೆರವಿನಿಂದ ಈ ಮಾದರಿಗಳಿಂದ ಡಿಎನ್‌ಎ ಹೊರತೆಗೆಯಲು ಮುಂದಾಗಿದ್ದೇವೆ. ಹಾರ್ವರ್ಡ್ ತಂಡವು ತಂತ್ರಗಳನ್ನು ನಮ್ಮ ಜೊತೆ ಹಂಚಿಕೊಳ್ಳಲಿದೆ' ಎಂದು ಮದುರೈ ಕಾಮರಾಜ್ ವಿಶ್ವವಿದ್ಯಾಲಯದ ತಳಿಶಾಸ್ತ್ರ ಮತ್ತು ಜೈವಿಕ ವಿಜ್ಞಾನ ವಿಭಾಗದ ಮುಖ್ಯಸ್ಥ ಜಿ.ಕುಮರೇಶನ್ ಅವರು ಹೇಳಿದ್ದಾರೆ.

ಕೃಷಿ, ಸಂಸ್ಕೃತಿ

ಡಿಎನ್‌ಎ ಅಧ್ಯಯನದ ಜೊತೆಗೆ, ಅಸ್ಥಿಪಂಜರದ ಅಳಿದುಳಿದ ಭಾಗಗಳ ಪ್ರೋಟೀನ್‌ಗಳ ಬಗ್ಗೆಯೂ ಮದುರೈ ಪ್ರಯೋಗಾಲಯದ ತಂಡ ಅಧ್ಯಯನ ನಡೆಸಿದೆ. ಅಲ್ಲದೆ, ಪೂಜೆಗಳಿಗೆ ಬಳಸಲಾಗುವ ಮಡಕೆಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಮಾನವ, ಪ್ರಾಣಿ, ಸಸ್ಯಗಳ ಸುಮಾರು 20 ಮಾದರಿಗಳಿಂದ 150 ಕೋಟಿ ಡಿಎನ್‌ಎ ತುಣುಕುಗಳನ್ನು ಪ್ರಯೋಗಾಲಯದಲ್ಲಿ ವರ್ಗೀಕರಣ ಮಾಡಲಾಗಿದೆ. ಕೃಷಿ ಪದ್ಧತಿ, ವ್ಯಾಪಾರ ವೃತ್ತಿ ಮೊದಲಾದವನ್ನು ಅರಿಯಲು ಡಿಎನ್‌ಎ ಮಾದರಿಗಳು ನೆರವಾಗಲಿವೆ. ಕ್ರಿ.ಪೂ. 500ರಿಂದ ಕ್ರಿ.ಪೂ.2500ರ ನಡುವಿನ ಅವಧಿಯಲ್ಲಿ ತಮಿಳುನಾಡಿನಲ್ಲಿ ಅನುಸರಿಸುತ್ತಿದ್ದ ಕೃಷಿ, ಸಂಸ್ಕೃತಿ, ಸಾಮಾಜಿಕ ಅಂಶಗಳನ್ನು ಅರ್ಥಮಾಡಿಕೊಳ್ಳಲು ಜೈವಿಕ ಅಣುಗಳ ವಿಶ್ಲೇಷಣೆ ನೆರವಾಗಲಿದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ.



ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಮರಳಿ ಯತ್ನವ ಮಾಡು

ಗುರಿಯನ್ನೈದದೊಡೊಮ್ಮೆ ಮರಳಿ ನೀನುಜ್ಜುಗಿಸು |
ಕರಯುಕ್ತಿ ಪೆರ್ಚಿಯೋ, ದೈವ ಕರುಣಿಸಿಯೋ ||
ಕರುಮಋಣ ಸಂಧಿಸಿಯೊ ಕೈಗೂಡಬಹುದು ಗುರಿ |
ಪರವೆಯಿಡದುಜ್ಜುಗಿಸು – ಮಂಕುತಿಮ್ಮ || 824

ಪದ-ಅರ್ಥ: ಗುರಿಯನ್ನೈದದೊಡೊಮ್ಮೆ= ಗುರಿಯನು + ಐದದೊಡೆ(ಮುಟ್ಟದಿಂದರೆ) + ಒಮ್ಮೆ, ನೀನುಜ್ಜುಗಿಸು = ನೀನು + ಉಜ್ಜುಗಿಸು (ಪ್ರಯತ್ನ ಮಾಡು) ಕರಯುಕ್ತಿ = ಸ್ವಪ್ರಯತ್ನ, ಪೆರ್ಚಿಯೋ= ಹೆಚ್ಚಿಯೋ, ಪರಿವೆಯಿಡದುಜ್ಜುಗಿಸು = ಪರಿವೆ+ ಇಡದೆ + ಉಜ್ಜುಗಿಸು.

ವಾಚ್ಯಾರ್ಥ: ಒಮ್ಮೆ ನಿನ್ನ ಗುರಿ ತಲುಪಲಾಗದಿದ್ದರೆ ಮರಳಿ ಪ್ರಯತ್ನಿಸು. ನಿನ್ನ ಕೈಗಳ ಕುಶಲತೆ ಹೆಚ್ಚಿಯೋ, ದೈವದ ಕರುಣೆಯಿಂದಲೋ ನಿನ್ನ ಗುರಿ ತಲುಪಬಹುದು ಇದಾವುದರ ಪರಿವೆಯಿಲ್ಲದಂತೆ ಕರ್ತವ್ಯ ಮುಂದುವರೆಸು.

ವಿವರಣೆ: ಡೆನ್ಮಾರ್ಕಿನ ರಾಜನೊಬ್ಬ ದೇಶದಿಂದ ಉಚ್ಚಾಟಿತನಾಗಿ ಕಾಡು ಸೇರಿದ್ದ. ಒಮ್ಮೆ ತನ್ನ ಜೊತೆಗಾರರೊಂದಿಗೆ ಕೋಟೆಗೆ ಲಗ್ಗೆ ಇಟ್ಟು ಹೋರಾಡಿ ಸೋತ. ನಿರಾಸೆಯಿಂದ ತನ್ನ ಗತಿ ಮುಗಿಯಿತು ಎಂದು ತೀರ್ಮಾನಿಸಿಕೊಂಡು ಕುಳಿತಿದ್ದ. ಅವನ ಕಣ್ಣಿಗೆ ಜೇಡರಹುಳುವೊಂದು ಬಲೆ ಕಟ್ಟುವುದು ಕಂಡಿತು. ಅದರ ಮತ್ತುಅದರ ಪರಿವಾರಕ್ಕೆ ಆಧಾರವಾಗುವುದೆ ಆ ಬಲೆ. ಆದರೆ ಗಾಳಿ ಬಲು ಜೋರು ಅಲ್ಲಿ, ಹುಳ ತನ್ನ ಜೊಲ್ಲನ್ನು ಸುರಿಸಿ, ಬಲೆಯ ದಾರವನ್ನೆಳೆದು ಬಲೆ ಕಟ್ಟುತ್ತಿತ್ತು. ಆದರೆ ಗಾಳಿಗೆ ಅದು ಹರಿದು ಹೋಗಿ, ಅದೂ ಹಾರಿ ಕೆಳಗೆ ಬೀಳುತ್ತಿತ್ತು. ಹತ್ತಾರು ಬಾರಿ ಹೀಗೆಯೇ ಆಯಿತು. ಅದನ್ನು ಗಮನಿಸುತ್ತಿದ್ದ ರಾಜ, "ಹುಚ್ಚು ಹುಳ, ಸುಮ್ಮನೆ ಪ್ರಯತ್ನಿಸುತ್ತಿದೆ" ಎಂದು ನಕ್ಕ. ಆದರೆಹುಳ ತನ್ನ ಪ್ರಯತ್ನ ಬಿಡಲಿಲ್ಲ. ಮತ್ತೆರಡು ಪ್ರಯತ್ನಗಳ ನಂತರ ಬಲೆ ಗಟ್ಟಿಯಾಗಿ ನಿಂತಿತು. ಸ್ವಲ್ಪ ಹೊತ್ತಿನ ನಂತರ ಒಂದು ಹಾರುವ ಹುಳ ಬಂದು ಅದರಲ್ಲಿ ಬಿತ್ತು. ಪರಿವಾರದ ಆಹಾರಕ್ಕಾಯಿತು. ಅದನ್ನು ಕಂಡ ರಾಜನ ತಲೆಯಲ್ಲಿ ಮಿಂಚು ಹೊಳೆಯಿತು. ತನ್ನ ಸಹೋದ್ಯೋಗಿಗಳನ್ನು ಕರೆದು ಚಿಂತಿಸಿ, ಕೋಟೆಯೊಳಗಿರುವ ತನ್ನ ಹಿಂಬಾಲಕರ ಸಂಪರ್ಕ ಸಾಧಿಸಿ, ಯುದ್ಧ ಮಾಡಿ ಕೋಟೆ ಮತ್ತು ರಾಜ್ಯವನ್ನು ಗೆದ್ದ. ಯಾವ ಪ್ರಯತ್ನವೂ ವಿಫಲವಲ್ಲ ಎಂಬುದು ಅವನಿಗೆ ಮನವರಿಕೆಯಾಗಿತ್ತು. ಇದೇ ಈ ಕಗ್ಗದ ಮಾತು. ಒಂದು ಪ್ರಯತ್ನದಲ್ಲಿ ಕಾರ್ಯ ಸಫಲವಾಗದಿದ್ದರೆ ಕೈ ಚೆಲ್ಲಿ ಕೂಡ್ರಬೇಡ. ಮತ್ತೊಮ್ಮೆ ಕಾರ್ಯಪ್ರವೃತ್ತನಾಗು. ಅದರಲ್ಲಿ ನೀನು ಯಶಸ್ವಿಯಾಗಬಹುದು. ಮರುಪ್ರಯತ್ನದಲ್ಲಿ ನಿನ್ನ ಕಾರ್ಯ ಕುಶಲತೆ ವೃದ್ಧಿಯಾಗಿರಬಹುದು, ಆತ್ಮವಿಶ್ವಾಸ ಹೆಚ್ಚಾಗಿರಬಹುದು ಅಥವಾ ದೈವ ನಿನ್ನ ಮೇಲೆ ಕರುಣೆ ತೋರಬಹುದು. ಮರಳಿ ಮರಳಿ ಯತ್ನ ಮಾಡುವಾಗ ನಾವು ಹಿಂದೆ ಗಳಿಸಿಟ್ಟದ್ದ ಕರ್ಮಗಳ ಮೂಟೆ ಕರಗಬಹುದುಮತ್ತು ದೊರೆಯಬೇಕಾದ ಸಫಲತೆಯ ಋಣ ನಿನಗಿರಬಹುದು. ಇವೆರಡೂ ಸಂಧಿಸಿ ನಿನ್ನ ಗುರಿಯನ್ನುಪಡೆಯಬಹುದು. ಇವು, ಮತ್ತೆ ಇನ್ನೇನೋ ಆಗಬಹುದು. ಆದರೆ ಅವುಗಳ ಚಿಂತೆ ನಿನಗೆ ಬೇಡ. ಕರ್ತವ್ಯ ಮಾಡುವುದೊಂದೇ ನಿನಗಿರುವ ದಾರಿ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಫೆಬ್ರುವರಿ 17, 2023

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯನ ಶಿಶಿರ ಋತು ತಿಥಿ: ಮಾಘ ಕೃಷ್ಣದ್ವಾದಶಿ ಗಂ. 23-37 ನಕ್ಷತ್ರ: ಪೂರ್ವಾಷಾಢ ಗಂ. 20-28 ಯೋಗ: ಸಿದ್ಧಿ(ಆಸ್ರಿಕ್) ಗಂ. 23-44, ಕರಣ: ಕೌಲವ ಗಂ. 13-16, ಕುಂಭ ಮಾಸದ 04 ನೇ ದಿನ. ರಾಹುಕಾಲ : ಬೆಳಿಗ್ಗೆ 10-30 -12-00, ಸೂರ್ಯೋದಯ : 06-56 ಸೂರ್ಯಾಸ್ತ : 06-33
ಮುಸ್ಲಿಂ ದಿನಾಂಕ : 25 ರಜಬ್‌ಅ
ದೃಷ್ಟ ಸಂಖ್ಯೆ : 5, 11

ಮೇಷ: ಮಕ್ಕಳ ವಿದ್ಯಾಭ್ಯಾಸ ಉತ್ತಮವಾಗಿರುವುದು. ಸಲಹೆ ಸೂಚನೆಗಳನ್ನು ಹೆಚ್ಚು ಚರ್ಚಿಸದೆ ಮೇಲಧಿಕಾರಿಗಳು ಒಪ್ಪಿಕೊಳ್ಳುವರು. ಸಕಾರಾತ್ಮಕ ನಡವಳಿಕೆಗಳಿಂದಾಗಿ ಲಾಭ ಕಂಡು ಕೊಳ್ಳಲಿದ್ದೀರಿ.

ವೃಷಭ: ಎಲ್ಲವನ್ನೂ ಕಷ್ಟಪಟ್ಟು ಅಥವಾ ಇತರರ ಸಹಾಯದಿಂದ ಸಂಪಾದಿಸಿಕೊಳ್ಳಬೇಕಾಗುತ್ತದೆ. ಮಾನಸಿಕ ಖಿನ್ನತೆ ದೂರಮಾಡಿ. ಉದ್ಯೋಗದಲ್ಲಿ ಸಮಾಧಾನ ಸಿಗದಿದ್ದರೂ ಆರ್ಥಿಕವಾಗಿ ತೊಂದರೆಗಳಾಗುವುದಿಲ್ಲ.

ಮಿಥುನ: ಮಗನ ಒಳಿತಿಗಾಗಿ, ಅಭ್ಯುದಯಕ್ಕಾಗಿ ತೆಗೆದುಕೊಂಡ ಕೆಲ ಕಠಿಣ ನಿರ್ಧಾರಗಳಿಂದಾಗಿ ಉತ್ತಮ ಫಲ ನಿರೀಕ್ಷಿಸಬಹುದಾಗಿದೆ. ಹುಟ್ಟೂರಿನಿಂದ ಶುಭ ಸುದ್ದಿ ಕೇಳುವಿರಿ. ಷೇರು ಬಂಡವಾಳದಲ್ಲಿ ಯೋಚಿಸಿ ತೀರ್ಮಾನಿಸಿ.

ಕರ್ಕಾಟಕ: ದೇಹದ ಶ್ರಮಕ್ಕೆ ತಕ್ಕಂತಹ ಸಂಪಾದನೆ ಇಲ್ಲವಾದರೂ ನೆಮ್ಮದಿ ಇರಲಿದೆ. ಬರಬೇಕಾಗಿದ್ದ ಹಣಕ್ಕೆ ತುಸು ಅಡಚಣೆಗಳನ್ನು ನಿವಾರಿಸಿ ಕೊಳ್ಳಬೇಕಾಗುವುದು. ಕೌಟುಂಬಿಕ ಕಲಹಗಳು ಉಂಟಾಗದಂತೆ ಜಾಗ್ರತೆ ವಹಿಸಿಕೊಳ್ಳಿರಿ.

ಸಿಂಹ: ತೋಟದ ಬೆಳೆಗಳಿಂದ ಉತ್ತಮ ಆದಾಯದೊಂದಿಗೆ ಮುಂದಿನ ಬೆಳೆಯ ವಿಸ್ತರಣೆಯ ಬಗ್ಗೆ ಯೋಚನೆ ನಡೆಸುವಿರಿ. ಭಾವನಾತ್ಮಕ ಆಲೋಚನೆಗಳನ್ನು ಬದಿಗೆ ಸರಿಸಿ ಭಾವನೆಗಳ ಬದಲು ವಾಸ್ತವದತ್ತ ಗಮನ ಹರಿಸಿ. ಸಮಯ.

ಕನ್ಯಾ: ಸರ್ಕಾರಿ ಕೆಲಸಗಳಲ್ಲಿ ಅಡೆತಡೆ ಎದುರಾಗಬಹುದು. ಸಿಹಿತಿಂಡಿ ವ್ಯಾಪಾರಿಗಳಿಗೆ ಲಾಭದ, ನಷ್ಟದ ಮಿಶ್ರಫಲ ಅನುಭವಕ್ಕೆ ಬರಲಿದೆ. ಮನೋವಿಜ್ಞಾನದ ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಸಿಗಬಹುದು.

ತುಲಾ: ಹೊಸ ಮನೆ ಕೊಳ್ಳುವ ಪ್ರಯತ್ನಕ್ಕೆ ಎಲ್ಲಾ ರೀತಿಯಲ್ಲಿಯೂ ಚಾಲನೆ ಸಿಗುವುದು. ಯಾವುದೇ ಜವಾಬ್ದಾರಿಯನ್ನೂ ಯೋಚಿಸದೇ, ಅವಸರದಲ್ಲಿ ಒಪ್ಪಿಕೊಳ್ಳಬೇಡಿ. ಕೃಷಿಗೆ ಸಹಾಯವಾಗುವ ಯಂತ್ರಗಳ ಖರೀದಿಯಿಂದ ಲಾಭ.

ವೃಶ್ಚಿಕ: ಸಂಗೀತ ಮತ್ತು ಕಲೆಯಲ್ಲಿ ಅಭಿರುಚಿ ಹೆಚ್ಚಲಿದೆ. ತುರ್ತು ಕಾರ್ಯಗಳು ವಿಳಂಬವಾಗದೆ ಲಾಭದಾಯಕವಾಗಿ ನಡೆಯುವುದು. ಕಾತರದಿಂದ ಕಾಯುತಿದ್ದ ಸುದ್ದಿ ಕೇಳಿ ಮನಸ್ಸಿಗೆ ಹರ್ಷ ಉಂಟಾಗುವುದು.

ಧನು: ಗುಪ್ತಚರ ದಳ ಮಂದಿಗೆ ಕಾರ್ಯಭಾರಗಳು ಹೆಚ್ಚಲಿದೆ. ಸಮಸ್ಯೆಗಳನ್ನು ಶೀಘ್ರ ಬಗೆ ಹರಿಸಿಕೊಳ್ಳಲು ಪ್ರಯತ್ನಿಸುವಿರಿ. ಕೆಲವು ದಿನಗಳಿಂದಿದ್ದ ಸಹೋದರರೊಂದಿಗಿನ ಮನಸ್ತಾಪ ಮುಕ್ತವಾದ ಮಾತುಕತೆಯಿಂದ ದೂರಾಗುವುದು.

ಮಕರ: ಎಂಜಿನಿಯರ್ ಉದ್ಯೋಗ ರಂಗದವರ ತ್ವರಿತ ಬೆಳವಣಿಗೆಯಿಂದಾಗಿ ಉನ್ನತಾಧಿಕಾರಿಗಳ ಪ್ರಶಂಸೆಗೆ ಪಾತ್ರರಾಗುವ ಸಮಯ ಇದಾಗಲಿದೆ. ಕಥೆ--ಕಾದಂಬರಿಯ ಬಗ್ಗೆ ಆಸಕ್ತಿ ಮೂಡಲಿದೆ. ಕಾಲಮಿತಿಯೊಳಗೆ ಕರ್ತವ್ಯ ಪಾಲಿಸಿ.

ಕುಂಭ: ಕೆಲಸ ಕಾರ್ಯಗಳಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ. ಔಷಧ ಮಾರಾಟಗಾರರಿಗೆ ಲಾಭ ಉಂಟಾಗಲಿದೆ. ತೋಟದ ಕೆಲಸಗಳಿಗೆ ಮಗನಿಂದ ದೈಹಿಕ ಮತ್ತು ಆರ್ಥಿಕ ಸಹಾಯ ಸಿಗುವುದು.


ಮೀನ: ಮಕ್ಕಳ ವ್ಯಾಸಂಗದ ಬಗ್ಗೆ ಸಂಬಂಧಿಕರಲ್ಲಿ ಚರ್ಚೆ ನಡೆಸಿ, ಉಪಯೋಗಕಾರಿಯಾದ ಸಲಹೆ ದೊರಕುವುದು. ಆಸೆ ಆಕಾಂಕ್ಷೆ ಸಾಧ್ಯವಾದಷ್ಟು ನಿಯಂತ್ರಿಸಿಕೊಂಡಲ್ಲಿ, ಋಣ ಮುಕ್ತರಾಗುವ ಅವಕಾಶ ಒದಗಲಿದೆ.

ಪದಬಂಧ 5233

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಮರ್ಯಾದೆಯಿರುವ ಹುಟ್ಟುಗುಣ (4)
3. ಕೊನೆಗೆ ಭಾರವಾಗಿರುವ ತಳಪಾಯ (4)
5. ಕಸ್ತೂರಿ ಕಂಪಿನ ಭಾಷೆ (3)
6. ಹರಿಯುವಂಥ ವಸ್ತು (2)
8. ವಿಶೇಷವಾದ ದ್ರೋಹ (3)
10. ಋತುಗಳ ರಾಜನ ತಿಂಗಳು (3)
11. ಹೊಲಗದ್ದೆಗಳಲ್ಲಿಹೆಂಟೆಯನ್ನು ಒಡೆಯುವ ಸಾಧನ (3)
12. ಈ ರೀತಿ ಸಂತೈಸು (3)
15. ರಸನದಲ್ಲಿರುವ ದ್ರವ (2)
17. ಪಕ್ಷದೊಳಗಿದ್ದು ದೃಷ್ಟಿಗೆ ದೂರವಾಗಿರುವುದು (3)
18. ಯಾಗದ ಸಮಾಪ್ತಿ (4)
19. ನಿಸ್ಸಾರವಾದುದು ಇದು (4)

ಮೇಲಿಂದ ಕೆಳಕ್ಕೆ
1. ಗಾಳಿ ಸುಳಿದಾಡಲು ಮಾಡಿರುವ ಕಿಂಡಿ (3)
2. ಪರಿಷ್ಕೃತವಾಗದಿರುವ ಪ್ರತಿ (3)
3. ಅಡಗಿಕೊಳ್ಳಲು ಸೂಕ್ತವೆನಿಸಿದ ಜಾಗ (3)
7. ಬೇರೆ ಬೇರೆ ಬಣ್ಣಗಳ ಬೆರಕೆ (5)
9. ಮೋಸಗಾರ ಇಲ್ಲಿದ್ದಾನೆ (5)
13. ಒಳ್ಳೆಯ ದಾರಿಯಿದು (3)
14. ನಾಶವಿಲ್ಲದ ವರ್ಣ (3)
16. ದನವಿರುವ ಮನೆ (3)



5232ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಋತ್ವಿಕ್ಕು 4.ಸಂಭವ 6.ಕುಟಿಲೋಪಾಯ 7.ನಭ 9.ನವ 10.ಶಿಷ್ಟ 11.ಸುತ 13.ಮನೆವಾಳ್ತನ 16.ಮೆದುಳು 17.ನೆನಪು

ಮೇಲಿಂದ ಕೆಳಕ್ಕೆ:
1.ಋತುಮಾನ 2.ಕ್ಕುಮ್ಮಕ್ಕು 3.ನಚಲೋ 4.ಸಂಶಯ 5.ವಜ್ರೋತ್ಸವ 8.ಭವಿಷ್ಯ9.ನನಸು 10.ಶಿರೋನಾಮೆ 12.ತಲೆಗಾಪು 13.ಮರಳು 14.ವಾಚಾಳಿ 15.ನಮೂನೆ

ಸುಡೊಕು 5619

						5		
	2		6		7			
	6	5		4			9	1
	4				1		7	
8				2				4
	9		7			6		
9				3		4		
			4		8			9
2		4					5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5618 ಸುಡೊಕು

9	3	1	5	6	7	8	4	2
6	7	2	4	8	9	3	1	5
5	8	4	3	1	2	6	7	9
3	5	7	2	9	8	4	6	1
2	9	8	6	4	1	5	3	7
4	1	6	7	5	3	2	9	8
7	2	9	8	3	6	1	5	4
8	6	5	1	7	4	9	2	3
1	4	3	9	2	5	7	8	6

‘ಬಿಜೆಪಿ ಮತ್ತೆ ಅಧಿಕಾರಕ್ಕೇರಿದರೆ ಸಿವಿಲ್ ವಾರ್’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಬಿಜೆಪಿಯನ್ನು ಸೋಲಿಸುವುದೊಂದೇ ನಮ್ಮ ಗುರಿಯಾಗಬೇಕು. ಈ ಸಲ ಮತ್ತೆ ಅವರು ಅಧಿಕಾರಕ್ಕೆ ಬಂದರೆ ಸಿವಿಲ್ ವಾರ್ (ಆಂತರಿಕ ಕಲಹ) ಶುರುವಾಗಲಿದೆ’ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ನಗರದಲ್ಲಿ ಗುರುವಾರ ಸ್ಥಳೀಯ ಜೆಡಿಎಸ್ ಮುಖಂಡರನ್ನು ಕಾಂಗ್ರೆಸ್‌ಗೆ ಬರಮಾಡಿಕೊಂಡ ನಂತರ ಮಾತನಾಡಿದ ಅವರು, ‘ನೀವು ಜೆಡಿಎಸ್ ಬಿಟ್ಟು ಬಂದಿದ್ದು ಒಳ್ಳೆಯದಾಯಿತು. ಟಿಕೆಟ್ ಯಾರಿಗೇ ಸಿಕ್ಕರೂ ಅವರನ್ನು ಗೆಲ್ಲಿಸೋಣ. ಬಿಜೆಪಿಯನ್ನು ಸೋಲಿಸುವುದೇ ನಮ್ಮ ಮುಖ್ಯ ಗುರಿಯಾಗಬೇಕು’ ಎಂದು ತಿಳಿಸಿದರು.

ಪೀಠಕ್ಕೆ ಅಗೌರವ ತೋರಿದರೆ ಹೊರಗೆ ಹಾಕ್ತೇನೆ– ಸಭಾಧ್ಯಕ್ಷ ಎಚ್ಚರಿಕೆ

ಕಾಗೇರಿ– ಖಂಡ್ರೆ ಮಧ್ಯೆ ವಾಕ್ಸಮರ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಅಶ್ವತ್ಥನಾರಾಯಣ ವಿರುದ್ಧ ಸ್ವಯಂಪ್ರೇರಿತ ದೂರು ದಾಖಲಿಸಲು ಆಗ್ರಹ
- ಹೊರಗೆ ಹಾಕುವುದಿದ್ದರೆ ಹಾಕಿ ನೋಡೋಣ: ಖಂಡ್ರೆ ಸವಾಲು
- ಮುಖ್ಯಮಂತ್ರಿ ಬೊಮ್ಮಾಯಿ ಸಮ್ಮುಖದಲ್ಲಿ ಪ್ರಕರಣ ಇತ್ಯರ್ಥ

ಬೆಂಗಳೂರು: ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಮತ್ತು ಕಾಂಗ್ರೆಸ್‌ನ ಈಶ್ವರ ಖಂಡ್ರೆ ಮಧ್ಯೆ ವಿಧಾನಸಭೆಯಲ್ಲಿ ಗುರುವಾರ ಕಾವೇರಿದ ವಾಕ್ಸಮರ ನಡೆಯಿತು.

‘ನಿಮ್ಮನ್ನು ಹೊರಗೆ ಹಾಕಬೇಕಾಗುತ್ತದೆ’ ಎಂದು ಖಂಡ್ರೆ ಅವರಿಗೆ ಕಾಗೇರಿ ಎಚ್ಚರಿಕೆ ನೀಡಿದಾಗ, ಅದನ್ನು ತೀವ್ರವಾಗಿ ಖಂಡಿಸಿದ ಕಾಂಗ್ರೆಸ್ ಸದಸ್ಯರು ಧರಣಿ ಆರಂಭಿಸಿದರು. ಆಗ ಸಭಾಧ್ಯಕ್ಷರು ಕಲಾಪವನ್ನು ಮುಂದೂಡಿದರು.

ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರ ಕುರಿತು ತಾವು ಆಡಿದ ಮಾತುಗಳ ಬಗ್ಗೆ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರು ಸಮಜಾಯಿಷಿ ನೀಡಿ ವಿಷಾದ ವ್ಯಕ್ತಪಡಿಸಿದ ಬಳಿಕವೂ ಕಾಂಗ್ರೆಸ್ ಸದಸ್ಯರಾದ ಈಶ್ವರ ಖಂಡ್ರೆ, ಪ್ರಿಯಾಂಕ್ ಖರ್ಗೆ, ಕೃಷ್ಣಭೈರೇಗೌಡ ಮುಂತಾದವರು ಸಚಿವರ ವಿರುದ್ಧ ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಳ್ಳಬೇಕು ಎಂದು ಆಗ್ರಹಿಸಿದರು.

‘ಎಲ್ಲರೂ ಕುಳಿತುಕೊಳ್ಳಬೇಕು, ಒಟ್ಟಿಗೆ ಮಾತನಾಡಬಾರದು’ ಎಂದು ಕಾಗೇರಿ ಗದರಿದರು. ಆ ವೇಳೆಯಲ್ಲಿ ಖಂಡ್ರೆ ಏರಿದ ಧ್ವನಿಯಲ್ಲಿ ಮಾತನಾಡುತ್ತಿದ್ದರು. ಅದರಿಂದ ಸಿಟ್ಟಿಗೆದ್ದ ಅವರು, ‘ಏನು ನೀವು ಸದನದ ಮೇಲೆ ಸವಾರಿ ಮಾಡುತ್ತೀರಾ, ಕೂತ್ಕೊಳ್ಳಿ, ಹೀಗೆ ಮಾತನಾಡುತ್ತಿದ್ದರೆ ನಿಮ್ಮನ್ನು ಹೊರ ಹಾಕಬೇಕಾಗುತ್ತದೆ’ ಎಂದರು.

‘ನಮಗೆ ಮಾತನಾಡಲು ಅಧಿಕಾರ ಇಲ್ವಾ, ನೀವು ಸದಸ್ಯರನ್ನು ಈ ರೀತಿ ನಡೆಸಿಕೊಳ್ಳಬಾರದು. ನಮಗೂ ಮಾತನಾಡಲು ಅವಕಾಶ ನೀಡಬೇಕು’ ಎಂದು ಖಂಡ್ರೆ ಏರಿದ ಧ್ವನಿಯಲ್ಲಿ ಪ್ರತ್ಯುತ್ತರ ಕೊಟ್ಟಾಗ ಕಾಂಗ್ರೆಸ್ ಸದಸ್ಯರು ಧ್ವನಿಗೂಡಿಸಿದರು.

‘ನಾನು ಹೇಳ್ತಾ ಇದ್ದೇನೆ, ನೀವು ಕುಳಿತುಕೊಳ್ಳಬೇಕು. ಪೀಠದ ಮಾತು ಕೇಳದಿದ್ದರೆ ನನಗಿರುವ ಅಧಿಕಾರವನ್ನು ಚಲಾಯಿಸಬಹುದು. ನಿಮ್ಮ ಉಪನಾಯಕರು ಹೇಳಿದರೂ ನೀವು ಕೇಳುತ್ತಿಲ್ಲ. ಪ್ರತಿ ಬಾರಿ ಹೀಗೆ ನಡೆದುಕೊಳ್ಳುತ್ತೀರಿ’ ಎಂದು ಕಾಗೇರಿ ಅವರು ಖಂಡ್ರೆಯನ್ನು ಉದ್ದೇಶಿಸಿ ಆವೇಶಭರಿತರಾಗಿ ಹೇಳಿದರು. ‘ಹೊರಗೆ ಹಾಕುವುದಿದ್ದರೆ ಹಾಕಿ ನೋಡೋಣ’ ಎಂದು ಖಂಡ್ರೆ ಸವಾಲು ಹಾಕಿದರು.

‘ನಿಮಗೊಬ್ಬರಿಗೆ ಬಿ.ಪಿ ಅಲ್ಲ, ನನಗೂ ಬಿ.ಪಿ ಇದೆ. ಇಂತಹ ಸದಸ್ಯರನ್ನು ಏಕೆ ಆರಿಸಿ ಕಳಿಸುತ್ತೀರಿ ಎಂದು ನಿಮ್ಮ ಕ್ಷೇತ್ರದ ಮತದಾರರನ್ನು ಕೇಳಬೇಕಾಗುತ್ತದೆ’ ಎಂದು ಕಾಗೇರಿ ಭಾವಾವೇಶದಿಂದ ಹೇಳಿದಾಗ, ಕಾಂಗ್ರೆಸ್ ಸದಸ್ಯರು ಪ್ರತಿಭಟಿಸಿದರು. ಖಂಡ್ರೆ ಸೇರಿದಂತೆ ಬಹುತೇಕ ಕಾಂಗ್ರೆಸ್ ಸದಸ್ಯರು ಸಭಾಧ್ಯಕ್ಷರ ಪೀಠದ ಮುಂದೆ ಬಂದು ನಿಂತು ಧರಣಿ ಆರಂಭಿಸಿದರು.

‘ನಿಮ್ಮ ಆಸನಗಳಿಗೆ ಹೋಗಿ’ ಎಂದು ಸಭಾಧ್ಯಕ್ಷರು ಮಾಡಿದ ಮನವಿಗೆ ಒಪ್ಪಲಿಲ್ಲ. ಆಗ ಕಲಾಪವನ್ನು 15 ನಿಮಿಷಗಳಿಗೆ ಮುಂದೂಡಿದರು. ಆ ಬಳಿಕ ಸಭಾಧ್ಯಕ್ಷರು ತಮ್ಮ ಕೊಠಡಿಗೆ ಕಾಂಗ್ರೆಸ್ ಸದಸ್ಯರನ್ನು ಕರೆಸಿಕೊಂಡು ಮುಖ್ಯಮಂತ್ರಿ ಬೊಮ್ಮಾಯಿ ಸಮ್ಮುಖದಲ್ಲಿ ಪ್ರಕರಣ ಇತ್ಯರ್ಥಪಡಿಸಿದರು.

ಮತ್ತೆ ಕಲಾಪ ಸೇರಿದಾಗ ವಿಷಯ ಪ್ರಸ್ತಾಪಿಸಿದ ಕಾಗೇರಿ, ‘ಕಲಾಪದ ವೇಳೆ ಕೆಲವೊಮ್ಮೆ ಇಂತಹ ಘಟನೆಗಳು ನಡೆಯುತ್ತವೆ. ಈಶ್ವರ ಖಂಡ್ರೆ ಅವರೇ ನಿಮ್ಮ ಬಗ್ಗೆ ಮತ್ತು ನಿಮ್ಮ ಕ್ಷೇತ್ರದ ಮತದಾರರ ಬಗ್ಗೆ ನನಗೆ ಗೌರವಿದೆ. ನಿಮ್ಮ ತಂದೆಯವರ ಜತೆ ಒಳ್ಳೆಯ ಒಡನಾಟವಿತ್ತು. ಅವರ ಶಿಸ್ತಿನ ಜೀವನ ನನಗೆ ಪ್ರೇರಣೆ ಆಗಿತ್ತು. ವೈಯಕ್ತಿಕವಾಗಿ ನಿಮ್ಮ ಬಗ್ಗೆ ಸದಭಿಪ್ರಾಯವಿದೆ. ಅನ್ಯಥಾ ಭಾವಿಸಬೇಡಿ. ಇದನ್ನು ಇಲ್ಲಿಗೇ ಮುಗಿಸೋಣ’ ಎಂದು ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಖಂಡ್ರೆ, ‘ನಿಮ್ಮ ಬಗ್ಗೆ ಮತ್ತು ಪೀಠದ ಬಗ್ಗೆ ಗೌರವ ಇದೆ. ನಾನು ಗಡಿ ಭಾಗದ ಬೀದರ್‌ನಿಂದ ಬಂದವನು. ನಾನು ಸಹಜವಾಗಿ ಮಾತನಾಡಿದರೂ ಅದು ಏರಿದ ಧ್ವನಿಯಲ್ಲಿ ಮಾತನಾಡಿದಂತೇ ಇರುತ್ತದೆ. ಅದನ್ನು ಟೀಕೆ ಟಿಪ್ಪಣಿ ಎಂದು ಭಾವಿಸುವುದು ಬೇಡ. ಆದರೆ, ನೀವು ಈ ರೀತಿ ಮಾತನಾಡುತ್ತೀರಿ ಎಂದು ನಿರೀಕ್ಷಿಸಿರಲಿಲ್ಲ. 3 ಲಕ್ಷ ಮತದಾರರು ನನ್ನನ್ನು ಆಯ್ಕೆ ಮಾಡಿದ್ದಾರೆ. ಅವರು ತಪ್ಪು ಮಾಡಿದ್ದಾರೆ ಎಂಬ ಭಾವನೆ ಬರುತ್ತದೆ’ ಎಂದರು.

‘ಕಡತ ತರಿಸಿ ಯಾವುದನ್ನು ತೆಗೆಸಬೇಕೋ ಅದನ್ನು ತೆಗೆಸುತ್ತೇನೆ’ ಎಂದು ಕಾಗೇರಿ ಕಾಂಗ್ರೆಸ್ ಸದಸ್ಯರಿಗೆ ಭರವಸೆ ನೀಡಿದರು.

ಸುದ್ದಿ 2 ನಿಮಿಷ

ತುರುವೇಕೆರೆಯಿಂದ ಟೆನ್ನಿಸ್ ಕೃಷ್ಣ ಸ್ಪರ್ಧೆ

ತುಮಕೂರು: ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ತುರುವೇಕೆರೆ ವಿಧಾನಸಭಾ ಕ್ಷೇತ್ರದಿಂದ ಆಮ್ ಆದ್ಮಿ ಪಕ್ಷದ ಅಭ್ಯರ್ಥಿಯಾಗಿ ಹಾಸ್ಯ ನಟ ಟೆನ್ನಿಸ್ ಕೃಷ್ಣ ಸ್ಪರ್ಧಿಸಲಿದ್ದಾರೆ.

ಕಳೆದ ಆಗಸ್ಟ್‌ನಲ್ಲಿ ಎಎಪಿ ಸೇರ್ಪಡೆಯಾಗಿದ್ದ ಅವರು, ತುರುವೇಕೆರೆ ಕ್ಷೇತ್ರದಿಂದ ಚುನಾವಣೆ ಎದುರಿಸಲು ತಯಾರಿ ನಡೆಸಿದ್ದಾರೆ.



‘ಈ ಹಿಂದೆ ಚುನಾವಣೆ ಸಮಯದಲ್ಲಿ ತುರುವೇಕೆರೆ ಕ್ಷೇತ್ರದಲ್ಲಿ ಪ್ರಚಾರ ಮಾಡಿದ ಅನುಭವ ಇದೆ. ಕಾಂಗ್ರೆಸ್, ಬಿಜೆಪಿಯಿಂದ ಆಹ್ವಾನ ಬಂದರೂ ನಾನು ಹೋಗಲಿಲ್ಲ. ಎಎಪಿ ಮೂಲಕ ಬಡ ಕಲಾವಿದರ ಅಭಿವೃದ್ಧಿಗೆ ಶ್ರಮಿಸಲಾಗುವುದು’ ಎಂದು ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಟೆನ್ನಿಸ್ ಕೃಷ್ಣ ಹೇಳಿದರು.

ಟೆನ್ನಿಸ್ ಕೃಷ್ಣ ಅವರು ಜಿಲ್ಲೆಯಿಂದ ಸ್ಪರ್ಧಿಸಲು ತಯಾರಿ ನಡೆಸುತ್ತಿದ್ದಾರೆ. ಇನ್ನೂ ಟಿಕೆಟ್ ಅಂತಿಮವಾಗಿಲ್ಲ. ಪ್ರಬಲ ಆಕಾಂಕ್ಷಿಯಾಗಿದ್ದಾರೆ ಎಂದು ಎಎಪಿ ರಾಜ್ಯ ಘಟಕದ ಉಪಾಧ್ಯಕ್ಷ ಡಾ.ವಿಶ್ವನಾಥ್ ಮಾಹಿತಿ ನೀಡಿದರು.

ಜಾಹೀರಾತು ತಾರತಮ್ಯ ಸರಿಪಡಿಸಲಾಗುವುದು: ಬೊಮ್ಮಾಯಿ

ಬೆಂಗಳೂರು: ಸರ್ಕಾರದ ಕಾರ್ಯಕ್ರಮಗಳ ಜಾಹೀರಾತಿಗಾಗಿ 2019–20ರಿಂದ ಇಲ್ಲಿಯವರೆಗೆ ₹ 173.33 ಕೋಟಿ ವೆಚ್ಚ ಮಾಡಿದ್ದು, ಅದರಲ್ಲಿ ವಿದ್ಯುನ್ಮಾನ ಮಾಧ್ಯಮಗಳಿಗೆ ₹ 111.51 ಕೋಟಿ ನೀಡಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಿಧಾನಪರಿಷತ್ತಿನಲ್ಲಿ ಗುರುವಾರ ಕಾಂಗ್ರೆಸ್‌ನ ಯು.ಬಿ.ವೆಂಕಟೇಶ್ ಅವರು ಕೇಳಿದ ಎಚ್.ವಿಶ್ವನಾಥ್ ಅವರ ಚುಕ್ಕಿ ಗುರುತಿನ ಪ್ರಶ್ನೆಗೆ ಉತ್ತರಿಸಿದ ಅವರು, ಮುದ್ರಣ ಮಾಧ್ಯಮಗಳಿಗೆ ₹ 56.08 ಕೋಟಿ, ಸಾಮಾಜಿಕ ಮಾಧ್ಯಮಗಳಿಗೆ ₹ 5.74 ಲಕ್ಷ ನೀಡಲಾಗಿದೆ ಎಂದರು.

‘ವಿದ್ಯುನ್ಮಾನ ಮಾಧ್ಯಮಗಳಿಗೆ ಹೆಚ್ಚು ನೀಡಿರುವುದಕ್ಕೆ ಆಕ್ಷೇಪವಿಲ್ಲ. ಮುದ್ರಣ ಮಾಧ್ಯಮಗಳು ಸಂಕಷ್ಟದಲ್ಲಿವೆ. ಹೆಚ್ಚು ಜನರು ಗಮನಿಸುವುದು ವೃತ್ತಪತ್ರಿಕೆಗಳನ್ನು. ಸರ್ಕಾರ ಅವುಗಳಿಗೆ ಕಡಿಮೆ ಮೊತ್ತದ ಜಾಹೀರಾತು ನೀಡಿದೆ. ತಾರತಮ್ಯ ಸರಿಯಲ್ಲ’ ಎಂದು ವೆಂಕಟೇಶ್ ಹೇಳಿದರು.

ಮಾಧ್ಯಮಗಳ ನಡುವೆ ತಾರತಮ್ಯ ಮಾಡಿಲ್ಲ, ತಾರತಮ್ಯವಿದ್ದರೆ ಮುಂದಿನ ದಿನಗಳಲ್ಲಿ ಸರಿಪಡಿಸಲಾಗುವುದು. ಮುದ್ರಣ ಮಾಧ್ಯಮಗಳಿಗೆ ಹೆಚ್ಚಿನ ಜಾಹೀರಾತು ನೀಡಲು ಕ್ರಮಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಅವರು ಭರವಸೆ ನೀಡಿದರು.

ಶಾ ವಿರುದ್ಧ ಎಚ್‌ಡಿಕೆ ಕಿಡಿ: ಕೆರಳಿದ ಬಿಜೆಪಿ ಸದಸ್ಯರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರುದ್ಧ ವಿಧಾನಸಭೆಯಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಏಕವಚನದಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದು, ಬಿಜೆಪಿ–ಜೆಡಿಎಸ್ ಸದಸ್ಯರ ಮಧ್ಯದ ಜಗಳಕ್ಕೆ ಕಾರಣವಾಯಿತು.

‘ದೇವೇಗೌಡರ ಕುಟುಂಬ ಎಟಿಎಂ, ಪೇಟಿಎಂ ಎನ್ನುತ್ತಾನೆ ಆ ಗೃಹ ಸಚಿವ. ಇತಿಮಿತಿ ಬೇಡವೇ’ ಎಂದು ಸಿಡಿಮಿಡಿಗೊಂಡ ಕುಮಾರಸ್ವಾಮಿ, ‘ನಾವು ದುಡ್ಡು ಮಾಡಲು ರಾಜಕೀಯಕ್ಕೆ ಬಂದಿಲ್ಲ. 2023ರ ಚುನಾವಣೆಯಲ್ಲಿ ಯಾರು ಮನೆಹಾಳರೆಂದು ಜನ ತೀರ್ಪು ಕೊಡುತ್ತಾರೆ’ ಎಂದರು.

ಈ ವೇಳೆ ಆಕ್ರೋಶಗೊಂಡ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ, ‘ಏನೇನೋ ಬೊಗಳಿದರೆ ಸುಮ್ಮನೆ ಕುಳಿತುಕೊಳ್ಳಲು ಸಾಧ್ಯವಿಲ್ಲ. ಎಲ್ಲೋ ಹೇಳಿದ ಮಾತನ್ನು ಇಲ್ಲಿ ತಂದು ಓದಿದರೆ ನೀವು ಮಾತನಾಡಿದ್ದನ್ನೂ ಹೇಳಬೇಕಾಗುತ್ತದೆ’ ಎಂದು ಗದರಿಸಿದರು.

ಆಗ ಸಿಡಿದೆದ್ದ ಜೆಡಿಎಸ್‌ನ ರವೀಂದ್ರ ಶ್ರೀಕಂಠಯ್ಯ, ಸುರೇಶ್ ಗೌಡ, ಸಿ.ಎನ್.ಬಾಲಕೃಷ್ಣ, ಸಾ.ರಾ. ಮಹೇಶ ಮತ್ತಿತರರು ಸಭಾಧ್ಯಕ್ಷ ಪೀಠದತ್ತ ನುಗ್ಗಿದರು. ಮಾಧುಸ್ವಾಮಿ ಹೇಳಿಕೆಯನ್ನು ವಾಪಸು ಪಡೆಯಬೇಕು ಎಂದು ಪಟ್ಟು ಹಿಡಿದರು. ಸಭಾಧ್ಯಕ್ಷರ ಪೀಠದಲ್ಲಿದ್ದ ಕುಮಾರ ಬಂಗಾರಪ್ಪ, ಪರಿಶೀಲಿಸಿ ತೀರ್ಮಾನಿಸುವುದಾಗಿ ಪರಿಪರಿಯಾಗಿ ವಿನಂತಿಸಿದ ಬಳಿಕ ಎಲ್ಲರೂ ತಮ್ಮ ಆಸನಕ್ಕೆ ಮರಳಿದರು.

ರಾಜ್ಯಪಾಲರ ಭಾಷಣದ ವಂದನಾ ನಿರ್ಣಯ ಮಂಡಿಸಿದ್ದ ಬಿಜೆಪಿ ಸಿ.ಟಿ. ರವಿ ಸದನದಲ್ಲಿ ಆಡಿದ ಮಾತುಗಳಿಗೆ ತಿರುಗೇಟು ನೀಡಿದ ಕುಮಾರಸ್ವಾಮಿ, ‘ನಮ್ಮ ಪಕ್ಷವನ್ನು ಅಂಗವಿಕಲ ಮಗುವಿಗೆ ಹೋಲಿಸಿ ರವಿ ಮಾತನಾಡಿದ್ದಾರೆ. ಈ ಮಗುವಿನಿಂದಲೇ ನಿಮಗೆ ಜೀವ ಕೊಟ್ಟಿದ್ದು ಎಂದು ಮರೆಯಬೇಡಿ’ ಎಂದು ಕೆಣಕಿದರು.

‘ಮುಂದಿನ ಚುನಾವಣೆಯಲ್ಲಿ ಅಧಿಕಾರ ಸಿಗದಿದ್ದರೆ ಪಕ್ಷವನ್ನು ವಿಸರ್ಜಿಸುವೆ ಎಂಬ ನನ್ನ ಮಾತನ್ನೇ ಇಟ್ಟುಕೊಂಡು, ನಮ್ಮ ಶಾಸಕರು, ಕಾರ್ಯಕರ್ತರಿಗೆ ಕಾಂಗ್ರೆಸ್ ಸೇರುವಂತೆ ಆ ಪಕ್ಷದ ಅಧ್ಯಕ್ಷರು ಆಹ್ವಾನ ಕೊಡುತ್ತಿದ್ದಾರೆ. ಇವರು 150 ಸ್ಥಾನ ಗೆಲ್ಲುವ ಗುರಿ ಹಾಕಿಕೊಂಡವರು. ಬಿಜೆಪಿಯವರು 150 ಸ್ಥಾನ ಗೆಲ್ಲುತ್ತೇವೆಂದು ಹೇಳಿಕೊಂಡು ತಿರುಗುತ್ತಿದ್ದಾರೆ. ನಾವು ತೆಲಂಗಾಣಕ್ಕೆ ಹೋಗಬೇಕೆಂದು ಸಲಹೆ ಕೊಡುತ್ತಾರೆ’ ಎಂದು ಎರಡೂ ಪಕ್ಷದ ನಾಯಕರನ್ನು ಕುಟುಕಿದರು.

ಮೈತ್ರಿ ಸರ್ಕಾರಗಳ ಬಗ್ಗೆ ಪ್ರಸ್ತಾಪಿಸಿದ ಅವರು, ‘ಎರಡೂ ಪಕ್ಷಗಳಿಂದ ಸಾಕಷ್ಟು ಅನುಭವಿಸಿದ್ದೇನೆ. ಬಿಜೆಪಿಗೆ ಅಧಿಕಾರ ಸಿಗಲು ಜೆಡಿಎಸ್ ಕಾರಣ ಎಂದು ಸಿದ್ದರಾಮಯ್ಯ ಹೇಳುತ್ತಾರೆ. ಅನ್ಯಾಯ ಆಗಿದ್ದು ನನಗೆ, ಬಲಿಪಶು ಆಗಿದ್ದು ನಾನು. ಲಾಟರಿ ಸಿಎಂ, ಲಾಟರಿ ಪಿಎಂ ಎಂದು ನನ್ನನ್ನು, ದೇವೇಗೌಡರನ್ನು ಕುರಿತು ಹೇಳಿದ್ದಾರೆ. ನಮಗೆ ಅಧಿಕಾರ ಸಿಕ್ಕಿದ್ದು ದೈವೇಚ್ಛೆ’ ಎಂದರು.

ತೌಡು ಕುಟ್ಟುತ್ತಾರೆ ಪದ ಬಳಕೆ: ಮಾಧುಸ್ವಾಮಿ ಆಕ್ಷೇಪ

ಬೆಂಗಳೂರು: ‘ವಿಧಾನಸಭೆಯಲ್ಲಿ ತೌಡು ಕುಟ್ಟುತ್ತಾರೆ. ಅಲ್ಲಿಗೆ ಹೋಗುವುದಿಲ್ಲ ಎಂದು ನೀವು ಹೇಳಿರುವುದಾಗಿ ಪತ್ರಿಕೆಗಳಲ್ಲಿ ವರದಿಯಾಗಿದೆ. ನಿಮ್ಮಂತಹವರು ಹೀಗೆ ಹೇಳಿದರೆ ಸದನದ ಗೌರವ ಹೇಗೆ ಉಳಿಯುತ್ತದೆ’ ಎಂದು ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರನ್ನು ಪ್ರಶ್ನಿಸಿದರು.

ವಿಧಾನಸಭೆಯಲ್ಲಿ ಗುರುವಾರ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಮಾತನಾಡಲು ನಿಂತಾಗ ಅವರನ್ನು ತಡೆದ ಮಾಧುಸ್ವಾಮಿ, ‘ಸಾರ್ವಜನಿಕವಾಗಿ ತೌಡು ಕುಟ್ಟುತ್ತಾರೆ. ಅಸೆಂಬ್ಲಿಗೆ ಹೋಗುವುದಿಲ್ಲ ಎಂದು ಹೇಳಿದ್ದೀರಿ. ಇಂತಹ ಮಾತುಗಳಿಂದ ನಮ್ಮಂತವರಿಗೆ ಗೌರವ ಹೇಗೆ ಉಳಿಯುತ್ತದೆ. ನೀವು ಎರಡು ಬಾರಿ ಮುಖ್ಯಮಂತ್ರಿ ಆಗಿದ್ದವರು. ನಮ್ಮೆಲ್ಲರಿಗೂ ಮಾರ್ಗದರ್ಶನ ಮಾಡಬೇಕಾದವರು. ನಮ್ಮ ಬಗ್ಗೆ ರಾಜಕೀಯವಾಗಿ ಏನಾದರೂ ಮಾತನಾಡಿ ಪರವಾಗಿಲ್ಲ. ಆದರೆ ಸದನದಲ್ಲಿ ನಡೆಯುವ ಕಲಾಪಗಳ ಬಗ್ಗೆ ಈ ರೀತಿ ಮಾತನಾಡುವುದು ಎಷ್ಟರಮಟ್ಟಿಗೆ ಸರಿ? ಸದಸ್ಯರು ಸದನಕ್ಕೆ ಗೌರವ ತೋರಬೇಕು’ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಕುಮಾರಸ್ವಾಮಿ, ‘ನಾನು ಆ ರೀತಿ ಹೇಳಿಕೆ ನೀಡಿಲ್ಲ. ಬೆಳಗಾವಿ ಅಧಿವೇಶನಕ್ಕೆ ಬರಲು ಆಗುವುದಿಲ್ಲ ಎಂದು ಹೇಳಿದ್ದೆ. ಅಲ್ಲಿ ಬರಲು ಆಗಲಿಲ್ಲ. ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರು ತೌಡು ಕುಟ್ಟುವ ಹೇಳಿಕೆ ನೀಡಿದ್ದನ್ನು ಓದಿದ್ದೇನೆ’ ಎಂದರು.

‘ನೀವು ಆ ರೀತಿ ಹೇಳಿಕೆ ನೀಡಿಲ್ಲ ಎಂದರೆ, ಅಲ್ಲಿಗೆ ವಿಷಯ ಮುಗಿಯಿತು. ಪ್ರಶ್ನೆ ಮಾಡುವುದಿಲ್ಲ’ ಎಂದು ಮಾಧುಸ್ವಾಮಿ ಹೇಳಿದರು.

ಜೆಡಿಎಸ್ ಸದಸ್ಯರ ಕೆರಳಿಸಿದ ‘ತಂತ್ರ’

ಬೆಂಗಳೂರು: ವಿಧಾನ ಪರಿಷತ್ ಆಡಳಿತ ಪಕ್ಷದ ಮುಖ್ಯ ಸಚೇತಕ ವೈ.ಎ.ನಾರಾಯಣಸ್ವಾಮಿ ಅವರು ಬಳಸಿದ ‘ತಂತ್ರಗಳು’ ಪದಕ್ಕೆ ಕೆರಳಿದ ಜೆಡಿಎಸ್ ಸದಸ್ಯರು ಎದ್ದು ನಿಂತು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ ಕುರಿತು ಜೆಡಿಎಸ್ ಸದಸ್ಯ ಸಿ.ಎನ್.ಮಂಜೇಗೌಡ ಮಾತನಾಡುವಾಗ ಮಧ್ಯ ಪ್ರವೇಶಿಸಿದ ನಾರಾಯಣಸ್ವಾಮಿ, ನಿಮ್ಮ ನಾಯಕರ ಪಂಚತಂತ್ರ ಯಾತ್ರೆಯಿಂದ ಯಾವುದೇ ಲಾಭವಾಗದು ಎಂದು ಟೀಕಿಸಿದರು.

’ಅದು ಪಂಚತಂತ್ರ ಅಲ್ಲ ಪಂಚರತ್ನ ಯಾತ್ರೆ’ ಎಂದು ಸಮಜಾಯಿಷಿ ನೀಡಿದ ಜೆಡಿಎಸ್ ಸದಸ್ಯರ ಮಾತಿಗೆ ಮತ್ತೆ ಕುಟುಕಿದ ಅವರು, ನಿಮ್ಮ ನಾಯಕರು ಮಾಡುವುದೇ ತಂತ್ರಗಳು ಎಂದರು. ಇದರಿಂದ ಬಿಜೆಪಿ, ಜೆಡಿಎಸ್ ಸದಸ್ಯರ ಮಧ್ಯೆ ವಾಗ್ವಾದ ನಡೆಯಿತು.

ಭ್ರಷ್ಟಾಚಾರ ಇಲ್ಲ ಎನ್ನಲ್ಲ: ಸಿ.ಟಿ.ರವಿ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ನಮ್ಮಲ್ಲಿ ಭ್ರಷ್ಟಾಚಾರ ಇಲ್ಲ ಎಂದು ನಾನು ಹೇಳುವುದಿಲ್ಲ. ವ್ಯವಸ್ಥೆಯಲ್ಲಿ ಭ್ರಷ್ಟಾಚಾರ ಇದೆ. ಆದರೆ, ಭ್ರಷ್ಟಾಚಾರದ ಪಿತಾಮಹ ಕಾಂಗ್ರೆಸ್’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದರು.

ಗುರುವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ಭ್ರಷ್ಟಾಚಾರದ ಬೀಜ ಬಿತ್ತಿದ್ದು ಕಾಂಗ್ರೆಸ್. ನಮ್ಮ ಸರ್ಕಾರದ ಭ್ರಷ್ಟಾಚಾರದ ಕುರಿತು ದಾಖಲೆಗಳಿದ್ದರೆ ನ್ಯಾಯಾಲಯಕ್ಕೆ ಹೋಗಲಿ. ಕಾಂಗ್ರೆಸ್ ಸರ್ಕಾರದ ಆಡಳಿತದಲ್ಲಿ ಯಾವ ನಾಯಕರು ಏನೆಲ್ಲ ಹಗರಣ ಮಾಡಿದ್ದಾರೆ ಎಂಬುದನ್ನು ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲಾ ಮೊದಲು ನೋಡಲಿ’ ಎಂದರು.

ಆರು ಖಾಸಗಿ ವಿವಿ ಮಸೂದೆ: ಮತ್ತೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತರಾತುರಿಯಲ್ಲಿ ಮಸೂದೆ ಮಂಡಿಸುವ ಅಗತ್ಯವೇನಿತ್ತು?’ ಎಂದು ಬೆಳಗಾವಿ ಅಧಿವೇಶನದಲ್ಲಿ ಆಡಳಿತ ಮತ್ತು ವಿರೋಧ ಪಕ್ಷದ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದ್ದರಿಂದ ವಾಪಸ್ ಪಡೆದಿದ್ದ ಆರು ಖಾಸಗಿ ವಿಶ್ವವಿದ್ಯಾಲಯಗಳ ಮಸೂದೆಗಳು ವಿಧಾನಸಭೆಯಲ್ಲಿ ಗುರುವಾರ ಪರ್ಯಾಲೋಚನೆಗೆ ಬಂದರೂ ಸಾಕಷ್ಟು ಸಂಖ್ಯೆಯ ಸದಸ್ಯರಿಲ್ಲದ ಕಾರಣಕ್ಕೆ ಮುಂದೂಡಿಕೆಯಾಯಿತು.

ಸಪ್ತಗಿರಿ ಎನ್‌ಪಿಎಸ್ ವಿಶ್ವವಿದ್ಯಾಲಯ, ಜಿ.ಎಂ. ವಿಶ್ವವಿದ್ಯಾಲಯ, ಆಚಾರ್ಯ ವಿಶ್ವವಿದ್ಯಾಲಯ, ಕಿಷ್ಕಿಂದ ವಿಶ್ವವಿದ್ಯಾಲಯ, ಟಿ. ಜಾನ್ ವಿಶ್ವವಿದ್ಯಾಲಯ, ರಾಜ್ಯ ಒಕ್ಕಲಿಗರ ಸಂಘ ವಿಶ್ವವಿದ್ಯಾಲಯ ಮಸೂದೆಗಳನ್ನು ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಅವರು ಬೆಳಗಾವಿ ಅಧಿವೇಶನದಲ್ಲಿ ಮಂಡಿಸಿದ್ದರು.

ಗುರುವಾರ ಈ ಮಸೂದೆಗಳ ಪರ್ಯಾಲೋಚನೆ ಮುಂದಾದಾಗ ಸದನದಲ್ಲಿ ಸಚಿವರೂ ಸೇರಿ ಕೇವಲ 13 ಸದಸ್ಯರು ಮಾತ್ರ ಇದ್ದರು!

ವಿಶ್ವವಿದ್ಯಾಲಯದ ಸ್ಥಾಪನೆಯ ಅಗತ್ಯದ ಬಗ್ಗೆ ವಿವರಿಸಿದ ಅಶ್ವತ್ಥನಾರಾಯಣ ಅವರು ಮಸೂದೆಗಳನ್ನು ಪರ್ಯಾಲೋಚಿಸಿ ಅಂಗೀಕರಿಸಬೇಕು ಎಂದು ಕೋರಿದಾಗ ಕಾಂಗ್ರೆಸ್‌ನ ಯು.ಟಿ. ಖಾದರ್, ಪ್ರಿಯಾಂಕ್ ಖರ್ಗೆ, ಜೆಡಿಎಸ್ ಸಾ.ರಾ. ಮಹೇಶ್, ವೆಂಕಟರಾವ್ ನಾಡಗೌಡ ಅವರು ಆಕ್ಷೇಪ ವ್ಯಕ್ತಪಡಿಸಿದರು.

‘ಸದನದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಸದಸ್ಯರು ಇಲ್ಲದೇ ಇದ್ದಾಗ ಮಸೂದೆಗಳನ್ನು ಪರ್ಯಾಲೋಚಿಸುವುದು ಸರಿಯಲ್ಲ. ಅಷ್ಟೇ ಅಲ್ಲ, ಚರ್ಚೆಯೇ ಇಲ್ಲದೆ ಮಸೂದೆಯನ್ನು ಮತಕ್ಕೆ ಹಾಕಿದರೆ ಹೇಗೆ?’ ಎಂದು ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

ಪರಿಸ್ಥಿತಿಯ ಗಂಭೀರತೆ ಅರಿತ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, 'ಸದನದ ಈ ಸ್ಥಿತಿಯಲ್ಲಿ ಮಸೂದೆಗಳನ್ನು ಪರ್ಯಾಲೋಚಿಸಿ, ಅಂಗೀಕರಿಸುವುದು ಸರಿಯಲ್ಲ. ಈ ಚರ್ಚೆಯನ್ನು ಸೋಮವಾರಕ್ಕೆ ಮುಂದೂಡಿದ್ದೇನೆ’ ಎಂದು ಪ್ರಕಟಿಸಿದರು.

‘ವಿಐಎಸ್‌ಎಲ್ ಉಳಿಸಿಕೊಳ್ಳಲು ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭದ್ರಾವತಿಯಲ್ಲಿರುವ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ ಮುಚ್ಚಲು ಅವಕಾಶ ನೀಡುವುದಿಲ್ಲ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ಶೂನ್ಯವೇಳೆಯಲ್ಲಿ ಕಾಂಗ್ರೆಸ್‌ನ ಬಿ.ಕೆ.ಸಂಗಮೇಶ್ ಅವರ ಪ್ರಶ್ನೆಗೆ ಉತ್ತರಿಸಿದ ಬೊಮ್ಮಾಯಿ, ವಿಐಎಸ್‌ಎಲ್ ರಾಜ್ಯದ ಪ್ರತಿಷ್ಠಿತ ಮತ್ತು ದಕ್ಷಿಣ ಭಾರತದ ಮೊದಲ ಉಕ್ಕು ಕಾರ್ಖಾನೆ. ಇದನ್ನು ಉಳಿಸಿಕೊಳ್ಳಲು ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದರು.

‘ಭಾರತೀಯ ಉಕ್ಕು ಪ್ರಾಧಿಕಾರ ತಮ್ಮಿಂದ ಇದನ್ನು ನಡೆಸಲು ಸಾಧ್ಯವಿಲ್ಲ ಎಂದು ಬಹಳ ಹಿಂದೆಯೇ ಹೇಳಿಬಿಟ್ಟಿದೆ. ಖಾಸಗಿಯವರು ತೆಗೆದುಕೊಳ್ಳಲು ಮುಂದೆ ಬಂದರೆ ಅವಕಾಶ ನೀಡುತ್ತೇವೆ. ಕೆಲವು ಉದ್ಯಮಿಗಳ ಜತೆ ಚರ್ಚಿಸಿದ್ದೇವೆ. ಕೆಲವರು ಪರಿಶೀಲಿಸುವುದಾಗಿ ಹೇಳಿದ್ದಾರೆ. ಇದು ಒಮ್ಮೆ ಆರಂಭವಾದರೆ ರಾಜ್ಯ ಮತ್ತು ಕೇಂದ್ರಕ್ಕೆ ತೆರಿಗೆ ಬರುತ್ತದೆ. ನೌಕರರ ಕೆಲಸವೂ ಉಳಿಯುತ್ತದೆ’ ಎಂದರು.

ಬಿಜೆಪಿಯ ಬಿ.ಎಸ್.ಯಡಿಯೂರಪ್ಪ, ಈ ಕಾರ್ಖಾನೆಗೆ ಸುದೀರ್ಘ ಇತಿಹಾಸವಿದೆ. ಇದನ್ನು ಉಳಿಸಿಕೊಳ್ಳಬೇಕು. ಇದನ್ನು ಲಾಭದಾಯಕವಾಗಿ ನಡೆಸಲು ಸಾಧ್ಯವಿದೆ. ಈ ವಿಚಾರವಾಗಿ ಕೇಂದ್ರ ಸರ್ಕಾರಕ್ಕೆ ಮನವಿ ಮಾಡೋಣ ಎಂದು ತಿಳಿಸಿದರು.

ಕೆಆರ್‌ಪಿಪಿ ಅಭ್ಯರ್ಥಿಗಳ ಹೆಸರು ಪ್ರಕಟ

ಐದು ಕ್ಷೇತ್ರಕ್ಕೆ ಟಿಕೆಟ್ ಘೋಷಣೆ

ಗಂಗಾವತಿ (ಕೊಪ್ಪಳ ಜಿಲ್ಲೆ): ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಸಂಸ್ಥಾಪಕ ಜನಾರ್ದನ ರೆಡ್ಡಿ ಗುರುವಾರ ಇಲ್ಲಿ ಐದು ವಿಧಾನಸಭಾ ಕ್ಷೇತ್ರಗಳಿಗೆ ತಮ್ಮ ಪಕ್ಷದ ಅಭ್ಯರ್ಥಿಗಳನ್ನು ಘೋಷಣೆ ಮಾಡಿದರು.



ಜನಾರ್ದನ ರೆಡ್ಡಿ

‘ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ಕ್ಷೇತ್ರಕ್ಕೆ ಟಿ. ಧರೆಪ್ಪ ನಾಯಕ, ಕೊಪ್ಪಳ ಜಿಲ್ಲೆಯ ಕನಕಗಿರಿ ಕ್ಷೇತ್ರಕ್ಕೆ ಡಾ. ಚಾರುಲ್ ದಾಸರಿ, ವಿಜಯಪುರ ಜಿಲ್ಲೆಯ ನಾಗಠಾಣ ಕ್ಷೇತ್ರಕ್ಕೆ ಶ್ರೀಕಾಂತ್, ರಾಯಚೂರು ಜಿಲ್ಲೆಯ ಸಿಂಧನೂರು ಕ್ಷೇತ್ರಕ್ಕೆ ನೆಕ್ಕಂಟಿ ಮಲ್ಲಿಕಾರ್ಜುನ ಮತ್ತು ಚಿತ್ರದುರ್ಗ ಜಿಲ್ಲೆಯ ಹಿರಿಯೂರು ಕ್ಷೇತ್ರಕ್ಕೆ ಎಚ್. ಮಹೇಶ್ ಸ್ಪರ್ಧಿಸುವರು’ ಎಂದು ಜನಾರ್ದನ ರೆಡ್ಡಿ ತಿಳಿಸಿದರು.

‘ಕೋಲಾರ, ತುಮಕೂರು ಮತ್ತು ಉತ್ತರ ಕರ್ನಾಟಕ ಸೇರಿ ಒಟ್ಟು 40 ಕಡೆ ಅಭ್ಯರ್ಥಿಗಳನ್ನು ಕಣಕ್ಕಿಳಿಸುವೆ. ಆಂತರಿಕ ಸಮೀಕ್ಷೆ ನಂತರವಷ್ಟೇ ಅಭ್ಯರ್ಥಿಗಳನ್ನು ಘೋಷಿಸುತ್ತಿರುವೆ. ನಾನು ಗಂಗಾವತಿಯಿಂದ ಸ್ಪರ್ಧಿಸುವೆ. ಚುನಾವಣೆ ಬಳಿಕ ಬೇರೆ ಪಕ್ಷದ ಜೊತೆ ಕೈ ಜೋಡಿಸುವುದು ಅನಿವಾರ್ಯ’ ಎಂದು ಅವರು ವಿವರಿಸಿದರು.

ಗಂಗಾವತಿಯಿಂದ ಬಿ. ಶ್ರೀರಾಮುಲು ಸ್ಪರ್ಧಿಸುವ ಸಾಧ್ಯತೆಯಿದೆ ಎಂಬ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಯಾರೇ ಸ್ಪರ್ಧಿಸಿದರೂ ಯೋಚಿಸುವುದಿಲ್ಲ. ಕೆಲ ವಿಷಯಗಳನ್ನು ಮುಂದಿನ ದಿನಗಳಲ್ಲಿ ತಿಳಿಸುವೆ’ ಎಂದರು.

ಸವಾಲಿನಿಂದ ಹಿಂದೆ ಸರಿಯುವುದಿಲ್ಲ: ಪ್ರಜ್ವಲ್ ರೇವಣ್ಣ

ಗೊಂದಲದ ಮಧ್ಯೆ ಸ್ವರೂಪ್ ಪ್ರಚಾರ ಶುರು

ಪ್ರಜಾವಾಣಿ ವಾರ್ತೆ

ಹಾಸನ: ಹಾಸನ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಟಿಕೆಟ್ ಗೊಂದಲ ಮುಂದುವರಿದಿರುವಂತೆಯೇ ಆಕಾಂಕ್ಷಿ ಎಚ್.ಪಿ.ಸ್ವರೂಪ್ ಅವರು ಗುರುವಾರ ಹಾಸನಾಂಬೆ ದೇಗುಲದಲ್ಲಿ ಪೂಜೆ ಸಲ್ಲಿಸಿ ಅಧಿಕೃತವಾಗಿ ಪ್ರಚಾರ ಆರಂಭಿಸಿದರು.

ಗ್ರಾಮೀಣ ಪ್ರದೇಶದಲ್ಲಷ್ಟೇ ಸಂಚರಿಸುತ್ತಿದ್ದ ಅವರು, ಪಂಚರತ್ನ ಯಾತ್ರೆ ಬರಲಿರುವ ಹಿನ್ನೆಲೆಯಲ್ಲಿ ನಗರದಾದ್ಯಂತ ಸಂಚರಿಸುತ್ತಿದ್ದಾರೆ. ಗುರುವಾರ ಬಸ್ ನಿಲ್ದಾಣ, ಮಾರುಕಟ್ಟೆ, ವಿವಿಧ ಬಡಾವಣೆಗಳಲ್ಲಿ ಮತಯಾಚಿಸಿದರು.



ಜೆಡಿಎಸ್ ಟಿಕೆಟ್ ಆಕಾಂಕ್ಷಿ ಎಚ್.ಪಿ. ಸ್ವರೂಪ್, ಗುರುವಾರ ಹಾಸನದಲ್ಲಿ ಮತಯಾಚನೆ ಮಾಡಿದರು


’ಎಲ್ಲಿಯೂ ನನಗೆ ಮತ ಕೊಡಿ ಎನ್ನುತ್ತಿಲ್ಲ. ಬದಲಿಗೆ ಜೆಡಿಎಸ್‌ಗೆ ಮತ ಕೊಡುವಂತೆ ಕೋರುತ್ತಿದ್ದೇನೆ. ಟಿಕೆಟ್ ಬಗ್ಗೆ ವರಿಷ್ಠರ ತೀರ್ಮಾನಕ್ಕೆ ಬದ್ಧ’ ಎಂದರು.

ಇನ್ನೊಂದೆಡೆ ಭವಾನಿ ರೇವಣ್ಣ ಕೂಡ ಭರ್ಜರಿ ತಯಾರಿ ನಡೆಸುತ್ತಿದ್ದು, ನಗರದ ಸಂಸದರ ಕಚೇರಿಯಲ್ಲಿ ನಗರಸಭೆಯ ಜೆಡಿಎಸ್ ಸದಸ್ಯರೊಂದಿಗೆ ಸಭೆ ನಡೆಸಿದರು. ಬಿಜೆಪಿಯಲ್ಲಿದ್ದ ನಗರಸಭೆ ಮಾಜಿ ಸದಸ್ಯ ಬಂಗಾರಿ ಮಂಜು ಅವರನ್ನು ಪಕ್ಷಕ್ಕೆ ಕರೆತರುವಲ್ಲಿ ಅವರು ಯಶಸ್ವಿಯಾಗಿದ್ದಾರೆ.

ತಾಲ್ಲೂಕಿನ ನಿಡೂಡಿ ಗ್ರಾಮದಲ್ಲಿ ಜೆಡಿಎಸ್ ಕಾರ್ಯಕರ್ತರ ಸಭೆ ನಡೆಸಿದ ಅವರು, ನಗರದ ವಿಜಯನಗರ ಬಡಾವಣೆಗೆ ಭೇಟಿ ನೀಡಿದ್ದರು. ಆದರೆ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಲು ನಿರಾಕರಿಸಿದರು. ಈ ಮಧ್ಯೆ ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಂಸದ ಪ್ರಜ್ವಲ್ ರೇವಣ್ಣ, ‘ಟಿಕೆಟ್ ಕುರಿತು ಪಕ್ಷದ ಮುಖಂಡರು ತೀರ್ಮಾನಿಸುತ್ತಾರೆ. ಸ್ವರೂಪ್ ಅವರಿಗೇ ಟಿಕೆಟ್ ಕೊಡುವ ಬಗ್ಗೆ ಮಾಹಿತಿ ಇಲ್ಲ’ ಎಂದರು.

‘ಅರಸೀಕೆರೆಯಲ್ಲಿ ಜೆಡಿಎಸ್ ಅಭ್ಯರ್ಥಿಯನ್ನು ಘೋಷಿಸಿಲ್ಲ. ಜೆಡಿಎಸ್ ತೊರೆದಿದ್ದಾರೋ ಇಲ್ಲವೋ ಎಂಬ ಬಗ್ಗೆ ಶಿವಲಿಂಗೇಗೌಡರೇ ಸ್ಪಷ್ಟಪಡಿಸಬೇಕು’ ಎಂದರು.

ಬಿಜೆಪಿ ತೊರೆದ ಎಚ್.ಡಿ.ತಮ್ಮಯ್ಯ



ಚಿಕ್ಕಮಗಳೂರು: ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಪ್ರತಿನಿಧಿಸುವ ಚಿಕ್ಕಮಗಳೂರು ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದ ಬಿಜೆಪಿ ಜಿಲ್ಲಾ ಪ್ರಕೋಷ್ಠಗಳ ಸಂಯೋಜಕ ಎಚ್.ಡಿ. ತಮ್ಮಯ್ಯ ಅವರು ಪಕ್ಷದ ಪ್ರಾಥಮಿಕ ಸದಸ್ಯತ್ವ ಮತ್ತು ಸಂಯೋಜಕ ಸ್ಥಾನಕ್ಕೆ ಗುರುವಾರ ರಾಜೀನಾಮೆ ಸಲ್ಲಿಸಿದ್ದಾರೆ.

‘ಪಕ್ಷದ ಟಿಕೆಟ್ ಕೋರಿ ಒಂದೂವರೆ ತಿಂಗಳ ಹಿಂದೆ ಮನವಿ ಸಲ್ಲಿಸಿದ್ದೆ. ಮನವಿಗೆ ಮುಖಂಡರಿಂದ ಸ್ಪಂದನೆ ಸಿಗಲಿಲ್ಲ. ಹೀಗಾಗಿ, ನೋವಿನಿಂದ ರಾಜೀನಾಮೆ ನೀಡಿದ್ದೇನೆ. ಇದೇ 17ರಂದು ಸ್ನೇಹಿತರು, ಅಭಿಮಾನಿಗಳು, ವಿವಿಧ ಸಮುದಾಯದವರ ಜತೆ ಸಭೆ ನಡೆಸಿ ಮುಂದಿನ ನಡೆ ತೀರ್ಮಾನಿಸುತ್ತೇನೆ’ ಎಂದು ತಮ್ಮಯ್ಯ ತಿಳಿಸಿದ್ದಾರೆ.

ಲಿಂಗಾಯತ ಸಮುದಾಯಕ್ಕೆ ಸೇರಿದ ತಮ್ಮಯ್ಯ ಅವರು ಬಿಜೆಪಿಯಲ್ಲಿ 2007ರಿಂದ ಜಿಲ್ಲಾ ವಕ್ತಾರ ಸಹಿತ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿದ್ದರು. ನಗರಸಭೆ ಅಧ್ಯಕ್ಷರೂ ಆಗಿದ್ದರು.

ತಮ್ಮಯ್ಯ ಅವರು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ಕಾಂಗ್ರೆಸ್‌ನ ಕೆಲ ಮುಖಂಡರನ್ನು ಈಚೆಗೆ ಭೇಟಿಯಾಗಿದ್ದಾರೆ. ಟಿಕೆಟ್ ನಿಟ್ಟಿನಲ್ಲೂ ಚರ್ಚೆ ನಡೆದಿದೆ. ಕಾಂಗ್ರೆಸ್ ಸೇರುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

2019ರಿಂದ 2021ರ ಅವಧಿ: ರಾಜ್ಯದಲ್ಲಿ ರೈತರ ಆತ್ಮಹತ್ಯೆ

ತಾಳೆಯಾಗದ ಕೇಂದ್ರ-ರಾಜ್ಯದ ಲೆಕ್ಕ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರದ ಲೆಕ್ಕದ ಪ್ರಕಾರ, ಕರ್ನಾಟಕದಲ್ಲಿ 2019ರಿಂದ 2021ರ ಅವಧಿಯಲ್ಲಿ 3,573 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆದರೆ, ಕರ್ನಾಟಕ ಸರ್ಕಾರದ ಅಂಕಿಅಂಶಗಳ ಪ್ರಕಾರ, ಈ ಅವಧಿಯಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ 2,863!

ಕರ್ನಾಟಕದಲ್ಲಿನ ರೈತರ ಆತ್ಮಹತ್ಯೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಲೋಕಸಭೆಯಲ್ಲಿ ನೀಡಿದ ಉತ್ತರ, ಕರ್ನಾಟಕ ವಿಧಾನಸಭೆಯಲ್ಲಿ ಕಂದಾಯ ಸಚಿವರು ನೀಡಿದ ಉತ್ತರ ಒಂದೊಂದು ರೀತಿ ಇವೆ. ಅಂಕಿಅಂಶಗಳು ತಾಳೆ ಆಗುತ್ತಿಲ್ಲ.

ಲೋಕಸಭೆಯಲ್ಲಿ ಸದಸ್ಯರೊಬ್ಬರು ಕೇಳಿದ ಪ್ರಶ್ನೆಗೆ ಫೆಬ್ರುವರಿ 7ರಂದು ಲಿಖಿತ ಉತ್ತರ ನೀಡಿದ ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್, ‘ದೇಶದಲ್ಲಿ 2019ರಲ್ಲಿ 5,957, 2020ರಲ್ಲಿ 5,579, 2021ರಲ್ಲಿ 5,318 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕರ್ನಾಟಕದಲ್ಲಿ ಮೂರು ವರ್ಷಗಳಲ್ಲಿ 3,573 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅನ್ನದಾತರ ಆತ್ಮಹತ್ಯೆಯಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯುರೋ (ಎನ್‌ಸಿಆರ್‌ಬಿ) ಈ ಸಂಬಂಧ ಗೃಹ ಇಲಾಖೆಗೆ ವರದಿ ನೀಡಿದೆ. ಯಾವ ಕಾರಣಕ್ಕೆ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬುದಕ್ಕೆ ಪ್ರತ್ಯೇಕ ಕಾರಣಗಳನ್ನು ನೀಡಿಲ್ಲ’ ಎಂದು ಹೇಳಿದ್ದರು.

ರೈತರ ಆತ್ಮಹತ್ಯೆ

ಕೇಂದ್ರದ ಲೆಕ್ಕ: ವರ್ಷ	ಸಂಖ್ಯೆ	ರಾಜ್ಯದ ಲೆಕ್ಕ: ವರ್ಷ	ಸಂಖ್ಯೆ
2019	1,331	2019–20	1,091
2020	1,072	2020–21	855
2021	1,170	2021–22	917
ಒಟ್ಟು	3,573	2022–23	310
		ಒಟ್ಟು	3,173

ಕರ್ನಾಟಕ ವಿಧಾನಸಭೆಯಲ್ಲಿ ಬಿಜೆಪಿ ಸದಸ್ಯ ಬೆಳ್ಳಿ ಪ್ರಕಾಶ್ ಪ್ರಶ್ನೆಗೆ ಫೆಬ್ರುವರಿ 15ರಂದು ಲಿಖಿತ ಉತ್ತರ ನೀಡಿದ ಕಂದಾಯ ಸಚಿವ ಆರ್. ಅಶೋಕ, ‘ಕೃಷಿ ಸಾಲದಿಂದ ಆತ್ಮಹತ್ಯೆ ಮಾಡಿಕೊಂಡಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆ. ನಾಲ್ಕು ವರ್ಷಗಳಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಸಂಖ್ಯೆ 3,173’ ಎಂದು ತಿಳಿಸಿದ್ದಾರೆ.

‘2019ರಲ್ಲಿ 1091 ಮಂದಿ ಆತ್ಮಹತ್ಯೆ ಮಾಡಿಕೊಂಡಿದ್ದು, 196 ಕುಟುಂಬಗಳ ಪರಿಹಾರದ ಅರ್ಜಿ ತಿರಸ್ಕರಿಸಲಾಗಿದೆ. 2020ರಲ್ಲಿ 855 ರೈತರು ಜೀವ ಕಳೆದುಕೊಂಡಿದ್ದು, 718 ಕುಟುಂಬಗಳಿಗೆ ಪರಿಹಾರ ವಿತರಿಸಲಾಗಿದೆ. 2021ರಲ್ಲಿ 917 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 134 ಕುಟುಂಬಗಳ ಪರಿಹಾರದ ಅರ್ಜಿಯನ್ನು ತಿರಸ್ಕರಿಸಲಾಗಿದೆ’ ಎಂದೂ ಅವರು ಮಾಹಿತಿ ನೀಡಿದ್ದಾರೆ.

ಜನಾಗ್ರಹ ರ‍್ಯಾಲಿ ಹಾಗೂ ಪ್ರತಿಭಟನಾ ಸಮಾವೇಶದಲ್ಲಿ ದರ್ಶನ್ ಪಾಲ್ ಕರೆ

‘ಸರ್ವಾಧಿಕಾರಿ ಸರ್ಕಾರ ಸೋಲಿಸಲು ಹೋರಾಟ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸರ್ವಾಧಿಕಾರಿ ಧೋರಣೆ ತೋರುತ್ತಿವೆ. ಇಂಥ ಸರ್ಕಾರಗಳನ್ನು ಚುನಾವಣೆಗಳಲ್ಲಿ ಸೋಲಿಸಲು ಜನಪ್ರವಾಹದ ಹೋರಾಟ ರೂಪಗೊಳ್ಳಬೇಕು’ ಎಂದು ಸಂಯುಕ್ತ ಕಿಸಾನ್ ಮೋರ್ಚಾದ ಮುಖಂಡ ದರ್ಶನ್ ಪಾಲ್ ಕರೆ ನೀಡಿದರು.

‘ಸಂಯುಕ್ತ ಹೋರಾಟ–ಕರ್ನಾಟಕ’ ವತಿಯಿಂದ ಗುರುವಾರ ಹಮ್ಮಿಕೊಂಡಿದ್ದ ‘ಜನಾಗ್ರಹ ರ‍್ಯಾಲಿ ಹಾಗೂ ಪ್ರತಿಭಟನಾ ಸಮಾವೇಶ’ದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

‘ರೈತ ವಿರೋಧಿ ಕೃಷಿ ಕಾಯ್ದೆಗಳ ರದ್ದತಿಗೆ ಒತ್ತಾಯಿಸಿ ನಡೆಸಿದ್ದ ಹೋರಾಟ ಬಿಜೆಪಿ ಸರ್ಕಾರವನ್ನು ನಡುಗಿಸಿತು. ರೈತರ ಹೋರಾಟ ಹತ್ತಿಕ್ಕಲು ಹಲವೆಡೆ ಹಲ್ಲೆ ಹಾಗೂ ಕೊಲೆಗಳು ನಡೆದವು. ಈ ಸರ್ಕಾರದ ದಬ್ಬಾಳಿಕೆ ಕಣ್ಮುಂದಿದೆ. 2023 ಹಾಗೂ 2024 ಮಹತ್ವದ ವರ್ಷಗಳು.



‘ಜನಾಗ್ರಹ ರ‍್ಯಾಲಿ ಹಾಗೂ ಪ್ರತಿಭಟನಾ ಸಮಾವೇಶ’ದಲ್ಲಿ ಪಾಲ್ಗೊಂಡಿದ್ದ ಮುಖಂಡರು ಪರಸ್ಪರ ಕೈ ಜೋಡಿಸಿ ಒಗ್ಗಟ್ಟಿನ ಶಕ್ತಿ ಪ್ರದರ್ಶಿಸಿದರು — ಪ್ರಜಾವಾಣಿ ಚಿತ್ರ

ಸರ್ಕಾರವನ್ನು ಸೋಲಿಸಲು ರೈತರಷ್ಟೇ ಅಲ್ಲದೆ ಕಾರ್ಮಿಕರು, ವಿದ್ಯಾರ್ಥಿಗಳು, ಯುವಜನರು, ಮಹಿಳೆಯರು, ಕೂಲಿ ಕಾರ್ಮಿಕರು ಪಣ ತೊಡಬೇಕು’ ಎಂದು ಹೇಳಿದರು.

’ಪ್ರಧಾನಿ ನರೇಂದ್ರ ಮೋದಿ ಹಾಗೂ ಅಮಿತ್ ಶಾ ಅವರನ್ನು ಪ್ರಶ್ನಿಸಿದರೆ ದೇಶದ್ರೋಹವೆಂದು ಜೈಲಿಗೆ ಕಳುಹಿಸುತ್ತಾರೆ. ಇದೀಗ ಬಿಬಿಸಿ ಕಚೇರಿ ಮೇಲೆ ದಾಳಿ ಮಾಡಿಸಲಾಗುತ್ತಿದ್ದು, ಇದು ಪ್ರಜಾಪ್ರಭುತ್ವ ವಿರೋಧಿ ನಡೆ’ ಎಂದು ಕಿಡಿಕಾರಿದರು.

ಕ್ರಾಂತಿಕಾರಿ ಕಿಸಾನ್ ಯೂನಿಯನ್ ಮುಖಂಡ ಅವತಾರ್ ಸಿಂಗ್, ರೈತ ಮುಖಂಡರಾದ ಬಡಗಲಪುರ ನಾಗೇಂದ್ರ, ಎಚ್.ಆರ್.ಬಸವರಾಜಪ್ಪ, ಕರ್ನಾಟಕ ಪ್ರಾಂತರೈತ ಸಂಘದ ಜಿ.ಸಿ. ಬಯ್ಯಾರೆಡ್ಡಿ ಹಾಗೂ ದಲಿತ ಸಂಘರ್ಷ ಸಮಿತಿಯ ಮಾವಳ್ಳಿ ಶಂಕರ್ ಸಮಾವೇಶದಲ್ಲಿದ್ದರು.

ಪ್ರಜಾ ಮತ — ಜನತಂತ್ರದ ಹಬ್ಬ

ಕರ್ನಾಟಕ ವಿಧಾನಸಭಾ ಚುನಾವಣೆ - 2023

ಹಕ್ಕೊತ್ತಾಯ

ರೈತರು–ಕಾರ್ಮಿಕರು–ಜನ ವಿರೋಧಿ ಕಾಯ್ದೆಗಳನ್ನು ರದ್ದು ಪಡಿಸಬೇಕು. ಕಂದಾಯ ಹಾಗೂ ಅರಣ್ಯ ಇಲಾಖೆಯಿಂದ ಆಗುತ್ತಿರುವ ಕಿರುಕುಳ ತಡೆಯಬೇಕು. ನಿರಾಶ್ರಿತರಿಗೆ ಭೂಮಿ ಹಾಗೂ ವಸತಿ ಹಕ್ಕು ನೀಡಬೇಕು. ಬೆಲೆ ಏರಿಕೆ ತಡೆಯಬೇಕು. ರೈತರ ಬೆಳೆಗೆ ನ್ಯಾಯಯುತ ಬೆಲೆ ನೀಡಬೇಕು, ಉದ್ಯೋಗ ಅವಕಾಶಗಳನ್ನು ಹೆಚ್ಚಿಸಬೇಕು. ಶಿಕ್ಷಣದ ವ್ಯಾಪಾರ ಹಾಗೂ ಕೋಮುವಾದ ನಿಲ್ಲಬೇಕು. ಸಮಾನ–ವೈಜ್ಞಾನಿಕ ಶಿಕ್ಷಣ ಜಾರಿಗೊಳಿಸಬೇಕು. ಭ್ರಷ್ಟಾಚಾರ ನಿಲ್ಲಬೇಕು.

ಸಂಪಾದಕೀಯ ವಿಭಾಗದ ಸಿಬ್ಬಂದಿಯನ್ನೂ ತನಿಖೆಗೆ ಒಳಪಡಿಸಿದ ಆದಾಯ ತೆರಿಗೆ ಇಲಾಖೆ

ಬಿಬಿಸಿ ಕಚೇರಿಗಳಲ್ಲಿನ 'ಪರಿಶೀಲನೆ' ಅಂತ್ಯ

ನವದೆಹಲಿ (ರಾಯಿಟರ್ಸ್, ಪಿಟಿಐ): ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್‌ನ (ಬಿಬಿಸಿ) ದೆಹಲಿ ಮತ್ತು ಮುಂಬೈ ಕಚೇರಿಯಲ್ಲಿ ಆದಾಯ ತೆರಿಗೆ (ಐ.ಟಿ) ಇಲಾಖೆಯ ಅಧಿಕಾರಿಗಳು ನಡೆಸುತ್ತಿರುವ 'ಪರಿಶೀಲನೆ' ಗುರುವಾರ ರಾತ್ರಿ ಅಂತ್ಯಗೊಂಡಿತು.

60 ಗಂಟೆಗಳಷ್ಟು ನಡೆದ ಈ 'ಪರಿಶೀಲನೆ' ವೇಳೆ, ಬಿಬಿಸಿಯ ಸಂಪಾದಕೀಯ ಮತ್ತು ಆಡಳಿತ ವಿಭಾಗದ ಸಿಬ್ಬಂದಿಯ ಮೊಬೈಲ್ ಫೋನ್‌ಗಳು ಮತ್ತು ಲ್ಯಾಪ್‌ಟಾಪ್‌ಗಳನ್ನು ತಪಾಸಣೆ ಮಾಡಲಾಗಿದೆ ಎಂದು ಮೂಲಗಳು ಹೇಳಿವೆ.

ಮಂಗಳವಾರ 'ಪರಿಶೀಲನೆ' ಆರಂಭವಾಗಿತ್ತು. ಐ.ಟಿ ಅಧಿಕಾರಿಗಳು ಅಂದಿನಿಂದಲೂ ಬಿಬಿಸಿ ಕಚೇರಿಯಲ್ಲಿಯೇ ಇದ್ದರು. ನಿದ್ದೆಯನ್ನೂ ಅಲ್ಲಿಯೇ ಮಾಡುತ್ತಿದ್ದರು ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ. ಹಣಕಾಸು ವಹಿವಾಟುಗಳ ಕುರಿತಂತೆ ಬಿಬಿಸಿ ಸಿಬ್ಬಂದಿಯನ್ನು ತಡರಾತ್ರಿಯವರೆಗೂ ತನಿಖೆಗೆ ಒಳಪಡಿಸಲಾಗಿದೆ ಎಂದೂ ಹೇಳಿದ್ದಾರೆ.

'ಲ್ಯಾಪ್‌ಟಾಪ್‌ಗಳನ್ನು ತೆರೆಯುವಂತೆ ಮತ್ತು ಫೋನ್‌ಗಳನ್ನು ಕೊಡುವಂತೆ ಅವರು (ಅಧಿಕಾರಿಗಳು) ಕೇಳಿದರು. ಬಳಿಕ ಫೋನ್‌ಗಳನ್ನು ಹಿಂದಿರುಗಿಸಿದರು' ಎಂದು ಒಂದು ಮೂಲವು ತಿಳಿಸಿದೆ. ಈ ಉಪಕರಣಗಳನ್ನು ತೆರೆಯುವುದಕ್ಕಾಗಿ ಪಾಸ್‌ವರ್ಡ್ ನೀಡುವಂತೆ ಹೇಳಿದ್ದಾಗಿ ಇನ್ನೊಂದು ಮೂಲವು ಹೇಳಿದೆ.

ಗುಜರಾತ್‌ನಲ್ಲಿ 2002ರಲ್ಲಿ ನಡೆದ ಕೋಮು ಗಲಭೆ ಮತ್ತು ಆಗ ಮುಖ್ಯಮಂತ್ರಿಯಾಗಿದ್ದ ನರೇಂದ್ರ ಮೋದಿ ಅವರ ಪಾತ್ರದ ಕುರಿತು ಬಿಬಿಸಿ ತಯಾರಿಸಿರುವ ಸಾಕ್ಷ್ಯಚಿತ್ರವು ಪ್ರಸಾರವಾದ ಕೆಲವೇ ವಾರಗಳಲ್ಲಿ ಈ ದಿಢೀರ್ 'ಪರಿಶೀಲನೆ' ನಡೆದಿದೆ.

ಬಿಬಿಸಿ ಕಚೇರಿಯ ಕಾರ್ಯಾಚರಣೆ ಕುರಿತು ಆದಾಯ ತೆರಿಗೆ ಇಲಾಖೆಯು ಈವರೆಗೆ ಯಾವುದೇ ಹೇಳಿಕೆ ಬಿಡುಗಡೆ ಮಾಡಿಲ್ಲ.

ಇದು ದ್ವೇಷ ಸಾಧನೆ ಅಲ್ಲ, 'ವರ್ಗಾವಣೆ ವೆಚ್ಚ' (ಸಂಸ್ಥೆಯು ತನ್ನ ಅಂಗ ಸಂಸ್ಥೆಗಳಿಗೆ ಸೇವೆ, ಸರಕು, ತಂತ್ರಜ್ಞಾನ, ಸಿಬ್ಬಂದಿ ನೀಡುವಾಗ ಅದಕ್ಕೆ ನಿಗದಿ ಮಾಡುವ ದರ) ಮತ್ತು ಲಾಭ ವರ್ಗಾವಣೆ ಕುರಿತು ತನಿಖೆ ನಡೆಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಭಾರತದಲ್ಲಿ ಬಿಬಿಸಿಗೆ ಸಂಪೂರ್ಣ ನಿಷೇಧ ಹೇರಬೇಕು ಎಂದು ಕೋರಿ ಸಲ್ಲಿಕೆಯಾಗಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಕಳೆದ ವಾರ ವಜಾ ಮಾಡಿತ್ತು. ಇದು ವಿಚಾರಣೆಗೆ ಅರ್ಹವಾದ ಅರ್ಜಿಯೇ ಅಲ್ಲ ಎಂದು ಕೋರ್ಟ್ ಹೇಳಿತ್ತು. ಸಾಕ್ಷ್ಯಚಿತ್ರವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆ ಮಾಡಿಕೊಳ್ಳುವುದಕ್ಕೆ ತಡೆ ಹೇರಿದ್ದನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆ ಏಪ್ರಿಲ್‌ಗೆ ನಿಗದಿಯಾಗಿದೆ.

ಸಾಕ್ಷ್ಯಚಿತ್ರವನ್ನು ಜಾಲತಾಣಗಳಲ್ಲಿ ಹಂಚಿಕೆ ಮಾಡಬಾರದು ಎಂಬ ನಿರ್ದೇಶನವನ್ನು ಸರ್ಕಾರವು ಜನವರಿ 21ರಂದು ನೀಡಿತ್ತು.

ಮಾಧ್ಯಮ ಸಂಘಟನೆಗಳು ಈ 'ಪರಿಶೀಲನೆ' ಕಾರ್ಯಾಚರಣೆಯನ್ನು ಖಂಡಿಸಿವೆ. 'ಈ ಕಿರುಕುಳವನ್ನು ನಿಲ್ಲಿಸಬೇಕು ಮತ್ತು ಪತ್ರಕರ್ತರು ಭೀತಿ ಅಥವಾ ಪಕ್ಷಪಾತರಹಿತವಾಗಿ ಕೆಲಸ ಮಾಡಲು ಅವಕಾಶ ಕೊಡಬೇಕು' ಎಂದು ಮುಂಬೈ ಪ್ರೆಸ್ ಕ್ಲಬ್ ಒತ್ತಾಯಿಸಿದೆ.

ಭಾರತವಿರೋಧಿ ಶಕ್ತಿಗಳಿಂದ ಸುಪ್ರೀಂ ಕೋರ್ಟ್ 'ಸಾಧನ'ವಾಗಿ ಬಳಕೆ: ಪಾಂಚಜನ್ಯ

ಭಾರತ ವಿರೋಧಿ ಶಕ್ತಿಗಳು ಸುಪ್ರೀಂ ಕೋರ್ಟ್ ಅನ್ನು 'ಸಾಧನ'ವಾಗಿ ಬಳಸಿಕೊಳ್ಳುತ್ತಿವೆ ಎಂದು ಆರ್‌ಎಸ್‌ಎಸ್ ನಂಟಿನ ವಾರಪತ್ರಿಕೆ 'ಪಾಂಚಜನ್ಯ' ಹೇಳಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಕುರಿತು ಬಿಬಿಸಿ ತಯಾರಿಸಿರುವ ಸಾಕ್ಷ್ಯಚಿತ್ರಕ್ಕೆ ನಿರ್ಬಂಧ ಹೇರಿದ್ದನ್ನು ಪ್ರಶ್ನಿಸಿ ಸಲ್ಲಿಕೆಯಾದ ಅರ್ಜಿಯ ಆಧಾರದಲ್ಲಿ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ನೋಟಿಸ್ ನೀಡಿದ್ದನ್ನು ಪತ್ರಿಕೆಯು ಟೀಕಿಸಿದೆ.

ಉಗ್ರಗಾಮಿಗಳನ್ನು ಮಾನವ ಹಕ್ಕುಗಳ ಹೆಸರಿನಲ್ಲಿ 'ರಕ್ಷಣೆ' ಮಾಡಲಾಗಿತ್ತು. ಪರಿಸರದ ಹೆಸರು ಹೇಳಿ ಭಾರತದ 'ಪ್ರಗತಿ'ಗೆ ತಡೆ ಒಡ್ಡಲಾಗಿತ್ತು. ಭಾರತದ ವಿರುದ್ಧವೇ ಅಪಪ್ರಚಾರ ನಡೆಸಲು ಭಾರತವಿರೋಧಿ ಶಕ್ತಿಗಳಿಗೆ ಹಕ್ಕು ಬೇಕು ಎಂದು ಈಗ ಪ್ರತಿಪಾದಿಸಲಾಗುತ್ತಿದೆ ಎಂದು 'ಪಾಂಚಜನ್ಯ'ದ ಸಂಪಾದಕೀಯದಲ್ಲಿ ಹೇಳಲಾಗಿದೆ. 'ನಮ್ಮ ದೇಶದ ಹಿತಾಸಕ್ತಿಯನ್ನು ರಕ್ಷಿಸುವುದಕ್ಕಾಗಿ ಸುಪ್ರೀಂ ಕೋರ್ಟ್ ಅನ್ನು ಸೃಷ್ಟಿಸಲಾಗಿದೆ. ಆದರೆ, ಭಾರತವಿರೋಧಿ ಶಕ್ತಿಗಳು ತಮ್ಮ ದಾರಿ ಸುಗಮ ಮಾಡಿಕೊಳ್ಳಲು ಸುಪ್ರೀಂ ಕೋರ್ಟ್ ಅನ್ನು ಬಳಸಿಕೊಳ್ಳುತ್ತಿವೆ. ಸುಪ್ರೀಂ ಕೋರ್ಟ್ ಭಾರತದ ತೆರಿಗೆದಾರರ ಹಣದಲ್ಲಿ ನಡೆಯುತ್ತಿದೆ ಮತ್ತು ಭಾರತದ ಕಾನೂನಿಗೆ ಅನುಗುಣವಾಗಿ ಕೆಲಸ ಮಾಡುತ್ತಿದೆ' ಎಂದೂ ಸಂಪಾದಕೀಯದಲ್ಲಿ ವಿವರಿಸಲಾಗಿದೆ.

ಬಿಬಿಸಿ ಸಾಕ್ಷ್ಯಚಿತ್ರವು ಭಾರತದ ಹೆಸರು ಕೆಡಿಸುವುದಕ್ಕಾಗಿ ಮಾಡಿರುವ ಅಪಪ್ರಚಾರ. ಅದರಲ್ಲಿ ಇರುವುದೆಲ್ಲವೂ ಸುಳ್ಳು ಮತ್ತು ಕಟ್ಟುಕತೆ ಎಂದು ಪತ್ರಿಕೆಯು ಪ್ರತಿಪಾದಿಸಿದೆ.

'ನಮ್ಮ ಪ್ರಜಾಪ್ರಭುತ್ವ, ನಮ್ಮ ಔದಾರ್ಯ ಮತ್ತು ನಮ್ಮ ನಾಗರಿಕ ಮಾನದಂಡ'ದ ಪ್ರಯೋಜನವನ್ನು ರಾಷ್ಟ್ರವಿರೋಧಿ ಶಕ್ತಿಗಳೆಲ್ಲವೂ ಪಡೆದುಕೊಳ್ಳುತ್ತಿವೆ ಎಂದು ಸಂಪಾದಕೀಯ ಆರೋಪಿಸಿದೆ.

ಚಳಿಯಿಂದ ಶಿಶುಗಳ ಸಾವು: ಸೂಪರಿಂಟೆಂಡೆಂಟ್ ಅಮಾನತು

ಪ್ರಜಾವಾಣಿ ವಾರ್ತೆ

ಲಖನೌ: ಇಲ್ಲಿನ ಸರ್ಕಾರಿ ಬಾಲ ಮಂದಿರದ ನಾಲ್ಕು ಶಿಶುಗಳು ಚಳಿಯಿಂದ ಸಾವನ್ನಪ್ಪಿರುವ ಪ್ರಕರಣಕ್ಕೆ ಸಂಬಂಧಿಸಿ ಬಾಲ ಮಂದಿರದ ಸೂಪರಿಂಟೆಂಡೆಂಟ್ ಅನ್ನು ಅಮಾನತುಗೊಳಿಸಿ, ನ್ಯಾಯಾಂಗ ತನಿಖೆಗೆ ಆದೇಶಿಸಲಾಗಿದೆ ಎಂದು ಮೂಲಗಳು ಗುರುವಾರ ಹೇಳಿವೆ.

ಐದು ದಿನಗಳಲ್ಲಿ ನಾಲ್ಕು ಶಿಶುಗಳು ಸಾವನ್ನಪ್ಪಿವೆ ಮತ್ತು ಎರಡು ತಿಂಗಳ ಇನ್ನೊಂದು ಶಿಶುವನ್ನು ಆಸ್ಪತ್ರೆಗೆ ದಾಖಲಿಸಿದ್ದು, ಅದರ ಸ್ಥಿತಿ ಗಂಭೀರವಾಗಿದೆ ಎಂದು ತಿಳಿಸಿವೆ.

ಶಿಶುಗಳು ಚಳಿಯಿಂದ ಸಾವನ್ನಪ್ಪಿವೆ ಎಂಬ ವರದಿಯನ್ನು ಅಲ್ಲಗಳೆದಿರುವ ಉತ್ತರ ಪ್ರದೇಶದ ಮಕ್ಕಳ ಅಭಿವೃದ್ಧಿ ಸಚಿವೆ ಬೇಬಿ ರಾಣಿ ಮೌರ್ಯ, 'ಶಿಶುಗಳು ಥಲಸ್ಸೆಮಿಯಾ ಮತ್ತು ಇತರ ಕಾಯಿಲೆಗಳಿಂದ ಬಳಲುತ್ತಿದ್ದವು ಮತ್ತು ಆಸ್ಪತ್ರೆಯಲ್ಲಿ ಸಾಧ್ಯವಿರುವ ಎಲ್ಲಾ ಚಿಕಿತ್ಸೆ ನೀಡಲಾಗಿದೆ' ಎಂದಿದ್ದಾರೆ.

ಶಿಶುಗಳು ಸಾವನ್ನಪ್ಪಿರುವುದಕ್ಕೆ ಕಾರಣ ಏನು ಎಂಬುದು ತನಿಖೆಯಿಂದ ತಿಳಿದು ಬರಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಶಿಶುಗಳಿಗೆ ಸೂಕ್ತ ಚಿಕಿತ್ಸೆ ನೀಡಿದ್ದು ಮತ್ತು ಬಾಲಮಂದಿರದಲ್ಲಿ ಸರಿಯಾದ ರೀತಿಯಲ್ಲಿ ನೋಡಿಕೊಂಡಿಲ್ಲ ಎಂಬುದು ಸುಳ್ಳು' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

'ಶಿಶುಗಳನ್ನು ಗಂಭೀರ ಸ್ಥಿತಿಯಲ್ಲಿದ್ದಾಗ ಆಸ್ಪತ್ರೆಗೆ ಕರೆತರಲಾಗಿತ್ತು, ಎರಡು ಶಿಶುಗಳ ಆರೋಗ್ಯ ಸ್ಥಿತಿ ಇನ್ನಷ್ಟು ಹದಗೆಟ್ಟಿದ್ದ ಕಾರಣ ಕೆ.ಜಿ. ವೈದ್ಯಕೀಯ ವಿಶ್ವವಿದ್ಯಾಲಯಕ್ಕೆ ಕಳುಹಿಸಲಾಗಿತ್ತು' ಎಂದು ಲಖನೌ ಸಿವಿಲ್ ಆಸ್ಪತ್ರೆಯ ವೈದ್ಯರೊಬ್ಬರು ಮಾಹಿತಿ ನೀಡಿದ್ದಾರೆ.

ಶಿಶುಗಳ ಆರೋಗ್ಯದ ಮೇಲೆ ನಿಗಾ ಇರಿಸಲು ಬಾಲ ಮಂದಿರದಲ್ಲಿ ಮಕ್ಕಳ ತಜ್ಞ ವೈದ್ಯರನ್ನು ನಿಯೋಜಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಾಟೀದಾರ್ ನಾಯಕ ಹಾರ್ದಿಕ್ ಪಟೇಲ್ ಬಂಧನಕ್ಕೆ ವಾರಂಟ್

ಸುರೇಂದ್ರನಗರ (ಗುಜರಾತ್) (ಪಿಟಿಐ): ಪಾಟೀದಾರ್ ಸಮುದಾಯದ ನಾಯಕ, ಬಿಜೆಪಿ ಶಾಸಕ ಹಾರ್ದಿಕ್ ಪಟೇಲ್ ವಿರುದ್ಧ ಗುಜರಾತಿನ ಸುರೇಂದ್ರನಗರದ ನ್ಯಾಯಾಲಯವು ಬಂಧನದ ವಾರಂಟ್ ಹೊರಡಿಸಿದೆ.

2017ರ ಗುಜರಾತ್ ವಿಧಾನಸಭಾ ಚುನಾವಣೆಗೂ ಮುನ್ನ ಜಿಲ್ಲೆಯ ಗ್ರಾಮವೊಂದರಲ್ಲಿ ಸರ್ಕಾರದ ಆದೇಶ ಉಲ್ಲಂಘಿಸಿ ರಾಜಕೀಯ ಭಾಷಣ ಮಾಡಿದ ಕಾರಣಕ್ಕೆ ಹಾರ್ದಿಕ್ ವಿರುದ್ಧ ಪ್ರಕರಣ ದಾಖಲಾಗಿತ್ತು.

ವಿಚಾರಣೆಗೆ ಹಾರ್ದಿಕ್ ಪಟೇಲ್ ಗೈರಾದ ಕಾರಣ ಹೆಚ್ಚುವರಿ ಸಿಜೆಎಂ ನ್ಯಾಯಾಧೀಶ ಡಿ.ಡಿ.ಶಾ ಅವರು, ಪಟೇಲ್ ವಿರುದ್ಧ ಬಂಧನದ ವಾರಂಟ್ ಹೊರಡಿಸಿದ್ದಾರೆ. ಮುಂದಿನ ವಿಚಾರಣೆಗೆ ಅವರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಬೇಕು ಎಂದು ಧ್ರಾಂಗದರಾ ತಾಲ್ಲೂಕಿನ ಪೊಲೀಸ್ ಠಾಣೆಯ ಅಧಿಕಾರಿಗೆ ನಿರ್ದೇಶನ ನೀಡಿದ್ದಾರೆ.

ನ್ಯಾಯಾಲಯದ ಆದೇಶ ಫೆ. 11 ರಂದು ತಲುಪಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಖಚಿತಪಡಿಸಿದ್ದಾರೆ.

ಹರಿಪರ್ ಗ್ರಾಮದಲ್ಲಿ 2017ರ ನವೆಂಬರ್ 26ರಂದು ಸಭೆ ಆಯೋಜಿಸಲು ವಿಧಿಸಿದ್ದ ಷರತ್ತುಗಳನ್ನು ಹಾರ್ದಿಕ್ ಪಟೇಲ್ ಮತ್ತು ಸಹ ಆರೋಪಿ ಕೌಶಿಕ್ ಪಟೇಲ್ ಉಲ್ಲಂಘಿಸಿದ್ದಾರೆ ಎಂದು ಪೊಲೀಸರು 2018ರ ಜನವರಿ 12ರಂದು ಪ್ರಕರಣ ದಾಖಲಿಸಿದ್ದರು.

2017ರ ನವೆಂಬರ್‌ನಲ್ಲಿ ಧುತಾರ್ಪರ್ ಗ್ರಾಮದಲ್ಲೂ ಆದೇಶ ಉಲ್ಲಂಘಿಸಿ ರಾಜಕೀಯ ಭಾಷಣ ಮಾಡಿದ್ದರು ಎಂದು ಆರೋಪಿಸಿ ಹಾರ್ದಿಕ್ ವಿರುದ್ಧ ದೂರು ದಾಖಲಾಗಿತ್ತು. ಅವರು ಈ ಪ್ರಕರಣದಿಂದ ಕಳೆದ ವಾರವಷ್ಟೇ ಖುಲಾಸೆಯಾಗಿದ್ದರು. ಹಾರ್ದಿಕ್ ವಿರುದ್ಧ 2 ದೇಶದ್ರೋಹ ಪ್ರಕರಣಗಳೂ ಸೇರಿ 12ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ.

ತ್ರಿಪುರಾ: ಮತದಾನ ಪ್ರಮಾಣ ಶೇ 81.10

ಪ್ರಜಾವಾಣಿ ವಾರ್ತೆ

ಗುವಾಹಟಿ: ತ್ರಿಪುರಾ ವಿಧಾನಸಭೆಗೆ ಗುರುವಾರ ನಡೆದ ಮತದಾನ ಬಹುತೇಕ ಶಾಂತಿಯುತವಾಗಿತ್ತು. ಸಂಜೆ 4 ಗಂಟೆಯ ಹೊತ್ತಿಗೆ ಮತದಾನದ ಪ್ರಮಾಣವು ಶೇ 81.10ರಷ್ಟಾಗಿತ್ತು. ಜಿಲ್ಲೆಗಳಿಂದ ಮತದಾನದ ಅಂತಿಮ ವರದಿಗಳು ಇನ್ನಷ್ಟೇ ಬರಬೇಕಿರುವುದರಿಂದ ಮತದಾನದ ಪ್ರಮಾಣವು ಇನ್ನಷ್ಟು ಹೆಚ್ಚಾಗಬಹುದು.

2018ರಲ್ಲಿ ನಡೆದ ಚುನಾವಣೆಯಲ್ಲಿ ಶೇ 90ರಷ್ಟು ಮತದಾನ ಆಗಿತ್ತು. ಈ ಚುನಾವಣೆಯಲ್ಲಿ ಬಿಜೆಪಿ ಮತ್ತು ಮಿತ್ರಪಕ್ಷ ಇಂಡಿಜಿನಸ್ ಪೀಪಲ್ಸ್ ಫ್ರಂಟ್ ಆಫ್ ತ್ರಿಪುರಾ (ಐಪಿಎಫ್‌ಟಿ) ಜಯಗಳಿಸಿದ್ದವು.

'ಮತದಾನವು ಸಂಪೂರ್ಣ ಶಾಂತಿಯುತವಾಗಿತ್ತು' ಎಂದು ತ್ರಿಪುರಾದ ಮುಖ್ಯ ಚುನಾವಣಾಧಿಕಾರಿ ಕಿರನ್ ಗಿಟ್ಟೆ ಹೇಳಿದ್ದಾರೆ. ಭದ್ರತಾ ಸಿಬ್ಬಂದಿಯ 400ಕ್ಕೂ ಹೆಚ್ಚು ತುಕಡಿಗಳನ್ನು ನಿಯೋಜಿಸಲಾಗಿತ್ತು. ಈ ಹಿಂದಿನ ಚುನಾವಣೆಗಳಲ್ಲಿ ಇಲ್ಲಿ ಹಿಂಸಾಚಾರ ನಡೆದಿತ್ತು.

ವಿಧಾನಸಭೆಯ ಪ್ರತಿ ಕ್ಷೇತ್ರದಲ್ಲಿಯೂ 40 ಸಾವಿರದಿಂದ 45 ಸಾವಿರ ಮತಗಳಷ್ಟೇ ಇವೆ. ಹಾಗಾಗಿ ಹೆಚ್ಚಿನ ಕ್ಷೇತ್ರಗಳಲ್ಲಿ 500ರಿಂದ 1000 ಮತಗಳ ಅಂತರವೇ ಬಹುದೊಡ್ಡ ಅಂತರ ಅನ್ನಿಸಿಬಿಡುತ್ತದೆ.



ತ್ರಿಪುರಾದ ರಾಜ್‌ನಗರದಲ್ಲಿ ಮತಗಟ್ಟೆ ಎದುರು ಮತದಾರರು ಗುರುವಾರ ಗುರುತಿನ ಚೀಟಿಗಳನ್ನು ಪ್ರದರ್ಶಿಸಿದರು —ಪಿಟಿಐ ಚಿತ್ರ

ಕಳೆದ ಚುನಾವಣೆಯಲ್ಲಿ ಗೆದ್ದ ಬಿಜೆಪಿ, ಸಿಪಿಎಂನ ಸತತ 25 ವರ್ಷಗಳ ಆಳ್ವಿಕೆಯನ್ನು ಕೊನೆಗೊಳಿಸಿತ್ತು. 60 ಕ್ಷೇತ್ರಗಳ ಪೈಕಿ 36 ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವು ದಾಖಲಿಸಿದ್ದರೆ, ಸಿಪಿಎಂಗೆ 16 ಕ್ಷೇತ್ರಗಳು ಸಿಕ್ಕಿದ್ದವು. ಆದರೆ, ಎರಡೂ ಪಕ್ಷಗಳ ಮತಪ್ರಮಾಣದಲ್ಲಿ ಹೆಚ್ಚಿನ ಅಂತರ ಇರಲಿಲ್ಲ. ಬಿಜೆಪಿ ಶೇ 43.59ರಷ್ಟು ಮತ ಪಡೆದರೆ, ಸಿಪಿಎಂ ಶೇ 42.22ರಷ್ಟು ಮತ ಪಡೆದಿತ್ತು.

ಬಿಜೆಪಿ–ಐಪಿಎಫ್‌ಟಿ ಮೈತ್ರಿ ಈ ಬಾರಿಯೂ ಮುಂದುವರಿದಿದೆ. ಸಿಪಿಎಂ ಮತ್ತು ಕಾಂಗ್ರೆಸ್ ಸೀಟು ಹಂಚಿಕೆಯಲ್ಲಿ ಮೈತ್ರಿ ಮಾಡಿಕೊಂಡಿವೆ. ಈ ಹಿಂದಿನ ರಾಜ ವಂಶಸ್ಥ ಪ್ರದ್ಯೋತ್ ದೇಬ್‌ಬರ್ಮಾ ಅವರು ಸ್ಥಾಪಿಸಿರುವ ಟಿಪ್ರ ಮೊಥಾ ಪಕ್ಷವು 42 ಕ್ಷೇತ್ರಗಳಲ್ಲಿ ಸ್ಪರ್ಧಿಸಿದೆ. ಮತ ಎಣಿಕೆಯು ಮಾರ್ಚ್ 2ರಂದು ನಡೆಯಲಿದೆ.

ಮಹಾರಾಷ್ಟ್ರದಲ್ಲಿ ಕಾಂಗ್ರೆಸ್ ಬಣ ಸಂಘರ್ಷ: ರಮೇಶ್ ಚೆನ್ನಿತ್ತಲ ದೌಡು

ನವದೆಹಲಿ (ಪಿಟಿಐ): ಪಕ್ಷದ ರಾಜ್ಯ ಘಟಕದಲ್ಲಿನ ಬಣಗಳ ನಡುವಿನ ಕಿತ್ತಾಟ ಹಾಗೂ ರಾಜಕೀಯ ಪರಿಸ್ಥಿತಿ ಕುರಿತು ಪರಿಶೀಲನೆ ನಡೆಸಿ, ವರದಿ ಸಲ್ಲಿಸುವ ಸಲುವಾಗಿ ಕಾಂಗ್ರೆಸ್ ಪಕ್ಷವು ಕೇರಳದ ಹಿರಿಯ ಮುಖಂಡ ರಮೇಶ್ ಚೆನ್ನಿತ್ತಲ ಅವರನ್ನು ಗುರುವಾರ ಮಹಾರಾಷ್ಟ್ರಕ್ಕೆ ಕಳುಹಿಸಿದೆ.

ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ನಾನಾ ಪಟೋಲೆ ಹಾಗೂ ವಿಧಾನಸಭೆಯಲ್ಲಿ ಶಾಸಕಾಂಗ ಪಕ್ಷದ ನಾಯಕ ಬಾಳಾ ಸಾಹೇಬ್ ಥೋರಟ್ ನಡುವಿನ ಭಿನ್ನಾಭಿಪ್ರಾಯ– ಸಂಘರ್ಷ ತೀವ್ರಗೊಂಡ ಹಿನ್ನೆಲೆಯಲ್ಲಿ ಪಕ್ಷವು ಈ ಕ್ರಮ ಕೈಗೊಂಡಿದೆ. ವಿಧಾನಸಭೆಯಲ್ಲಿ ಪಕ್ಷದ ನಾಯಕನ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾಗಿ ಇತ್ತೀಚೆಗೆ ಥೋರಟ್ ಘೋಷಿಸಿದ್ದರು. ಅದರ ಬೆನ್ನಲ್ಲೇ, ಪಕ್ಷದ ಮಹಾರಾಷ್ಟ್ರ ಉಸ್ತುವಾರಿ ಎಚ್.ಕೆ.ಪಾಟೀಲ ಅವರು ಥೋರಟ್ ಅವರೊಂದಿಗೆ ಸಭೆ ನಡೆಸಿ, ಅವರ ಮನವೊಲಿಸುವ ಪ್ರಯತ್ನ ಮಾಡಿದ್ದರು.

'ರಾಜ್ಯದಲ್ಲಿರುವ ರಾಜಕೀಯ ಪರಿಸ್ಥಿತಿಯನ್ನು ಪರಿಶೀಲಿಸುವ ಸಲುವಾಗಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ರಮೇಶ್ ಚೆನ್ನಿತ್ತಲ ಅವರನ್ನು ಮಹಾರಾಷ್ಟ್ರಕ್ಕೆ ಕಳುಹಿಸಿದ್ದಾರೆ. ಅಲ್ಲಿನ ಪರಿಸ್ಥಿತಿ ಕುರಿತು ಚೆನ್ನಿತಲ ಅವರು ಖರ್ಗೆ ಅವರಿಗೆ ವರದಿ ಸಲ್ಲಿಸುವರು' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಕರಣ ಮುಚ್ಚಿಹಾಕುವ ಹುನ್ನಾರ: ಕಾಂಗ್ರೆಸ್

ಅದಾನಿ ಸಮೂಹದ ವಿರುದ್ಧದ ಪ್ರಕರಣ: ತಜ್ಞರ ಸಮಿತಿ ನೇಮಕ ನಿರ್ಧಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಅದಾನಿ ಸಮೂಹದ ವಿರುದ್ಧದ ಪ್ರಕರಣವನ್ನು ಜಂಟಿ ಸಂಸದೀಯ ಸಮಿತಿ (ಜೆಪಿಸಿ) ತನಿಖೆಗೆ ಒಪ್ಪಿಸುವಂತೆ ಮತ್ತೊಮ್ಮೆ ಆಗ್ರಹಿಸಿರುವ ಕಾಂಗ್ರೆಸ್, ಪ್ರಕರಣದ ತನಿಖೆಗಾಗಿ ತಜ್ಞರ ಸಮಿತಿ ನೇಮಿಸುವುದಾಗಿ ಹೇಳಿರುವ ಕೇಂದ್ರದ ನಿಲುವನ್ನು ಖಂಡಿಸಿದೆ.

ಕೇಂದ್ರದ ನಡೆಯು ಪ್ರಕರಣ ಮುಚ್ಚಿಹಾಕುವ ಹುನ್ನಾರದ ಭಾಗ. ಜೆಪಿಸಿ ಬಿಟ್ಟು ಬೇರೆ ಯಾವುದೇ ಸಮಿತಿಯಿಂದ ಪ್ರಕರಣದ ತನಿಖೆ ನಡೆದರೂ ಅದಾನಿ ಸಮೂಹ ಹಾಗೂ ಕೇಂದ್ರ ಸರ್ಕಾರದ ನಡುವಣ ಸಂಬಂಧ ಎಂತಹುದು ಎಂಬುದು ಬಹಿರಂಗವಾಗುವುದಿಲ್ಲ ಎಂದು ಹೇಳಿದೆ.

'ಆರೋಪಗಳು ಆಡಳಿತಾರೂಢ ಬಿಜೆಪಿ ಹಾಗೂ ಅದಾನಿ ಸಮೂಹದ ನಡುವಣ ಆತ್ಮೀಯತೆಗೆ ಸಂಬಂಧಿಸಿದ್ದಾಗಿವೆ. ಹೀಗಿರುವಾಗ ಕೇಂದ್ರದಿಂದ ರಚನೆಯಾಗುವ ಸಮಿತಿಯ ತನಿಖೆಯಲ್ಲಿ ಪಾರದರ್ಶಕತೆ ಕಾಣಲು ಸಾಧ್ಯವೇ. ಇದು ಪ್ರಕರಣವನ್ನು ಬಹಳ ವ್ಯವಸ್ಥಿತವಾಗಿ ಮುಚ್ಚಿಹಾಕುವ ಹುನ್ನಾರದ ಭಾಗ. ಸಾಕ್ಷ್ಯಗಳನ್ನು ಸುಲಭವಾಗಿ ನಾಶಪಡಿಸಲು ಕೇಂದ್ರ ಆಯ್ದುಕೊಂಡಿರುವ ಮಾರ್ಗ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಅವರು ಗುರುವಾರ ದೂರಿದ್ದಾರೆ.

ಷೇರುಮಾರುಕಟ್ಟೆಯಲ್ಲಿ ಹೂಡಿಕೆದಾರರ ಹಿತರಕ್ಷಣೆಗೆ ಈಗ ಜಾರಿಯಲ್ಲಿರುವ ನಿಯಂತ್ರಣ ವ್ಯವಸ್ಥೆ ಮತ್ತು ನಿಯಂತ್ರಣ ಸಂಸ್ಥೆಗಳ ಪಾತ್ರದ ಮೌಲ್ಯಮಾಪನಕ್ಕೆ ತಜ್ಞರ ಸಮಿತಿ ರಚಿಸಲು ನಮ್ಮ ಅಭ್ಯಂತರವೇನೂ ಇಲ್ಲ ಎಂದು ಕೇಂದ್ರ ಸರ್ಕಾರವು ಇದೇ 13ರಂದು ಸುಪ್ರೀಂ ಕೋರ್ಟ್‌ಗೆ ತಿಳಿಸಿತ್ತು. ಸಮಿತಿಯ ಸದಸ್ಯರ ಹೆಸರನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಲು ಸರ್ಕಾರಕ್ಕೆ ಅವಕಾಶ ನೀಡಬೇಕೆಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ನ್ಯಾಯಪೀಠಕ್ಕೆ ಮನವಿ ಮಾಡಿದ್ದರು.

'ಸರ್ಕಾರ ಮತ್ತು ಅದಾನಿ ಸಮೂಹ ಸೇರಿಕೊಂಡು ತಜ್ಞರ ಸಮಿತಿ ರಚನೆಯ ನಾಟಕವಾಡುತ್ತಿವೆ. ಸಮಿತಿಯ ಸದಸ್ಯರ ಹೆಸರನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವುದಾಗಿ ತುಷಾರ್ ಮೆಹ್ತಾ ಅವರು ಹೇಳಿರುವುದು ಇದನ್ನು ಪುಷ್ಟೀಕರಿಸುವಂತಿದೆ' ಎಂದು ಜೈರಾಮ್ ರಮೇಶ್ ಅವರು ದೂರಿದ್ದಾರೆ.

ಸುಪ್ರೀಂ ಕೋರ್ಟ್‌ಗೆ ಮತ್ತೊಂದು ಅರ್ಜಿ ಸಲ್ಲಿಕೆ

ನವದೆಹಲಿ (ಪಿಟಿಐ): ಅದಾನಿ ಸಮೂಹ ಸಂಸ್ಥೆಗಳ ವಿರುದ್ಧ ಅಮೆರಿಕ ಮೂಲದ ಹಿಂಡನ್‌ಬರ್ಗ್ ಸಂಸ್ಥೆ ಮಾಡಿರುವ ಆರೋಪಗಳ ಕುರಿತು ವಿವಿಧ ಕೇಂದ್ರೀಯ ತನಿಖಾ ಸಂಸ್ಥೆಗಳಿಂದ ತನಿಖೆ ನಡೆಸಬೇಕೆಂದು ಕೋರಿ ಸುಪ್ರೀಂ ಕೋರ್ಟ್‌ಗೆ ಗುರುವಾರ ಮತ್ತೊಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿ(ಪಿಐಎಲ್) ಸಲ್ಲಿಸಲಾಗಿದೆ. ಸಮಿತಿ ಅಥವಾ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆ ನಡೆಸುವಂತೆ ಅರ್ಜಿಯಲ್ಲಿ ಕೋರಲಾಗಿದೆ.

ಈ ವಿಚಾರವಾಗಿ ಸಲ್ಲಿಕೆಯಾಗಿರುವ ನಾಲ್ಕನೇ ಅರ್ಜಿ ಇದಾಗಿದೆ. ಸಾಮಾಜಿಕ ಕಾರ್ಯಕರ್ತ ಎಂದು ಕರೆದುಕೊಂಡಿರುವ ಮುಖೇಶ್ ಕುಮಾರ್ ಎಂಬುವವರು ಈ ಅರ್ಜಿ ಸಲ್ಲಿಸಿದ್ದಾರೆ.

ಕೇಂದ್ರೀಯ ತನಿಖಾ ಸಂಸ್ಥೆಗಳಾದ ಗಂಭೀರ ಸ್ವರೂಪದ ವಂಚನೆಗೆ ಸಂಬಂಧಿಸಿದ ತನಿಖಾ ಸಂಸ್ಥೆ (ಎಸ್‌ಎಫ್‌ಐಒ), ಕಂಪನಿಗಳ ರಿಜಿಸ್ಟ್ರಾರ್ (ಆರ್‌ಒಸಿ), ಭಾರತೀಯ ಷೇರು ಪೇಟೆ ನಿಯಂತ್ರಣ ಮಂಡಳಿ (ಸೆಬಿ), ಜಾರಿ ನಿರ್ದೇಶನಾಲಯ (ಇ.ಡಿ), ಆದಾಯ ತೆರಿಗೆ ಇಲಾಖೆ (ಐಟಿ), ರೆವೆನ್ಯೂ ಗುಪ್ತಚರ ಇಲಾಖೆ(ಡಿಆರ್‌ಐ) ಸಂಸ್ಥೆಗಳಿಗೆ ಅದಾನಿ ಸಮೂಹ ಸಂಸ್ಥೆ ನಡೆಸಿದೆ ಎನ್ನಲಾದ ಅವ್ಯವಹಾರಗಳ ತನಿಖೆಯನ್ನು ಒಪ್ಪಿಸಬೇಕು ಎಂದು ಅರ್ಜಿಯಲ್ಲಿ ಕೋರಲಾಗಿದೆ.

ಈ ಅರ್ಜಿಯನ್ನು ಸಾರ್ವಜನಿಕ ಹಿತಾಸಕ್ತಿ ದೃಷ್ಟಿಯಿಂದ ಮಾತ್ರ ಸಲ್ಲಿಸಲಾಗಿದೆ ಎಂದು ಅರ್ಜಿದಾರರಾದ ಮುಖೇಶ್ ಕುಮಾರ್ ಹೇಳಿದ್ದಾರೆ. ಇದೇ ವಿಚಾರವಾಗಿ ಈ ಹಿಂದೆ ಸಲ್ಲಿಕೆಯಾಗಿದ್ದ ಮೂರು ಪಿಐಎಲ್‌ಗಳನ್ನು ವಿಚಾರಣೆಗಾಗಿ ಪಟ್ಟಿ ಮಾಡಿರುವ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ. ವೈ. ಚಂದ್ರಚೂಡ್ ನೇತೃತ್ವದ ಪೀಠವು, ಶುಕ್ರವಾರ ವಿಚಾರಣೆ ನಡೆಸುವುದಾಗಿ ಹೇಳಿದೆ.

ಅದಾನಿ ಸಮೂಹವು ಷೇರು ಬೆಲೆಯ ಮೇಲೆ ಕೃತಕವಾಗಿ ಪರಿಣಾಮ ಬೀರುವ ಕೆಲಸದಲ್ಲಿ ಹಾಗೂ ಲೆಕ್ಕಪತ್ರಗಳ ವಂಚನೆಯಲ್ಲಿ ತೊಡಗಿದೆ ಎಂದು ಅಮೆರಿಕದ ಹೂಡಿಕೆ ಸಂಶೋಧನಾ ಸಂಸ್ಥೆ 'ಹಿಂಡನ್‌ಬರ್ಗ್ ರಿಸರ್ಚ್' ಆರೋಪಿಸಿದೆ.

ವಕೀಲರನ್ನು ಹಿರಿಯ ಅಡ್ವೊಕೇಟ್‌ಗಳೆಂದು ಘೋಷಣೆ

ತೀರ್ಪು ಮರುಪರಿಶೀಲನೆ ಅಗತ್ಯತೆ ಪರಿಗಣನೆ: ಸುಪ್ರೀಂ

ನವದೆಹಲಿ(ಪಿಟಿಐ): ವಕೀಲರನ್ನು ಹಿರಿಯ ಅಡ್ವೊಕೇಟ್‌ಗಳೆಂದು ಘೋಷಿಸುವುದಕ್ಕೆ ಸಂಬಂಧಿಸಿ ಮಾರ್ಗಸೂಚಿಗಳನ್ನು ರೂಪಿಸಿ 2017ರಲ್ಲಿ ನೀಡಿದ್ದ ಆದೇಶವನ್ನು ಮರುಪರಿಶೀಲಿಸುವ ಅಗತ್ಯವಿದೆಯೇ ಎಂಬುದನ್ನು ಪರಿಗಣಿಸುವುದಾಗಿ ಸುಪ್ರೀಂಕೋರ್ಟ್ ಗುರುವಾರ ಹೇಳಿದೆ.

ನ್ಯಾಯಮೂರ್ತಿಗಳಾದ ಎಸ್. ಕೆ.ಕೌಲ್, ಮನೋಜ್ ಮಿಶ್ರಾ ಹಾಗೂ ಅರವಿಂದ ಕುಮಾರ್ ಅವರಿದ್ದ ನ್ಯಾಯಪೀಠವು ಈ ವಿಷಯ ಕುರಿತ ಅರ್ಜಿಗಳ ವಿಚಾರಣೆ ನಡೆಸಿತು.

'ಸುಪ್ರೀಂಕೋರ್ಟ್ ನೀಡಿರುವ ತೀರ್ಪಿನಲ್ಲಿ ಕೆಲ ಮಾರ್ಪಾಡುಗಳ ಅಗತ್ಯವಿದೆಯೇ ಅಥವಾ ಇಲ್ಲವೇ ಎಂಬುದೇ ಇಲ್ಲಿರುವ ಪ್ರಶ್ನೆ' ಎಂದು ಅಭಿಪ್ರಾಯಪಟ್ಟಿತು. 'ಒಂದು ವೇಳೆ, ತೀರ್ಪನ್ನು ಮರುಪರಿಶೀಲಿಸಬೇಕು ಎಂದಾದಲ್ಲಿ, ಎಷ್ಟರ ಮಟ್ಟಿಗೆ ಈ ಕಾರ್ಯವಾಗಬೇಕು ಎಂಬುದಕ್ಕಷ್ಟೆ ಈ ವಿಷಯವನ್ನು ಸೀಮಿತಗೊಳಿಸೋಣ' ಎಂದು ನ್ಯಾಯಪೀಠ ಹೇಳಿತು.

ಕೇಂದ್ರ ಸರ್ಕಾರದ ಪರ ವಾದ ಮಂಡಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ಈ ಕುರಿತು ಸರ್ಕಾರವು ಅರ್ಜಿಯೊಂದನ್ನು ಶೀಘ್ರವೇ ಸಲ್ಲಿಸಲಿದೆ' ಎಂದು ಹೇಳಿದರು.

ಅರ್ಜಿದಾರರೊಬ್ಬರ ಪರ ವಾದ ಮಂಡಿಸಿದ ಹಿರಿಯ ವಕೀಲೆ ಇಂದಿರಾ ಜೈಸಿಂಗ್, 'ವಕೀಲರನ್ನು ಹಿರಿಯ ಅಡ್ವೊಕೇಟ್‌ಗಳೆಂದು ಘೋಷಿಸುವುದಕ್ಕೆ ಸಂಬಂಧಿಸಿ ಪ್ರತಿಯೊಂದು ಹೈಕೋರ್ಟ್ ತನ್ನದೇ ವಿಧಾನವನ್ನು ಅಳವಡಿಸಿಕೊಳ್ಳುತ್ತಿದೆ. ಈ ಪ್ರಕ್ರಿಯೆಗೆ ಸಂಬಂಧಿಸಿ ಏಕರೂಪ ವಿಧಾನ ಇರಬೇಕು' ಎಂದು ಹೇಳಿದರು.

'ಮಾರ್ಗಸೂಚಿಗಳಿಗೆ ಸಂಬಂಧಿಸಿದ ತೀರ್ಪಿನಲ್ಲಿ ಮಾರ್ಪಾಡುಗಳನ್ನು ತರುವುದು ಅಗತ್ಯ ಎಂಬುದಾಗಿ ಎಲ್ಲ ಪಕ್ಷಗಾರರ ಪರ ವಕೀಲರ ಅಭಿಪ್ರಾಯವಾಗಿದೆ' ಎಂದು ಹೇಳಿದ ನ್ಯಾಯಪೀಠ, ವಿಚಾರಣೆಯನ್ನು ಫೆ.22ಕ್ಕೆ ಮುಂದೂಡಿತು.

ರಾಮಸೇತು: ಪಿಐಎಲ್ ವಿಚಾರಣೆಗೆ 'ಸುಪ್ರೀಂ' ಒಪ್ಪಿಗೆ

ನವದೆಹಲಿ (ಪಿಟಿಐ): ರಾಮ ಸೇತುವನ್ನು ರಾಷ್ಟ್ರೀಯ ಸ್ಮಾರಕವನ್ನಾಗಿ ಘೋಷಿಸುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಕೋರಿ ಬಿಜೆಪಿ ಮುಖಂಡ ಸುಬ್ರಮಣಿಯನ್ ಸ್ವಾಮಿ ಅವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ಗುರುವಾರ ಒಪ್ಪಿಗೆ ನೀಡಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿ ಪಿ.ಎಸ್. ನರಸಿಂಹ ಅವರನ್ನೊಳಗೊಂಡ ಪೀಠವು ಇಲ್ಲಿಯವರೆಗೆ ರಾಮಸೇತು ವಿಷಯದಲ್ಲಿ ಯಾವುದೇ ನಿರ್ಧಾರ ತೆಗೆದುಕೊಂಡಿಲ್ಲ ಎಂಬುದನ್ನು ಗಮನಿಸಿದ ಬಳಿಕ ಸುಬ್ರಮಣಿಯನ್ ಅವರು ಸಲ್ಲಿಸಿರುವ ಅರ್ಜಿಯನ್ನು ವಿಚಾರಣೆಗೆ ಪಟ್ಟಿ ಮಾಡಲು ಸಮ್ಮತಿಸಿತು.

ಪಾಕಿಸ್ತಾನದಲ್ಲಿ ಇಂಧನ ದರ ಭಾರಿ ಏರಿಕೆ

ಇಸ್ಲಾಮಾಬಾದ್ (ಪಿಟಿಐ): ಆರ್ಥಿಕ ಸಂಕಷ್ಟದಿಂದ ಹೊರಬರಲು ಕಸರತ್ತು ನಡೆಸುತ್ತಿರುವ ಪಾಕಿಸ್ತಾನ ಸರ್ಕಾರ, ಜನರಿಂದಲೇ ಸಂಪನ್ಮೂಲ ಕ್ರೋಢಿಕರಣಕ್ಕೆ ಮುಂದಾಗಿದ್ದು, ಪೆಟ್ರೋಲ್, ಡೀಸೆಲ್, ವಿದ್ಯುತ್, ಅಡುಗೆ ಅನಿಲದ ದರವನ್ನು ತೀವ್ರವಾಗಿ ಏರಿಸಿದೆ.

ಹೊಸ ತೆರಿಗೆಯಿಂದ 170 ಬಿಲಿಯನ್ ರೂಪಾಯಿ ಕ್ರೋಡೀಕರಿಸಲು ಪಾಕ್ ಸರ್ಕಾರ 'ಮಿನಿ ಬಜೆಟ್' ಮಂಡಿಸಿದೆ. ಪರಿಣಾಮ, ಪೆಟ್ರೋಲ್ ದರ ಲೀಟರ್‌ಗೆ ರೂ. 22.20 ಹೆಚ್ಚಿದ್ದು, ದರ ಲೀಟರ್‌ಗೆ ರೂ. 272ಕ್ಕೆ ಏರಿದೆ. ಹೈಸ್ಪೀಡ್ ಡೀಸೆಲ್ ದರವನ್ನು ಲೀಟರ್‌ಗೆ ರೂ. 17.20, ಹಗುರ ಡೀಸೆಲ್ ದರ ರೂ. 9.68 ಏರಿಸಲಾಗಿದೆ. ಸೀಮೆಎಣ್ಣೆ ಲೀಟರ್‌ಗೆ ರೂ. 202.73ಕ್ಕೆ ಏರಿದೆ.

ಡಾಲರ್ ಎದುರು ಪಾಕಿಸ್ತಾನದ ರೂಪಾಯಿ ಮೌಲ್ಯ ತೀವ್ರವಾಗಿ ಕುಸಿದಿರುವ ಕಾರಣ ದರ ಏರಿಕೆಯಾಗಿದೆ ಎಂದು ಆರ್ಥಿಕ ಸಚಿವಾಲಯ ಹೇಳಿಕೆ ನೀಡಿದೆ. ಗುರುವಾರ ಬೆಳಿಗ್ಗೆ ಈ ದಿಢೀರ್ ಏರಿಕೆ ಕುರಿತು ತಿಳಿಯುತ್ತಲೇ ಜನರು ಬೆಲೆ ಏರಿಕೆ ಶಾಕ್‌ಗೆ ಒಳಗಾಗಿದ್ದಾರೆ.

1.1 ಬಿಲಿಯನ್ ಡಾಲರ್ ಆರ್ಥಿಕ ನೆರವು ಬಿಡುಗಡೆಗೂ ಮೊದಲು ಆದಾಯದಲ್ಲಿ ಏರಿಕೆಯನ್ನು ತೋರಿಸಬೇಕು ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿ ಷರತ್ತು ವಿಧಿಸಿತ್ತು.

ಭಾರತದಲ್ಲಿ ಪೆಟ್ರೋಲ್ ದುಬಾರಿ

ದರ ಏರಿಕೆಯ ನಂತರದಲ್ಲಿ ಪಾಕಿಸ್ತಾನದಲ್ಲಿ 272 ರೂಪಾಯಿ ಪಾವತಿಸಿದರೆ ಒಂದು ಲೀಟರ್ ಪೆಟ್ರೋಲ್ ಸಿಗುತ್ತಿದೆ. ಪಾಕಿಸ್ತಾನದ ರೂಪಾಯಿಯನ್ನು ಭಾರತದ ರೂಪಾಯಿಗೆ ಪರಿವರ್ತಿಸಿ ನೋಡಿದರೆ, ಪಾಕಿಸ್ತಾನದ ಒಂದು ಲೀಟರ್ ಪೆಟ್ರೋಲ್‌ಗೆ ಭಾರತದ ₹ 85.15 ಪಾವತಿಸಿದರೆ ಸಾಕು. ಆದರೆ ಭಾರತದ ಮಾರುಕಟ್ಟೆಯಲ್ಲಿ ಪೆಟ್ರೋಲ್ ದರವು ಈಗಲೂ ಪಾಕಿಸ್ತಾನದ ದರಕ್ಕಿಂತ ಹೆಚ್ಚಿನ ಮಟ್ಟದಲ್ಲಿದೆ.

ಶ್ರೀಲಂಕಾ: ವಿದ್ಯುತ್ ದರ ತೀವ್ರ ಏರಿಕೆ

ಕೊಲಂಬೊ (ಎಎಫ್‌ಪಿ): ಆರ್ಥಿಕ ದುಸ್ಥಿತಿಯಲ್ಲಿರುವ ಶ್ರೀಲಂಕಾ ಸರ್ಕಾರ ಗುರುವಾರ ವಿದ್ಯುತ್ ದರವನ್ನು ಶೇ 275ರವರೆಗೆ ಏರಿಕೆ ಮಾಡಿದೆ. ಈ ಮೂಲಕ ಕಳೆದ ಒಂದು ತಿಂಗಳಲ್ಲಿ ಎರಡನೇ ಬಾರಿಗೆ ತೀವ್ರ ಪ್ರಮಾಣದಲ್ಲಿ ಏರಿಕೆಯಾದಂತಾಗಿದೆ.

ಐಎಂಎಫ್ ಷರತ್ತು ಪಾಲಿಸಲು ವಿದ್ಯುತ್ ದರ ಏರಿಕೆ ಅನಿವಾರ್ಯ ಎಂದು ಇಂಧನ ಸಚಿವ ಕಾಂಚನ ವಿಜೇಶೇಖರ ಸುದ್ದಿಗಾರರಿಗೆ ತಿಳಿಸಿದರು.

ಭೂಕಂಪ: ಟರ್ಕಿ, ಸಿರಿಯಾದಲ್ಲಿ 42 ಸಾವಿರ ದಾಟಿದ ಸಾವಿನ ಸಂಖ್ಯೆ

ಸಿಕ್ಕಿತು ಬಾಲಕಿಗೆ ಮರುಜೀವ!

ಕಹ್ರಾಮನ್ಮರಸ್ / ಅಂಟಾಕ್ಯಾ (ರಾಯಿಟರ್ಸ್): ಭೂಕಂಪ ಸಂಭವಿಸಿ ಹತ್ತು ದಿನಗಳ ನಂತರ ಟರ್ಕಿಯ ಕಹ್ರಾಮನ್ಮರಸ್ ಪ್ರಾಂತ್ಯದಲ್ಲಿ ಅಚ್ಚರಿ ರೀತಿ ಬದುಕುಳಿದಿದ್ದ 17 ವರ್ಷದ ಬಾಲಕಿಯನ್ನು ಗುರುವಾರ ರಕ್ಷಿಸಲಾಯಿತು.

ದುರಂತ ನಡೆದು 248 ಗಂಟೆಗಳ ಅವಶೇಷಗಳಡಿ ಜೀವನ್ಮರಣದ ನಡುವೆ ಹೋರಾಡುತ್ತಿದ್ದ ಬಾಲಕಿಯನ್ನು ರಕ್ಷಣಾ ಸಿಬ್ಬಂದಿ ಸುರಕ್ಷಿತವಾಗಿ ಹೊರ ತಂದರು. ಬಾಲಕಿಗೆ ಮರುಜೀವ ಸಿಕ್ಕಂತಾಯಿತು. ಬಾಲಕಿಗೆ ಚಿನ್ನದ ಬಣ್ಣದ ಬೆಚ್ಚನೆಯ ಕಂಬಳಿ ಹೊದಿಸಿ, ಸ್ಟ್ರೆಚರ್‌ನಲ್ಲಿ ಆಂಬ್ಯುಲೆನ್ಸ್‌ಗೆ ಬಳಿಗೆ ಸಾಗಿಸುತ್ತಿದ್ದ ದೃಶ್ಯವನ್ನು 'ಟಿಆರ್‌ಟಿ ಹಬರ್' ಸುದ್ದಿ ವಾಹಿನಿ ಪ್ರಸಾರ ಮಾಡಿದೆ.

ಫೆ.6ರಂದು ಸಂಭವಿಸಿದ ರಿಕ್ಟರ್ ಮಾಪಕದ 7.8 ತೀವ್ರತೆಯ ಭೂಕಂಪದಿಂದ ಟರ್ಕಿ ಮತ್ತು ಸಿರಿಯಾದಲ್ಲಿ ಇದುವರೆಗೆ 42,000ಕ್ಕೂ ಹೆಚ್ಚು ಜನರು ಮೃತರಾಗಿದ್ದಾರೆ. ಪ್ರಬಲ ಕಂಪನದ ನಂತರ ವಿಪತ್ತು ವಲಯದಲ್ಲಿ ಇದುವರೆಗೆ 4,300ಕ್ಕೂ ಹೆಚ್ಚು ಕಂಪನಗಳು ದಾಖಲಾಗಿವೆ ಎಂದು ಟರ್ಕಿ ವಿಪತ್ತು ಮತ್ತು ತುರ್ತುಸ್ಥಿತಿ ನಿರ್ವಹಣಾ ಪ್ರಾಧಿಕಾರ ಹೇಳಿದೆ.

ಸಾವಿನ ಸಂಖ್ಯೆ ಟರ್ಕಿಯಲ್ಲಿ 36,187, ಸಿರಿಯಾದಲ್ಲಿ 5,800ಕ್ಕೆ ತಲುಪಿದೆ. ಟರ್ಕಿಯಲ್ಲಿ ಅವಶೇಷಗಳಡಿ ಸಿಲುಕಿ ಬದುಕುಳಿದಿದ್ದ ಹಲವು ಮಂದಿಯನ್ನು ಬುಧವಾರ ರಕ್ಷಿಸಲಾಯಿತು.



ಟರ್ಕಿಯ ಕಹ್ರಾಮನ್ಮರಸ್ ಪ್ರಾಂತ್ಯದಲ್ಲಿ ಅವಶೇಷಗಳಡಿ 248 ಗಂಟೆಗಳ ಕಾಲ ಸಿಲುಕಿದ್ದ 17 ವರ್ಷದ ಬಾಲಕಿಯನ್ನು ಗುರುವಾರರಕ್ಷಿಸಿದ ನಂತರ, ಬಾಲಕಿಯ ಚಿಕ್ಕಪ್ಪ ರಕ್ಷಣಾ ಸಿಬ್ಬಂದಿಯನ್ನು ಅಪ್ಪಿಕೊಂಡು ಸಂಭ್ರಮಿಸಿದರು– ಎಎಫ್‌ಪಿ ಚಿತ್ರ

ಆದರೆ, ಗುರುವಾರ ಮಾತ್ರ ಇಂತಹ ನಿದರ್ಶನಗಳು ಹೆಚ್ಚು ಕಂಡುಬರಲಿಲ್ಲ. ಹಾನಿಯಾದ ಪ್ರದೇಶಗಳಲ್ಲಿ ಶವಗಳು ಇನ್ನೂ ದೊರೆಯುತ್ತಲೇ ಇವೆ.

ಈ ದುರಂತದಲ್ಲಿ ಕಾಣೆಯಾದವರ ಸಂಖ್ಯೆಯನ್ನು ಉಭಯ ದೇಶಗಳ ಅಧಿಕಾರಿಗಳು ಈವರೆಗೆ ಪ್ರಕಟಿಸಿಲ್ಲ. ಕಾಣೆಯಾದವರು ಬದುಕುಳಿದಿರುವ ನಿರೀಕ್ಷೆಯಲ್ಲಿ ಅವರ ಕುಟುಂಬಗಳು ದಿನದೂಡುತ್ತಿವೆ.

ಲಕ್ಷಾಂತರ ಜನರು ರಕ್ತಹೆಪ್ಪುಗಟ್ಟಿಸುವ ಚಳಿಯಲ್ಲಿ ಅಗತ್ಯ ಮೂಲ ಸೌಕರ್ಯಗಳಿಲ್ಲದೆ ಜೀವ ಉಳಿಸಿಕೊಳ್ಳಲು ಪರದಾಡುತ್ತಿದ್ದಾರೆ. ನೈರ್ಮಲ್ಯದ ಕೊರತೆಯಿಂದಾಗಿ ಸಾಂಕ್ರಾಮಿಕ ರೋಗ ಹರಡುವ ಆತಂಕದಲ್ಲಿದ್ದಾರೆ. ಸಂತ್ರಸ್ತರು ಮಾನವೀಯ ನೆರವನ್ನೂ ಎದುರು ನೋಡುತ್ತಿದ್ದಾರೆ.

ತನ್ನ ನಿಯಂತ್ರಿತ ಪ್ರದೇಶದಲ್ಲಿ 1,414 ಜನರು ಮೃತರಾಗಿದ್ದಾರೆ ಎಂದು ಸಿರಿಯಾ ಸರ್ಕಾರ ಹೇಳಿದೆ. ಹೆಚ್ಚಿನ ಸಾವುನೋವು ಸಂಭವಿಸಿರುವ ವಾಯವ್ಯ ಸಿರಿಯಾ ಬಂಡುಕೋರರ ಹಿಡಿತದಲ್ಲಿದೆ. ಈಗಾಗಲೇ ಸ್ಥಳಾಂತರಿಸಲಾದ ಬದುಕುಳಿದವರಿಗೆ ಅಗತ್ಯ ನೆರವು ನೀಡಲು ಗಮನ ಹರಿಸಲಾಗಿದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ವಿಶ್ವಸಂಸ್ಥೆಯ 119 ಟ್ರಕ್‌ಗಳು ಪರಿಹಾರ ಸಾಮಗ್ರಿಗಳನ್ನು ಹೊತ್ತು, ಸಿರಿಯಾವನ್ನು ಗುರುವಾರ ತಲುಪಿದವು ಎಂದು ಮಾನವೀಯ ವ್ಯವಹಾರಗಳ ಸಮನ್ವಯದ ವಿಶ್ವಸಂಸ್ಥೆಯ ಕಚೇರಿ ವಕ್ತಾರರು ತಿಳಿಸಿದ್ದಾರೆ.

ಬೆಂಗಳೂರಿನಿಂದ ಟರ್ಕಿಗೆ ಪರಿಹಾರ ಸಾಮಗ್ರಿ ರವಾನೆ

ನವದೆಹಲಿ (ಪಿಟಿಐ): ಬೆಂಗಳೂರಿನ ಆರೋಗ್ಯ ಸೇವಾ ಸಂಸ್ಥೆಯ ಸ್ವಯಂ ಸೇವಕರು, ಅಂತರರಾಷ್ಟ್ರೀಯ ಮಾನವೀಯ ನೆರವು ಸಂಸ್ಥೆ ಮತ್ತು ವನನಮ್ ವೆಂಚರ್ಸ್ ಸಹಯೋಗದಲ್ಲಿ ಬುಧವಾರ 1,000ಕ್ಕೂ ಹೆಚ್ಚು ಕಂಬಳಿ, ಪರಿಹಾರ ಸಾಮಗ್ರಿಗಳನ್ನು ಇಲ್ಲಿನ ಟರ್ಕಿ ರಾಯಭಾರ ಕಚೇರಿಗೆ ಮತ್ತು ಸಿರಿಯಾ ರಾಯಭಾರ ಕಚೇರಿಗೆ ಹಣಕಾಸು ದೇಣಿಗೆ ತಲುಪಿಸಿದರು.

'ಸಂತ್ರಸ್ತರಿಗೆ ನೆರವಾಗಲು, ಪರಿಹಾರ ಕಾರ್ಯದಲ್ಲಿ ಕೈಜೋಡಿಸಿದ್ದು ತೃಪ್ತಿ ನೀಡಿದೆ. ನಮ್ಮ ಸಣ್ಣ ಸಹಾಯ ಅವರಲ್ಲಿ ಕೆಲವರಿಗೆ ಅನುಕೂಲವಾಗುವುದೆಂದು ಭಾವಿಸಿದ್ದೇವೆ' ಎಂದು ಬೆಂಗಳೂರಿನ ಸ್ವಯಂ ಸೇವಕ ಪುನೀತ್ ಟಿ. ಹೇಳಿದರು.



ಭೂಕಂಪ: ಸಿದ್ಧತಾ ವರದಿ ಸಲ್ಲಿಸಲು ದೆಹಲಿ ಸರ್ಕಾರಕ್ಕೆ 4 ವಾರ ಗಡುವು

ನವದೆಹಲಿ(ಪಿಟಿಐ): ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಸಂಭವನೀಯ ಭೂಕಂಪದಂತಹ ಪ್ರಾಕೃತಿಕ ವಿಕೋಪ ನಿಭಾಯಿಸಲು ಯಾವ ರೀತಿಯಲ್ಲಿ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂಬುದರ ಕುರಿತು ನಾಲ್ಕು ವಾರಗಳೊಳಗೆ ವರದಿ ಸಲ್ಲಿಸಲು ಎಎಪಿ ಸರ್ಕಾರಕ್ಕೆ ದೆಹಲಿ ಹೈಕೋರ್ಟ್ ಗುರುವಾರ ಗಡುವು ನೀಡಿತು.


ದೆಹಲಿಯಲ್ಲಿ ಕಟ್ಟಡಗಳು ಭೂಕಂಪ ತಾಳಿಕೊಳ್ಳುವ ಸ್ಥಿರತೆ ಹೊಂದಿಲ್ಲ, ಕಳಪೆಯಾಗಿವೆ. ಪ್ರಬಲ ಭೂಕಂಪ ಸಂಭವಿಸಿದರೆ ಹೆಚ್ಚಿನ ಸಾವುನೋವು ಸಂಭವಿಸುವ ಸಾಧ್ಯತೆ ಇದೆ ಎಂದು ವಕೀಲರಾದ ಅರ್ಪಿತ್ ಭಾರ್ಗವ ಅವರು ಸಲ್ಲಿಸಿರುವ ಪಿಐಎಲ್ ಅನ್ನು ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ಮತ್ತು ನ್ಯಾಯಮೂರ್ತಿ ಸುಬ್ರಹ್ಮಣಿಯಂ ಪ್ರಸಾದ್ ಅವರಿದ್ದ ಪೀಠವು ವಿಚಾರಣೆ ನಡೆಸಿತು.

'ಎಲ್ಲರಿಗೂ ತಮ್ಮ ಜೀವದ ಸುರಕ್ಷತೆಯ ಬಗ್ಗೆ ಚಿಂತೆ ಇರುತ್ತದೆ. ಈ ದಾವೆಗಳಲ್ಲಿ ವ್ಯತಿರಿಕ್ತವಾದುದು ಏನೂ ಇಲ್ಲ. ಪರಿಸ್ಥಿತಿಯ ಅರಿವು ಅಧಿಕಾರಿಗಳಿಗೂ ಇರುತ್ತದೆ. ವಿಪತ್ತು ನಿಭಾಯಿಸಲು ಮಾಡಿಕೊಂಡಿರುವ ಸಿದ್ಧತೆ ಕುರಿತ ತಮ್ಮ ವರದಿಯನ್ನು ಅವರು ಸಲ್ಲಿಸಲಿ' ಎಂದು ಸೂಚಿಸಿದ ಪೀಠವು, ಮುಂದಿನ ವಿಚಾರಣೆಯನ್ನು ಮೇ 10ಕ್ಕೆ ಪಟ್ಟಿ ಮಾಡಿತು.

ಅರ್ಜಿದಾರರ ಪ್ರತಿನಿಧಿ, ಹಿರಿಯ ವಕೀಲ ರವಿ ಸಿಕ್ರಿ ಅವರು, ಟರ್ಕಿ-ಸಿರಿಯಾದಲ್ಲಿ ಫೆ.6ರಂದು ಸಂಭವಿಸಿದ 7.8ರಷ್ಟು ತೀವ್ರತೆಯ ಭೂಕಂಪ ಉಲ್ಲೇಖಿಸಿ, ದೆಹಲಿಯು ಭೂಕಂಪ ವಲಯ 4ರ (ತೀವ್ರತೆಯ ವಲಯ) ಅಡಿಯಲ್ಲಿ ಬರುತ್ತದೆ ಎಂದು ಪೀಠದ ಗಮನಕ್ಕೆ ತಂದರು.

ವಾರಾಂತ್ಯಕ್ಕೆ 12 ಚೀತಾಗಳ ಆಗಮನ

ಜೋಹಾನ್ಸ್‌ಬರ್ಗ್ (ಪಿಟಿಐ): ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ 12 ಚೀತಾಗಳನ್ನು ಸ್ಥಳಾಂತರಿಸುವ ಪ್ರಕ್ರಿಯೆ ಆರಂಭವಾಗಿದೆ. ಇಲ್ಲಿನ ಒ.ಆರ್. ಟಂಬೊ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಭಾರತೀಯ ವಾಯುಪಡೆಯ ಹೆಲಿಕಾಪ್ಟರ್‌ನಲ್ಲಿ ಚೀತಾಗಳನ್ನು ಕೊಂಡೊಯ್ಯಲಾಗುತ್ತಿದೆ.



ಮಧ್ಯಪ್ರದೇಶದ ಗ್ವಾಲಿಯರ್‌ನ ವಾಯುಪಡೆ ನೆಲೆಗೆ ಶನಿವಾರ ಬೆಳಿಗ್ಗೆ ಚೀತಾಗಳು ಬಂದಿಳಿಯಲಿದ್ದು, ಅಲ್ಲಿಂದ ಶಿಯೋಪುರ್‌ನ ಕುನೊ ರಾಷ್ಟ್ರೀಯ ಉದ್ಯಾನಕ್ಕೆ ಕರೆತರಲಾಗುತ್ತದೆ.

ಉಕ್ರೇನ್ ಮೇಲೆ 32 ಕ್ಷಿಪಣಿ ದಾಳಿ

ಕೀವ್ (ರಾಯಿಟರ್ಸ್): ಉಕ್ರೇನ್‌ನ ಕೈಗಾರಿಕಾ ನಗರ ಬಾಖ್ಮುಟ್ ಅನ್ನು ಗುರಿಯಾಗಿಸಿ ರಷ್ಯಾ ಗುರುವಾರ 32 ಕ್ಷಿಪಣಿಗಳನ್ನು ಪ್ರಯೋಗಿಸಿದೆ. ಇದರಿಂದ ಮಹಿಳೆಯೊಬ್ಬರು ಮೃತಪಟ್ಟಿದ್ದು, ಏಳು ಜನ ಗಾಯಗೊಂಡಿದ್ದಾರೆ.

'ರಷ್ಯಾದ ಅರ್ಧದಷ್ಟು ಕ್ಷಿಪಣಿಗಳನ್ನು ಹೊಡೆದುರುಳಿಸಲಾಗಿದೆ. ರಷ್ಯಾ ದಾಳಿಗೆ ಪ್ರತಿದಾಳಿ ನಡೆಸಲು ಅಗತ್ಯ ಶಸ್ತ್ರಾಸ್ತ್ರ ನೆರವು ಒದಗಿಸುವ ಭರವಸೆಯನ್ನು ಪಾಶ್ಚಿಮಾತ್ಯದ ಮೈತ್ರಿ ರಾಷ್ಟ್ರಗಳು ನೀಡಿವೆ' ಎಂದು ಉಕ್ರೇನ್ ಹೇಳಿದೆ.

ಅಖ್ಮಂಡ್ ಸೇರಿದಂತೆ ಉಕ್ರೇನ್‌ನ ಕೇಂದ್ರ, ಉತ್ತರ ಮತ್ತು ಪಶ್ಚಿಮ ಭಾಗದ ನಗರಗಳಲ್ಲಿ ಬಹುತೇಕ ವಿದ್ಯುತ್ ಮೂಲಸೌಲಭ್ಯಗಳನ್ನು ಕೇಂದ್ರೀಕರಿಸಿ ದಾಳಿ ನಡೆಸುತ್ತಿದೆ. ತನ್ನ ಬೇಹುಗಾರಿಕೆಗೆ ಏರ್ ಬಲೂನ್ ಅನ್ನು ರಷ್ಯಾ ಹಾರಿಬಿಡುತ್ತಿದೆ ಎಂದು ಹೇಳಲಾಗಿದೆ.

'ನಿಕ್ಕಿ ಮೊಬೈಲ್‌ನಲ್ಲಿದ್ದ ಚಾಟ್ ಅಳಿಸಿದ ಸಾಹಿಲ್'



ನಿಕ್ಕಿ ಜೊತೆ ಸಾಹಿಲ್ –ಪಿಟಿಐ ಚಿತ್ರ

ನವದೆಹಲಿ (ಪಿಟಿಐ): 'ತನ್ನ ಸಹಜೀವನ ಸಂಗಾತಿ ನಿಕ್ಕಿ ಯಾದವ್ ಹತ್ಯೆ ಮಾಡಿದ ನಂತರ, ಆಕೆಯ ಮೊಬೈಲ್‌ನಲ್ಲಿದ್ದ ಚಾಟ್‌ಗಳು ಹಾಗೂ ಡೇಟಾವನ್ನು ಆರೋಪಿ ಸಾಹಿಲ್ ಗೆಹಲೋತ್ ತೆಗೆದು ಹಾಕಿದ್ದಾನೆ' ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

'ನಿಕ್ಕಿ ಹತ್ಯೆ ಮಾಡುವುದಕ್ಕೂ 15 ದಿನಗಳ ಮೊದಲೇ ನಾನು ಉತ್ತಮನಗರದಲ್ಲಿರುವ ನಿಕ್ಕಿ ಮನೆಯನ್ನು ತೊರೆದಿದ್ದೆ. ಬೇರೆ ಯುವತಿ ಜೊತೆ ನನ್ನ ನಿಶ್ಚಿತಾರ್ಥ ನೆರವೇರಿದ ನಂತರ, ಫೆ. 9ರಂದು ನಾನು ಉತ್ತಮನಗರದ ಮನೆಗೆ ತೆರಳಿ, ನಿಕ್ಕಿ ಜೊತೆ ರಾತ್ರಿ ಕಳೆದೆ' ಎಂಬುದಾಗಿ ಪೊಲೀಸರಿಗೆ ನೀಡಿರುವ ತಪ್ಪೊಪ್ಪಿಗೆಯಲ್ಲಿ ಸಾಹಿಲ್ ತಿಳಿಸಿದ್ದಾರೆ.

ಸಾಹಿಲ್‌ನ ಬಳಿಯಿದ್ದ ನಿಕ್ಕಿ ಮೊಬೈಲ್‌ಅನ್ನು ಜಪ್ತಿ ಮಾಡಲಾಗಿದೆ. ಅದರಲ್ಲಿ ಮಾಹಿತಿಯನ್ನು ಮರಳಿ ಪಡೆಯುವ ಸಲುವಾಗಿ ಮೊಬೈಲ್‌ಅನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ ಎಂದೂ ಪೊಲೀಸರು ತಿಳಿಸಿದ್ದಾರೆ.

ರಣಜಿ ಫೈನಲ್: ಬಂಗಾಳ ಅಲ್ಪಮೊತ್ತ; ಶಹಬಾಜ್, ಅಭಿಷೇಕ್ ಅರ್ಧಶತಕ

ಉನದ್ಕತ್, ಚೇತನ್ ಪ್ರಭಾವಿ ದಾಳಿ

ಕೋಲ್ಕತ್ತ (ಪಿಟಿಐ): ಸೌರಾಷ್ಟ್ರದ ಎಡಗೈ ಮಧ್ಯಮವೇಗದ ಜೋಡಿ ಜೈದೇವ್ ಉನದ್ಕತ್ ಹಾಗೂ ಚೇತನ್ ಸಕಾರಿಯಾ ದಾಳಿಯ ಮುಂದೆ ಬಂಗಾಳ ತಂಡವು ಸಾಧಾರಣ ಮೊತ್ತಕ್ಕೆ ಕುಸಿಯಿತು.

ಈಡನ್ ಗಾರ್ಡನ್‌ನಲ್ಲಿ ಗುರುವಾರ ಆರಂಭವಾದ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಟಾಸ್ ಗೆದ್ದ ಸೌರಾಷ್ಟ್ರವು ಆತಿಥೇಯ ತಂಡವನ್ನು 174 ರನ್‌ಗಳಿಗೆ ಕಟ್ಟಿಹಾಕಿತು. ಉನದ್ಕತ್ (44ಕ್ಕೆ3) ಹಾಗೂ ಚೇತನ್ (33ಕ್ಕೆ3) ಬಂಗಾಳದ ಪ್ರಮುಖ ಬ್ಯಾಟರ್‌ಗಳ ವಿಕೆಟ್ ಗಳಿಸಿದರು.

ಎರಡನೇ ಇನಿಂಗ್ಸ್ ಆರಂಭಿಸಿದ ಸೌರಾಷ್ಟ್ರ ತಂಡವು 17 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 81 ರನ್ ಗಳಿಸಿತು. ಹರ್ವಿಕ್ ದೇಸಾಯಿ (ಬ್ಯಾಟಿಂಗ್ 38) ಹಾಗೂ 'ರಾತ್ರಿ ಕಾವಲುಗಾರ' ಚೇತನ್ ಸಕಾರಿಯಾ (ಬ್ಯಾಟಿಂಗ್ 2) ಕ್ರೀಸ್‌ನಲ್ಲಿದ್ದಾರೆ.

ಶಹಬಾಜ್ ಅಹಮದ್, ಅಭಿಷೇಕ್ ಅರ್ಧಶತಕ: ಟೂರ್ನಿಯುದ್ದಕ್ಕೂ ರನ್‌ಗಳ ಹೊಳೆ ಹರಿಸಿದ್ದ ಅಭಿಮನ್ಯು ಈಶ್ವರನ್ ಸೇರಿದಂತೆ ಆರು ಬ್ಯಾಟರ್‌ಗಳು ಮೊತ್ತ 65 ರನ್ ಆಗುವಷ್ಟರಲ್ಲಿ ಪೆವಿಲಿಯನ್‌ಗೆ ಮರಳಿದರು.

ಈ ಹಂತದಲ್ಲಿ ಜೊತೆಯಾದ ಶಹಬಾಜ್ ಅಹಮದ್ (69; 112ಎ, 4X11) ಹಾಗೂ ಅಭಿಷೇಕ್ (50; 98ಎ, 4X8) ಏಳನೇ ವಿಕೆಟ್ ಜೊತೆಯಾಟದಲ್ಲಿ 102 ರನ್ ಸೇರಿಸಿದರು. ಇಬ್ಬರೂ ತಾಳ್ಮೆಯ ಆಟವಾಡಿದರು. ಆದರೂ ತಂಡದ ಮೊತ್ತವು ಇನ್ನೂರರ ಗಡಿ ದಾಟಲು ಉನದ್ಕತ್ ಬಳಗ ಬಿಡಲಿಲ್ಲ.



ಸೌರಾಷ್ಟ್ರ ತಂಡದ ಜೈದೇವ್ ಉನದ್ಕತ್

ಚಿರಾಗ್ ಜಾನಿ ಹಾಗೂ ಧರ್ಮೇಂದ್ರಸಿಂಹ ಜಡೇಜ ಅವರು ತಲಾ ಎರಡು ವಿಕೆಟ್ ಗಳಿಸಿದರು.

ಸೌರಾಷ್ಟ್ರ ತಂಡವು ಹೋದ ವಾರ ಬೆಂಗಳೂರಿನಲ್ಲಿ ನಡೆದ ಸೆಮಿಫೈನಲ್‌ನಲ್ಲಿ ಕರ್ನಾಟಕ ತಂಡವನ್ನು ಸೋಲಿಸಿತ್ತು. ಆ ಸಂದರ್ಭದಲ್ಲಿ ಜೈದೇವ್ ಅವರು ಭಾರತ ಟೆಸ್ಟ್ ತಂಡದಲ್ಲಿ ಆಡಲು ತೆರಳಿದ್ದರು. ಇಂದೋರ್‌ನಲ್ಲಿ ನಡೆದಿದ್ದ ಇನ್ನೊಂದು ಸೆಮಿಫೈನಲ್‌ನಲ್ಲಿ ಬಂಗಾಳವು ಮಧ್ಯಪ್ರದೇಶ ಎದುರು ಜಯಿಸಿತ್ತು.

ಸಂಕ್ಷಿಪ್ತ ಸ್ಕೋರು: ಬಂಗಾಳ: ಮೊದಲ ಇನಿಂಗ್ಸ್: 54.1 ಓವರ್‌ಗಳಲ್ಲಿ 174 (ಶಹಬಾಜ್ ಅಹಮದ್ 69, ಅಭಿಷೇಕ್ ಪೊರೆಲ್ 50, ಜೈದೇವ್ ಉನದ್ಕತ್ 44ಕ್ಕೆ3, ಚೇತನ್ ಸಕಾರಿಯಾ 33ಕ್ಕೆ3, ಚಿರಾಗ್ ಜಾನಿ 33ಕ್ಕೆ2, ಧರ್ಮೇಂದ್ರಸಿಂಹ ಜಡೇಜ 19ಕ್ಕೆ2) **ಸೌರಾಷ್ಟ್ರ**:17 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 81 (ಹರ್ವಿಕ್ ದೇಸಾಯಿ ಬ್ಯಾಟಿಂಗ್ 38, ವಿಶ್ವರಾಜ್ ಜಡೇಜ 25, ಮುಕೇಶ್ ಕುಮಾರ್ 23ಕ್ಕೆ1, ಆಕಾಶದೀಪ್ 28ಕ್ಕೆ1)

ಮೇಗನ್ ಅಮೋಘ ಬೌಲಿಂಗ್

ಮಹಿಳಾ ಕ್ರಿಕೆಟ್ ವಿಶ್ವಕಪ್: ಲಂಕಾ ಮಣಿಸಿದ ಆಸ್ಟ್ರೇಲಿಯಾ

ಜಿಕೆಬೆರಾ, ದಕ್ಷಿಣ ಆಫ್ರಿಕಾ: ಮೇಗನ್ ಶುಟ್ ಅಮೋಘ ಬೌಲಿಂಗ್ ಬಲದಿಂದ ಆಸ್ಟ್ರೇಲಿಯಾ ತಂಡವು ಗುರುವಾರ ಇಲ್ಲಿ ನಡೆದ ಮಹಿಳೆಯರ ಟಿ20 ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಶ್ರೀಲಂಕಾ ಎದುರು ಗೆದ್ದಿತು. ಲಂಕಾ ತಂಡದ ಆರು ಬೌಲರ್‌ಗಳಿಗೂ ಇವರಿಬ್ಬರ ಜೊತೆಯಾಟವನ್ನು ಮುರಿಯಲು ಸಾಧ್ಯವಾಗಲಿಲ್ಲ.

ಎ ಗುಂಪಿನ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವು 10 ವಿಕೆಟ್‌ಗಳಿಂದ ಜಯಿಸಿತು. ಟಾಸ್ ಗೆದ್ದ ಆಸ್ಟ್ರೇಲಿಯಾ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮೇಗನ್ (24ಕ್ಕೆ4) ಅವರ ದಾಳಿಯಿಂದಾಗಿ ಶ್ರೀಲಂಕಾ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 112 ರನ್‌ಗಳ ಸಾಧಾರಣ ಮೊತ್ತ ಗಳಿಸಿತು.

ಗುರಿ ಬೆನ್ನಟ್ಟಿದ ಆಸ್ಟ್ರೇಲಿಯಾ ತಂಡವು ಒಂದೂ ವಿಕೆಟ್ ಕಳೆದುಕೊಳ್ಳದೇ ಗುರಿ ತಲುಪಿತು. ಆರಂಭಿಕ ಜೋಡಿ ಅಲೀಸಾ ಹೀಲಿ (ಔಟಾಗದೆ 54; 43ಎ, 4X6, 6X1) ಮತ್ತು ಬೆಥ್ ಮೂನಿ (ಔಟಾಗದೆ 56; 53ಎ, 4X7) ತಂಡವನ್ನು ಜಯದ ದಡ ಸೇರಿಸಿದರು.



ಆಸ್ಟ್ರೇಲಿಯಾ ತಂಡದ ಬೌಲರ್ ಮೇಗನ್ ಶುಟ್ –ಎಎಫ್‌ಪಿ ಚಿತ್ರ

ಗುಂಪಿನ ಪಾಯಿಂಟ್ ಪಟ್ಟಿಯಲ್ಲಿ ಆಸ್ಟ್ರೇಲಿಯಾ ತಂಡವು ಆರು ಅಂಕಗಳೊಂದಿಗೆ ಅಗ್ರಸ್ಥಾನಕ್ಕೇರಿತು. ಲಂಕಾ ನಾಲ್ಕು ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿದೆ.

ಸಂಕ್ಷಿಪ್ತ ಸ್ಕೋರು: ಶ್ರೀಲಂಕಾ: 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 112 (ಹರ್ಷಿತಾ ಸಮರವಿಕ್ರಂ ಮಾಧವಿ 34, ಚಾಮರಿ ಅಟಪಟ್ಟು 16, ವಿಷ್ಮಿ ಗುಣರತ್ನೆ 24, ನೀಲಾಕ್ಷಿ ಡಿಸಿಲ್ವಾ ಔಟಾಗದೆ 15, ಮೇಗನ್ ಶುಟ್ 24ಕ್ಕೆ4, ಗ್ರೇಸ್ ಹ್ಯಾರಿಸ್ 7ಕ್ಕೆ2) **ಆಸ್ಟ್ರೇಲಿಯಾ:** 15.5 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 113 (ಅಲೀಸಾ ಹೀಲಿ ಔಟಾಗದೆ 54, ಬೆತ್ ಮೂನಿ ಔಟಾಗದೆ 56) ಫಲಿತಾಂಶ: ಆಸ್ಟ್ರೇಲಿಯಾ ತಂಡಕ್ಕೆ 10 ವಿಕೆಟ್‌ಗಳ ಜಯ.

ಬಿ ಗುಂಪು: ಪಾಕಿಸ್ತಾನ: 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 165 (ಮುನೀಬಾ ಅಲಿ 102, ನಿದಾ ದಾರ್ 33, ಅರ್ಲೆನ್ ಕೆಲಿ 27ಕ್ಕೆ2) ಐರ್ಲೆಂಡ್: 16.3 ಓವರ್‌ಗಳಲ್ಲಿ 95 (ಒರ್ಲಾ ಪ್ರೆಂಡರ್‌ಗಸ್ಟ್ 31, ಈಮೇರ್ ರಿಚರ್ಡ್ಸನ್ 28, ನಷ್ರಾ ಸಂಧು 18ಕ್ಕೆ4, ನಿದಾ ದಾರ್ 5ಕ್ಕೆ2, ಸಾದಿಯಾ ಇಕ್ಬಾಲ್ 17ಕ್ಕೆ2) ಫಲಿತಾಂಶ: ಪಾಕಿಸ್ತಾನ ತಂಡಕ್ಕೆ 70 ರನ್‌ಗಳ ಜಯ.



ಮುನೀಬಾ ಅಲಿ

ಮುನೀಬಾ ಶತಕ

ಪಾಕಿಸ್ತಾನ ತಂಡದ ಬ್ಯಾಟರ್ ಮುನೀಬಾ ಅಲಿ (102; 68ಎ, 4X14) ಬುಧವಾರ ತಡರಾತ್ರಿ ಮುಗಿದ ಬಿ ಗಂಪಿನ ಪಂದ್ಯದಲ್ಲಿ ಶತಕ ಸಾಧನೆ ಮಾಡಿದರು. ಅವರ ಅಮೋಘ ಆಟದಿಂದಾಗಿ ತಂಡವು 70 ರನ್‌ಗಳಿಂದ ಐರ್ಲೆಂಡ್ ವಿರುದ್ಧ ಜಯಿಸಿತು.

150ರ ಸ್ಟ್ರೈಕ್‌ರೇಟ್‌ನಲ್ಲಿ ಮುನೀಬಾ ರನ್ ಗಳಿಸಿದರು. ಪಾಕ್ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 165 ರನ್ ಗಳಿಸಿತು. ಇದಕ್ಕುತ್ತರವಾಗಿ ಐರ್ಲೆಂಡ್ ತಂಡವು 16.3 ಓವರ್‌ಗಳಲ್ಲಿ 95 ರನ್‌ಗಳನ್ನಷ್ಟೇ ಗಳಿಸಿ ಆಲೌಟ್ ಆಯಿತು. ಪಾಕ್ ಬೌಲರ್ ನಷ್ರಾ ಸಂಧು ನಾಲ್ಕು ವಿಕೆಟ್ ಗಳಿಸಿದರು.

ಟೆಸ್ಟ್ ಕ್ರಿಕೆಟ್: ಡಕೆಟ್, ಬ್ರೂಕ್ಸ್ ಮಿಂಚಿನ ಬ್ಯಾಟಿಂಗ್

ಮೌಂಟ್ ಮಾಂಗನೆ (ಎಎಫ್‌ಪಿ):- ಬೆನ್ ಡಕೆಟ್ ಹಾಗೂ ಹ್ಯಾರಿ ಬ್ರೂಕ್ಸ್ ಅವರ ಚೆಂದದ ಬ್ಯಾಟಿಂಗ್‌ನಿಂದಾಗಿ ಇಂಗ್ಲೆಂಡ್ ತಂಡವು ನ್ಯೂಜಿಲೆಂಡ್ ಎದುರು ಗುರುವಾರ ಆರಂಭವಾದ ಟೆಸ್ಟ್‌ನ ಮೊದಲ ದಿನ ಉತ್ತಮ ಮೊತ್ತ ಗಳಿಸಿತು.

ಇನಿಂಗ್ಸ್ ಆರಂಭಿಸಿದ ಆತಿಥೇಯ ತಂಡಕ್ಕೆ ಇಂಗ್ಲೆಂಡ್ ಅನುಭವಿ ವೇಗಿ ಜೇಮ್ಸ್ ಆ್ಯಂಡರ್ಸನ್ ಪೆಟ್ಟುಕೊಟ್ಟರು. ಇದರಿಂದಾಗಿ ದಿನದಾಟದ ಅಂತ್ಯಕ್ಕೆ ಕಿವೀಸ್ ತಂಡವು 18 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 37 ರನ್ ಗಳಿಸಿತು.

ಇಂಗ್ಲೆಂಡ್ ತಂಡವು ಗಳಿಸಿರುವ 325 ರನ್‌ಗಳ ಮೊತ್ತವನ್ನು ಚುಕ್ತಾಗೊಳಿಸಲು ಕಿವೀಸ್‌ಗೆ ಇನ್ನೂ 288 ರನ್‌ಗಳ ಅಗತ್ಯವಿದೆ.

ಬೇ ಓವಲ್ ಕ್ರೀಡಾಂಗಣದಲ್ಲಿ ಟಾಸ್ ಗೆದ್ದ ನ್ಯೂಜಿಲೆಂಡ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಟಿಮ್ ಸೌಥಿ ಹಾಗೂ ನೀಲ್ ವಾಗ್ನರ್ ಪ್ರಮುಖ ವಿಕೆಟ್‌ಗಳನ್ನು ಗಳಿಸುವ ಮೂಲಕ ಕಿವೀಸ್ ಇನಿಂಗ್ಸ್‌ಗೆ ಬಲ ತುಂಬುವ ಪ್ರಯತ್ನ ಮಾಡಿದರು.

ಆದರೆ, ಆರಂಭಿಕ ಬ್ಯಾಟರ್ ಬೆನ್ ಡಕೆಟ್ (84; 68ಎ, 4X14) ಹಾಗೂ ಬ್ರೂಕ್ (89; 81ಎ, 4X15, 6X1) ಟಿ20 ಮಾದರಿಯ ಬ್ಯಾಟಿಂಗ್ ಮಾಡಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್; ಇಂಗ್ಲೆಂಡ್: 58.2 ಓವರ್‌ಗಳಲ್ಲಿ 9ಕ್ಕೆ325 ಡಿಕ್ಲೇರ್ಡ್ (ಬೆನ್ ಡಕೆಟ್ 84, ಒಲಿ ಪೋಪ್ 42, ಹ್ಯಾರಿ ಬ್ರೂಕ್ 89, ಫೋಕ್ಸ್ 38, ಟಿಮ್ ಸೌಥಿ 71ಕ್ಕೆ2, ನೀಲ್ ವಾಗ್ನರ್ 82ಕ್ಕೆ4, ಕಗ್ಲೆಜಿನ್ 80ಕ್ಕೆ2) ನ್ಯೂಜಿಲೆಂಡ್ 18 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 37 (ಡೆವೊನ್ ಕಾನ್ವೆ ಬ್ಯಾಟಿಂಗ್ 17, ಜೇಮ್ಸ್ ಆ್ಯಂಡರ್ಸನ್ 10ಕ್ಕೆ2)



ಬೆನ್ ಡಕೆಟ್ ಅರ್ಧಶತಕ ಗಳಿಸಿ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಬಿಸಿಸಿಐ ಮುಂದೆ ಐಸಿಸಿಯೂ ಅಸಹಾಯಕ: ಆಫ್ರಿದಿ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಮುಂದೆ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಕೂಡ ನಿಸ್ಸಹಾಯಕವಾಗಿದೆ. ಏಷ್ಯಾ ಕಪ್ ಆಯೋಜನೆಯ ವಿಷಯದಲ್ಲಿ ಐಸಿಸಿ ಏನೂ ಮಾಡಲು ಸಾಧ್ಯವಿಲ್ಲ ಎಂದು ಪಾಕಿಸ್ತಾನದ ಮಾಜಿ ಆಟಗಾರ ಶಾಹೀದ್ ಆಫ್ರಿದಿ ಹೇಳಿದ್ದಾರೆ.

ಇದೇ ವರ್ಷ ಪಾಕಿಸ್ತಾನದ ಆತಿಥ್ಯದಲ್ಲಿ ನಡೆಯಲಿರುವ ಏಷ್ಯಾಕಪ್ ಟೂರ್ನಿಯಲ್ಲಿ ಆಡಲು ಬಿಸಿಸಿಐ ನಿರಾಕರಿಸಿದೆ. ಭಾರತದಲ್ಲಿ ನಡೆಯಲಿರುವ ಏಕದಿನ ವಿಶ್ವಕಪ್ ಟೂರ್ನಿಯಿಂದ ಹಿಂದೆ ಸರಿಯುವುದಾಗಿ ಪಾಕ್ ಕ್ರಿಕೆಟ್ ಮಂಡಳಿಯ ಅಧ್ಯಕ್ಷರೂ ಎಚ್ಚರಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ಆಫ್ರಿದಿ, 'ಈ ವಿಷಯದಲ್ಲಿ ಐಸಿಸಿಯ ಪಾತ್ರ ಬಹಳ ಮಹತ್ವದ್ದು. ಆದರೆ ಬಿಸಿಸಿಐ ಮುಂದೆ ಐಸಿಸಿಯು ಏನೂ ಮಾಡಲು ಸಾಧ್ಯವಿಲ್ಲ' ಎಂದು ಸಮಾ ಟಿ.ವಿಗೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ.

'ಯಾರೇ ಆಗಲಿ ತಮ್ಮ ಸ್ವಂತ ಬಲದ ಮೇಲೆ ನಿಲ್ಲದಿದ್ದರೆ ಇಂತಹ ವಿಷಯಗಳಲ್ಲಿ ನಿರ್ಣಾಯಕರಾಗಿ ಹೊರಹೊಮ್ಮುವುದು ಕಷ್ಟ. ಬಿಸಿಸಿಐ ಸರ್ವರೀತಿಯಲ್ಲಿಯೂ ಬಲಾಢ್ಯವಾಗಿ ಬೆಳೆದಿದೆ' ಎಂದಿದ್ದಾರೆ.



ಶಾಹೀದ್ ಆಫ್ರಿದಿ

ಟೆನಿಸ್: ಕ್ವಾರ್ಟರ್ ಫೈನಲ್‌ಗೆ ನಗಾಲ್

ಚೆನ್ನೈ (ಪಿಟಿಐ): ಮೊದಲ ಸೆಟ್ ಸೋತರೂ ಪುಟಿದೆದ್ದು ನಿಂತ ಸುಮಿತ್ ನಗಾಲ್ ಅವರು ಚೆನ್ನೈ ಓಪನ್ ಎಟಿಪಿ ಚಾಲೆಂಜರ್ ಟೆನಿಸ್ ಟೂರ್ನಿಯ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಗುರುವಾರ ನಡೆದ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ ನಗಾಲ್ 3-6, 6-2, 6-0 ರಲ್ಲಿ ಚೀನಾ ತೈಪೆಯ ಜೇಸನ್ ಜಾಂಗ್ ಅವರನ್ನು ಮಣಿಸಿದರು.

ಇಲ್ಲಿ ಅರ್ಹತಾ ಸುತ್ತಿನಲ್ಲಿ ಗೆದ್ದು ಬಂದಿದ್ದ ನಗಾಲ್, ಮೊದಲ ಸೆಟ್‌ನಲ್ಲಿ ಎದುರಾಳಿಯ ಸರ್ವ್ ಬ್ರೇಕ್ ಮಾಡಲು ವಿಫಲರಾದರು. ತಮ್ಮ ಎಲ್ಲ ಸರ್ವ್‌ಗಳಲ್ಲಿ ಪಾಯಿಂಟ್ಸ್ ಗಳಿಸಿದ ಜಾಂಗ್ 6-3 ರಲ್ಲಿ ಗೆದ್ದರು.

ಆದರೆ 25 ವರ್ಷದ ನಗಾಲ್ ಎರಡನೇ ಸೆಟ್‌ನಲ್ಲಿ ಲಯ ಕಂಡುಕೊಂಡರು. ತಮ್ಮ ಸರ್ವ್‌ಅನ್ನು ಒಮ್ಮೆ ಕಳೆದುಕೊಂಡರೂ, ಮೂರು ಸಲ ಎದುರಾಳಿಯ ಸರ್ವ್ ಬ್ರೇಕ್ ಮಾಡಿ ಸೆಟ್‌ಅನ್ನು 6-2 ರಲ್ಲಿ ಜಯಿಸಿ ಸಮಬಲ ಸಾಧಿಸಿದರು. ಮೂರನೇ ಸೆಟ್‌ನಲ್ಲಿ ಎದುರಾಳಿಗೆ ಯಾವುದೇ ಗೇಮ್ ಬಿಟ್ಟುಕೊಡದೆ, ಎಂಟರಘಟ್ಟಕ್ಕೆ ಲಗ್ಗೆಯಿಟ್ಟರು.



ನಗಾಲ್ ಸಂಭ್ರಮ –ಪಿಟಿಐ ಚಿತ್ರ

ಎಟಿಪಿ ರ‍್ಯಾಂಕಿಂಗ್‌ನಲ್ಲಿ 506ನೇ ಸ್ಥಾನದಲ್ಲಿರುವ ಭಾರತದ ಆಟಗಾರ ಕ್ವಾರ್ಟರ್ ಫೈನಲ್‌ನಲ್ಲಿ ಬ್ರಿಟನ್‌ನ ಜೇ ಕ್ಲಾರ್ಕ್ ಅವರ ಸವಾಲು ಎದುರಿಸುವರು. ಬ್ರಿಟನ್ ಆಟಗಾರ 3-6, 6-3, 6-4 ರಲ್ಲಿ ಎಂಟನೇ ಶ್ರೇಯಾಂಕದ ಆಟಗಾರ ದಿಮಿತರ್ ಕುಜ್‌ಮನೊವ್ ವಿರುದ್ಧ ಗೆದ್ದರು.

ಜೇಮ್ಸ್ ಡಕ್ವರ್ಥ್ ಅವರು 6-2, 7-6 ರಲ್ಲಿ ಸರ್ಬಿಯಾದ ಹಮದ್ ಮೆಜೆಡೊವಿಚ್ ಅವರನ್ನು ಮಣಿಸಿದರು. ಆಸ್ಟ್ರೇಲಿಯಾದ ಮ್ಯಾಕ್ಸ್ ಪರ್ಸೆಲ್ 7-5, 6-3 ರಲ್ಲಿ ಜೆಕ್ ಗಣರಾಜ್ಯದ ಪೆಟ್ರ್ ನೋಜಾ ವಿರುದ್ಧ ಜಯಿಸಿದರು.

ಸೆಮಿಗೆ ಜೀವನ್- ಶ್ರೀರಾಮ್: ಭಾರತದ ಜೀವನ್ ನೆಡುಂಚೆಳಿಯನ್ ಮತ್ತು ಎನ್. ಶ್ರೀರಾಮ್ ಬಾಲಾಜಿ ಜೋಡಿ ಡಬಲ್ಸ್ ವಿಭಾಗದ ಸೆಮಿಫೈನಲ್ ಪ್ರವೇಶಿಸಿತು.

ಗುರುವಾರ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ಅವರು 7-6, 6-0 ರಲ್ಲಿ ಭಾರತದವರೇ ಆದ ಸುಮಿತ್ ನಗಾಲ್– ಶಶಿಕುಮಾರ್ ಮುಕುಂದ್ ವಿರುದ್ಧ ಗೆದ್ದರು.

ಫುಟ್‌ಬಾಲ್ ದಿಗ್ಗಜ ತುಳಸೀದಾಸ್ ನಿಧನ

ರೋಮ್ ಒಲಿಂಪಿಕ್ಸ್‌ನಲ್ಲಿ ಹಂಗರಿ ಎದುರು ಗೋಲು ಗಳಿಸಿದ್ದ ಆಟಗಾರ

ಕೋಲ್ಕತ್ತ (ಪಿಟಿಐ): ಭಾರತ ಫುಟ್‌ಬಾಲ್ ಕ್ರೀಡೆಯ ದಿಗ್ಗಜ ಆಟಗಾರರಲ್ಲಿ ಒಬ್ಬರಾದ ಒಲಿಂಪಿಯನ್ ತುಳಸೀದಾಸ್ ಬಲರಾಮ್ ಗುರುವಾರ ನಿಧನರಾದರು.

85 ವರ್ಷದ ಅವರು ಕಳೆದ ಕೆಲ ಸಮಯದಿಂದ ಅನಾರೋಗ್ಯದಿಂದ ಬಳಲುತ್ತಿದ್ದರು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಅವಿವಾಹಿತರಾಗಿದ್ದ ತುಳಸೀದಾಸ್, ಪಶ್ಚಿಮ ಬಂಗಾಳದ ಉತ್ತರ್‌ಪಾಢಾದಲ್ಲಿ ನೆಲೆಸಿದ್ದರು.

1962ರ ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನ ಗೆದ್ದಿದ್ದ ಭಾರತ ತಂಡದ ಸದಸ್ಯರಾಗಿದ್ದ ಅವರು 1960ರ ರೋಮ್ ಒಲಿಂಪಿಕ್ಸ್‌ನಲ್ಲೂ ಪಾಲ್ಗೊಂಡಿದ್ದರು. 1950 ಮತ್ತು 60ರ ದಶಕದಲ್ಲಿ ಫುಟ್‌ಬಾಲ್ ದಂತಕತೆ ಚುನಿ ಗೋಸ್ವಾಮಿ ಮತ್ತು ಪಿ.ಕೆ.ಬ್ಯಾನರ್ಜಿ ಅವರೊಂದಿಗೆ ಆಡಿದ್ದರು.

ರೋಮ್ ಒಲಿಂಪಿಕ್ ಕೂಟದಲ್ಲಿ 'ಗ್ರೂಪ್ ಆಫ್ ಡೆತ್'ನಲ್ಲಿ ಸ್ಥಾನ ಪಡೆದಿದ್ದ ಭಾರತ, ಮೊದಲ ಪಂದ್ಯದಲ್ಲಿ 1–2 ರಲ್ಲಿ ಹಂಗರಿ ಎದುರು ಸೋತಿತ್ತು. ಭಾರತ ತಂಡದ ಏಕೈಕ ಗೋಲನ್ನು ತುಳಸೀದಾಸ್ ಅವರು 79ನೇ ನಿಮಿಷದಲ್ಲಿ ಗಳಿಸಿದ್ದರು. ಪೆರು ವಿರುದ್ಧದ ಪಂದ್ಯದಲ್ಲೂ ಗೋಲು ಗಳಿಸಿದ್ದರು. ಫ್ರಾನ್ಸ್ ಎದುರಿನ ಹಣಾಹಣಿಯಲ್ಲೂ ಗಮನ ಸೆಳೆದಿದ್ದರು.

ಸೆಂಟರ್ ಫಾರ್ವರ್ಡ್ ಮತ್ತು ಲೆಫ್ಟ್ ವಿಂಗರ್ ಆಗಿ ಆಡುತ್ತಿದ್ದ ಅವರು ಚೆಂಡಿನ ಮೇಲೆ ಅದ್ಭುತ ನಿಯಂತ್ರಣ, ಆಕರ್ಷಕ ಡ್ರಿಬ್ಲಿಂಗ್ ಮತ್ತು ಚುರುಕಿನ ಪಾಸ್‌ಗಳನ್ನು ನೀಡುವ ಕೌಶಲ ಹೊಂದಿದ್ದರು.



ಚುನಿ ಗೋಸ್ವಾಮಿ (ಎಡದಿಂದ), ಪಿ.ಕೆ.ಬ್ಯಾನರ್ಜಿ ಅವರೊಂದಿಗೆ ತುಳಸೀದಾಸ್

1955 ರಿಂದ 1963ರ ವರೆಗೆ ಆಡಿದ್ದ ಅವರು ಕ್ಷಯರೋಗಕ್ಕೆ ತುತ್ತಾಗಿ ತಮ್ಮ 27ನೇ ವಯಸ್ಸಿನಲ್ಲೇ ಫುಟ್‌ಬಾಲ್‌ನಿಂದ ದೂರವಾಗಿದ್ದರು.

1956 ರಲ್ಲಿ ಮೆಲ್ಬರ್ನ್ ಒಲಿಂಪಿಕ್ಸ್‌ನಲ್ಲಿ ಅಂದಿನ ಯುಗೊಸ್ಲಾವಿಯಾ ವಿರುದ್ಧದ ಪಂದ್ಯದೊಂದಿಗೆ ರಾಷ್ಟ್ರೀಯ ತಂಡದಲ್ಲಿ ಪದಾರ್ಪಣೆ ಮಾಡಿದ್ದರು. 36 ಪಂದ್ಯಗಳಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ್ದರಲ್ಲದೆ, 10 ಗೋಲುಗಳನ್ನು ಗಳಿಸಿದ್ದರು. ಏಷ್ಯನ್ ಗೇಮ್ಸ್‌ನಲ್ಲಿ ನಾಲ್ಕು ಸಲ ಚೆಂಡನ್ನು ಗುರಿ ಸೇರಿಸಿದ್ದರು.

1958ರ ಏಷ್ಯನ್ ಕ್ರೀಡಾಕೂಟ ಮತ್ತು 1959ರ ಮರ್ಡೆಕಾ ಕಪ್ ಟೂರ್ನಿಯಲ್ಲಿ ಭಾಗವಹಿಸಿದ್ದರು. ಈ ಎರಡೂ ಕೂಟಗಳಲ್ಲಿ ಭಾರತ ತಂಡ ರನ್ನರ್ಸ್ ಅಪ್ ಆಗಿತ್ತು.

ದೇಸಿ ಫುಟ್‌ಬಾಲ್‌ನಲ್ಲಿ ಹೈದರಾಬಾದ್ ತಂಡದ ಪರ ನಾಲ್ಕು ಸಲ ಹಾಗೂ ಬಂಗಾಳ ತಂಡದ ಪರ ಮೂರು ಸಲ ಸಂತೋಷ್ ಟ್ರೋಫಿ ಜಯಿಸಿದ್ದರು. 1962 ರಲ್ಲಿ ಬಂಗಾಳ ತಂಡ, ತುಳಸೀದಾಸ್ ನಾಯಕತ್ವದಲ್ಲಿ ಚಾಂಪಿಯನ್ ಆಗಿತ್ತು.

ನಿವೃತ್ತಿಯ ಬಳಿಕ ಅವರು ವಿವಿಧ ತಂಡಗಳಿಗೆ ಕೋಚ್ ಆಗಿ ಕಾರ್ಯನಿರ್ವಹಿಸಿದ್ದರು.

ಮುಖ್ಯಾಂಶಗಳು

- 1962ರ ಏಷ್ಯನ್ ಕ್ರೀಡಾಕೂಟದಲ್ಲಿ ಆಡಿದ್ದರು
- 36 ಪಂದ್ಯಗಳಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ್ದರು

ಬೆಂಗಳೂರು ರೇಸ್

ಡೈನಾಮಿಕ್ ಫೋರ್ಸ್ ಗೆಲ್ಲುವ ನಿರೀಕ್ಷೆ

ಬೆಂಗಳೂರು ಜುವೆನೈಲ್ ಮಿಲಿಯನ್ ಶುಕ್ರವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಡೈನಾಮಿಕ್ ಫೋರ್ಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಸ್ಲಿಂಗ್ ಶಾಟ್ 12, ಕ್ಲಾಕ್‌ನರ್ 2, ಟಾಪ್ ಡ್ಯಾನ್ಸರ್ 4
2ನೇ ರೇಸ್: ರೀಗಲ್ ಪೋರ್ಸ್ 11, ಮೆಮೊರಬಲ್ ಟೈಮ್ 2, ರೊರಿಟೊ 4
3ನೇ ರೇಸ್: ಟ್ರಯಾಂಫಾಂಟ್ 4, ಸ್ಟಾರ್ಮಿ ಓಷನ್ 1, ರೋಮನ್ ಪವರ್ 2
4ನೇ ರೇಸ್: ಅಹರ್ನೆ 9, ಡೆವಿಲ್ಸ್ ಮ್ಯಾಜಿಕ್ 6, ಮಾಂಟೆಲಿನಾ 8
5ನೇ ರೇಸ್: ಡೈನಾಮಿಕ್ ಫೋರ್ಸ್ 2, ಸಸ್ಸಿ 4
6ನೇ ರೇಸ್: ಫೋರ್ ವ್ಹೀಲ್ ಡ್ರೈವ್ 4, ಪೆಲುಚೆ 6, ಫ್ಲೈಯಿಂಗ್ ಕ್ವೆಸ್ಟ್ 3
7ನೇ ರೇಸ್: ಡ್ರಾಗನ್ಸ್ ಗೋಲ್ಡ್ 1, ಸೇಕ್ರೆಡ್ ಕ್ರಿಯೇಟರ್ 9, ಹೋಪ್ ಐಲ್ಯಾಂಡ್ 4

ಉತ್ತಮ ಬೆಟ್: ಡ್ರಾಗನ್ಸ್ ಗೋಲ್ಡ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಬ್ಯಾಡ್ಮಿಂಟನ್: ಕ್ವಾರ್ಟರ್ ಫೈನಲ್ ಪ್ರವೇಶಿಸಿದ ಭಾರತ


ದುಬೈ (ಪಿಟಿಐ): ಭಾರತ ತಂಡವು ಏಷ್ಯಾ ಮಿಕ್ಸ್‌ಡ್ ತಂಡ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

ಗುರುವಾರ ನಡೆದ ಪಂದ್ಯದಲ್ಲಿ ಮಲೇಷ್ಯಾ ತಂಡವನ್ನು 3-1 ರಲ್ಲಿ ಮಣಿಸಿದ ಭಾರತ ತಂಡ, 'ಬಿ' ಗುಂಪಿನಲ್ಲಿ ಅಗ್ರಸ್ಥಾನ ಪಡೆದುಕೊಂಡಿತು.

ಸಿಂಗಲ್ಸ್ ಪಂದ್ಯಗಳನ್ನು ಗೆದ್ದ ಪಿ.ವಿ. ಸಿಂಧು ಮತ್ತು ಎಚ್.ಎಸ್.ಪ್ರಣಯ್ ಅವರು ಭಾರತ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ತ್ರಿಷಾ ಜೋಲಿ ಮತ್ತು ಗಾಯತ್ರಿ ಗೋಪಿಚಂದ್ ಅವರ ಮಹಿಳೆಯರ ಡಬಲ್ಸ್ ವಿಭಾಗದಲ್ಲಿ ಗೆದ್ದರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,015
ಇಂದಿನ ಅಂತ್ಯ	18,035
▲	20
ದಿನದ ಕನಿಷ್ಠ	18,134

ವಿನಿಮಯ ದರ

$ ಡಾಲರ್	82.68
£ ಪೌಂಡ್	99.61
€ ಯುರೊ	88.47
¥ ಯೆನ್ (100ಕ್ಕೆ)	61.63

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹450
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹453

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1700(1690)
ಸೋಯಾ (ರಿಫೈನ್ಡ್)	₹1165(1150)
ಸೂರ್ಯಕಾಂತಿ (ರಿಫೈನ್ಡ್)	₹1170(1170)
ಪಾಮೋಲಿನ್	₹965(955)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1,000-1,300
ಮಧ್ಯಮ	₹600-1,000
ಸಣ್ಣ	₹400-600

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹140.50
ಆರ್‌ಎಸ್‌ಎಸ್-5	₹135
ಗುಡ್ ಲಾಟ್	₹130

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-450
ನಡುಗೋಲು	550-600
ರಾಶಿ	650-700
ರಾಶಿ ಉತ್ತಮ	650-700
ಜರಡಿ	800- 900
ಹೆರಕಿದ್ದು	1,250-1,300
ಹಸಿರು ಸಾಧಾರಣ	900-1,000
ಹಸಿರು ಉತ್ತಮ	1,300-1,400
ಹಸಿರು ಅತಿ ಉತ್ತಮ	1,500-1,550
ಕಾಳು ಮೆಣಸು	- 490
ಅಡಿಕೆ	
ಬಂಟ್ವಾಳ	
ಕೋಕ	12,500-25,000
ಹೊಸತು	22,500-40,000
ಹಳತು	48,000-54,500
ಚನ್ನಗಿರಿ	
ರಾಶಿ	43,599-46,039
ಕಾರ್ಕಳ	
ಹೊಸತು	30,000-40,000
ಹಳತು	40,000-54,500
ಕುಮಟಾ	
ಚಿಪ್ಪು	22,511-31,979
ಕೋಕ	17,099-29,199
ಹಳೆಚಾಲಿ	36,000-38,419
ಹೊಸಚಾಲಿ	32,789-35,690
ಕುಂದಾಪುರ	
ಹಳೆಚಾಲಿ	40,000-49,500
ಹೊಸಚಾಲಿ	35,000-37,500
ಪುತ್ತೂರು	
ಹೊಸತು	32,000-37,500
ಸಾಗರ	
ಬಿಳಿಗೋಟು	18,599-30,569
ಚಾಲಿ	30,099-37,321
ಕೋಕ	17,199-32,299
ಕೆಂಪುಗೋಟು	20,899-36,999
ರಾಶಿ	33,199-46,089
ಸಿಪ್ಪೆಗೋಟು	5,099-19,269
ಶಿವಮೊಗ್ಗ	
ಬೆಟ್ಟೆ	40,505-52,600
ಗೊರಬಲು	17,000-33,579
ರಾಶಿ	36,899-45,199
ಸರಕು	47,109-80,610
ಸಿದ್ದಾಪುರ	
ಬಿಳಿಗೋಟು	26,539-30,219
ಚಾಲಿ	35,099-37,580
ಕೋಕ	25,389-31,599
ಹೊಸಚಾಲಿ	32,000-35,699
ಕೆಂಪುಗೋಟು	30,089-32,419
ರಾಶಿ	42,509-45,399
ತಟ್ಟಿಬೆಟ್ಟೆ	36,699-42,109
ಶಿರಸಿ	
ಬೆಟ್ಟೆ	37,019-42,299
ಬಿಳಿಗೋಟು	23,699-33,686
ಚಾಲಿ	33,890-40,639
ಕೆಂಪುಗೋಟು	29,399-36,100
ರಾಶಿ	41,569-46,199
ಯಲ್ಲಾಪುರ	
ಆಪಿ	50,109-54,799
ಬಿಳಿಗೋಟು	22,012-32,012
ಕೋಕ	16,299-30,212
ಹಳೆಚಾಲಿ	38,099-40,666
ಹೊಸಚಾಲಿ	33,612-36,799
ಕೆಂಪುಗೋಟು	26,189-35,012
ರಾಶಿ	42,989-48,869
ತಟ್ಟಿಬೆಟ್ಟೆ	37,899-44,519

ಕಾಫಿ

(50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15,300	15350	14950	183.55 ಸೆಂಟ್ಸ್
ಎಸಿ	7340	7400	6800	
ಆರ್‌ಪಿ	10,400	10400	9950	ಲಂಡನ್
ಆರ್‌ಸಿ	5100	192	4950	2067 ಡಾಲರ್ಸ್

ಕೊಬ್ಬರಿ ಧಾರಣೆ

ಕೆ.ಆರ್.ಪೇಟೆ (ಇತರೆ) ₹8250-8250

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹401-655
ದ್ವಿತಳಿ (ಬಿ.ವಿ) ₹222-782

'ಡಿ.ಬಿ ಪವರ್ ಸ್ವಾಧೀನ ಗಡುವು ಅಂತ್ಯ'

ನವದೆಹಲಿ (ಪಿಟಿಐ): ಡಿ.ಬಿ ಪವರ್ ಕಂಪನಿಯ ಕಲ್ಲಿದ್ದಲು ಆಧಾರಿತ ವಿದ್ಯುತ್ ಉತ್ಪಾದನಾ ಘಟಕಗಳನ್ನು ಖರೀದಿಸಲು ಅದಾನಿ ಪವರ್ ಲಿಮಿಟೆಡ್‌ಗೆ ಇದ್ದ ಗಡುವು ಮುಗಿದಿದ್ದು, ಸ್ವಾಧೀನ ಪ್ರಕ್ರಿಯೆ ನಡೆದಿಲ್ಲ. ಅದಾನಿ ಪವರ್ ಕಂಪನಿಯು ಡಿ.ಬಿ ಪವರ್ ಕಂಪನಿಯನ್ನು ₹7,017 ಕೋಟಿಗೆ ಸ್ವಾಧೀನ ಮಾಡಿಕೊಳ್ಳಬೇಕಿತ್ತು.

ಗಡುವು ಮುಗಿದಿರುವ ವಿಚಾರವನ್ನು ಅದಾನಿ ಪವರ್ ಲಿಮಿಟೆಡ್, ಷೇರುಪೇಟೆಗೆ ತಿಳಿಸಿದೆ. ಡಿ.ಬಿ ಪವರ್ ಲಿಮಿಟೆಡ್ ಅನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ಒಪ್ಪಿರುವುದಾಗಿ ಅದಾನಿ ಪವರ್ 2022ರ ಆಗಸ್ಟ್‌ನಲ್ಲಿ ಷೇರುಪೇಟೆಗೆ ತಿಳಿಸಿತ್ತು. ಡಿ.ಬಿ ಪವರ್ ಕಂಪನಿಯು ಚತ್ತೀಸಗಢದಲ್ಲಿ ಉಷ್ಣವಿದ್ಯುತ್ ಸ್ಥಾವರವನ್ನು ಹೊಂದಿದೆ.

ಈ ವಿಚಾರವಾಗಿ ಅದಾನಿ ಪವರ್ ಕಡೆಯಿಂದ ಪ್ರತಿಕ್ರಿಯೆ ಸಿಕ್ಕಿಲ್ಲ. ಅದಾನಿ ಸಮೂಹದ ವಿರುದ್ಧ ಅಮೆರಿಕದ ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯು, ಷೇರು ಬೆಲೆಯ ಮೇಲೆ ಕೃತಕವಾಗಿ ಪ್ರಭಾವ ಬೀರಿದ ಹಾಗೂ ಲೆಕ್ಕಪತ್ರಗಳ ಅಕ್ರಮದಲ್ಲಿ ತೊಡಗಿದ ಆರೋಪ ಹೊರಿಸಿದ ನಂತರದಲ್ಲಿ ಈ ಬೆಳವಣಿಗೆ ನಡೆದಿದೆ.

ಆರಂಭದ ಒಪ್ಪಂದದ ಪ್ರಕಾರ ಸ್ವಾಧೀನವು 2022ರ ಅಕ್ಟೋಬರ್ 31ಕ್ಕೆ ಮೊದಲು ಪೂರ್ಣಗೊಳ್ಳಬೇಕಿತ್ತು. ನಂತರ ಈ ಗಡುವನ್ನು ನಾಲ್ಕು ಬಾರಿ ವಿಸ್ತರಿಸಲಾಗಿತ್ತು. ಡಿ.ಬಿ ಪವರ್ ಸ್ವಾಧೀನದ ಮೂಲಕ ಅದಾನಿ ಪವರ್ ಕಂಪನಿಯ ಕಾರ್ಯಚಟುವಟಿಕೆ ವಿಸ್ತರಣೆ ಕಾಣುವ ನಿರೀಕ್ಷೆ ಇತ್ತು.

ಒಪ್ಪಂದವನ್ನು ಕಾರ್ಯರೂಪಕ್ಕೆ ತರಲು ಆಗದಿರುವುದಕ್ಕೆ ಕಾರಣ ಏನು ಎಂಬುದನ್ನು ಅದಾನಿ ಪವರ್ ತಿಳಿಸಿಲ್ಲ. ಮುಂದೊಂದು ದಿನ ಈ ಒಪ್ಪಂದವು ಮತ್ತೆ ಜೀವ ಪಡೆಯಲಿದೆಯೇ ಎಂಬುದನ್ನು ಕೂಡ ತಿಳಿಸಿಲ್ಲ.

'ಏರ್ ಇಂಡಿಯಾದಿಂದ 840 ವಿಮಾನಗಳ ಖರೀದಿಗೆ ಒಪ್ಪಂದ'

ನವದೆಹಲಿ (ಪಿಟಿಐ): ಟಾಟಾ ಸಮೂಹದ ಒಡೆತನದ ಏರ್ ಇಂಡಿಯಾ ಕಂಪನಿಯು ಏರ್‌ಬಸ್ ಹಾಗೂ ಬೋಯಿಂಗ್ ಕಂಪನಿಗಳಿಂದ ಒಟ್ಟು 840 ವಿಮಾನಗಳ ಖರೀದಿಗೆ ಒಪ್ಪಂದ ಮಾಡಿಕೊಂಡಿದೆ ಎಂದು ಕಂಪನಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಇದರಲ್ಲಿ 470 ವಿಮಾನಗಳನ್ನು ಏರ್ ಇಂಡಿಯಾ ಖರೀದಿ ಮಾಡುವುದು ಖಚಿತ. ಇನ್ನುಳಿದ 370 ವಿಮಾನಗಳ ಖರೀದಿಯನ್ನು ಕಂಪನಿಯು ಒಂದು ಆಯ್ಕೆಯನ್ನಾಗಿ ಇರಿಸಿಕೊಂಡಿದೆ. ಏರ್ ಇಂಡಿಯಾ ಕಂಪನಿಯು ಏರ್‌ಬಸ್‌ನಿಂದ 250 ವಿಮಾನಗಳನ್ನು ಹಾಗೂ ಬೋಯಿಂಗ್‌ನಿಂದ 220 ವಿಮಾನಗಳನ್ನು ಖರೀದಿಸುವುದು ಖಚಿತವಾಗಿದೆ.

'370 ವಿಮಾನಗಳ ಖರೀದಿಯು ಒಂದು ಆಯ್ಕೆಯಾಗಿ ಇದೆ' ಎಂದು ಕಂಪನಿಯ ಮುಖ್ಯ ವಾಣಿಜ್ಯ ಮತ್ತು ಪರಿವರ್ತನೆ ಅಧಿಕಾರಿ ನಿಪುಣ್ ಅಗರ್ವಾಲ್ ಹೇಳಿದ್ದಾರೆ.

ಏರ್ ಇಂಡಿಯಾ ಕಂಪನಿಯು ಕಡೆಯ ಬಾರಿ ವಿಮಾನ ಖರೀದಿ ಒಪ್ಪಂದ ಮಾಡಿಕೊಂಡಿದ್ದು 2005ರಲ್ಲಿ. ಆಗ ಕಂಪನಿಯು ಸರ್ಕಾರದ ಅಧೀನದಲ್ಲಿತ್ತು. ಆ ಸಂದರ್ಭದಲ್ಲಿ ಅದು 111 ವಿಮಾನಗಳನ್ನು (ಬೋಯಿಂಗ್‌ನಿಂದ 68 ಹಾಗೂ ಏರ್‌ಬಸ್‌ನಿಂದ 43) ಖರೀದಿಸಿತ್ತು.

ಮುಂಬೈ ಧಾರಣೆ

ಶೇಂಗಾ

16-2-2023

ಜಾವಾ 70/80(ಹೊಸ)	11800-11850
ಜಾವಾ 80/90(ಹೊಸ)	11000-11050
ದಪ್ಪ ಮಧ್ಯಪ್ರದೇಶ(ಹೊಸ)	11050-11150
ದಪ್ಪ ಗುಜರಾತ್(ಹೊಸ)	11850-11950

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1710(1700)
ಒಂದು ವಾರದ ಡೆಲಿವರಿ	1705(1695)
ಸೋಯಾ ಕಚ್ಚಾ	1070(1060)
ಪಾಮ್ ವಾರದ ಡೆಲಿವರಿ	963(953)
ಸೂರ್ಯಕಾಂತಿ ಎಣ್ಣೆ ಕಚ್ಚಾ	1060(1060)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
56150(56200)
ಬೆಳ್ಳಿ ಕೆ.ಜಿ 65350(65400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

'ಅದಾನಿ' ಸ್ಪಷ್ಟನೆ

ನವದೆಹಲಿ (ಪಿಟಿಐ): ಅದಾನಿ ಎಂಟರ್‌ಪ್ರೈಸಸ್ ಕಂಪನಿಯು 'ನಾವು ಲೆಕ್ಕಪತ್ರಗಳ ಪರಿಶೀಲನೆಗೆ ಗ್ರ್ಯಾಂಟ್ ಥಾರ್ನ್‌ಟನ್ ಸಂಸ್ಥೆಯನ್ನು ನೇಮಕ ಮಾಡಿಕೊಂಡಿದ್ದೇವೆ ಎನ್ನುವ ವರದಿ ನಿಜವಲ್ಲ' ಎಂಬ ಸ್ಪಷ್ಟನೆ ನೀಡಿದೆ. 'ಇದು ಮಾರುಕಟ್ಟೆಯ ಗಾಳಿಸುದ್ದಿಯಂತೆ ಕಾಣುತ್ತಿದೆ' ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ. ಅದಾನಿ ಸಮೂಹವು ಗ್ರ್ಯಾಂಟ್ ಥಾರ್ನ್‌ಟನ್ ಸಂಸ್ಥೆಯನ್ನು ಲೆಕ್ಕ ಪರಿಶೋಧನೆಗೆ ನೇಮಕ ಮಾಡಿದೆ ಎಂದು ಮೂಲಗಳು ಹೇಳಿದ್ದವು.

ಹೀರೊ: ಹೊಸ ಸ್ಕೂಟರ್ ಮಾರುಕಟ್ಟೆಗೆ

ಬೆಂಗಳೂರು: ವಿಶ್ವದ ಅತಿದೊಡ್ಡ ದ್ವಿಚಕ್ರ ವಾಹನ ತಯಾರಿಕಾ ಕಂಪನಿ ಎಂಬ ಹೆಗ್ಗಳಿಕೆಯನ್ನು ಹೊತ್ತಿರುವ ಹೀರೊ ಮೊಟೊಕಾರ್ಪ್, 110 ಸಿಸಿ ಸಾಮರ್ಥ್ಯದ 'ಜೂಮ್' ಹೆಸರಿನ ಸ್ಕೂಟರ್ ಅನಾವರಣ ಮಾಡಿದೆ.

ಈ ಸ್ಕೂಟರ್ ಸಮಕಾಲೀನ ವಿನ್ಯಾಸ ಹಾಗೂ ಅಸಾಧಾರಣವಾದ ಕಾರ್ಯಕ್ಷಮತೆಯನ್ನು ಹೊಂದಿದೆ ಎಂದು ಕಂಪನಿ ಹೇಳಿದೆ. ದೊಡ್ಡದಾದ ಹಾಗೂ ಅಗಲವಾದ ಟೈರ್‌ಗಳು, ಚುರುಕಾದ ಆ್ಯಕ್ಸಲರೇಷನ್ (ವೇಗೋತ್ಕರ್ಷ) ಈ ಸ್ಕೂಟರ್‌ನಲ್ಲಿ ಇವೆ.

ಹೀರೊ ಇಂಟೆಲಿಜೆಂಟ್ ಕಾರ್ನರಿಂಗ್ ಲೈಟ್ ಸೌಲಭ್ಯವು ರಾತ್ರಿಯ ಸಂಚಾರದಲ್ಲಿ ಹೆಚ್ಚಿನ ಸುರಕ್ಷತೆಯನ್ನು ಖಾತರಿಪಡಿಸುತ್ತದೆ ಎಂದು ಕಂಪನಿ ಹೇಳಿದೆ. ಸ್ಕೂಟರ್‌ನ ಪರಿಚಯಾತ್ಮಕ ಎಕ್ಸ್ ಷೋರೂಂ ಬೆಲೆಯು ₹ 68,599ರಿಂದ ಶುರುವಾಗುತ್ತದೆ.



ಹೀರೊ ಮೊಟೊಕಾರ್ಪ್‌ನ ಹೊಸ ಜೂಮ್ ಸ್ಕೂಟರ್

'ಈ ಮಾದರಿಯ ಮೂಲಕ ನಾವು ಸ್ಕೂಟರ್ ವಿಭಾಗವನ್ನು ಹೊಸದಾಗಿ ವ್ಯಾಖ್ಯಾನಿಸಲು ಮುಂದಾಗುತ್ತಿದ್ದೇವೆ. ದೇಶದ ಯುವಕರನ್ನು ನಾವು ಬಹಳ ಚೆನ್ನಾಗಿ ಅರ್ಥ ಮಾಡಿಕೊಂಡಿರುವುದರ ಫಲವಾಗಿ ಈ ಸ್ಕೂಟರ್ ಸಿದ್ಧವಾಗಿದೆ' ಎಂದು ಕಂಪನಿಯ ಮುಖ್ಯ ಬೆಳವಣಿಗೆ ಅಧಿಕಾರಿ ರಂಜೀವಜಿತ್ ಸಿಂಗ್ ಹೇಳಿದ್ದಾರೆ.

ಯುಪಿಐ ಜೊತೆ ಕ್ರೆಡಿಟ್ ಕಾರ್ಡ್ ಜೋಡಿಸಲು ಅವಕಾಶ

ಮುಂಬೈ (ಪಿಟಿಐ): ರುಪೇ ಕ್ರೆಡಿಟ್ ಕಾರ್ಡ್ ಅನ್ನು ಏಕೀಕೃತ ಪಾವತಿ ವ್ಯವಸ್ಥೆಯಲ್ಲಿ (ಯುಪಿಐ) ಬಳಕೆ ಮಾಡಲು ಎಚ್‌ಡಿಎಫ್‌ಸಿ ಬ್ಯಾಂಕ್ ಅವಕಾಶ ಕಲ್ಪಿಸಿದೆ. ಈ ಅವಕಾಶ ನೀಡಿರುವ ಮೊದಲ ಖಾಸಗಿ ಬ್ಯಾಂಕ್ ಇದು.

ಯುಪಿಐ ಐಡಿ ಜೊತೆ ಉಳಿತಾಯ ಖಾತೆಯನ್ನು ಮಾತ್ರ ಜೋಡಿಸಲು ಅವಕಾಶ ಇತ್ತು. ಉಳಿತಾಯ ಖಾತೆಯಿಂದ ಹಣ ಪಾವತಿ ಮಾಡಲಾಗುತ್ತಿತ್ತು. ಆದರೆ, ಇನ್ನು ಮುಂದೆ ಎಚ್‌ಡಿಎಫ್‌ಸಿ ಬ್ಯಾಂಕ್‌ನ ರುಪೇ ಕ್ರೆಡಿಟ್ ಕಾರ್ಡ್‌ಗಳನ್ನು ಯುಪಿಐ ಐಡಿ ಜೊತೆ ಜೋಡಿಸಬಹುದು. ಯುಪಿಐ ಮೂಲಕ ಕ್ರೆಡಿಟ್ ಕಾರ್ಡ್‌ಗಳಿಂದ ಪಾವತಿ ಮಾಡಬಹುದು.

ಬ್ಯಾಂಕ್‌ನ ಈ ನಡೆಯು ಗ್ರಾಹಕರಿಗೆ ಹೆಚ್ಚಿನ ಆಯ್ಕೆಗಳನ್ನು ನೀಡಲಿದೆ ಎಂದು ಪಾವತಿಗಳ ಮುಖ್ಯಸ್ಥ ಪರಾಗ್ ರಾವ್ ಹೇಳಿದ್ದಾರೆ.

ವೋಚರ್‌ಗಳು ಸರಕು–ಸೇವಾ ವ್ಯಾಪ್ತಿಗೆ ಒಳಪಡುವುದಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವೋಚರ್‌ಗಳು ಸರಕು ಮತ್ತು ಸೇವೆಗಳ ಅಡಿಯಲ್ಲಿ ಬರುವುದಿಲ್ಲವಾದ ಕಾರಣ, ವೋಚರ್ ನೀಡಿಕೆ ಮತ್ತು ಪೂರೈಕೆಗೆ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಅನ್ವಯ ಆಗುವುದಿಲ್ಲ' ಎಂದು ಕರ್ನಾಟಕ ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಬೆಂಗಳೂರಿನ ಪ್ರೀಮಿಯರ್ ಸೇಲ್ಸ್ ಪ್ರಮೋಷನ್ ಪ್ರೈವೇಟ್ ಲಿಮಿಟೆಡ್ ಕಂಪನಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿಗಳಾದ ಪಿ.ಎಸ್.ದಿನೇಶ್ ಕುಮಾರ್ ಹಾಗೂ ಟಿ.ಜಿ.ಶಿವಶಂಕರೇಗೌಡ ಅವರಿದ್ದ ವಿಭಾಗೀಯ ನ್ಯಾಯಪೀಠ ಮಾನ್ಯ ಮಾಡಿದೆ.

'ಗಿಫ್ಟ್ ಮತ್ತು ಕ್ಯಾಷ್ ಬ್ಯಾಕ್ ವೋಚರ್‌ಗಳೂ ಸೇರಿದಂತೆ ವೋಚರ್‌ಗಳು ಸಾಧನಗಳಾಗಿವೆ. ಸರಕು ಮತ್ತು ಸೇವೆಗಳ ಪರಿಗಣನೆಗೆ ಅವುಗಳನ್ನು ಒಪ್ಪಿಕೊಳ್ಳಲಾಗುತ್ತದೆ. ಅವುಗಳು ತಮ್ಮದೇ ಆದ ಅಂತರ್ಗತ ಮೌಲ್ಯ ಹೊಂದಿರುವುದಿಲ್ಲ. ಕೇಂದ್ರ ಸರಕು ಮತ್ತು ಸೇವಾ ತೆರಿಗೆ ಕಾಯ್ದೆ ((ಸಿಜಿಎಸ್‌ಟಿ) ಅಡಿ ವೋಚರ್‌ಗಳು ಹಣದ ವಿಭಾಗದಲ್ಲಿ ಬಂದರೂ ಅವುಗಳನ್ನು ಕಾಯ್ದೆ ಸರಕು ಮತ್ತು ಸೇವಾ ಕಾಯ್ದೆಯ ವ್ಯಾಖ್ಯಾನದಿಂದ ಹೊರಗೆ ಇರಿಸಲಾಗಿದೆ' ಎಂದು ನ್ಯಾಯಪೀಠ ಹೇಳಿದೆ.

'ಅರ್ಜಿದಾರ ಸಂಸ್ಥೆಯು ಪೂರೈಸುವ ವೋಚರ್‌ಗಳನ್ನು ಕೇಂದ್ರ ಸರಕು ಮತ್ತು ಸೇವಾ ತೆರಿಗೆ ಕಾಯ್ದೆಯ (ಸಿಜಿಎಸ್‌ಟಿ) ಕಲಂ 12(5)ರ ಅಡಿ ಸರಕು ಎಂದು ಪರಿಗಣಿಸಿ ತೆರಿಗೆ ವಿಧಿಸಲಾಗುತ್ತದೆ' ಎಂದು ಕರ್ನಾಟಕ ಅಡ್ವಾನ್ಸ್ ರೂಲಿಂಗ್ ಪ್ರಾಧಿಕಾರವು (ಎಎಆರ್) ಆದೇಶಿಸಿತ್ತು. ಸಂಸ್ಥೆಯು ಇದನ್ನು ಮೇಲ್ಮನವಿ ಪ್ರಾಧಿಕಾರದಲ್ಲಿ (ಎಎಎಆರ್) ಪ್ರಶ್ನಿಸಿತ್ತು. ಎಎಎಆರ್ ಕೆಳಗಿನ ನ್ಯಾಯಾಲಯದ ಆದೇಶವನ್ನು ಎತ್ತಿ ಹಿಡಿದಿತ್ತು. ಈ ಆದೇಶವನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಲಾಗಿತ್ತು.

ಬಾರ್ಡರ್–ಗಾವಸ್ಕರ್ ಟ್ರೋಫಿ: ಲಯಕ್ಕೆ ಮರಳುವರೇ ರಾಹುಲ್? ಪೂಜಾರಗೆ 'ಶತಕ'ದ ನಿರೀಕ್ಷೆ

ಮತ್ತೊಂದು ಜಯದತ್ತ ಭಾರತ ಚಿತ್ತ

ಪ್ರಜಾವಾಣಿ ವಾರ್ತೆ



ಪಿಚ್ ಪರಿಶೀಲಿಸಿದ ಭಾರತ ತಂಡದ ಚೇತೇಶ್ವರ್ ಪೂಜಾರ ಹಾಗೂ ಸಹ ಆಟಗಾರರು –ಪಿಟಿಐ ಚಿತ್ರ

ನವದೆಹಲಿ: ಆರಂಭಿಕ ಬ್ಯಾಟರ್ ಕೆ.ಎಲ್. ರಾಹುಲ್ ಅವರು ಕಳೆದ ಹಲವು ಪಂದ್ಯಗಳಲ್ಲಿ ವೈಫಲ್ಯ ಅನುಭವಿಸಿದ್ದಾರೆ.

ಬಾರ್ಡರ್ –ಗಾವಸ್ಕರ್ ಟ್ರೋಫಿಯ ಕ್ರಿಕೆಟ್ ಟೂರ್ನಿಯ ಮೊದಲ ಟೆಸ್ಟ್‌ನಲ್ಲಿಯೂ ಅವರು ಲಯಕ್ಕೆ ಮರಳುವಲ್ಲಿ ವಿಫಲರಾಗಿದ್ದರು. ಶುಕ್ರವಾರ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಆರಂಭವಾಗಲಿರುವ ಸರಣಿಯ ಎರಡನೇ ಪಂದ್ಯದಲ್ಲಿ ಅವರಿಗೆ ಅವಕಾಶ ಲಭಿಸಬಹುದು. ಇಲ್ಲಿಯೂ ಲಯಕ್ಕೆ ಮರಳದಿದ್ದರೆ ಮುಂದಿನ ಪಂದ್ಯಗಳಲ್ಲಿ ರಾಹುಲ್ ಸ್ಥಾನ ಕಳೆದುಕೊಳ್ಳುವ ಸಾಧ್ಯತೆ ಇದೆ.

ಯುವ ಬ್ಯಾಟರ್‌ಗಳಾದ ಶುಭಮನ್ ಗಿಲ್, ಇಶಾನ್ ಕಿಶನ್ ಅವರು ಆಡಲು ಕಾತುರದಿಂದ ಕಾದಿರುವುದರಿಂದ ರಾಹುಲ್ ಮುಂದೆ ಲಯಕ್ಕೆ ಮರಳುವ ಒತ್ತಡವಿದೆ.

ಇನ್ನೊಂದೆಡೆ ವಿರಾಟ್ ಕೊಹ್ಲಿ ಕೂಡ ಬಹಳ ಕಾಲದ ನಂತರ ಟೆಸ್ಟ್ ಮಾದರಿಯಲ್ಲಿ ಶತಕ ಗಳಿಸುವ ಪ್ರಯತ್ನದಲ್ಲಿದ್ದಾರೆ. ಅದಕ್ಕಾಗಿ ಅವರು ನೆಟ್ಸ್‌ನಲ್ಲಿ ಹೆಚ್ಚುವರಿ ಅವಧಿಯ ಅಭ್ಯಾಸ ನಡೆಸಿದ್ದರು.

ತಮ್ಮ ವೃತ್ತಿಜೀವನದ ನೂರನೇ ಟೆಸ್ಟ್ ಆಡುತ್ತಿರುವ ಪೂಜಾರ ಕೂಡ ಶತಕ ಗಳಿಸುವತ್ತ ಚಿತ್ತ ನೆಟ್ಟಿದ್ದಾರೆ. ಸೂರ್ಯಕುಮಾರ್ ಯಾದವ್ ತಮ್ಮ ಪದಾರ್ಪಣೆಯ ಪಂದ್ಯದಲ್ಲಿ ಮಿಂಚಿರಲಿಲ್ಲ. ಇದರಿಂದಾಗಿ ಇವರೆಲ್ಲರಿಗೂ ಆಸ್ಟ್ರೇಲಿಯಾ ಬೌಲರ್‌ಗಳನ್ನು ಎದುರಿಸಿ ನಿಲ್ಲುವ ಸವಾಲು ಇದೆ. ಆ ಪಂದ್ಯದಲ್ಲಿ ರೋಹಿತ್ ಶರ್ಮಾ ಶತಕ, ರವೀಂದ್ರ ಜಡೇಜ ಹಾಗೂ ಅಕ್ಷರ್ ಪಟೇಲ್ ಅರ್ಧಶತಕಗಳನ್ನು ಗಳಿಸಿದ್ದರು. ಉಳಿದಂತೆ ಸ್ಪಿನ್ನರ್‌ಗಳ ಮೋಡಿಯ ಮುಂದೆ ಆಸ್ಟ್ರೇಲಿಯಾ ನಾಗಪುರ ಟೆಸ್ಟ್ ಪಂದ್ಯದ ಎರಡೂ ಇನಿಂಗ್ಸ್‌ಗಳಲ್ಲಿ ನೆಲಕಚ್ಚಿತ್ತು.

ಇಲ್ಲಿ ಪುಟಿದೇಳುವ ಛಲದಲ್ಲಿರುವ ಪ್ಯಾಟ್ ಕಮಿನ್ಸ್ ಬಳಗಕ್ಕೆ ಮಿಚೆಲ್ ಸ್ಟಾರ್ಕ್ ಮರಳಿರುವುದು ವಿಶ್ವಾಸ ಮೂಡಿಸಿದೆ. ಆದರೆ ಪ್ರಮುಖ ಬ್ಯಾಟರ್‌ಗಳಾದ ಡೇವಿಡ್ ವಾರ್ನರ್, ಸ್ಟೀವ್ ಸ್ಮಿತ್, ಲಾಬುಷೇನ್ ಹಾಗೂ ಉಸ್ಮಾನ್ ಅವರು ಈ ಪಂದ್ಯದಲ್ಲಾದರೂ ಭಾರತದ ಅಶ್ವಿನ್ ಹಾಗೂ ರವೀಂದ್ರ ಜಡೇಜ ಅವರ ಸ್ಪಿನ್ ದಾಳಿ ಮೀರಿನಿಲ್ಲುವರೇ ಎಂಬ ಕುತೂಹಲ ಗರಿಗೆದರಿದೆ.

ಪ್ರವಾಸಿ ಬಳಗದ ಸ್ಪಿನ್ನರ್‌ಗಳಾದ ನೇಥನ್ ಲಯನ್ ಹಾಗೂ ಟಾಡ್ ಮರ್ಫಿ ಅವರು ಆತಿಥೇಯ ಬ್ಯಾಟರ್‌ಗಳನ್ನು ಕಾಡಲು ಸಿದ್ಧರಾಗಿದ್ದಾರೆ. ಸ್ಪಿನ್ ಬೌಲರ್‌ಗಳಿಗೆ ಹೆಚ್ಚಿನ ನೆರವು ನೀಡಲು ಅಂಗಣವೂ ತಯಾರಾಗಿದೆ.

ನಾಲ್ಕು ಪಂದ್ಯಗಳ ಸರಣಿಯಲ್ಲಿ 1–0ಯಿಂದ ಮುನ್ನಡೆಯಲ್ಲಿರುವ ಭಾರತ ತಂಡ ಈ ಪಂದ್ಯವನ್ನು ಗೆಲ್ಲುವ ನಿರೀಕ್ಷೆಯಲ್ಲಿದೆ. ಐಸಿಸಿ ಟೆಸ್ಟ್ ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನದ ಮೇಲೆ ಕಣ್ಣಿಟ್ಟಿರುವ ರೋಹಿತ್ ಬಳಗ ಜಯಗಳಿಸುವ ಫೇವರಿಟ್ ತಂಡವೂ ಹೌದು.

ಪಂದ್ಯ ಆರಂಭ: ಬೆಳಿಗ್ಗೆ 9.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಮುಖ್ಯಾಂಶಗಳು

- ಸರಣಿಯಲ್ಲಿ 1–0ಯಿಂದ ಮುನ್ನಡೆಯಲ್ಲಿರುವ ಭಾರತ
- ಸೂರ್ಯಕುಮಾರ್‌ಗೆ ಮತ್ತೊಂದು ಅವಕಾಶ ಸಾಧ್ಯತೆ
- ಆಸ್ಟ್ರೇಲಿಯಾ ತಂಡಕ್ಕೆ ಮರಳಿದ ವೇಗದ ಬೌಲರ್ ಮಿಚೆಲ್ ಸ್ಟಾರ್ಕ್

ತಂಡಗಳು: ಭಾರತ: ರೋಹಿತ್ ಶರ್ಮಾ (ನಾಯಕ), ಕೆ.ಎಲ್. ರಾಹುಲ್, ಚೇತೇಶ್ವರ್ ಪೂಜಾರ, ವಿರಾಟ್ ಕೊಹ್ಲಿ, ಶುಭಮನ್ ಗಿಲ್, ರವೀಂದ್ರ ಜಡೇಜ, ಕೆ.ಎಸ್. ಭರತ್ (ವಿಕೆಟ್‌ಕೀಪರ್), ಆರ್. ಅಶ್ವಿನ್, ಅಕ್ಷರ್ ಪಟೇಲ್, ಮೊಹಮ್ಮದ್ ಶಮಿ, ಮೊಹಮ್ಮದ್ ಸಿರಾಜ್, ಕುಲದೀಪ್ ಯಾದವ್, ಸೂರ್ಯಕುಮಾರ್ ಯಾದವ್, ಉಮೇಶ್ ಯಾದವ್, ಇಶಾನ್ ಕಿಶನ್.

ಆಸ್ಟ್ರೇಲಿಯಾ: ಪ್ಯಾಟ್ ಕಮಿನ್ಸ್ (ನಾಯಕ), ಡೇವಿಡ್ ವಾರ್ನರ್, ಉಸ್ಮಾನ್ ಖ್ವಾಜಾ, ಲಾಬುಷೇನ್, ಸ್ಟೀವ್ ಸ್ಮಿತ್, ಟ್ರಾವಿಸ್ ಹೆಡ್, ಅಲೆಕ್ಸ್ ಕ್ಯಾರಿ (ವಿಕೆಟ್‌ಕೀಪರ್), ಮ್ಯಾಟ್ ರೆನ್‌ಷಾ, ಪೀಟರ್ ಹ್ಯಾಂಡ್ಸ್‌ಕಂಬ್, ನೇಥನ್ ಲಯನ್, ಆಷ್ಟನ್ ಅಗರ್, ಸ್ಕಾಟ್ ಬೊಲ್ಯಾಂಡ್, ಲ್ಯಾನ್ಸ್ ಮಾರಿಸ್, ಮಿಚೆಲ್ ಸ್ವಿಪ್ಸನ್, ಟಾಡ್ ಮರ್ಫಿ, ಮಿಚೆಲ್ ಸ್ಟಾರ್ಕ್.

ಭಾರತ–ನೇಪಾಳ ಪಂದ್ಯ ಡ್ರಾ

ಚೆನ್ನೈ (ಪಿಟಿಐ): ಭಾರತ ಮತ್ತು ನೇಪಾಳ ನಡುವಣ ಸ್ನೇಹಪರ ಫುಟ್‌ಬಾಲ್ ಪಂದ್ಯ 2–2 ಗೋಲುಗಳ ಡ್ರಾದಲ್ಲಿ ಕೊನೆಗೊಂಡಿತು.

ಸೌಮ್ಯಾ ಮತ್ತು ಇಂದುಮತಿ ಕದಿರೆಸನ್ ಅವರು ಭಾರತದ ಪರ ಗೋಲು ಗಳಿಸಿದರೆ, ನೇಪಾಳ ತಂಡದ ಎರಡೂ ಗೋಲುಗಳನ್ನು ಸಬಿತ್ರಾ ಭಂಡಾರಿ ತಂದಿತ್ತರು.

ತಾಂತ್ರಿಕ ದೋಷ: ಐಸಿಸಿ ಕ್ಷಮೆಯಾಚನೆ

ದುಬೈ (ಪಿಟಿಐ): ಟೆಸ್ಟ್ ಕ್ರಿಕೆಟ್ ರ್‍ಯಾಂಕಿಂಗ್ ಪಟ್ಟಿ ಪ್ರಕಟಿಸುವಾಗ ತಾಂತ್ರಿಕ ದೋಷ ಆಗಿರುವುದಕ್ಕೆ ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿಯು (ಐಸಿಸಿ) ಕ್ಷಮೆಯಾಚಿಸಿದೆ.

ಟೆಸ್ಟ್ ರ್‍ಯಾಂಕಿಂಗ್ ಪಟ್ಟಿಯಲ್ಲಿ ಭಾರತ ತಂಡವು ಆಸ್ಟ್ರೇಲಿಯಾವನ್ನು ಹಿಂದಿಕ್ಕಿ ಅಗ್ರಸ್ಥಾನಕ್ಕೇರಿದೆ ಎಂದು ಐಸಿಸಿ ತನ್ನ ವೆಬ್‌ಸೈಟ್‌ನಲ್ಲಿ ಬುಧವಾರ ಪ್ರಕಟಿಸಿತ್ತು. ಇದಾದ ಕೆಲವು ಗಂಟೆಗಳ ಬಳಿಕ ತಪ್ಪು ಸರಿಪಡಿಸಿ, ಆಸ್ಟ್ರೇಲಿಯಾ ತಂಡವೇ ಅಗ್ರಸ್ಥಾನದಲ್ಲಿದ್ದು, ಭಾರತ ಎರಡನೇ ಸ್ಥಾನದಲ್ಲಿದೆ ಎಂದಿತ್ತು.

ಪಟ್ಟಿ ಪ್ರಕಟಿಸುವಲ್ಲಿ ಆಗಿರುವ ಲೋಪಕ್ಕೆ ಗುರುವಾರ ಕ್ಷಮೆಯಾಚಿಸಿರುವ ಐಸಿಸಿ, 'ಭಾರತ ತಂಡ ಟೆಸ್ಟ್ ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೇರಿದೆ ಎಂದು ಫೆ.15 ರಂದು ಕೆಲವು ಗಂಟೆ ಐಸಿಸಿ ವೆಬ್‌ಸೈಟ್ ತೋರಿಸಿತ್ತು. ತಾಂತ್ರಿಕ ದೋಷದಿಂದ ಈ ತಪ್ಪು ಸಂಭವಿಸಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

'ಇದರಿಂದ ಆಗಿರುವ ತೊಂದರೆಗೆ ಕ್ಷಮೆಯಾಚಿಸುತ್ತೇವೆ. ಟೆಸ್ಟ್ ರ್‍ಯಾಂಕಿಂಗ್ ಪಟ್ಟಿಯಲ್ಲಿ ಆಸ್ಟ್ರೇಲಿಯಾ ತಂಡ 126 ರೇಟಿಂಗ್ ಪಾಯಿಂಟ್ಸ್‌ಗಳೊಂದಿಗೆ ಅಗ್ರಸ್ಥಾನದಲ್ಲಿ ಮುಂದುವರಿದಿದೆ. ಭಾರತ ತಂಡ 115 ಪಾಯಿಂಟ್ಸ್‌ಗಳೊಂದಿಗೆ ಎರಡನೇ ಸ್ಥಾನದಲ್ಲಿದೆ' ಎಂದು ಸ್ಪಷ್ಟಪಡಿಸಿದೆ.

ಬ್ಯಾಸ್ಕೆಟ್‌ಬಾಲ್ ಲೀಗ್ ಶೀಘ್ರದಲ್ಲೇ ಆರಂಭ: ಗೋವಿಂದರಾಜ್

ಬೆಂಗಳೂರು: ಬ್ಯಾಸ್ಕೆಟ್‌ಬಾಲ್ ಕ್ರೀಡೆಯಲ್ಲಿ ಶೀಘ್ರದಲ್ಲೇ ಫ್ರಾಂಚೈಸ್ ಮಾದರಿಯ ಲೀಗ್ ಆರಂಭಿಸಲಾಗುವುದು ಎಂದು ಭಾರತ ಬ್ಯಾಸ್ಕೆಟ್‌ಬಾಲ್ ಫೆಡರೇಷನ್ (ಬಿಎಫ್‌ಐ) ಅಧ್ಯಕ್ಷ ಕೆ.ಗೋವಿಂದರಾಜ್ ಹೇಳಿದರು.

'ಲೀಗ್ ಆರಂಭಕ್ಕೆ ಎಲ್ಲ ಸಿದ್ಧತೆ ನಡೆದಿದ್ದು, ಮುಂದಿನ ಕೆಲವು ದಿನಗಳಲ್ಲಿ ಚಾಲನೆ ನೀಡಲಾಗುವುದು. ಮೊದಲ ಆವೃತ್ತಿಯ ಟೂರ್ನಿಯಲ್ಲಿ 6 ರಿಂದ 8 ತಂಡಗಳು ಪಾಲ್ಗೊಳ್ಳಲಿವೆ. ಭಾರತದಲ್ಲಿ ಬ್ಯಾಸ್ಕೆಟ್‌ಬಾಲ್ ಕ್ರೀಡೆಯ ಬೆಳವಣಿಗೆಗೆ ಈ ಲೀಗ್ ನೆರವಾಗಲಿದೆ' ಎಂದು ಗುರುವಾರ ಇಲ್ಲಿ ಸುದ್ದಿಗಾರರಲ್ಲಿ ತಿಳಿಸಿದರು.

ಫಿಬಾ ಏಷ್ಯಾ ಬ್ಯಾಸ್ಕೆಟ್‌ಬಾಲ್ ಸಂಸ್ಥೆಯ ಅಧ್ಯಕ್ಷ ಹುದ್ದೆಗೆ ತಮ್ಮ ನಾಮನಿರ್ದೇಶನದ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಮುಂದಿನ ತಿಂಗಳು ನಡೆಯಲಿರುವ ಫಿಬಾ ಏಷ್ಯಾ ಸಂಸ್ಥೆಯ ಸಭೆಯಲ್ಲಿ ನನ್ನ ನೇಮಕವನ್ನು ಅನುಮೋದಿಸಲಾಗುತ್ತದೆ. ಆ ಬಳಿಕ ಅಧಿಕೃತವಾಗಿ ಅಧ್ಯಕ್ಷನಾಗಿ ಅಧಿಕಾರ ವಹಿಸಿಕೊಳ್ಳುವೆ' ಎಂದರು.

'ಭಾರತ ಮಾತ್ರವಲ್ಲದೆ ಏಷ್ಯಾದಲ್ಲಿ ಬ್ಯಾಸ್ಕೆಟ್‌ಬಾಲ್ ಕ್ರೀಡೆಯ ಬೆಳವಣಿಗೆಗೆ ಶ್ರಮಿಸಲು ನನಗೆ ಅವಕಾಶ ಲಭಿಸಿರುವುದು ಸಂತಸ ಉಂಟುಮಾಡಿದೆ' ಎಂದು ತಿಳಿಸಿದರು.

ಪ್ರತ್ಯಾನ್ಯುಗೆ ಸ್ಥಾನ

ಫಿಬಾ ವಿಶ್ವಕಪ್–2023ರ ಏಷ್ಯನ್ ಅರ್ಹತಾ ಸುತ್ತಿನಲ್ಲಿ ಪಾಲ್ಗೊಳ್ಳಲಿರುವ ಭಾರತ ತಂಡವನ್ನು ಪ್ರಕಟಿಸಲಾಗಿದ್ದು, ಕರ್ನಾಟಕದ ಪ್ರತ್ಯಾನ್ಯು ತೋಮರ್ ಸ್ಥಾನ ಪಡೆದಿದ್ದಾರೆ.

ಅರ್ಹತಾ ಪಂದ್ಯಗಳು ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿದ್ದು, ಭಾರತ ತಂಡವು ಫೆ.24 ರಂದು ಜೋರ್ಡನ್ ಹಾಗೂ ಫೆ.27 ರಂದು ಸೌದಿ ವಿರುದ್ಧ ಪೈಪೋಟಿ ನಡೆಸಲಿದೆ.

ಸೆಲ್ಫಿ ಜಗಳ; ಪೃಥ್ವಿ ಶಾ ಕಾರಿನ ಮೇಲೆ ದಾಳಿ



ಪೃಥ್ವಿ ಶಾ ಮತ್ತು ಅಭಿಮಾನಿ ನಡುವಿನ ವಾಗ್ವಾದ –ಪಿಟಿಐ ಚಿತ್ರ

ಮುಂಬೈ(ಪಿಟಿಐ): ಭಾರತ ಕ್ರಿಕೆಟ್ ತಂಡದ ಆಟಗಾರ ಪೃಥ್ವಿ ಶಾ ಅವರ ಕಾರಿನ ಮೇಲೆ ಕೆಲವರು ಬೇಸ್‌ಬಾಲ್ ಬ್ಯಾಟ್‌ನಿಂದ ದಾಳಿ ಮಾಡಿದ ಘಟನೆ ಬುಧವಾರ ನಡೆದಿದೆ.

ಸಾಂತಾಕ್ರೂಜ್‌ನಲ್ಲಿರುವ ಹೋಟೆಲ್‌ವೊಂದರ ಸಮೀಪ ಈ ಘಟನೆ ನಡೆದಿದೆ. ವ್ಯಕ್ತಿಯೊಬ್ಬ ತನ್ನೊಂದಿಗೆ ಪೃಥ್ವಿ ಶಾ ಸೆಲ್ಫಿ ತೆಗೆಸಿಕೊಳ್ಳಲು ನಿರಾಕರಿಸಿದ್ದರಿಂದ ಕುಪಿತಗೊಂಡ ಕೆಲವರು ದುಷ್ಕೃತ್ಯ ಎಸಗಿದ್ದಾರೆ.

ಘಟನೆಗೆ ಸಂಬಂಧಿಸಿದಂತೆ ಗಲಭೆ ಹಾಗೂ ಸುಲಿಗೆ ಪ್ರಕರಣದಲ್ಲಿ ಮಹಿಳೆ ಸೇರಿದಂತೆ ಎಂಟು ಮಂದಿಯ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಪೃಥ್ವಿ ಕಾರಿನ ಗಾಜುಗಳು ಪುಡಿಯಾಗಿವೆ. ಈ ಸಂದರ್ಭದಲ್ಲಿ ಪೃಥ್ವಿಯೊಂದಿಗೆ ಅವರ ಗೆಳೆಯ, ಉದ್ಯಮಿ ಆಶಿಶ್ ಯಾದವ್ ಕೂಡ ಇದ್ದರು. ಪೃಥ್ವಿ ವಾಸವಾಗಿರುವ ಬಾಂದ್ರಾದ ಅಪಾರ್ಟ್‌ಮೆಂಟ್‌ನಲ್ಲಿಯೇ ಆಶಿಶ್ ಕೂಡ ವಾಸವಾಗಿದ್ದಾರೆ.

ರಾತ್ರಿ ಇಬ್ಬರೂ ಹೋಟೆಲ್‌ಗೆ ಊಟಕ್ಕೆ ಬಂದಿದ್ದರು. ಅದೇ ಸಂದರ್ಭದಲ್ಲಿ ಹೋಟೆಲ್ ಆವರಣದಲ್ಲಿ ವ್ಯಕ್ತಿಯೊಬ್ಬ ಪೃಥ್ವಿ ಬಳಿ ಬಂದು ಸೆಲ್ಫಿ ತೆಗೆದುಕೊಳ್ಳಲು ಮನವಿ ಮಾಡಿದ. ಅದಕ್ಕೆ ಸಮ್ಮತಿಸಿದ ಪೃಥ್ವಿ ಚಿತ್ರ ತೆಗೆಸಿಕೊಂಡರು. ಆದರೆ ಆ ವ್ಯಕ್ತಿಯು ಮತ್ತಷ್ಟು ಸೆಲ್ಫಿ ತೆಗೆಸಿಕೊಳ್ಳಲು ಒತ್ತಾಯಿಸಿದಾಗ ಪೃಥ್ವಿ ನಿರಾಕರಿಸಿದರು. ಆಗ ಆ ವ್ಯಕ್ತಿಯು ಪೃಥ್ವಿಯೊಂದಿಗೆ ದುರ್ವರ್ತನೆ ತೋರಿದನೆನ್ನಲಾಗಿದೆ. ವಾಗ್ವಾದವೂ ನಡೆಯಿತು. ಆಗ ಮಧ್ಯಪ್ರವೇಶಿಸಿದ ಹೋಟೆಲ್ ಮ್ಯಾನೇಜರ್ ಆರೋಪಿಯನ್ನು ಹೊರಗೆ ಕಳುಹಿಸಿದ್ದಾರೆ. ಪೃಥ್ವಿ ಹಾಗೂ ಆಶಿಶ್ ಊಟ ಮುಗಿಸಿ ಕಾರು ಹತ್ತಿ ಕುಳಿತರು. ಇದೇ ಸಂದರ್ಭದಲ್ಲಿ ಬೇಸ್‌ಬಾಲ್ ಬ್ಯಾಟ್ ಹಿಡಿದು ಬಂದ ಆರೋಪಿಯು ಕಾರಿನ ಗಾಜು ಒಡೆದು ಹಾಕಿದ.

'ಘಟನೆಯಲ್ಲಿ ಇಬ್ಬರಿಗೂ ಯಾವುದೇ ಗಾಯಗಳಾಗಲಿಲ್ಲ. ಅವರಿಬ್ಬರನ್ನು ಬೇರೆ ಕಾರಿನಲ್ಲಿ ಕಳಿಸಿಕೊಡಲಾಯಿತು. ಆ ಕಾರನ್ನು ಮೂರು ಬೈಕ್‌ಗಳ ಮೇಲೆ ಕೆಲವರು ಹಿಂಬಾಲಿಸಿದರು. ಬೆಳಗಿನ ಜಾವ 4 ಗಂಟೆ ಸುಮಾರಿಗೆ ಬಿಳಿ ಬಣ್ಣದ ಒಂದು ಕಾರಿನಲ್ಲಿಯೂ ಕೆಲವರು ಬೆನ್ನಟ್ಟಿ ಬಂದರು. ಮತ್ತೆ ಮೂರು ಬೈಕ್‌ಗಳೂ ಸೇರಿಕೊಂಡವು. ಬೈಕ್‌ನಲ್ಲಿದ್ದವನೊಬ್ಬ ತನ್ನ ಬೇಸ್‌ಬ್ಯಾಟ್ ಅನ್ನು ಪೃಥ್ವಿ ಇದ್ದ ಕಾರಿಗೆ ಬೀಸಿದ. ಆಶಿಶ್ ಯಾದವ್ ಕಾರನ್ನು ಒಶಿವಾರಾ ಪೊಲೀಸ್ ಠಾಣೆಗೆ ಒಯ್ದರು. ಎಂಟು ಆರೋಪಿಗಳ ಪೈಕಿ ಇದ್ದ ಮಹಿಳೆಯು ₹ 50 ಸಾವಿರ ನೀಡುವಂತೆ ಯಾದವ್‌ಗೆ ಬೆದರಿಕೆ ಒಡ್ಡಿದ್ದಳು' ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿಗಳ ವಿರುದ್ಧ ಬೆದರಿಕೆ, ವಸೂಲಿ ಹಾಗೂ ಗಂಭೀರ ಅಪರಾಧ ಪ್ರಕರಣಗಳನ್ನು ದಾಖಲಿಸಲಾಗಿದೆ.